ಜಾನಪದ ಲೋಕೋತ್ಸವ ಪ್ರಶಸ್ತಿ ಪುರಸ್ಕೃತ

# ಜನಪದ ಕಲಾವಿದರು



ಡಾ. ಚಕ್ಕೆರೆ ಶಿವಶಂಕರ್

ಡಾ. ಕುರುವ ಬಸವರಾಜ್

ತ್ರೈವಾರ್ಷಿಕ ಜಾನಪದ ಪುಸ್ತಕ ಮಾಲೆ-೮

# ಜಾನಪದ ಲೋಕೋತ್ಸವ ಪ್ರಶಸ್ತಿ ಪುರಸ್ಕೃತ
# ಜನಪದ ಕಲಾವಿದರು

## ಸಂಕ್ಷಿಪ್ತ ಪರಿಚಯ

ಡಾ. ಚಕ್ಕೆರೆ ಶಿವಶಂಕರ್
ಡಾ. ಕುರುವ ಬಸವರಾಜ್

ಕರ್ನಾಟಕ ಜಾನಪದ ಪರಿಷತ್ತು
ನಂ. 1, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-560 054

JANAPADA LOKOTHSAVA PRASHASTHI PURASKRUTA JANAPADA KALAVIDARU-A collection of breif pen skeches-by Dr. Chekkere Shivashankar and Dr. Kuruva Basavaraj. Published by Karnataka Janapada Parishath, No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054. Phone : 080-23605033.

ಪ್ರಥಮ ಮುದ್ರಣ : 2009

ಪ್ರತಿಗಳು : 500

ಪುಟಗಳು : 113 + 8 = 121

ಬೆಲೆ : ರೂ. : 60/-(ಅರವತ್ತು ರೂಪಾಯಿ)

ಹಕ್ಕುಗಳನ್ನು ಕಾದಿರಿಸಿದೆ

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ನಾಡೋಜ ಡಾ|| ಜಿ. ನಾರಾಯಣ** | ಅಧ್ಯಕ್ಷರು |
| **ಶ್ರೀ ಟಿ. ತಿಮ್ಮೇಗೌಡ** | ಸದಸ್ಯರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ|| ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ|| ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಕಾರ್ಯದರ್ಶಿ-ಸಂಚಾಲಕರು |

ಅಕ್ಷರ ಜೋಡಣೆ ಹಾಗೂ ಮುದ್ರಣ :
**ಚಂದನ ಪ್ರಿಂಟರ್ಸ್**
ನಂ. 57, ವಿನಾಯಕ ಕಾಂಪ್ಲೆಕ್ಸ್
10ನೇ ಮುಖ್ಯರಸ್ತೆ, 80 ಅಡಿ ರಸ್ತೆ, ಎಸ್.ಬಿ.ಎಮ್. ಕಾಲೋನಿ
ಬೆಂಗಳೂರು-560 050

# ಅಧ್ಯಕ್ಷರ ಮಾತು

ಭಾರತದ ಎಲ್ಲಾ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲೂ ಸಮೃದ್ಧವಾದ, ವೈವಿಧ್ಯವಾದ ಜಾನಪದವಿದೆ. ಅದು ಗರಿಕೆಯ ಬೇರಿನಂತೆ ಬದುಕಿನ ಎಲ್ಲಾ ಮಜಲುಗಳಿಗೂ ಹರಡಿಕೊಂಡಿದೆ. ಜಾನಪದವಿಲ್ಲದೆ ಜನಜೀವನವಿಲ್ಲ ಎಂಬಂತೆ ಬದುಕಿನ ಅವಿಭಾಜ್ಯ ಅಂಗವಾಗಿದೆ. ಕರ್ನಾಟಕದ ಸಮಗ್ರ ಸಂಸ್ಕೃತಿ ಜಾನಪದ ಆಶಯದಿಂದ ಕೂಡಿದೆ. ಜನಪದ ಸಾಹಿತ್ಯ, ಭಾಷೆ, ಕಲೆ, ವಿಜ್ಞಾನ, ಆಚರಣೆ, ಆರಾಧನೆ, ಆಹಾರ ವಿಹಾರ, ವೇಷಭೂಷಣ, ಕಸಬು, ಐತಿಹ್ಯ, ಪುರಾಣ ಸಂಸ್ಕೃತಿ, ಸಂವಹನ ಮೊದಲಾದವು ಬದುಕಿನ ನೆಲೆಯೊಡನೆ ಮಡುಗಟ್ಟಿ ಅಮೃತಪ್ರಾಯವಾಗಿ ಜೀವನೋತ್ಸಾಹ ತುಂಬುತ್ತಿವೆ. ಇವುಗಳ ಸಂಗ್ರಹ ಸಂಪಾದನೆ ಅಧ್ಯಯನ ಅಧ್ಯಾಪನ ಆನ್ವಯಿಕತೆ ಜಾಗತಿಕ ತುರ್ತಾಗಿದೆ. ಜಾನಪದದ ಅರಿವಿನಿಂದ ಶಿಷ್ಟಪದ ಸುಪುಷ್ಟವಾಗಿ ಸುಸಂಸ್ಕೃತವಾಗಿ ಬೆಳೆಯುವ ಸಾಧ್ಯತೆಯಿದೆ.

ಜಾನಪದ ರೂವಾರಿ, ಜಾನಪದ ಜಂಗಮ, ನಾಡೋಜ ಎಚ್. ಎಲ್. ನಾಗೇಗೌಡರು ಸಮಗ್ರ ಜಾನಪದದ ಅಭಿವೃದ್ಧಿಗಾಗಿ 'ಕರ್ನಾಟಕ ಜಾನಪದ ಪರಿಷತ್ತು' ಸಂಸ್ಥೆಯನ್ನು ಹುಟ್ಟುಹಾಕಿದರು. ಜಾನಪದದ ಪ್ರತ್ಯಕ್ಷ ದರ್ಶನಕ್ಕೆ 'ಜಾನಪದ ಲೋಕ'ವನ್ನು ಪ್ರಾರಂಭಿಸಿದರು. ಜಾನಪದದ ವೈಜ್ಞಾನಿಕ ಅಧ್ಯಯನಕ್ಕೆ 'ಜಾನಪದ ಸಿರಿಭುವನ'ವನ್ನು ಸ್ಥಾಪಿಸಿದರು. ತಮ್ಮ ಜೀವಿತದ ಬಹುಭಾಗವನ್ನು ಜಾನಪದಕ್ಕೆ ಮೀಸಲಿಟ್ಟು, ಕನ್ನಡ ನಾಡಿನಲ್ಲೆಲ್ಲಾ ಸಂಚರಿಸಿ ಕಲಾವಿದರನ್ನು ಕಂಡು ಅಪಾರವಾದ, ಅಪರೂಪವಾದ, ವೈವಿಧ್ಯಮಯವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು. ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ, ಜಾನಪದ ವಿದ್ವಾಂಸರ ಚಿಂತನಾಭಿವ್ಯಕ್ತಿಗೆ ಅನುವಾಗುವ 'ಜಾನಪದ ಜಗತ್ತು' ಪತ್ರಿಕೆಯನ್ನು ಪ್ರಾರಂಭಿಸಿ, ಯಶಸ್ವಿಯಾಗಿ ನಡೆಸಿದರು.

ಎಚ್. ಎಲ್. ನಾಗೇಗೌಡರ ಜಾನಪದದ ಕನಸನ್ನು ನನಸುಮಾಡಲು, ಕರ್ನಾಟಕ ಜಾನಪದ ಪರಿಷತ್ತು ತ್ರೈವಾರ್ಷಿಕ ಜಾನಪದ ಯೋಜನೆಯನ್ನು ಹಮ್ಮಿಕೊಂಡು ಕಾರ್ಯೋನ್ಮುಖವಾಗಿದೆ. ಅದರ ಹಲವು ಬೃಹತ್ ಯೋಜನೆಗಳಲ್ಲಿ ಶ್ರೀ ನಾಗೇಗೌಡರು ಸಂಗ್ರಹಿಸಿದ ಜನಪದ ಸಾಹಿತ್ಯ ಪ್ರಕಟಣೆ, ಜನಪದ ಕಲಾವಿದರ ಪರಿಚಯ ಪ್ರಕಟಣೆ ಹಾಗೂ ಇತರ ಜಾನಪದ ಗ್ರಂಥ ಪ್ರಕಟಣೆಗಳೂ ಸೇರಿವೆ. ಪ್ರಸ್ತುತ ಗ್ರಂಥದಲ್ಲಿ ನಾಡೋಜ ಎಚ್. ಎಲ್. ನಾಗೇಗೌಡರು ಪ್ರಾರಂಭಿಸಿದ ಜಾನಪದ ಲೋಕೋತ್ಸವ ಪ್ರಶಸ್ತಿ ಪುರಸ್ಕೃತ ಜನಪದ ಕಲಾವಿದರ ಸಂಕ್ಷಿಪ್ತ ಪರಿಚಯ ಲೇಖನಗಳಿವೆ. ಇವುಗಳನ್ನು **ಡಾ. ಚಕ್ಕೆರೆ ಶಿವಶಂಕರ್** ಮತ್ತು **ಡಾ. ಕುರುವ ಬಸವರಾಜ್** ಬರೆದಿದ್ದಾರೆ. ಇದು ತ್ರೈವಾರ್ಷಿಕ ಜಾನಪದ ಪುಸ್ತಕ ಮಾಲೆಯ ಎಂಟನೆಯ ಕುಸುಮವಾಗಿ ಪ್ರಕಟವಾಗುತ್ತಿದೆ. ಕನ್ನಡ ಸಹೃದಯರಿಗೆ ಈ ಪುಸ್ತಕ ಪ್ರಿಯವಾಗಲಿ ಎಂದು ಆಶಿಸುತ್ತೇನೆ.

**ಜಿ. ನಾರಾಯಣ**
ಅಧ್ಯಕ್ಷ
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
15-8-2009

# ಲೇಖಕರ ನುಡಿ

ಕನ್ನಡ ನಾಡಿನ ಪ್ರತಿಯೊಂದು ಹಳ್ಳಿಯಲ್ಲಿಯೂ ಅತ್ಯುತ್ತಮವಾದ ಜನಪದ ಕಲಾವಿದರು ಬಹುಸಂಖ್ಯೆಯಲ್ಲಿದ್ದಾರೆ. ಹಲಗೆ ಬಳಪ ಹಿಡಿದು ಗೊತ್ತಿಲ್ಲದ, ಶ್ರೀ ಗುರುವಿನಿಂದ ಓದಿಸಿಕೊಂಡು ಕಲಿಯದ, ಈ ಕಲಾವಿದರುಗಳಿಗೆಲ್ಲಾ ಸಾಕಷ್ಟು ವಯಸ್ಸಾಗಿದೆ. ದಟ್ಟದಾರಿದ್ರ್ಯ ಕಿತ್ತು ತಿನ್ನುತ್ತಿದ್ದರೂ ತಮ್ಮ ಸಾಹಿತ್ಯಾಭಿವ್ಯಕ್ತಿ ಮತ್ತು ಕಲಾಪ್ರದರ್ಶನಗಳಲ್ಲಿ ಮಾತ್ರ ಹುಮ್ಮಸ್ಸು ಕುಗ್ಗಿಲ್ಲ. ಸರಿಯಾಗಿ ನೋಡಿಕೊಳ್ಳುವವರಿಲ್ಲದೆ ಬಹುತೇಕ ಮಂದಿ ಕಲಾವಿದರು ನಾನಾ ಬಗೆಯ ಕಾಯಿಲೆ – ಕಸಾಲೆಗಳಿಗೆ ತುತ್ತಾಗಿ ನರಳುತ್ತಿದ್ದಾರೆ. ಬದುಕಿನಲ್ಲೆಂದೂ ಒಳ್ಳೆಯದನ್ನು ಉಣ್ಣದ, ಬೆಳ್ಳನೆಯದನ್ನು ಹೊದಿಯದ ಕಾಡಕುಸುಮಗಳಿವು.

ಜನಪದ ಕಲಾವಿದರು ಸಾವನ್ನಪ್ಪಿದರೆ, ಅವರೊಂದಿಗೆ ಅವರಲ್ಲಿರುವ ಸಮೃದ್ಧ ಸಾಹಿತ್ಯ ಮತ್ತು ಉತ್ಕೃಷ್ಟ ಕಲಾಪರಂಪರೆಯೂ ಸಹ ಮಣ್ಣಾಗಿಹೋಗುತ್ತದೆ. ಎಷ್ಟೋ ಕಲಾವಿದರು ಈಗಾಗಲೇ ಮಣ್ಣಾಗಿಹೋಗಿರುವುದೂ ಉಂಟು. ಆದ್ದರಿಂದಲೇ ಕನ್ನಡ ನಾಡಿನ ಹಿರಿಯ ಜಾನಪದ ಚೇತನವಾಗಿದ್ದ ಎಚ್. ಎಲ್. ನಾಗೇಗೌಡರು ಸರ್ಕಾರ, ಸಂಘಸಂಸ್ಥೆಗಳು ಮತ್ತು ವಿದ್ವಾಂಸರನ್ನು ಪದೇ ಪದೇ ಆಗ್ರಹಪಡಿಸುತ್ತಿದ್ದುದು: 'ಪ್ರಕಟಿಸಿದ್ದನ್ನೇ ಮತ್ತೆ ಮತ್ತೆ ಪ್ರಕಟಿಸಿ ಹಣ ಮತ್ತು ಕಾಗದವನ್ನು ಪೋಲುಮಾಡಬೇಡಿ. ಮೊದಲು ಹಳ್ಳಿಗಳಿಗೆ ಹೋಗಿ, ಬದುಕಿರುವ ಸಾವಿರಾರು ಮಂದಿ ಕಲಾವಿದರನ್ನು ಭೇಟಿಮಾಡಿ ಅವರಲ್ಲಿರುವ ಸಾಹಿತ್ಯವನ್ನು ಸಂಗ್ರಹಿಸಿ ಅಳಿದುಹೋಗುತ್ತಿರುವ ಜನಪದ ಸಾಹಿತ್ಯ ಶ್ರೀಮಂತಿಕೆಯನ್ನು ಕಲಾಪರಂಪರೆಯನ್ನು ಉಳಿಸಿ' ಎಂದು.

ಕರ್ನಾಟಕ ಸರ್ಕಾರ ಮತ್ತು ಹತ್ತು ಹಲವು ಸಂಘ ಸಂಸ್ಥೆಗಳು ಕನ್ನಡ ನಾಡು ನುಡಿ–ಸಂಸ್ಕೃತಿಯ ಏಳಿಗೆಗಾಗಿ ಸೇವೆಸಲ್ಲಿಸುತ್ತಿರುವ ಮಹನೀಯರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿವೆ. ಆದರೆ ಇಲ್ಲಿಯೂ ಸಹ ಪ್ರಶಸ್ತಿಗಳು ದಕ್ಕುವುದು ಬಹುಪಾಲು ಶಿಷ್ಟ ಕಲಾವಿದರಿಗೆ ಹೊರತು ಅಸಂಖ್ಯಾತರೂ ಅಜ್ಞಾತರೂ ಆಗಿರುವ ಜನಪದ ಕಲಾವಿದರಿಗಲ್ಲ. ಇಂತಹ ತಾರತಮ್ಯವನ್ನು ಮನಗಂಡ ಎಚ್. ಎಲ್. ನಾಗೇಗೌಡರು ಪೂರ್ಣಪ್ರಮಾಣದಲ್ಲಿ ಕನ್ನಡ ಜಾನಪದ ಜಗತ್ತಿನ ಉತ್ತಮ ಕಲಾವಿದರಿಗೆ ಮಾನಸನ್ಮಾನಗಳು, ಪ್ರಶಸ್ತಿಗಳು ಲಭಿಸುವಂತಾಗಬೇಕೆಂದು ಆಶಿಸಿ, 1980 ರಿಂದಲೂ ನೂರಾರು ಮಂದಿ ಜನಪದ ಕಲಾವಿದರನ್ನು ಗುರುತಿಸಿ ಅವರನ್ನು ಸಾರ್ವಜನಿಕವಾಗಿ ಗೌರವಿಸುತ್ತಾ ಬಂದಿದ್ದಾರೆ. 1996 ರಿಂದೀಚೆಗೆ ಕರ್ನಾಟಕ ಜಾನಪದ ಪರಿಷತ್ತಿನ ವತಿಯಿಂದ, ಹಳ್ಳಿಗಾಡಿನ ಮೂಲೆಮುಡುಕುಗಳಲ್ಲಿ ಬೆಳಕಿಗೆ ಬಾರದೆ ಮುಚ್ಚಿಹೋಗಿರುವ ಅಸಂಖ್ಯಾತ ಉತ್ಕೃಷ್ಟ ಜನಪದ ಕಲಾವಿದರನ್ನು ಗಂಡಸು ಹೆಂಗಸರೆನ್ನದೆ ಪತ್ತೆಹಚ್ಚಿ, ಅವರನ್ನು ನಗರಕ್ಕೆ ಕರೆತಂದು ಸಾವಿರಾರು ಮಂದಿ ಪ್ರೇಕ್ಷಕರ ಸಮ್ಮುಖದಲ್ಲಿ, ಪ್ರತಿಷ್ಠಿತ ವ್ಯಕ್ತಿಗಳನ್ನು ಆಹ್ವಾನಿಸಿ ಅವರುಗಳಿಂದ ಈ ಕಲಾವಿದರುಗಳಿಗೆ ಜಾನಪದ

ಲೋಕ ಪ್ರಶಸ್ತಿಗಳನ್ನು ಪ್ರದಾನಮಾಡಿ ಗೌರವಿಸುವ ಶಾಶ್ವತ ಪ್ರಶಸ್ತಿ ಪ್ರದಾನ ವ್ಯವಸ್ಥೆಯೊಂದನ್ನು ರೂಢಿಗೆ ತಂದಿದ್ದು, ಈ ವ್ಯವಸ್ಥೆಯು ನಿರಂತರವಾಗಿ ಮುಂದುವರಿದುಕೊಂಡು ಹೋಗುವಂತೆ ಏರ್ಪಾಟು ಮಾಡಿರುತ್ತಾರೆ.

ಬೆಂಗಳೂರಿನ ಶ್ರೀಮತಿ ಶೀಲಾಗೌಡ ಮತ್ತು ಕ್ರಿಸ್ಟಾಫ್ ಸ್ಟಾರ್ಟ್ಸ್, ಶ್ರೀಮತಿ ಶಾಂತ ಚಿನ್ನಸ್ವಾಮಿ, ಶ್ರೀ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು, ಶ್ರೀ ಎಂ. ಕೃಷ್ಣಪ್ಪನವರು, ಕೇರಳಾಪುರದ ಸಂಸ್ಕೃತ ಪ್ರಾಧ್ಯಾಪಕರಾದ ಪ್ರೊ. ಸಿ. ಜಿ. ಪುರುಷೋತ್ತಮ ಅವರು, ಮಂಡ್ಯದ ಶ್ರೀ ಕಬ್ಬಿಗೆರೆ ಸಿದ್ದೇಗೌಡರು, ರಾಮನಗರದ ಡಾ. ಎಸ್. ಎಲ್. ತಿಮ್ಮಯ್ಯನವರು, ಬೆಂಗಳೂರು ವಿಶ್ರಾಂತ ಐ.ಎ.ಎಸ್. ಅಧಿಕಾರಿಗಳಾದ ಶ್ರೀ ಟಿ. ತಿಮ್ಮೇಗೌಡರು, ಮಂಡ್ಯ ಜಿಲ್ಲೆ ಹನುಮನಹಳ್ಳಿಯ ಶ್ರೀ ಹ. ಕ. ರಾಜೇಗೌಡರು, ಬೆಂಗಳೂರಿನ ಡಾ. ಎನ್. ಎಸ್. ರಾಮೇಗೌಡರು, ರಾಮನಗರದ ವಕೀಲರಾದ ಶ್ರೀ ಚಿಕ್ಕಪ್ಪಾಜಿಯವರು, ಮೈಸೂರಿನ ಶ್ರೀಮತಿ ಸಾವಿತ್ರಮ್ಮನವರು ಕರ್ನಾಟಕ ಜಾನಪದ ಪರಿಷತ್ತಿನಲ್ಲಿ ಇಟ್ಟಿರುವ ವಿವಿಧ ದತ್ತಿ ನಿಧಿಗಳನ್ನು ಆಧರಿಸಿ 12 ಜಾನಪದ ಲೋಕ ಪ್ರಶಸ್ತಿಗಳನ್ನು, 3 ವಿಶೇಷ ಪುರಸ್ಕಾರ ಪ್ರಶಸ್ತಿಗಳನ್ನು ನೀಡುವುದರ ಜೊತೆಗೆ, ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎಚ್. ಎಲ್. ನಾಗೇಗೌಡರು ತಮ್ಮ ಅಜ್ಜಿಯಂದಿರಾದ ಮಾತೋಶ್ರೀ ಬಂಗಲಿ ಗಿರಿಯಮ್ಮ ಮತ್ತು ಹೆರಗನಹಳ್ಳಿ ಚಿಕ್ಕಮ್ಮನವರ ನೆನಪಿಗಾಗಿ ಸುಶ್ರಾವ್ಯವಾದ ಹಾಡುಗಾರ್ತಿಗೆ ಸೋಬಾನೆ ಚಿಕ್ಕಮ್ಮ ಪ್ರಶಸ್ತಿ, ತಮ್ಮ ತಂದೆ ಲಿಂಗೇಗೌಡ ಮತ್ತು ತಾಯಿ ಹುಚ್ಚಮ್ಮನವರ ನೆನಪಿಗಾಗಿ ಅತ್ಯುತ್ತಮ ವೃತ್ತಿಗಾಯಕರಿಗೆ ದೊಡ್ಡಮನೆ ಪ್ರಶಸ್ತಿ, ತಮ್ಮನ್ನು ಪ್ರೀತಿಯಿಂದ ಸಾಕಿ ಸಲಹಿದ ದೊಡ್ಡಮನೆ ಕುಟುಂಬದವರೆಲ್ಲರ ನೆನಪಿಗಾಗಿ, ಜನಪದ ರಂಗಭೂಮಿಯ ಅತ್ಯುತ್ತಮ ಭಾಗವತರಿಗೆ ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ ಮತ್ತು ತಮ್ಮ ಜೇಷ್ಠಪುತ್ರ ಹಾಗೂ ಕರ್ನಾಟಕ ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದ ದಿವಂಗತ ಶ್ರೀ ಎಚ್. ಎನ್. ನಂಜರಾಜ್ ಸ್ಮರಣಾರ್ಥ ಕಾಲೇಜು ವಿದ್ಯಾರ್ಥಿಗಳಿಗಾಗಿ ಮೂರು ಜನಪದ ಗೀತೆ ಯುವ ಪ್ರತಿಭಾ ಪುರಸ್ಕಾರಗಳನ್ನು ನೀಡುತ್ತಾ ಬಂದಿದ್ದಾರೆ.

ಕರ್ನಾಟಕ ಜಾನಪದ ಪರಿಷತ್ತು ಇದುವರೆವಿಗೂ ಸುಮಾರು ನಾಲ್ಕುನೂರಕ್ಕೂ ಹೆಚ್ಚು ಮಂದಿ ಜನಪದ ಕಲಾವಿದರನ್ನು ಗುರುತಿಸಿ ಗೌರವಿಸಿ ಸನ್ಮಾನಿಸಿರುತ್ತದೆ. ಪ್ರಸ್ತುತ 234 ಮಂದಿ ಜನಪದ ಕಲಾವಿದರ ಕಿರುಪರಿಚಯವನ್ನು ಈ ಕೃತಿಯಲ್ಲಿ ಸಂಕಲಿಸಿ ಕೊಡಲಾಗಿದೆ. ಚರಿತ್ರೆಯ ರಚನೆಯಿಂದ ವಂಚಿತವಾಗಿರುವ, ಜಾನಪದಕ್ಕೆ ಮುಂದೊಂದು ದಿನ ಚರಿತ್ರೆಯನ್ನು ಕಟ್ಟುವ ಸಂದರ್ಭ ಬಂದಾಗ, ಇಂತಹ ಕೃತಿಗಳು ಉಪಯುಕ್ತ ಆಕರ ಗ್ರಂಥಗಳಾಗಿ ಪರಿಣಮಿಸಬಲ್ಲವು ಎಂಬ ನಂಬಿಕೆ ನಮ್ಮದು.

**–ಡಾ. ಚಕ್ಕೆರೆ ಶಿವಶಂಕರ್**

ಕಾರ್ಯದರ್ಶಿ, ಕರ್ನಾಟಕ ಜಾನಪದ ಪರಿಷತ್ತು

# ಪರಿವಿಡಿ

ಅಧ್ಯಕ್ಷರ ಮಾತು
ಲೇಖಕರ ನುಡಿ

**೧೯೯೯ರ ಪ್ರಶಸ್ತಿ ಪುರಸ್ಕೃತರು** ೦೧ – ೦೯

೧. ಹೆರಗನಹಳ್ಳಿ ತಿಮ್ಮಮ್ಮ ೨. ತಂಬೂರಿ ಮರಿಯಪ್ಪ ೩. ಎಂ. ದೊಡ್ಡ ಮುನಿಯಪ್ಪ ೪. ಲಲಿತಾ ಪಾತ್ರೋಟ ೫. ಯಗಟಿ ಲಕ್ಕಮ್ಮ ೬. ಜಡೆಯದ ಲಕ್ಷ್ಮಮ್ಮ ೭. ಶಿಲ್ಪಾಪುರದ ಸಂಜೀವಮೂರ್ತಿ ೮. ತಲಕಾಡು ಮರಿನಂಜಮ್ಮ ೯. ಯರದಹಳ್ಳಿ ಬಿ. ನಾರಾಯಣಪ್ಪ ೧೦. ಕರಿಯಪ್ಪನದೊಡ್ಡಿ ಪಾರ್ವತಮ್ಮ ೧೧. ಪುಟ್ಟ ನಂಜಮ್ಮ ೧೨. ಎಂ. ಬಸವರಾಜು ೧೩. ಮಧುರೆ ಎಲ್ಲಮ್ಮ ೧೪. ಡಿ. ಎಸ್. ಗಂಗಾಧರಗೌಡ ೧೫. ಯಳಸಂಗಿ ಕಲ್ಲಣ್ಣ.

**೨೦೦೦ ಪ್ರಶಸ್ತಿ ಪುರಸ್ಕೃತರು** ೧೦ – ೨೦

೧೬. ಯಾಚೇನಹಳ್ಳಿ ನಿಂಗಮ್ಮ ೧೭. ಹೆಬ್ಬಣಿ ಮಾದಯ್ಯ ೧೮. ಎ. ಎನ್. ಚನ್ನಬಸವಯ್ಯ ೧೯. ಉಜ್ಜನಿ ಹಾಲಮ್ಮ ೨೦. ಲಕ್ಷ್ಮೀಬಾಯಿ ಮಾದರ ೨೧. ತಲಕಾಡು ಮಾದಮ್ಮ ೨೨. ಎಲಚಕೆರೆ ಕಾಟಮ್ಮ ೨೩. ಸಾವಿತ್ರಿ ಸೋಮಣ್ಣ ಖೈರಾಟ ೨೪. ಎಲೆಕೊಪ್ಪದ ಬಸವೇಗೌಡ ೨೫. ನೆಲ್ಲಿಗೆರೆ ತಿಮ್ಮಪ್ಪಾಚಾರ್ಯ ೨೬. ಎನ್. ಚಿಕ್ಕವೆಂಕಟಪ್ಪ ೨೭. ಕೆಬ್ಬೆಪುರದ ಢಕ್ಕೆ ಸಿದ್ಧಯ್ಯ ೨೮. ಮುನಿವೆಂಕಟಪ್ಪ ೨೯. ಕೆ. ಆರ್. ಲಿಂಗಪ್ಪ ೩೦. ಯಾ. ಸು. ನಾಗರಾಜು ೩೧. ಎಸ್. ವೆಂಕಟೇಶಪ್ಪ.

**೨೦೦೧ ಪ್ರಶಸ್ತಿ ಪುರಸ್ಕೃತರು** ೨೦ – ೨೯

೩೨. ಬೊಮ್ಮಳ ಎಲಿಸವ್ವ ೩೩. ಭಜಗೂರು ಎಲ್ಲಯ್ಯ ೩೪. ಅರಳಗುಪ್ಪೆ ಸಿದ್ಧಲಿಂಗಪ್ಪ ೩೫. ಸಾಧು ಹನುಮಯ್ಯ ೩೬. ಬನ್ನೂರು ಕೆಂಪಮ್ಮ ೩೭. ಜೋಗಿ ನಿಂಗಯ್ಯ ೩೮. ಲಕ್ಷ್ಮೀಬಾಯಿ ಅಯ್ಯಪ್ಪ ಮಾದರ ೩೯. ಬಿ. ಕೆ. ರಾಮಣ್ಣ ೪೦. ವಿಠೋಬ ಕಲ್ಲಪ್ಪ ಮರಡಿ ೪೧. ಗೊರವರ ಪುಟ್ಟಮಲ್ಲೇಗೌಡ ೪೨. ಜಲ್ದಗೆರೆ ಗಂಗ ಹುಚ್ಚಮ್ಮ ೪೩. ಹೊರೆಯಾಲದ ಮಹದೇವಮ್ಮ ೪೪. ಬಾಬು ನಲ್ಕೆ ೪೫. ಸಿದ್ಧಗಂಗಯ್ಯ ಬಿ. ಕಂಬಾಳು.

**೨೦೦೨ ಪ್ರಶಸ್ತಿ ಪುರಸ್ಕೃತರು** ೩೦ – ೪೩

೪೬. ಕಾಡುಸೂರು ಮುದಿಗೆರೆ ಗಿರಿಯಮ್ಮ ೪೭. ಚೌಡಿಕೆ ಗೋವಿಂದಪ್ಪ ೪೮. ಬಲಿಪ ನಾರಾಯಣ ಭಾಗವತರು ೪೯. ಹಚ್ಚೆ ವೆಂಕಟಮ್ಮ ೫೦. ಬರಗೂರು ನಿಂಗಮ್ಮ ೫೧. ಫಕೀರಪ್ಪ ಗೌರಕ್ಕನವರ ೫೨. ಸೋಬಾನೆ ಕೃಷ್ಣೇಗೌಡ ೫೩. ತಳಗವಾದಿ ಚೀರಕುಣಯ್ಯ ೫೪. ಗಣಪತಿ ಹಣಮಂತ ಕಟಬ ೫೫. ಹೆಚ್. ಎಸ್. ನೀಲಕಂಠಯ್ಯ ೫೬. ಕಾಶೀಬಾಯಿ ೫೭. ಮೀಸೆ ಕಾಳದುರ್ಗಯ್ಯ ೫೮. ಕರಿಯಣ್ಣ ಶೆಟ್ಟಿ ೫೯. ತೂಬಿನಕೆರೆ ಮೇಲುಗಿರಯ್ಯ ೬೦. ಜಯಮ್ಮ ೬೧. ಶ್ರೀಧರ ಹಂದೆ ೬೨. ಎಂ. ಟಿ. ಜಯಣ್ಣ ೬೩. ಡಾ. ಎಲ್. ಜಿ. ಸುಮಿತ್ರ.

**೨೦೦೩ ಪ್ರಶಸ್ತಿ ಪುರಸ್ಕೃತರು** ೪೪ – ೫೭

೬೪. ಹೂಲಿಪುರ ಚಿಕ್ಕಮ್ಮ ೬೫. ಬಿಷ್ಟಪ್ಪನಹಳ್ಳಿ ಕೊಳ್ಳಪ್ಪ ೬೬. ಎ. ಎಸ್. ನಂಜಪ್ಪ ೬೭. ದಂಡಿನ ಶಿವರದ ಚನ್ನವೀರಮ್ಮ ೬೮. ಕೆ. ಆರ್. ಹೊಸಳ್ಳಯ್ಯ ೬೯. ವೆಂಕಪ್ಪ ಮಲಿ ೭೦. ಕೆಂಬೋಡ್ಡಿ

ನಾರಾಯಣಪ್ಪ ೭೧. ನಾಗವಾರ ಮೋಟಪ್ಪ ೭೨. ಶೆಟ್ಟಿ ಚಿಕ್ಕಯ್ಯ ೭೩. ರೇವಣ್ಣ ಸಿದ್ಧಪ್ಪ ಸೈದಪ್ಪ ಕಂಬಾರ ೭೪. ಎಲ್. ಶಂಕರಪ್ಪ ೭೫. ಬನ್ನೂರು ಪಾರ್ವತಮ್ಮ ೭೬. ಸೂರನಹಳ್ಳಿ ಬೀಯಪ್ಪ ೭೭. ಜಿ. ಎನ್ ನಾರಾಯಣಪ್ಪ ೭೮. ಕೋರೇನಹಳ್ಳಿ ವೆಂಕಟೇಗೌಡ ೭೯. ಅಂಬಲಜೀರಹಳ್ಳಿಯ ಚಂದ್ರಮ್ಮ ೮೦. ಕರಡಗೆರೆ ನಿಂಗಮ್ಮ ೮೧. ಶಿವಲಿಂಗಪ್ಪ ಬಸಪ್ಪ ಕರವಿನಕೊಪ್ಪ ೮೨. ಜೆ. ಡಿ. ಗಂಗಯ್ಯ ೮೩. ತೈಲೂರು ವೆಂಕಟಕೃಷ್ಣ ೮೪. ಡಾ. ಬಸವರಾಜ ಮಲಶೆಟ್ಟಿ.

## ೨೦೦೪ ಪ್ರಶಸ್ತಿ ಪುರಸ್ಕೃತರು ೫೮ – ೫೫

೮೫. ದೊಡ್ಡೇನಹಳ್ಳಿ ನಂಜಮ್ಮ ೮೬. ಕಂಚನಹಳ್ಳಿ ಲಕ್ಕಯ್ಯ ಮರಿಯಯ್ಯ ೮೭. ರಾಮಲಿಂಗೇಗೌಡ ೮೮. ಕತ್ತಿಗೆ ಮಹದೇವಮ್ಮ ೮೯. ಹೊಸಪಾಳ್ಯ ಲಕ್ಷ್ಮಮ್ಮ ೯೦. ಕುನ್ನಾಘಟ್ಟ ರಂಗಸ್ವಾಮಯ್ಯ ೯೧. ಮಹಾಲಿಂಗಪುರ ಮಡಿವಾಳಪ್ಪ ೯೨. ಸೋಮಣ್ಣ ನಾಗಪ್ಪ ಖೈರಾಟ ೯೩. ಓಬದೇವನಹಳ್ಳಿ ನರಸಮ್ಮ ೯೪. ಎಂ. ಎನ್. ಬೋರಪ್ಪ ೯೫. ಬೈರಸಂದ್ರದ ಅಕ್ಕಮ್ಮ ೯೬. ಪಂಚಲಿಂಗಯ್ಯ ೯೭. ಪಿಂಡಕೂರು ತಿಮ್ಮನಹಳ್ಳಿ ಜಯಮ್ಮ ೯೮. ಬೊಮ್ಮಾಚನಹಳ್ಳಿ ಓಬಳಪ್ಪ ೯೯. ಜೀಕವಾಂಡ್ಲಪಲ್ಲಿ ಸಾಂಬಯ್ಯ ೧೦೦. ಕಾಡಂಕನಹಳ್ಳಿ ಮರಿ ಅರಸಮ್ಮ ೧೦೧. ಕೋಣನಹಳ್ಳಿ ನಿಂಗಮ್ಮ ೧೦೨. ರಾಜಮ್ಮ ೧೦೩. ತಿಟ್ಟಮಾರನಹಳ್ಳಿ ವರದಪ್ಪ ೧೦೪. ರಾಮನಗರದ ಡಾ. ಕೆ. ಜಿ. ಗೋಪಾಲಕೃಷ್ಣರಾವ್.

## ೨೦೦೫ ಪ್ರಶಸ್ತಿ ಪುರಸ್ಕೃತರು ೬೬ – ೭೯

೧೦೫. ಬನ್ನೂರು ಕೆಂಪಮ್ಮ ೧೦೬. ಮಳವಳ್ಳಿ ಮಹದೇವಸ್ವಾಮಿ ೧೦೭. ಮುನಿಯೂರು ದಾಸಾಚಾರ್ ೧೦೮. ದೊಡ್ಡಬಾಣಗೆರೆ ಮಾರಕ್ಕ ೧೦೯. ಮಾರೇಗೌಡನಹಳ್ಳಿ ಭಾಗ್ಯಮ್ಮ ೧೧೦. ಶ್ಯಾಮರಾಯ ಗೂಳಪ್ಪ ಬಡಿಗೇರ ೧೧೧. ಬ್ಯಾಲದಹಟ್ಟಿ ಪ್ರಕಾಶ್ ೧೧೨. ಹೂವಿನಹಳ್ಳಿ ಕಾವಲ್ ಗುಂಡೂರಾಜ್ ೧೧೩. ಬೀಡನಹಳ್ಳಿ ಗೌರಮ್ಮ ೧೧೪. ಪಾಲ್‌ದಿನ್ನೆ ಚನ್ನಪ್ಪ ೧೧೫. ಹೆಳವರ ದೊಡ್ಡಿ ಈರಯ್ಯ ೧೧೬. ಕುಂಚನೂರು ವೆಂಕಪ್ಪ ೧೧೭. ಮೈಲನಾಯಕನಹಳ್ಳಿ ಆಲಮ್ಮ ೧೧೮. ತೂಬಿನಕೆರೆ ಖಾದಿರಯ್ಯ ೧೧೯. ಮುನಿಯೂರು ಬಸವಾಚಾರ್ ೧೨೦. ಕರಿತಿಮ್ಮಯ್ಯ ೧೨೧. ಚಿಕ್ಕೋಳಮ್ಮ ೧೨೨. ಮಂಗಾಡಹಳ್ಳಿ ಶಾರದಮ್ಮ ೧೨೩. ದೊಡ್ಡಗದ್ದಹಳ್ಳಿ ಸತೀಶ್ ೧೨೪. ಸು.ತ. ರಾಮೇಗೌಡ ೧೨೫. ಟಿ. ಕೆ. ರಾಮಚಂದ್ರ

## ೨೦೦೬ ಪ್ರಶಸ್ತಿ ಪುರಸ್ಕೃತರು ೮೦ – ೮೮

೧೨೬. ಬಾನಂದೂರು ಬೋರಮ್ಮ ೧೨೭. ಸಿದ್ಧರಾಮಯ್ಯ ೧೨೮. ಕೆ. ಬಿ. ಜಯಚಂದ್ರರಾಜ ಅರಸು ೧೨೯. ಬ್ಯಾಲದಕೆರೆ ಕೆಂಪಮ್ಮ ೧೩೦. ಆರ್. ಶಿವಣ್ಣಗೌಡ ೧೩೧. ಮೈಸೂರು ಸಿದ್ಧರಾಮಯ್ಯ ೧೩೨. ಬಿ. ಎಲ್. ತಳವಾರ ೧೩೩. ಪಡವ್ವ ಕಾಂಬಲೆ ೧೩೪. ಎಸ್. ಹನುಮಂತರಾವ್ ೧೩೫. ಮರಸು ಹೊಸಹಳ್ಳಿ ಚಿಕ್ಕಯ್ಯ ೧೩೬. ಮೈಲನಾಯಕನಹಳ್ಳಿ ಚನ್ನಮ್ಮ ೧೩೭. ಸೈಲಪ್ಪ ಮುಂಗೆಪ್ಪ ಸೋರಗಾವಿ ೧೩೮. ಸುಣ್ಣಘಟ್ಟದ ಕೆಂಚಮ್ಮ ೧೩೯. ಅಜ್ಜನಹಳ್ಳಿ ಲಕ್ಷ್ಮಣ ೧೪೦. ಮೃತ್ಯುಂಜಯ ಸೋಮಯ್ಯ ಚಿಕ್ಕಪುಟ್ಟ ೧೪೧. ಗಿರಿಯಪ್ಪ ಲಿಂಗಪ್ಪ ಮೈರೆ ೧೪೨. ನಾಗುಲಿಂಗುಗೌಡ ೧೪೩. ಮರಿಸಿದ್ಧಮ್ಮ ೧೪೪. ಡಾ. ವೈ ಸಿ. ಭಾನುಮತಿ ೧೪೫. ಪುಟ್ಟತಾಯಮ್ಮ ೧೪೬. ಅರ್ಚಕ ಗಂಗಾಧರ ೧೪೭. ರಾಮ ಮಲೆ ಕುಡಿಯ ೧೪೮. ಪಿ. ನಾರಾಯಣಸ್ವಾಮಿ ೧೪೯. ಮಂಗಾಪಟ್ಟಣದ ರಂಗಸ್ವಾಮಿ.

## ೨೦೦೭ ಪ್ರಶಸ್ತಿ ಪುರಸ್ಕೃತರು ೮೯ – ೯೫

೧೫೦. ಕೆರೆಮನೆ ಶಂಭು ಹೆಗಡೆ ೧೫೧. ಮಾರಗೌಡನಹಳ್ಳಿ ಭಾಗ್ಯಮ್ಮ ೧೫೨. ವೀರಾಪುರದ ಚನ್ನಮ್ಮ ೧೫೩. ತಂಬೂರಿ ನಂಜೇಗೌಡ ೧೫೪. ಸಿ. ಎನ್. ವೀರಭದ್ರಾಚಾರ್ ೧೫೫. ಸಂಗಯ್ಯ ಚನ್ನಯ್ಯ ಮಠಪತಿ ೧೫೬. ಸ್ವಾಮಿಗೌಡ ೧೫೭. ನೀಲಾಬಾಯಿ ಕಲ್ಲಣ್ಣ ಯಳಸಂಗಿ ೧೫೮. ಪಟೇಲ್ ಸಿದ್ಧರಾಮೇಗೌಡ ೧೫೯. ಅಂಕನಹಳ್ಳಿ ನಂಜಯ್ಯ ೧೬೦. ದೊಡ್ಡಗೋರಾಘಟ್ಟ ರಾಜಣ್ಣ ೧೬೧. ಜಟ್ಟೆಪ್ಪ ರಾವುತಪ್ಪ ಹೆರಗಲ್ಲ ೧೬೨. ಗೊರವಾಲೆ ರುದ್ರಪ್ಪ ೧೬೩. ಪೂಜಾರಿ ನಿಂಗಪ್ಪ ೧೬೪. ನಾಗೇಶದೇವು ಆಗೇರ ೧೬೫. ಎಂ. ಮಲ್ಲಯ್ಯ ೧೬೬. ವಿಠಲ ಶೇರಿಗಾರ ೧೬೭. ಕಾರಸವಾಡಿ ಪುಟ್ಟೇಗೌಡ ೧೬೮. ಡಾ. ಕೆ. ಆರ್. ಸಂಧಾರೆಡ್ಡಿ ೧೬೯. ಸಕ್ರೆವ್ವ ಪಾತ್ರೋಟಿ ೧೭೦. ಸರಸ್ವತಿ ಶ್ರೀಪತಿ ಹೆಗಡೆ ೧೭೧. ಲಕ್ಷ್ಮಮ್ಮ ೧೭೨. ಪುಟ್ಟನಂಜಮ್ಮ ೧೭೩. ಬಸವರಾಜ ಹೊಸಮನಿ ೧೭೪. ಜಿ. ಪಿ. ಜಗದೀಶಪ್ಪ ೧೭೫. ವೆಂಕಟಾಚಲಪತಿ.

## ೨೦೦೮ ಪ್ರಶಸ್ತಿ ಪುರಸ್ಕೃತರು ೯೬ – ೧೦೫

೧೭೬. ಬೆಳಕಲ್ಲು ವೀರಣ್ಣ ೧೭೭. ಪೀಹಳ್ಳಿ ಪುಟ್ಟಸಿದ್ಧಮ್ಮ ೧೭೮. ಚಿಕ್ಕಾಡೆ ಹೊನ್ನಮ್ಮ ೧೭೯. ಮೋಳೆ ರಾಚಯ್ಯ ೧೮೦. ಚನ್ನರಾಯಪ್ಪ ೧೮೧. ಭೀಮಪ್ಪ ಧರೆಪ್ಪ ದಾನಗೌಡ ೧೮೨. ಮಲಕವ್ವ ಗುರುಮೂರ್ತಿ ೧೮೩. ಡಾ. ವೇಮಗಲ್ ಡಿ. ನಾರಾಯಣಸ್ವಾಮಿ ೧೮೪. ಹಾರನಹಳ್ಳಿ ಚಲುವಯ್ಯ ೧೮೫. ಕೆ. ಇ. ಇಂಗಳಪ್ಪ ೧೮೬. ಐರೋಡಿ ಗೋವಿಂದಪ್ಪ ೧೮೭. ನಾಗರಾಜು ಫಕೀರಪ್ಪ ಕುಂಬಾರ ೧೮೮. ನೀಲಪ್ಪ ಫಕೀರಪ್ಪ ನೇಸರಗಿ ೧೮೯. ಪುಟ್ಟರಿ ಬಡಿಯಾಗೊಂಡ ೧೯೦. ಕ್ವಾಣೆ ಚಿಕ್ಕಮ್ಮ ೧೯೧. ಗಜಾನನ ಮಂಜುನಾಥ ಭಟ್ಟ ೧೯೨. ಶಿವಪುತ್ರಪ್ಪ ಚ. ಶೆಟ್ಟರ ೧೯೩. ಎಂ. ಮರಿಮಾದಯ್ಯ ೧೯೪. ಮಂಜವ್ವ ಜೋಗತಿ ೧೯೫. ದೊಡ್ಡ ಅಂಕನಹಳ್ಳಿ ಜಯಮ್ಮ ೧೯೬. ಬ್ರಹ್ಮರಕೊಟ್ಲು ಭೋಜ ೧೯೭. ಅರಗಟೆ ಹನುಮಂತಪ್ಪ ೧೯೮. ಕದಲಗೆರೆ ನರಸಿಂಹ ಶೆಟ್ಟಿ ೧೯೯. ಅಪ್ಪಗೆರೆ ನಿಂಗಮ್ಮ ೨೦೦. ಅಂಕನಹಳ್ಳಿ ಚಲ್ಲಯ್ಯ ೨೦೧. ಕೂನಮುದ್ದನಹಳ್ಳಿ ಶಿವರುದ್ರಯ್ಯ ೨೦೨. ನಾಯಡ ವಾಸು ನಂಜಪ್ಪ ೨೦೩. ಡಾ. ಜಯಲಕ್ಷ್ಮಿ ಸೀತಾಪುರ ೨೦೪. ಬಸವರಾಜ ಆಕಳವಾಡಿ.

## ೨೦೦೯ ಪ್ರಶಸ್ತಿ ಪುರಸ್ಕೃತರು ೧೦೬ – ೧೧೩

೨೦೫. ಹೆಬ್ಬಣಿ ಮಾದಯ್ಯ ೨೦೬. ಮೈಲನಾಯಕನಹಳ್ಳಿ ಆಲಮ್ಮ ೨೦೭. ಸಿದ್ಧಮ್ಮ ಉರುಫ್ ಕುಂಡಮ್ಮ ೨೦೮. ವೆಂಕಪ್ಪ ಅಂಬಾಜಿ ಸುಗತೇಕರ ೨೦೯. ನಾರಾಯಣಪ್ಪ ೨೧೦. ತಂಬೂರಿ ಉಮಾನಾಯ್ಕ ೨೧೧. ನಾಗಮ್ಮ ೨೧೨. ದೇವೇಂದ್ರಪ್ಪ ೨೧೩. ಭೂತಾಳೆಪ್ಪ ಅಮ್ಮಣ್ಣಪ್ಪ ಹಂಚಿನಾಳ ೨೧೪. ಸತ್ಯಮ್ಮ ೨೧೫. ಹೆಗ್ಗಡೆಹಳ್ಳಿ ಕೃಷ್ಣೇಗೌಡ ೨೧೬. ಮಲ್ಲಪ್ಪ ಕಣಬೂರು ೨೧೭. ಹನುಮಿಕ್ಷೇತ್ರಗೌಡ ೨೧೮. ಗಂಗಾಧರಪ್ಪ ಬಿ. ಜವಳಿ ೨೧೯. ಸಣ್ಣುಲಿಂಗೇಗೌಡ ೨೨೦. ರಾಮಚಂದ್ರ ಗಣಪತಿ ಪೋದ್ದಾರ ೨೨೧. ಕಾಡಯ್ಯ ೨೨೨. ಶಂಕರಪ್ಪ ೨೨೩. ಕೋಟೆ ಪರವ ೨೨೪. ಹಾಜಿ ಹಕೀಂ ಪೀರ್ ಶರೀಫ್ ೨೨೫. ಕೆ. ಹೆಚ್. ಕೃಷ್ಣೇಗೌಡ ೨೨೬. ಪರಪ್ಪ ೨೨೭. ಬೀಯಪ್ಪ ೨೨೮. ಬಿ. ಕೆ. ಶಿವನಂಜಪ್ಪ ೨೨೯. ಕೆಂಚಯ್ಯ ೨೩೦. ದಮ್ಮಡಿ ಕೆಂಪಯ್ಯ ೨೩೧. ತಿಮ್ಮಮ್ಮ ೨೩೨. ಹುರೇಲ ಹೊನ್ನೇಗೌಡ ೨೩೩. ಡಾ. ಟಿ. ಗೋವಿಂದರಾಜು ೨೩೪. ವ. ನಂ. ಶಿವರಾಮು.

## ಪ್ರಶಸ್ತಿ ಪುರಸ್ಕೃತರು – ೧೯೯೯

[೧೯೯೮ ರಿಂದ ಕರ್ನಾಟಕ ಜಾನಪದ ಪರಿಷತ್ತು ಕನ್ನಡ ನಾಡಿನ ಜಾನಪದ ಕ್ಷೇತ್ರಕ್ಕೆ ಅತ್ಯುತ್ತಮ ಕೊಡುಗೆ ನೀಡಿದ ಉತ್ಕೃಷ್ಟ ಕಲಾವಿದರನ್ನು ರಾಜ್ಯದಾದ್ಯಂತ ಆಯ್ಕೆ ಮಾಡಿ ಗೌರವಿಸುತ್ತಾ ಬಂದಿರುತ್ತದೆ. ಈ ದಿಸೆಯಲ್ಲಿ ಕರ್ನಾಟಕ ಜಾನಪದ ಪರಿಷತ್ತು ಹತ್ತು 'ಜಾನಪದ ಲೋಕ ಪ್ರಶಸ್ತಿ' ಗಳನ್ನು ನೀಡುತ್ತಿದೆ. ಜೊತೆಗೆ, ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಚ್. ಎಲ್. ನಾಗೇಗೌಡರು ತಮ್ಮ ಅಜ್ಜಿಯಂದಿರಾದ ಮಾತೋಶ್ರೀ ಬಂಗಲಿ ಗಿರಿಯಮ್ಮ ಮತ್ತು ಹೆರಗನಹಳ್ಳಿ ಚಿಕ್ಕಮ್ಮನವರ ನೆನಪಿಗಾಗಿ ಸುಶ್ರಾವ್ಯವಾದ ಹಾಡುಗಾರ್ತಿಗೆ ಸೋಬಾನೆ ಚಿಕ್ಕಮ್ಮ ಪ್ರಶಸ್ತಿ, ತಮ್ಮ ತೀರ್ಥರೂಪ ಲಿಂಗೇಗೌಡ ಮತ್ತು ಮಾತೋಶ್ರೀ ಹುಚ್ಚಮ್ಮ ತಾಯಿ ನೆನಪಿಗಾಗಿ ಅತ್ಯುತ್ತಮ ವೃತ್ತಿ ಗಾಯಕರಿಗೆ ದೊಡ್ಡಮನೆ ಪ್ರಶಸ್ತಿ, ತಮ್ಮನ್ನು ಪ್ರೀತಿಯಿಂದ ಸಾಕಿ ಸಲಹಿದ ದೊಡ್ಡಮನೆ ಕುಟುಂಬದವರೆಲ್ಲರ ನೆನಪಿಗಾಗಿ ಜನಪದ ರಂಗಭೂಮಿಯ ಅತ್ಯುತ್ತಮ ಭಾಗವತರಿಗೆ ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದ್ದಾರೆ.

ತಾರೀಖು ೧೪–೩–೯೯ ರಂದು ಸಂಜೆ ಜಾನಪದ ಲೋಕದ ಆಹ್ಲಾದಕರ ವಾತಾವರಣದಲ್ಲಿ, ಭವ್ಯ ಬಯಲು ರಂಗಮಂದಿರದಲ್ಲಿ, ಸುಂದರ ಸಮಾರಂಭವನ್ನು ಏರ್ಪಡಿಸಿದ್ದ ಪರಿಷತ್ತು , ಹಲಗೆ ಬಳಪ ಹಿಡಿದು ಗೊತ್ತಿಲ್ಲದ, ಲೆಕ್ಕಣಿಕೆ ಹಿಡಿದು ಬರೆಯದ, ಶ್ರೀ ಗುರುವಿನಿಂದ ಓದಿಸಿಕೊಂಡು ಕಲಿಯದ ಜನಪದ ಕಲಾವಿದರಿಗೆ ಕರ್ನಾಟಕ ಸರ್ಕಾರದ ಕೃಷಿ ಮತ್ತು ತೋಟಗಾರಿಕೆ ಸಚಿವರಾದ ಶ್ರೀ ಸಿ. ಬೈರೇಗೌಡರ ಮುಖಾಂತರ ಅತ್ಯಂತ ಗೌರವದಿಂದ ಸ್ಮರಣ ಫಲಕ ನೀಡವುದರೊಂದಿಗೆ ಮಹಿಳಾ ಕಲಾವಿದೆಯರಿಗೆ ಸೀರೆ ಮತ್ತು ಕಣ, ಪುರುಷರಿಗೆ ಶಾಲು ಹೊದಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿಯ ಮೊತ್ತ ತಲಾ ೧೦೦೦ ರೂ. ಗಳನ್ನು ಪುರಸ್ಕೃತ ಕಲಾವಿದರಿಗೆ ನೀಡಲಾಯಿತು. ೧೯೯೯ರ ಸಾಲಿನಲ್ಲಿ ಕರ್ನಾಟಕ ಜಾನಪದ ಪರಿಷತ್ತು ಕೊಡಮಾಡಿದ ಪ್ರಶಸ್ತಿ ಪುರಸ್ಕೃತರ ವಿವರಗಳು ಕೆಳಕಂಡಂತಿವೆ]

### ೧. ಹೆರಗನಹಳ್ಳಿ ತಿಮ್ಮಮ್ಮ

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಹೆರಗನಹಳ್ಳಿ ತಿಮ್ಮಮ್ಮನವರು ಶ್ರೀ ಎಚ್. ಎಲ್. ನಾಗೇಗೌಡರ ಬಾಲ್ಯ ಸ್ನೇಹಿತರಾದ ಹುಳ್ಳಿ ಮರಿಯಪ್ಪನವರ ಪತ್ನಿ. ಒಕ್ಕಲಿಗ ಜನಾಂಗಕ್ಕೆ ಸೇರಿದ ತಿಮ್ಮಮ್ಮನವರಿಗೆ ಸುಮಾರು ಎಪ್ಪತ್ತರ ಪ್ರಾಯವಾದರೂ ಅವರ ಹಾಡುವ ಕಂಠಕ್ಕಿನ್ನು ವಯಸ್ಸಾಗಿಲ್ಲ. ಈಗಲೂ ಅತ್ಯಂತ ಸುಶ್ರಾವ್ಯವಾಗಿ ಹಾಡಬಲ್ಲ ಇವರು ಅಪರೂಪದ ಹಾಗೂ ಸೊಗಸಾದ ಹಾಡುಗಾರ್ತಿ. ತನ್ನ ತವರೂರಾದ ಹೆರಗನಹಳ್ಳಿ ಗ್ರಾಮದೇವತೆ ಮಾಯಮ್ಮನ ಮೇಲೆ ತಿಮ್ಮಮ್ಮನವರು ಹಾಡಿರುವ ಪದಗಳು ಅಪೂರ್ವವಾದ ಧಾಟಿಗಳನ್ನು ಒಳಗೊಂಡಿವೆ. ಬೀಸುವಾಗ, ಕುಟ್ಟುವಾಗ, ಮದುವೆ ಶಾಸ್ತ್ರ ಮಾಡುವಾಗ, ದೇವರರನ್ನು ಮೆರೆಸುವಾಗ ಹೀಗೆ ಆಯಾ ಸಂದರ್ಭಗಳಿಗೆ ತಕ್ಕಂತೆ ಹಾಡಬಲ್ಲ ಇವರ ದನಿಯ ಏರಿಳಿತ, ಸೊಗಸಾದ ಸಾಹಿತ್ಯ ಎಲ್ಲವು ಅಪೂರ್ವವಾದದ್ದು. ಇವರ ಹಾಡಿನ ದನಿ ಬನಿಗಳು, ಸಾಹಿತ್ಯದ ಸೊಗಡು ಮತ್ತಾವ ಹಾಡುಗಾರರಲ್ಲೂ ಕಂಡುಬರುವುದಿಲ್ಲ. ತಿಮ್ಮಮ್ಮನವರ ಎಲ್ಲಾ ಪದಗಳನ್ನು ಎಚ್. ಎಲ್. ನಾಗೇಗೌಡರು ೧೯೬೭ರಷ್ಟು ಹಿಂದೆಯೇ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ಇಂತಹ ಅಪರೂಪದ ಪ್ರತಿಭಾವಂತ ಹಾಡುಗಾರ್ತಿಗೆ ಎಚ್. ಎಲ್. ನಾಗೇಗೌಡರು ತಮ್ಮ ಅಜ್ಜಿಯವರಾದ ಮಾತೋಶ್ರೀ ಬಂಗಲೆ ಗಿರಿಯಮ್ಮನವರ

ನೆನಪಿಗಾಗಿ ಸುಶ್ರಾವ್ಯವಾದ ಹಾಡುಗಾರಿಕೆಗೆ ನೀಡುವ 'ಸೋಬಾನೆ ಚಿಕ್ಕಮ್ಮ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

## ೨. ತಂಬೂರಿ ಮರಿಯಪ್ಪ

ತುಂಬಿದ ಕೊಡ ತುಳುಕುವುದಿಲ್ಲ ಎನ್ನುವುದಕ್ಕೆ ಹಾಸನ ಜಿಲ್ಲೆಯ ಹೊಳೆನರಸೀಪುರದ ಉತ್ಕೃಷ್ಟ ವೃತ್ತಿಗಾಯಕರಾದ ಶ್ರೀ ತಂಬೂರಿ ಮರಿಯಪ್ಪನವರು ಅತ್ಯುತ್ತಮ ನಿದರ್ಶನ. ನಾಲ್ಕು ತಂತಿಯ ತಂಬೂರಿ ವಾದ್ಯವನ್ನು ಹಿಡಿದು ಕೈ ಬೆರಳುಗಳಿಂದ ದುಂಬಿಯ ನಾದದಂತೆ ಝೇಂಕಾರವನ್ನು ಹೊರಡಿಸುತ್ತಾ, 'ಹುಯ್ಯಲಲ್ಲೋ ರಂಗ ಹುಯಲಲ್ಲೋ' ಎಂದು ಮರಿಯಪ್ಪನವರು ಹಾಡಲು ಆರಂಭಿಸಿದರೆ ಕೇಳುಗರಲ್ಲಿ ರೋಮಾಂಚನ ಉಂಟಾಗುತ್ತದೆ. ದನಿಯ ಏರಿಳಿತ, ಹಾಡುವಾಗಿನ ತಲ್ಲೀನತೆ, ಸಾಹಿತ್ಯದ ಸೊಗಡನ್ನು ಕೇಳಿದಷ್ಟು ಮತ್ತೆ ಮತ್ತೆ ಕೇಳಬೇಕೆನ್ನಿಸುತ್ತದೆ. ಮರಿಯಪ್ಪನವರು ಮಟ್ಟಸವಾಗಿ ಕುಳಿತು ಹಾಡಲು ತೊಡಗಿದರೆ ಸಮಯ ಉರುಳುವುದೇ ಗೊತ್ತಾಗುವುದಿಲ್ಲ. ಕಲ್ಲನ್ನೇ ತಲೆದಿಂಬಾಗಿಸಿಕೊಂಡು ಬದುಕು ನೂಕುತ್ತಿರುವ ಮರಿಯಪ್ಪನವರು ಆದಿ ದ್ರಾವಿಡ ಜನಾಂಗಕ್ಕೆ ಸೇರಿದ ಕಡು ಬಡವರಾದರೂ ಹಾಡಿನಲ್ಲಿ ಶ್ರೀಮಂತರು. ತಿರುಪತಿ ತಿಮ್ಮಪ್ಪ ಸೋಲಿಗರ ಹೆಣ್ಣನ್ನು ಮದುವೆಯಾದದ್ದು, ನಂಜುಂಡ ದೇವೀರಿ, ಮಾಗಡಿ ಕೆಂಪೇಗೌಡ, ಗುರುಭಕ್ತರಾಯ, ಸೀತೆಯ ಸತ್ವ ಪರೀಕ್ಷೆ, ಸಾರಂಗಧರ, ಶೆಟಿಗಾರ ತಿಮ್ಮಪ್ಪ, ಮಡಿಕೇರಿ ಲಿಂಗರಾಜು ಅರಸು ಮುಂತಾದ ಕಥನ ಕಾವ್ಯಗಳನ್ನೆ ಅಲ್ಲದೆ ಹೊಗಳುವ ಪದಗಳು, ನಕಲಿ ಪದಗಳನ್ನು ಸಹ ಹಾಡುವ ಮರಿಯಪ್ಪನವರ ಎಲ್ಲಾ ಹಾಡುಗಳನ್ನು ನಾಗೇಗೌಡರು ೧೯೬೩ರಲ್ಲೇ ಧ್ವನಿ ಮುದ್ರಿಸಿಕೊಂಡಿದ್ದಾರೆ. ಅದ್ಭುತವಾದ ಹಾಡುಗಾರಿಕೆ ತನ್ನಲ್ಲಿದ್ದರೂ ತನಗೇನೂ ತಿಳಿಯದಂತೆ ನಡೆದುಕೊಳ್ಳುವ ಇಂತಹ ಉತ್ಕೃಷ್ಟ ವೃತ್ತಿಗಾಯಕ ತಂಬೂರಿ ಮರಿಯಪ್ಪನವರಿಗೆ ಎಚ್. ಎಲ್. ನಾಗೇಗೌಡರು ತಮ್ಮ ತಂದೆ ತಾಯಂದಿರಾದ ಹೆರಗನಹಳ್ಳಿ ದೊಡ್ಡಮನೆ ಲಿಂಗೇಗೌಡರು ಮತ್ತು ಮಾತೋಶ್ರೀ ಹುಚ್ಚಮ್ಮ ತಾಯಿಯವರ ನೆನಪಿಗಾಗಿ ನೀಡುವ 'ದೊಡ್ಡಮನೆ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೩. ಎಂ. ದೊಡ್ಡ ಮುನಿಯಪ್ಪ

ನಾಡಿನ ಮೂಡಲಪಾಯ ಯಕ್ಷಗಾನದಲ್ಲಿಯ ಭಾಗವತರುಗಳಲ್ಲೆ ಅತ್ಯುತ್ತಮ ಮಟ್ಟದ ಭಾಗವತರು ಬೆಂಗಳೂರು ಗ್ರಾಮಾಂತರ ಜಿಲ್ಲೆ ಸುರಧೇನುಪುರದ ಎಂ. ದೊಡ್ಡ ಮುನಿಯಪ್ಪ ತಮ್ಮ ಹದವಾದ ದನಿ ಎತ್ತಿ ಹಾಡುವ ಚಂದ, ಕಥೆಗಾರಿಕೆಯ ಸೊಗಸು ತುಂಬಿದ ಕಲಾವಿದರಿವರು. ವಯಸ್ಸು ಅರವತ್ತೈದು ದಾಟಿದ ಮುನಿಯಪ್ಪನವರು ಪ್ರಚುರದಲ್ಲಿರುವ ಸಾಕಷ್ಟು ಪ್ರಸಂಗಗಳನ್ನು ಆಡಿಸುತ್ತಾರಾದರೂ ಕರಿಭಂಟನ ಕಥೆಯನ್ನು ಆಡಿಸುವುದರಲ್ಲಿ ನಿಸ್ಸೀಮರು. ಇವರ ಸಾಕಷ್ಟು ಹಾಡುಗಳನ್ನು ಎಚ್. ಎಲ್. ನಾಗೇಗೌಡರು ಈಗಾಗಲೇ ಧ್ವನಿ ಮುದ್ರಿಸಿಕೊಂಡಿದ್ದಾರೆ. ಅಲ್ಲದೆ ಕರ್ನಾಟಕ ಜಾನಪದ ಪರಿಷತ್ತು ವಿಶೇಷ ಪ್ರದರ್ಶನ ಆಯೋಜಿಸಿದಾಗ ಭಾಗವತರಾಗಿ ಹಾಡಿ ಹೆಸರಾಗಿದ್ದಾರೆ.

ಇಂತಹ ಅತ್ಯುತ್ತಮ ಮೂಡಲಪಾಯ ಯಕ್ಷಗಾನ ಭಾಗವತರಾದ ದೊಡ್ಡ ಮುನಿಯಪ್ಪನವರಿಗೆ ಶ್ರೀ ಎಚ್. ಎಲ್. ನಾಗೇಗೌಡರು ತಮ್ಮ ದೊಡ್ಡಮನೆ ಕುಟುಂಬದವರೆಲ್ಲರ ನೆನಪಿಗಾಗಿ ನೀಡಿರುವ 'ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೪. ಲಲಿತಾ ಪಾತ್ರೋಟಿ

ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ನಾವಲಗಟ್ಟಿಯ ಲಲಿತಾ ಪಾತ್ರೋಟಿರು ಪರಿಶಿಷ್ಟ ಜನಾಂಗಕ್ಕೆ ಸೇರಿದ ಅತ್ಯಂತ ಅಪರೂಪದ ಜನಪದ ರಂಗಭೂಮಿ ಕಲಾವಿದೆ. ತಮ್ಮ ೧೬ನೇ ವಯಸ್ಸಿನಲ್ಲಿಯೇ ರಂಗ ಪ್ರವೇಶ ಮಾಡಿದ ಲಲಿತಾ ಪಾತ್ರೋಟಿರು ಇದವರೆಗೂ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಸಮಾರು ೧೫೦೦ ಕ್ಕೂ ಹೆಚ್ಚು ಸಣ್ಣಾಟಗಳ ಪ್ರದರ್ಶನ ನೀಡಿರುತ್ತಾರೆ. ಇವರಿಗೆ ರಂಗ ಶಿಕ್ಷಣ ನೀಡಿದ ಗುರುಗಳು ಇವರ ಅಜ್ಜರಾದ ದಿವಂಗತ ಪರಪ್ಪ ಬಳಿಗಾರ ಮತ್ತು ಕಾಶಪ್ಪ ಗೆಜ್ಜಿಯವರು.

ಸಂಗ್ಯಾ ಬಾಳ್ಯಾದಲ್ಲಿ ಗಂಗೆಯ ಪಾತ್ರ, ರಾಧಾ ಕೃಷ್ಣದಲ್ಲಿ ರಾಧೆಯ ಪಾತ್ರ, ಬಲವಂತ ಬಸವಂತದಲ್ಲಿ ತಾರಾಳ ಪಾತ್ರ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರದಲ್ಲಿ ಭಾಗೀರಥಿ ಪಾತ್ರ, ಶ್ರೀಕೃಷ್ಣಪಾರಿಜಾತದಲ್ಲಿ ರುಕ್ಮಿಣಿಯ ಪಾತ್ರ ನಿರ್ವಹಿಸುವ ಇವರ ನಟನೆ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಲಲಿತಾ ಪಾತ್ರೋಟಿರ ಅದ್ಭುತವಾದ ನಟನೆಯನ್ನು ಗುರುತಿಸಿ ೧೯೯೩ ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿದೆ. ೧೯೯೭ ರಲ್ಲಿ ಕಿತ್ತೂರಿನ ಜಾನಪದ ಸಂಶೋಧನಾ ಕೇಂದ್ರವು ಪ್ರಶಸ್ತಿ ನೀಡಿರುತ್ತದೆ. ಇದೀಗ ಕರ್ನಾಟಕ ಜಾನಪದ ಪರಿಷತ್ತು ಶ್ರೀ ಆದಿಚುಂಚನಗಿರಿ ಮಠಾಧೀಶರಾದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ನೀಡಿದ ದತ್ತಿಯ ನೆನಪಿಗಾಗಿ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸುತ್ತದೆ.

## ೫. ಯಗಟಿ ಲಕ್ಕಮ್ಮ

ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು ಯಗಟಿ ಗ್ರಾಮದ ನೀರಗಂಟಿ ಅಂದರೆ ಮಣೇಗಾರ ತಿಮ್ಮಯ್ಯನವರ ಪತ್ನಿ ಲಕ್ಕಮ್ಮನವರು ಮೇಲುಸಕ್ಕರೆ ಜನಾಂಗಕ್ಕೆ ಸೇರಿದ ಅಪರೂಪದ ಹಾಡುಗಾರ್ತಿ. ಸುಶ್ರಾವ್ಯ ಧಾಟಿ, ದನಿಬನಿಗಳಿಂದ ಕೂಡಿದ ಲಕ್ಕಮ್ಮನ ಹಾಡುಗಾರಿಕೆಯು ಲೀಲಾಜಾಲವಾದುದು. ಕೇಳುಗರ ಕಿವಿಯಲ್ಲಿ ದುಂಬಿಯಂತೆ ಜೇಂಕರಿಸುತ್ತದೆ. ಜಾನಪದ ಸುಬ್ಬಲಕ್ಷ್ಮಿ ಎಂದೇ ಹೆಸರಾದ ಲಕ್ಕಮ್ಮನವರು ಆರ್ಥಿಕವಾಗಿ ಬಡವರಾದರೂ ಹಾಡಿನ ಸಂಪತ್ತಿನ ಒಡತಿ. ಕೃಷ್ಣ ರುಕ್ಮಿಣಿ ಎಂಬ ಅಪರೂಪದ ಹಾಡಿನೊಂದಿಗೆ ಕೃಷ್ಣ ಸತ್ಯಭಾಮೆಯರ ಜಗಳವನ್ನಂತೂ ಇವರ ಬಾಯಿಂದಲೇ ಕೇಳಿ ಆನಂದಿಸಬೇಕು. ಬೀಸುವ ಪದ, ಸೋಬಾನೆ ಪದ, ಬಾಂಧವ್ಯದ ಪದ, ಪ್ರೇಮ ಗೀತೆಗಳನ್ನೂ ಸಹ ಹಾಡುತ್ತಾರೆ. ಲಕ್ಕಮ್ಮನವರ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೮೩ ರಷ್ಟು ಹಿಂದೆಯೇ ಧ್ವನಿಮುದ್ರಣ ಮಾಡಿಕೊಂಡಿದ್ದಾರೆ.

ಇಂತಹ ಅಪರೂಪದ, ಪ್ರತಿಭಾವಂತ ಹಾಡುಗಾರ್ತಿಗೆ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧೀಶರಾದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲ ಗಂಗಾಧರನಾಥಸ್ವಾಮಿಗಳು ನೀಡಿದ ದತ್ತಿಯ ನೆನಪಿಗಾಗಿ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬. ಜಡೆಯದ ಲಕ್ಷ್ಮಮ್ಮ

ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ದೊಡ್ಡ ಬೀರನಕೆರೆಯ ಜಡೆಯದ ಲಕ್ಷ್ಮಮ್ಮನವರು ಹಾಲುಮತ ಜನಾಂಗಕ್ಕೆ ಸೇರಿದ ಸೊಗಸಾದ ಹಾಡುಗಾರ್ತಿ. ಎಪ್ಪತ್ತರ ಹರೆಯದ ಲಕ್ಷ್ಮಮ್ಮನವರು ತಾವು ಹಾಡುವ ಹಾಡುಗಳನ್ನು ಕಲಿತದ್ದು ತಮ್ಮ ತಾಯಿಯಿಂದಲೇ. ಗ್ರಾಮದೇವತೆ ಮಾಯಮ್ಮನ ಮೇಲೆ ಅದ್ಭುತವಾಗಿ ಹಾಡಬಲ್ಲ ಲಕ್ಷ್ಮಮ್ಮನವರು ಭೈರವ, ಹನುಮಯ್ಯ, ನಂಜಯ್ಯ ಮುಂತಾದ ದೇವರಸೇವೆ ಪದಗಳನ್ನೇ ಅಲ್ಲದೆ ಬೀಸುವ ಪದ, ಕುಟ್ಟುವ ಪದ, ಸೋಬಾನೆ ಪದ, ಮಂಗಳಾರತಿ ಪದಗಳನ್ನು ಸಹ ಹಾಡುತ್ತಾರೆ. ಲಕ್ಷ್ಮಮ್ಮನವರ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡು ೧೯೮೩ ರಲ್ಲೇ ಚುಂಚನಗಿರಿಯಲ್ಲಿ ವಿಶೇಷವಾಗಿ ಧ್ವನಿಮುದ್ರಣ ಮಾಡಿಕೊಂಡಿರುತ್ತಾರೆ. ಲಕ್ಷ್ಮಮ್ಮನವರ ಹಾಡುಗಳಿಗೆ ಮೊದಲ ಬಾರಿಗೆ ವಾದ್ಯ ಸಂಯೋಜನೆ ಮಾಡಿಸಿದ್ದು ಸಹ ಇಲ್ಲಿಯೆ.

ಇಂತಹ ಸೊಗಸಾದ ಹಾಡುಗಾರ್ತಿಗೆ ಶ್ರೀ ಆದಿಚುಂಚನಗಿರಿ ಮಠಾಧಿಶರಾದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳು ನೀಡಿದ ದತ್ತಿಯ ನೆನಪಿಗಾಗಿ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭. ಶಿಲ್ಪಾಪುರದ ಸಂಜೀವಮೂರ್ತಿ

ಗೊಂಬೆರಾಮರ ಪಂಗಡದಲ್ಲಿ ಹುಟ್ಟಿದ ಮಗುವಿಗೆ ತೊಗಲು ಹೊಂಬೆಯೇ ಆಟಿಕೆ. ತೀರ ಎಳೆಯ ಪ್ರಾಯಕ್ಕೆ ತಮ್ಮ ಹಿರಿಯರು ಆಟ ಪ್ರದರ್ಶಿಸುವಾಗ ತಾಳ ಹಾಕುವುದು, ಮದ್ದಲೆಯೋ, ತಬಲವೊ ನುಡಿಸುವುದು, ಹಾಡುವುದು, ಗೊಂಬೆ ಕುಣಿಸುವುದು, ಹೀಗೆ ಗೊಂಬೆಯೊಂದಿಗೆ ಸಾಗಿದ ಬದುಕು. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿಯ ಶಿಲ್ಪಾಪುರದ ಶ್ರೀ ಸಂಜೀವಮೂರ್ತಿಯವರು ಹೀಗೆಯೇ ಬೆಳೆದವರು.

ರಾಮಾಯಣ, ಮಹಾಭಾರತ, ಶಿವಪುರಾಣಗಳೇ ಮೊದಲಾದವುಗಳ ಎಂಬತ್ತಕ್ಕೂ ಹೆಚ್ಚು ಪ್ರಸಂಗಗಳನ್ನು ಪ್ರದರ್ಶಿಸಬಲ್ಲ ಸಮರ್ಥರು. ವಯಸ್ಸು ಈಗ ಅರವತ್ತೆರಡು. ಊರೂರಲ್ಲಿ ಗೊಂಬೆ ಕುಣಿಸುತ್ತಲೇ ಈಗೀಗ ಅನಿವಾರ್ಯವಾಗಿ ನಾಟಕ ಕಲಿಸುವ ಮಾಸ್ತರರಾಗಿ, ಅದರಲ್ಲೂ ಪರಿಣಿತರಾಗಿದ್ದಾರೆ.

ಇಂತಹ ಉತ್ಕೃಷ್ಟ ತೊಗಲು ಗೊಂಬೆಯಾಟದ ಕಲಾವಿದರನ್ನು ಶ್ರೀ ಆದಿಚುಂಚನಗಿರಿ ಸಂಸ್ಥಾನ ಮಠಾಧೀಶರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ನೀಡಿದ ದತ್ತಿ ನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೮. ತಲಕಾಡು ಮರಿನಂಜಮ್ಮ

ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕು ತಲಕಾಡು ಗ್ರಾಮದ ಹೊಂಬಾಳಯ್ಯನವರ ಪತ್ನಿ ಮರಿನಂಜಮ್ಮನರು ಆದಿ ಕರ್ನಾಟಕರು. ಸುಮಾರು ೬೫ರ ಪ್ರಾಯದ ಇವರು ಹಾಡುಗಳನ್ನು ಕಲಿತದ್ದು, ತಮ್ಮ ಪೂರಿಗಾಲಿಯ ಅಜ್ಜಿಯಿಂದ. ಹೀಗಾಗಿ ತವರಿನ ಮೇಲೆ ವಿಶೇಷವಾದ ವ್ಯಾಮೋಹ. ತವರನ್ನು ಕುರಿತಂತೆ ಇವರು ಹಾಡುವ 'ಲಲ್ಲಲಾಲಿ ಲಾಲ್ಯಾಲ ಲಾಲಿಲಾಲಾ' ಎನ್ನುವ ಹಾಡುವ ಅತ್ಯಂತ ಅಪರೂಪದ್ದು ಮತ್ತು ವಿಶಿಷ್ಟವಾದದ್ದು. ಸುಶ್ರಾವ್ಯವಾದ ಹಾಡುಗಾರಿಕೆ, ಸೊಗಸಾದ ಕಂಠವುಳ್ಳ ಮರಿನಂಜಮ್ಮನವರು ಬೀಸುವ ಪದ, ಕುಟ್ಟುವ ಪದ, ಸೋಬಾನೆ ಪದ, ನಾಟಿಪದ, ಮಂಗಳಾರತಿ ಪದ, ಕಗ್ಗದ ಪದಗಳನ್ನೇ ಅಲ್ಲದೆ ಸರಸ್ವತಿ, ಶ್ರೀರಾಮ, ಭೈರವ, ನಂಜುಂಡೇಶ್ವರ, ತಲಕಾಡು ಗ್ರಾಮದೇವತೆಯಾದ ಬಂಡರಸಮ್ಮ, ಮಾದೇಶ್ವರ, ಮಂಟೇಸ್ವಾಮಿ ಮೊದಲಾದ ದೇವತೆಗಳ ಮೇಲೂ ಸಹ ಸೊಗಸಾಗಿ ಹಾಡುತ್ತಾರೆ.

ತಲಕಾಡು ಮರಿನಂಜಮ್ಮನವರ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೮೩ ರಷ್ಟು ಹಿಂದೆಯೇ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ಇಂತಹ ಉತ್ಕೃಷ್ಟ ಗಾಯಕಿಗೆ ಕೇರಳಾಪುರದ ಪ್ರೊ. ಸಿ. ಜಿ. ಪುರುಷೋತ್ತಮರವರು ತಮ್ಮ ತಾತ ಶ್ರೀ ಶಂಭೂಗೌಡರ ನೆನಪಿಗಾಗಿ ನೀಡಿರುವ ದತ್ತಿನಿಧಿ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೯. ಯರದಹಳ್ಳಿ ಬಿ. ನಾರಾಯಣಪ್ಪ

ದೊಂಬಿದಾಸರು ಎಂದು ಹೆಸರಾಗಿರುವ, ಹಾಡೇ ತಮ್ಮ ಅಮೂಲ್ಯ ಸಂಪತ್ತಾಗಿರುವ, ಹೆಂಗಸರು ಗಂಡಸರೆನ್ನದೆ ಮನೆಮಂದಿಯೆಲ್ಲಾ ಹಾಡಿನಲ್ಲಿ ಒಂದಾಗುವ ದೊಂಬಿದಾಸ ಪರಂಪರೆಯಲ್ಲಿ ಬೆಳೆದು ಬಂದವರು ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಯರದಹಳ್ಳಿಯ ಬಿ. ನಾರಾಯಣಪ್ಪ ಬಿನ್ ಭದ್ರಪ್ಪನವರು.

ಗಂಗೆ ಗೌರಿ ನಾಟಕದಲ್ಲಿ ಬಸವರಾಜನ ಪಾತ್ರ ಮಾಡುವುದರಲ್ಲಿ ನಿಸ್ಸೀಮರೆನಿಸಿಕೊಂಡಿರುವ ಇವರು ಗಂಗೆ ಗೌರಿಯನ್ನು ಸಾದ್ಯಂತವಾಗಿ ಹಾಡುತ್ತಾರೆ. ಬಾಲನಾಗಮ್ಮ, ಕೃಷ್ಣ ಕೊರವಂಜಿ, ಮಾಗಡಿ ಕೆಂಪೇಗೌಡ ಇವೇ ಮೊದಲಾದ ಕಥನ ಕಾವ್ಯಗಳಲ್ಲದೆ ನಾಟಕದ ಹಾಡುಗಳನ್ನು ಸಹ ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಾರೆ. ಐವತ್ತಾರರ ಹರೆಯದ ನಾರಾಯಣಪ್ಪನವರು ನಾಡಿನ ಹತ್ತು ಹಲವು ಪ್ರಧಾನ ವೇದಿಕೆಗಳಲ್ಲಿ ಈಗಾಗಲೇ ಹಾಡಿದ್ದಾರೆ. ಇವರ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೮೩ ರಷ್ಟು ಹಿಂದೆಂಯೇ ಧ್ವನಿಮುದ್ರಿಸಿಕೊಂಡಿದ್ದಾರೆ.

ದುಂಬಿಯಂತೆ ಝೇಂಕರಿಸುವ ದನಿಯುಳ್ಳ ದೊಂಬಿದಾಸರ ನಾರಾಯಣಪ್ಪನವರಿಗೆ ಕರ್ನಾಟಕದ ಜಾನಪದ ಪರಿಷತ್ತು, ಕೇರಳಾಪುರದ ಪ್ರೊ. ಸಿ. ಜಿ. ಪುರುಷೋತ್ತಮ ಅವರು

ತಮ್ಮ ತಾತ ಶ್ರೀ ಶಂಭೂಗೌಡರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೧೦. ಕರಿಯಪ್ಪನದೊಡ್ಡಿ ಪಾರ್ವತಮ್ಮ

ಹತ್ತು ಹನ್ನೆರಡರ ಕಿರಿಯ ವಯಸ್ಸಲ್ಲಿ ಕುರಿಮೇಯಿಸಲು ಕುರಿಮಾಳಕ್ಕೆ ಹೋದಾಗ ಅಲ್ಲಿ ಸೇರಿದ ಹಿರಿಯರು ಹಾಡಿದ ಪದವ ಎದೆಗೆ ಹಾಕ್ಕೊಂಡು, ದಿನಕ್ಕೊಂದು, ವಾರಕ್ಕೊಂದು ಪದವನ್ನು ತುಂಬಿಸಿಕೊಂಡು ಹಾಡಿನ ವಾಡೆಯನ್ನೇ ಶ್ರೀಮಂತಗೊಳಿಸಿಕೊಂಡವರು ಪಾರ್ವತಮ್ಮನವರು, ನಾಟಿ ಪದ, ಕಳೆ ಪದ, ಬೀಸುವ ಪದ, ಲಾಲಿ ಪದ, ಸೋಬಾನೆ ಪದ, ದೇವರ ಪದ ಹೀಗೆ ಇವರು ಹಾಡುವ ಹಾಡುಗಳ ಪಟ್ಟಿ ಬೆಳೆಯುತ್ತ ಹೋಗುತ್ತದೆ.,

ಗೊರವರ ಸಂಪ್ರದಾಯದ ಹಿರಿಯ ಕಲಾವಿದ ಕೆಂಚಮಲ್ಲಯ್ಯನವರ ಪತ್ನಿಯಾದ ಇವರದು ಹಾಡುವ ಬಳಗ. ತಮ್ಮ ಹೆಣ್ಣು ಮಕ್ಕಳಿಬ್ಬರಿಗೂ ಹಾಡು ಕಲಿಸಿ, ತಮ್ಮೊಂದಿಗೆ ಹಾಡಲು ಅನುವುಮಾಡಿಕೊಂಡಿದ್ದಾರೆ. ಇವರ ಸಾಕಷ್ಟು ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೮೩ ರಷ್ಟು ಹಿಂದೆಯೇ ಧ್ವನಿಮುದ್ರಿಸಿಕೊಂಡಿದ್ದಾರೆ.

ಇಂತಹ ಸುಶ್ರಾವ್ಯ ಹಾಗೂ ಸೊಗಸಾದ ಹಾಡುಗಾರ್ತಿಗೆ ಬೆಂಗಳೂರಿನ ಎಂ. ಕೃಷ್ಣಪ್ಪನವರು ತಮ್ಮ ತಂದೆ ಮುನಿಸಾಮಪ್ಪ ಮತ್ತು ತಾಯಿ ರಂಗಮ್ಮನವರ ನೆನಪಿಗಾಗಿ ನೀಡಿರುವ ದತ್ತಿ ನಿಧಿಯಿಂದ ಕರಿಯಪ್ಪನದೊಡ್ಡಿ ಪಾರ್ವತಮ್ಮನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೧೧. ಪುಟ್ಟ ನಂಜಮ್ಮ

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಕಿರುಗಾವಲಿನ ಪುಟ್ಟನಂಜಮ್ಮನವರು ದಾಸಪ್ಪನವರ ಪತ್ನಿ. ಗಂಗೆಮತಕ್ಕೆ ಸೇರಿದ ಇವರು ಸೋಬಾನೆ ಪದಗಳು, ಹರಿಜನರಿಗೆ ಒಲಿದಿದ್ದನ್ನು ಕುರಿತು ಅತ್ಯಂತ ಸಾರಸ್ಯಕರವಾಗಿ ಕಥೆ ಹೇಳುತ್ತಾರೆ. ಬೀಸುವ ಪದ, ಕುಟ್ಟುವ ಪದ, ಸೋಬಾನೆ ಪದಗಳೇ ಅಲ್ಲದೆ ಅತ್ಯಂತ ಅಪರೂಪದ ಕಥನ ಕಾವ್ಯಗಳನ್ನು ಹಾಡುತ್ತಾರೆ. ಸತ್ಯಗುಣೆ ಶಂಕಮ್ಮ, ಬಳೇಗಾರ ಶೆಟ್ಟಿ, ಕೊಂತಮ್ಮ, ಧರೆಗೆ ದೊಡ್ಡವರು, ಮೈದಾಳರಾಮ, ಚೆನ್ನಿಗರಾಮ, ಸಾರಂಗಧರ, ಮುಡುಕುತೊರೆ ಮಲ್ಲಯ್ಯ, ಬಿಳಿಗಿರಿ ರಂಗಸ್ವಾಮಿ, ಲಿಂಗರಾಜಮ್ಮ ಇವೆ ಮೊದಲಾದ ಸುದೀರ್ಘ ಕಥನ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಗೂ ಸೊಗಸಾಗಿ ಹಾಡುವ ಪುಟ್ಟನಂಜಮ್ಮನವರ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೮೩ ರಲ್ಲೇ ಧ್ವನಿಮುದ್ರಿಸಿಕೊಂಡಿರುತ್ತಾರೆ.

ಇಂತಹ ಉತ್ಕೃಷ್ಟ ಕಥನ ಕಾವ್ಯಗಳ ಗಾಯಕಿಗೆ ಬೆಂಗಳೂರಿನ ಎಂ. ಕೃಷ್ಣನವರು ತಮ್ಮ ತಂದೆ ಮುನಿಸಾಮಪ್ಪ ಮತ್ತು ಮಾತೋಶ್ರೀ ರಂಗಮ್ಮನವರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೧೨. ಎಂ. ಬಸವರಾಜು

ಕರ್ನಾಟಕದ ಪ್ರಮುಖ ವೃತ್ತಿ ಗಾಯಕ ಪರಂಪರೆಗಳಲ್ಲಿ ಒಂದಾದ ನೀಲಗಾರರು ಮಂಟೇಸ್ವಾಮಿ ಗುಡ್ಡರು. ನಾಡ ತಂಬೂರಿಯನ್ನು ಮೀಟುತ್ತಾ, ತಕ್ಕೆ, ಗಗ್ಗರಗಳನ್ನು ನುಡಿಸುತ್ತಾ ನೀಲಗಾರರು ಹಾಡತೊಡಗಿದರೆ ಎಂತಹ ಅರಸಿಕರೂ ತಲೆದೂಗುತ್ತಾರೆ. ಇಂತಹ ಪರಂಪರೆಯಲ್ಲಿ ಬೆಳೆದು ಬಂದ ಉತ್ಕೃಷ್ಟ ನೀಲಗಾರ ಸಂಪ್ರದಾಯದ ಗಾಯಕ ಮೈಸೂರಿನ ಎಂ. ಬಸವರಜು. ಧರೆಗೆ ದೊಡ್ಡವರು ಮತ್ತು ಮಹದೇಶ್ವರನ ಧಾರ್ಮಿಕ ಕಾವ್ಯಗಳಲ್ಲದೆ ೩೦ ಕ್ಕೂ ಹೆಚ್ಚು ಲೌಕಿಕ ಕಾವ್ಯಗಳನ್ನು ಹಾಡುವ ಬಸವರಾಜು ಈ ಪರಂಪರೆಯ ಅತ್ಯಂತ ಅಪರೂಪದ ಹಾಡುಗಾರರು.

ತಮ್ಮ ಕಾವ್ಯ ಸಂಪತ್ತನ್ನು ತಮ್ಮಲ್ಲಿಯೇ ಬಚ್ಚಿಟ್ಟುಕೊಳ್ಳದೆ ಯುವ ಜನಾಂಗಕ್ಕೆ ಕಲಿಸುವುದರ ಮೂಲಕ ನೀಲಗಾರ ಪರಂಪರೆಯ ವಾಹಕರಾಗಿದ್ದಾರೆ. ಈಗಾಗಲೇ ಇವರ ಒಂಬತ್ತು ಧ್ವನಿ ಸುರುಳಿಗಳು ಬಿಡುಗಡೆಯಾಗಿದ್ದು ಸಾಕಷ್ಟು ಜನಪ್ರಿಯತೆಯನ್ನು ಪಡೆದುಕೊಂಡಿವೆ. ಇವರ ಗಾಯನಕಲೆಯನ್ನು ಮೆಚ್ಚಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಇಂತಹ ಶ್ರೇಷ್ಠ ವೃತ್ತಿಗಾಯಕನಿಗೆ ಮಂಡ್ಯ ಜಿಲ್ಲೆಯ ಕಟ್ಟಿಗೆರೆ ಸಿದ್ದೇಗೌಡರು ಆಚಾರ್ಯ ಕಾಕಾ ಕಾಲೇಲ್ಕರ್ ಅವರ ನೆನಪಿಗಾಗಿ ಕೊಟ್ಟಿರುವ ದತ್ತಿ ನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ..

## ೧೩. ಮಧುರೆ ಎಲ್ಲಮ್ಮ

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡ ಬಳ್ಳಾಪುರ ತಾಲ್ಲೂಕಿನ ಮಧುರೆ ಗ್ರಾಮಕ್ಕೆ ಸೇರಿದ ಎಲ್ಲಮ್ಮ ಕೋಂ ರಾಮಯ್ಯನವರು ತೋಟಗಾರಿಕೆಯನ್ನೇ ಕಸುಬನ್ನಾಗಿ ಉಳ್ಳ ಬಲಗೈ ವರ್ಗಕ್ಕೆ ಸೇರಿದ ತಿಗಳ ಹರಿಜನರು. ತಮ್ಮ ಕುಲದ ಉಗಮ, ಬೆಳವಣಿಗೆಗಳನ್ನು ಕುರಿತಾದಂತೆ ಅತ್ಯಂತ ಸ್ವಾರಸ್ಯಕರವಾದ ಕಥೆ ಹೇಳುವ ಎಲ್ಲಮ್ಮನವರು ಪಕ್ಷಿಪದ, ಯಾಲಪದ, ತವರಿನ ಪದ, ಮಂಗಳಾರತಿ ಪದಗಳೇ ಅಲ್ಲದೆ ಅಣ್ಣನ ಮನೆಗೆ ಹೆಣ್ಣಿಗೆ ಹೋದಾಗ, ಹೊನ್ನಾಲದೇವಿ ಮೇಲೆ, ನಿಂಬೆಹಣ್ಣಿನಂಥ ಹುಡುಗಿ ನೀರಿಗೆ ಹೋದದ್ದು, ದೊಂಬರ ಚೆನ್ನಿ, ಹಾರುವಯ್ಯ, ಮಾದಗತ್ತಿ, ನಂದಿಗಿರಿರಾಯ, ಗಂಗೆ ಗೌರಿ, ಎಲ್ಲಮ್ಮ, ದ್ಯಾವಣ್ಣ ದ್ಯಾಮವ್ವನ ಕಥೆ ಮುಂತಾದ ಕಥನಗೀತೆಗಳನ್ನು ಸಹ ಹಾಡುತ್ತಾರೆ. ಎಲ್ಲಮ್ಮನವರ ವೈಶಿಷ್ಟ್ಯವೆಂದರೆ ಇವರ ಮನೆ ಮಾತು ತಮಿಳಾದರೂ ಕನ್ನಡ ಜಾನಪದ ಕ್ಷೇತ್ರದಲ್ಲಿ ಅತ್ಯಂತ ಸುಶ್ರಾವ್ಯದ ಹಾಗೂ ಸಮೃದ್ಧ ಹಾಡುಗಾರ್ತಿಯಾಗಿ ರೂಪುಗೊಂಡಿರುವುದು. ಎಲ್ಲಮ್ಮನವರ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೮೩ ರಷ್ಟು ಹಿಂದೆಯೇ ಧ್ವನಿಮುದ್ರಿಸಿಕೊಂಡಿರುತ್ತಾರೆ.

ಇಂತಹ ಅಪರೂಪದ ಸಮೃದ್ಧ ಜಾನಪದ ಹಾಡುಗಾರ್ತಿ ಮಂಡ್ಯ ಜಿಲ್ಲೆಯ ಕಟ್ಟಿಗೆರೆ ಸಿದ್ದೇಗೌಡರು ಆಚಾರ್ಯ ಕಾಕಾ ಕಾಲೇಲ್ಕರ್ ಅವರ ನೆನಪಿಗಾಗಿ ಕೊಟ್ಟಿರುವ ದತ್ತನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೪. ವಿಶೇಷ ಪುರಸ್ಕಾರ—ಡಿ. ಎಸ್. ಗಂಗಾಧರಗೌಡ

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು ದಂಡಾವತಿಯವರಾದ ಡಿ. ಎಸ್. ಗಂಗಾಧರಗೌಡರು ಬಹುಮುಖ ಪ್ರತಿಭೆ. ವಿದ್ಯಾರ್ಥಿ ದೆಸೆಯಿಂದಲೇ ಕ್ರೀಡೆ, ಸಾಹಿತ್ಯ, ಸಾಮಾಜಿಕ, ಕಲೆ, ನಾಟಕ, ಜಾನಪದ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಶ್ರೇಷ್ಠದರ್ಜೆಯ ಜಾನಪದ ಕಲಾವಿದರಾಗಿ, ಯಕ್ಷಗಾನ ನಟರಾಗಿ, ಸೋಮನ ಕುಣಿತದಲ್ಲೂ ಕಲೆಯನ್ನು, ನಾನಾ ವೇದಿಕೆಯ ನಾಡಿನ ಉದ್ದಗಲಕ್ಕೂ ಪ್ರದರ್ಶಿಸುವುದರ ಮೂಲಕ ನಾಡಿನ ಮತ್ತು ರಾಷ್ಟ್ರದ ಹಿರಿಮೆಯನ್ನು ಹೆಚ್ಚಿಸಿದ್ದಾರೆ.

ತಮ್ಮ ಊರಾದ ದಂಡಾವತಿಯಲ್ಲಿ 'ಸ್ವತಂತ್ರ ಯಕ್ಷಗಾನ ಕಲಾಸಂಘ'ವನ್ನು ಪ್ರಾರಂಭಿಸಿ ಆ ಮೂಲಕ ಒಂದೇ ಬಾರಿಗೆ ಹತ್ತು ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸಿ ಅಂದಿನ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿದ್ದ ಶ್ರೀ ಎಚ್. ಎಲ್. ನಾಗೇಗೌಡರಿಂದ 'ಯಕ್ಷರತ್ನ' ಎಂದು ಹೊಗಳಿಸಿಕೊಂಡ ಕೀರ್ತಿ ಇವರದು. ದಂಡಾವತಿಯಲ್ಲಿ ಒಂದೇ ಬಾರಿಗೆ ೨೫ ಸೋಮಗಳನ್ನು ಕುಣಿಸುವ ವ್ಯವಸ್ಥೆ ಮಾಡಿದ ಯಶಸ್ಸು ಇವರಿಗೆ ಸಲ್ಲುತ್ತದೆ. ಸ್ವತಃ ಜಾನಪದ ಕಲಾವಿದರಾದ ಗಂಗಾಧರಗೌಡರು ಸೋಮನ ಕುಣಿತದ ತಂಡ ಕಟ್ಟಿ, ಪಾಂಡಿಚೇರಿ, ತಿರುವನಂತಪುರ, ಒರಿಸ್ಸಾ, ಹಿಮಾಚಲ ಪ್ರದೇಶ, ಹಂಪಿ ಉತ್ಸವ, ವಿಶ್ವಕನ್ನಡ ಸಮ್ಮೇಳನ, ಪುರಂದರ ಉತ್ಸವ ಇತ್ಯಾದಿಗಳಲ್ಲಿ ಭಾಗವಹಿಸಿ ಪ್ರದರ್ಶನ ನೀಡಿರುವುದಲ್ಲದೇ ಮದ್ರಾಸ್ ದೂರದರ್ಶನದ ರಾಷ್ಟ್ರೀಯ ಜಾಲದಲ್ಲಿ ತಮ್ಮ ಕಾರ್ಯಕ್ರಮವನ್ನು ನೀಡಿರುತ್ತಾರೆ. ಏಕ ವೇದಿಕೆಯಲ್ಲಿ ೨೫ ಮಂದಿ ಮಂಡಲದಾಯ ಯಕ್ಷಗಾನ ಭಾಗವತರುಗಳನ್ನು ಸೇರಿಸಿ ಜಾನಪದ ಅಕಾಡೆಮಿಗೆ ಪರಿಚಯಿಸಿದ ಯಕ್ಷಗಾನ ಪ್ರೇಮಿ ಇವರು.

ದಂಡಾವತಿಯ ಸುತ್ತಮುತ್ತಲ ಜಾನಪದ ಕಲೆಗಳಾದ ಕೋಲಾಟ, ನಗಾರಿ ಮೇಳ, ತಮಟೆ ವಾದ್ಯ, ಕಹಳೆವಾದ್ಯದ ಪ್ರಾಮುಖ್ಯವಾದ ಜೊತೆಗೆ ಕಲಾವಿದರಿಗೆ ಪ್ರೋತ್ಸಾಹ ನೀಡಿ ರಾಷ್ಟ್ರದ ಉದ್ದಗಲಕ್ಕೂ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶಿಸಿದ್ದಾರೆ. ಗಂಗಾಧರಗೌಡರು ಸೋಮನ ಕುಣಿತದ ತಂಡವು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ೧೦೦ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿ ರಾಜ್ಯಕ್ಕೆ ಕೀರ್ತಿ ತಂದಿರುತ್ತಾರೆ.

ಇಂತಹ ಅಪರೂಪದ ಕಲಾವಿದ, ಸಂಘಟನಾಕಾರರ ಜಾನಪದ ಸೇವೆಯನ್ನು ಮೆಚ್ಚಿ ಕರ್ನಾಟಕ ಜಾನಪದ ಪರಿಷತ್ತು ದಂಡಾವತಿಯ ಶ್ರೀ ಡಿ. ಎಸ್. ಗಂಗಾಧರಗೌಡರಿಗೆ 'ವಿಶೇಷ ಪುರಸ್ಕಾರ' ನೀಡಿ ಗೌರವಿಸುತ್ತದೆ.

## ೧೫. ಯಳಸಂಗಿ ಕಲ್ಲಣ್ಣ

ಸುಮಾರು ೬೫ರ ಹರೆಯದ ಯಳಸಂಗಿ ಕಲ್ಲಣ್ಣನವರು ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು ಸಾಲೋಟಗಿ ಗ್ರಾಮಕ್ಕೆ ಸೇರಿದವರು. ಜಾನಪದವನ್ನು ಹೆಸರು ಮತ್ತು ಹಣ ಗಳಿಕೆಗಾಗಿ ಹಾಗೂ ಜೀವನ ನಿರ್ವಹಣೆಗಾಗಿ ಆಯ್ದುಕೊಳ್ಳದೆ, ತಮ್ಮ ಬದುಕನ್ನು

ಜಾನಪದಕ್ಕಾಗಿಯೇ ಮುಡಿಪಾಗಿರಿಸಿದವರು. ಬಡ ಕುಟುಂಬದಲ್ಲಿ ಜನಿಸಿ, ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಕಲ್ಲಣ್ಣನವರಿಗೆ ಜನಪದ ಕಲಾವಿದರೆಂದರೆ ಅವ್ಯಾಜವಾದ ಪ್ರೀತಿ. ಕಚ್ಚೆ ಪಂಚೆ, ಬಿಳಿಯ ನಿಲುವಂಗಿಯನ್ನು ತೊಟ್ಟು, ತಲೆಯ ಮೇಲೆ ಸದಾ ಗಾಂಧಿ ಟೋಪಿ ಧರಿಸುವ ಕಲ್ಲಣ್ಣನವರ ಹೆಗಲಿನ ಚೀಲದ ತುಂಬಾ ಜನಪದ ಕಲಾವಿದರ ಮಾಸಾಶನ, ಗೌರವ ಧನ, ವೈದ್ಯಕೀಯ ನೆರವಿಗೆ ಸಂಬಂಧಿಸಿದ ಅರ್ಜಿಗಳು, ಮನವಿಗಳು, ಪರಿಚಯ ಮತ್ತು ಪ್ರಶಸ್ತಿ ಪತ್ರಗಳೇ ತುಂಬಿರುತ್ತವೆ.

ನಶಿಸಿ ಹೋಗುತ್ತಿರುವ ಜನಪದ ಕಲೆಗಳ ಪುನರುಜ್ಜೀವನಕ್ಕಾಗಿ ಅವುಗಳ ವ್ಯವಸ್ಥಿತ ಪ್ರದರ್ಶನಕ್ಕಾಗಿ ಹಾಗೂ ಕಲಾವಿದರ ಸಂಘಟನೆಗಾಗಿ ಜನಪದ ಕಲಾ ಸಂಘವನ್ನು ಸಾಲೋಟಗಿಯಲ್ಲಿ ಕಟ್ಟಿ ಬೆಳೆಸಿದರು. ಆ ಮೂಲಕ ದೇಶದಾದ್ಯಂತ ಕಲಾ ತಂಡಗಳೊಡನೆ ಸಂಚರಿಸಿದರು. ನಿಷ್ಠಾವಂತ ಜನಪದ ಕಾರ್ಯಕರ್ತರಾದ ಕಲ್ಲಣ್ಣನವರು ಕರ್ನಾಟಕ ಜಾನಪದ ಪರಿಷತ್ತಿನ ಏಳನೆಯ ಹುಟ್ಟುಹಬ್ಬವನ್ನು ೧೯೮೭ರ ಫೆಬ್ರವರಿಯಲ್ಲಿ ಸಾಲೋಟಗಿಯಲ್ಲಿ ಅದ್ದೂರಿಯಾಗಿ ನಡೆಸಿದ್ದು ಅವರ ಕರ್ತೃತ್ವ ಶಕ್ತಿಗೆ ಉತ್ತಮ ನಿದರ್ಶನ. ಇಂತಹ ಕಲ್ಲಣ್ಣನವರು ಜಿಲ್ಲೆಗೊಬ್ಬರಿದ್ದರೂ ಸಾಕು, ಜನಪದ ಕಲೆಗಳ ಪುನರುಜ್ಜೀವನ, ಕಲಾವಿದರ ಸಂಘಟನೆಗಳು ತನ್ನಿಂದ ತಾನೇ ಸುಧಾರಿಸುತ್ತವೆ. ಎಂತಹ ಸ್ಥಿತಿಯಲ್ಲಿದ್ದರೂ ಕೊಟ್ಟ ಮಾತಿಗೆ ತಪ್ಪದೆ ಬಂದು ಕಲಾಪ್ರದರ್ಶನ ನಡೆಸಿಕೊಡುವ ಜನಪದ ಗಾಢ ನಿಷ್ಠೆ ಕಲ್ಲಣ್ಣನವರಲ್ಲಿದೆ. ಇಂತಹ ನಿಷ್ಠಾವಂತ ಕಾರ್ಯಕರ್ತರ ಸಂಘಟನಾಶಕ್ತಿಯನ್ನು ಗೌರವಿಸುವುದರ ಕುರುಹಾಗಿ ಕರ್ನಾಟಕ ಜಾನಪದ ಪರಿಷತ್ತು ಶ್ರೀ ಯಳಸಂಗಿ ಕಲ್ಲಣ್ಣನವರಿಗೆ ತನ್ನ 'ವಿಶೇಷ ಪುರಸ್ಕಾರ' ನೀಡಿ ಗೌರವಿಸುತ್ತದೆ.

ಪರಿಚಯ : **ಡಾ. ಚಕ್ಕೆರೆ ಶಿವಶಂಕರ್**

## ಪ್ರಶಸ್ತಿ ಪುರಸ್ಕೃತರು – ೨೦೦೦

[ತಾರೀಖು : ೧೩–೨–೨೦೦೦ ದಂದು ಸಂಜೆ ಜಾನಪದ ಲೋಕದ ಆಹ್ಲಾದಕರ ವಾತಾವರಣದಲ್ಲಿ, ಗೋಧೂಳಿ ಸಮಯದಲ್ಲಿ ಈ ಸಾಲಿನ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಏರ್ಪಡಿಸಿದ್ದು, ಕರ್ನಾಟಕದ ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀಮತಿ ವಿ. ಎಸ್. ರಮಾದೇವಿಯವರು ಮತ್ತು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀಮತಿ ರಾಣಿ ಸತೀಶ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದ ಮುಖ್ಯ ಆಕರ್ಷಣೆಯಾಗಿದ್ದರು. ಜಾನಪದ ಲೋಕದ ಭವ್ಯ ಬಯಲು ರಂಗಮಂದಿರದಲ್ಲಿ, ಹಲಗೆ ಬಳಪ ಹಿಡಿದು ಗೊತ್ತಿಲ್ಲದ, ಲೆಕ್ಕಣಿಕೆ ಹಿಡಿದು ಬರೆಯದ, ಶ್ರೀ ಗುರುವಿನಿಂದ ಓದಿಸಿಕೊಂಡು ಕಲಿಯದ ಜನಪದ ಕಲಾವಿದರುಗಳನ್ನು ಸನ್ಮಾನ್ಯ ರಾಜ್ಯಪಾಲರು ಮತ್ತು ಸನ್ಮಾನ್ಯ ಸಚಿವರು ತುಂಬು ಹೃದಯದಿಂದ ಗೌರವಿಸಿ ಸನ್ಮಾನಿಸಿದರು. ಪ್ರಶಸ್ತಿ ಫಲಕ ನೀಡುವುದರೊಂದಿಗೆ ಮಹಿಳಾ ಕಲಾವಿದರಿಗೆ ಸೀರೆ ಮತ್ತು ಕಣಗಳನ್ನು ಓದಿಸಿ, ಪುರುಷರಿಗೆ ಶಾಲು ಹೊದಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪರಿಷತ್ತು ನೀಡುವ ಪ್ರಶಸ್ತಿಯ ಮೊತ್ತ ತಲಾ ೧,೦೦೦ ರೂ.ಗಳ ಜೊತೆಗೆ ಸನ್ಮಾನ್ಯ ರಾಜ್ಯಪಾಲರಾದ ಶ್ರೀಮತಿ ವಿ. ಎಸ್. ರಮಾದೇವಿಯವರು ಪ್ರಶಸ್ತಿ ಪಡೆದ ಪ್ರತಿಯೊಬ್ಬ ಕಲಾವಿದರಿಗೂ ತಮ್ಮ ಪರವಾಗಿ ಸ್ಥಳದಲ್ಲಿಯೇ ೫೦೦ ರೂ.ಗಳ ನಗದು ಮೊತ್ತವನ್ನು ನೀಡುವ ಮೂಲಕ ಜಾನಪದ ಕಲಾವಿದರ ಬಗ್ಗೆ ತಮಗಿರುವ ಅಂತಃಕರಣ, ಕಳಕಳಿಗಳನ್ನು ಮೆರೆದ ಪ್ರಸಂಗವು ಅನನ್ಯವಾದುದಾಗಿತ್ತು. ೨೦೦೦ದ ಸಾಲಿನಲ್ಲಿ ಕರ್ನಾಟದ ಜಾನಪದ ಪರಿಷತ್ತು ನೀಡಿದ ಪ್ರಶಸ್ತಿ ಪುರಸ್ಕೃತರ ವಿವರಗಳು ಕೆಳಕಂಡಂತಿವೆ.]

### ೧೬. ಯಾಚೇನಹಳ್ಳಿ ನಿಂಗಮ್ಮ

ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಯಾಚೇನಹಳ್ಳಿ ನಿಂಗಮ್ಮನವರು ಎಲೆಮರೆಯ ಕಾಯಿಯಂತಿದ್ದುಕೊಂಡು ಜಾನಪದ ಸರಸ್ವತಿಯ ಕೈಂಕರ್ಯವನ್ನು ನಡೆಸುತ್ತಾ ಕಳೆದ ಸುಮಾರು ೬೦ ವರ್ಷಗಳಿಂದಲೂ ಜಾನಪದ ರಸಗಂಗೆಯನ್ನು ರಸಿಕರಿಗೆ ಉಣಿಸುತ್ತಾ ಬಂದಿರುವ ಅಪೂರ್ವ ಕಂಠದ ಗಾಯಕಿ. ದಲಿತ ಜನಾಂಗಕ್ಕೆ ಸೇರಿದ ನಿಂಗಮ್ಮನವರಿಗೆ ಎಪ್ಪತ್ತರ ಪ್ರಾಯವಾದರೂ ಅವರು ಹಾಡುವ ಕಂಠಕ್ಕಿನ್ನೂ ವಯಸ್ಸಾಗಿಲ್ಲ. ಈಗಲೂ ಅತ್ಯಂತ ಸುಶ್ರಾವ್ಯವಾಗಿ ಹಾಡಬಲ್ಲ ಇವರು ಈ ನಾಡು ಕಂಡ ಅತೀ ಅಪರೂಪದ ಹಾಗೂ ಸೊಗಸಾದ ಹಾಡುಗಾರ್ತಿ. ಬೀಸುವಾಗ, ಕುಟ್ಟುವಾಗ, ಮದುವೆ ಶಾಸ್ತ್ರ ಮಾಡುವಾಗ ದೇವರನ್ನು ಮೆರೆಸುವಾಗ ಹೀಗೆ ಆಯಾ ಸಂದರ್ಭಗಳಿಗೆ ತಕ್ಕಂತೆ ಹಾಡುವುದಲ್ಲದೆ, ಕುಂತಿಪದ, ಚನ್ನಿಗರಾಮ, ಗಣಪತಿರಾಯ, ವೀರಬಲ್ಲಾಳ, ನಂಜುಂಡೇಶ್ವರ, ಲಿಂಗರಾಜಮ್ಮ ಹೀಗೆ ಸಮಾರು ೧೩ಕ್ಕೂ ಹೆಚ್ಚು ಖಂಡಕಾವ್ಯಗಳನ್ನು ಹಾಡುತ್ತಾರೆ. ನಿಂಗಮ್ಮನವರ ಶಾರೀರ, ನಾದಮಾಧುರ್ಯ, ದನಿಯ ಏರಿಳಿತ, ಸೊಗಸಾದ ಸಾಹಿತ್ಯ ಎಲ್ಲವೂ ಅಪೂರ್ವವಾದದ್ದು. ಈಕೆ ಹಾಡುವ ಕಗ್ಗದ ಪದಗಳಂತೂ ಇಳಿಹರೆಯದವರನ್ನು ಹುಚ್ಚೆಬ್ಬಿಸಿ ಕುಣಿಯುಂತೆ ಮಾಡುತ್ತವೆ. ಅನಕ್ಷರಸ್ಥೆಯಾದರೂ ಈಕೆಯ ನೆನಪಿನ ಕೋಶದಲ್ಲಿ ನೂರಾರು ಹಾಡುಗಳು ನೆಲೆನಿಂತಿವೆ. ಕಂಚಿನ ಸಿರಿಕಂಠದ ನಿಂಗಮ್ಮನವರ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೬೯ ರಷ್ಟು ಹಿಂದೆಯೇ ಮತ್ತು ಆ ನಂತರ ಹಲವಾರು ಸಂದರ್ಭಗಳಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ.

ಅರಮನೆ–ಗುರುಮನೆಗಳೆರಡರಲ್ಲೂ ತಮ್ಮ ಅದ್ಭುತ ಹಾಡುಗಾರಿಕೆಯನ್ನು ಪ್ರದರ್ಶಿಸಿ

ಜನಮನ್ನಣೆ ಪಡೆದಿರುವ ಇಂತಹ ಅಪರೂಪದ ಪ್ರತಿಭಾವಂತ ಹಾಡುಗಾರ್ತಿಗೆ 'ಸೋಬಾನೆ ಚಿಕ್ಕಮ್ಮ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೧೭. ಹೆಬ್ಬಣಿ ಮಾದಯ್ಯ

ತುಂಬಿದ ಕೊಡ ತುಳುಕುವುದಿಲ್ಲ ಎನ್ನುವುದಕ್ಕೆ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಹೆಬ್ಬಣಿ ಗ್ರಾಮದಲ್ಲಿ ಹುಟ್ಟಿ ಬೆಂಗಳೂರಿನಲ್ಲಿ ನೆಲೆನಿಂತಿರುವ ಕನ್ನಡ ನಾಡಿನ ಉತ್ಕೃಷ್ಟ ವೃತ್ತಿಗಾಯಕ ಪರಂಪರೆಗೆ ಸೇರಿದ ಕಂಸಾಳೆ ಕಲಾವಿದ ಹೆಬ್ಬಣಿ ಮಾದಯ್ಯನವರು ಅತ್ಯುತ್ತಮ ನಿದರ್ಶನ. ಕಂಚಿನ ಕಂಸಾಳೆಗಳನ್ನು ಕೈಯಲ್ಲಿ ಹಿಡಿದು ಕಣಿ ಕಣಿ ನಾದ ಹೊರಡಿಸುತ್ತಾ 'ಕೋರಣ್ಯ ನೀಡವ್ವ ಕೋಡುಗಲ್ಲಯ್ಯನಿಗೆ' ಎಂದು ಮಾದಯ್ಯನವರು ಹಾಡಲಾರಂಭಿಸಿದರೆ ಕೇಳುಗರಲ್ಲಿ ರೋಮಾಂಚನ ಉಂಟಾಗುತ್ತದೆ. ಅವರ ಸಾಹಿತ್ಯದ ಸೊಗಡು, ಹಾಡುವಾಗಿನ ತಲ್ಲೀನತೆ, ದನಿಯ ಏರಿಳಿತವನ್ನು ಕೇಳಿದಷ್ಟು ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ಮಾದಯ್ಯನವರ ವಯಸ್ಸು ಎಪ್ಪತ್ತಮೂರಾದರೂ ಅವರ ಹಾಡುಗಾರಿಕೆಯ ಬಲವಿನ್ನು ಕುಗ್ಗಿಲ್ಲ. ಮಲೆ ಮಾದೇಶ್ವರ ಮಹಾಕಾವ್ಯವೇ ಅಲ್ಲದೆ ಚನ್ನಿಗರಾಯ, ಲಿಂಗರಾಜಮ್ಮ, ಬಂಜೆ ಹೊನ್ನಮ್ಮ, ಬಾಲನಾಗಮ್ಮ ಹೀಗೆ ಸುಮಾರು ೧೬ಕ್ಕೂ ಹೆಚ್ಚು ಖಂಡಕಾವ್ಯಗಳನ್ನು ಹಾಡುತ್ತಾರೆ. ಇವರ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೬೨ ರಷ್ಟು ಹಿಂದೆಯೇ ಮತ್ತು ಆ ನಂತರವೂ ಹಲವಾರು ಸಂದರ್ಭಗಳಲ್ಲಿ ಧ್ವನಿಮುದ್ರಿಸಿಕೊಂಡಿದ್ದಾರೆ. ಹಾಡುಗಾರಿಕೆ, ಕೂಲಿನಾಲಿಯಿಂದ ಜೀವಿಸುವ ಬಡವರಿಗೂ ಕರಗತವಾಗುತ್ತದೆ ಎಂಬುದಕ್ಕೆ ಮಾದಯ್ಯನವರು ಸಾಕ್ಷಿಯಾಗಿದ್ದಾರೆ.

ಹೆಬ್ಬಣಿ ಮಾದಯ್ಯನವರು ಹಾಡುಗಾರಿಕೆಯಲ್ಲಷ್ಟೇ ಅಲ್ಲ ಬೀಸು ಕಂಸಾಳೆ ಕುಣಿತದಲ್ಲಿಯೂ ನುರಿತ, ನಿಪುಣ, ಅತಿ ಕುಶಲ ಕಲಾವಿದರಾಗಿದ್ದಾರೆ. ಅತ್ಯಂತ ಅಪಾಯಕಾರಿ ಹಾಗೂ ರೋಮಾಂಚನಕಾರಿಯಾದ ಬೀಸು ಕಂಸಾಳೆ ಕುಣಿತದಲ್ಲಿ ಇವರದು ಅಪ್ರತಿಮ ಪ್ರದರ್ಶನ. ಕರ್ನಾಟಕ ಜಾನಪದ ಕಂಸಾಳೆ ಕಲಾವಿದರ ಸಂಘವನ್ನು ಸ್ಥಾಪಿಸಿ ಕಳೆದ ೧೫ ವರ್ಷಗಳಿಂದಲೂ ಸುಮಾರು ೫೦ಕ್ಕೂ ಹೆಚ್ಚು ಯುವಕರಿಗೆ ಹಾಡುಗಾರಿಕೆ ಮತ್ತು ಕುಣಿತಗಳೆರಡರಲ್ಲಿಯೂ ತರಬೇತಿ ನೀಡುತ್ತಾ ಬಂದಿದ್ದಾರೆ. ಕರ್ನಾಟಕದಲ್ಲಷ್ಟೇ ಅಲ್ಲದೆ, ಹೊರರಾಜ್ಯಗಳಾದ ಆಂಧ್ರ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ದೆಹಲಿ, ಹಿಮಾಚಲ ಪ್ರದೇಶ, ದೂರದ ಅಂಡಮಾನ್ ನಿಕೋಬಾರ್ ಗಳಲ್ಲಿಯೂ ಸಹ ತಮ್ಮ ಕಲಾ ಪ್ರದರ್ಶನವನ್ನು ನೀಡಿ, ಕರ್ನಾಟಕ ಜಾನಪದದ ಹಿರಿಮೆಯನ್ನು ಎತ್ತಿ ಹಿಡಿದಿರುವ ಅಪರೂಪದ ಸಾಂಸ್ಕೃತಿಕ ವಕ್ತಾರರಿವರು.

ಹೆಬ್ಬಣಿ ಮಾದಯ್ಯನವರನ್ನು ನಾಡಿನ ಅಸಂಖ್ಯಾತ ಸಂಘಸಂಸ್ಥೆಗಳು ಗೌರವಿಸಿ, ಸನ್ಮಾನಿಸಿವೆ. ಅಖಿಲ ಕರ್ನಾಟಕ, ಅಖಿಲ ಭಾರತ ಜಾನಪದ ಸಮ್ಮೇಳನ, ಸಮಾವೇಶಗಳಲ್ಲಿ ಸಂಮಾನಿತರಾಗಿದ್ದಾರೆ. ೧೯೮೮ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಪ್ರಶಸ್ತಿ ಲಭಿಸಿದೆ. ೧೯೯೯ ರಲ್ಲಿ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಇಂತಹ ಉತ್ಕೃಷ್ಟ ವ್ಯಕ್ತಿ ಗಾಯಕ ಹಾಗೂ ಬೀಸು ಕಂಸಾಳೆ ಕಲಾವಿದ ಹೆಬ್ಬಣಿ ಮಾದಯ್ಯನವರಿಗೆ 'ದೊಡ್ಡಮನೆ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೧೮. ಎ. ಎನ್. ಚನ್ನಬಸವಯ್ಯ

ಕರ್ನಾಟಕದ ಕರಾವಳಿ ಭಾಗವು ಪಡುವಲಪಾಯ ಯಕ್ಷಗಾನ ಸಂಪ್ರದಾಯಕ್ಕೆ ಹೆಸರುವಾಸಿಯಾದರೆ, ಉತ್ತರ ಮತ್ತು ದಕ್ಷಿಣ ಭಾಗಗಳು ಮೂಡಲಪಾಯ ಯಕ್ಷಗಾನ ಸಂಪ್ರದಾಯಕ್ಕೆ ಮನೆಮಾತಾಗಿವೆ. ಬಣ್ಣಗಾರಿಕೆ, ವೇಷಭೂಷಣ, ಪ್ರಸಂಗ, ಬಿರುಸಾದ ಸಾಹಿತ್ಯ, ವಿಶಿಷ್ಟ ರೀತಿಯ ಅಟ್ಟ, ಹೀಗೆ ಎಲ್ಲಾ ಮಜಲುಗಳಲ್ಲಿಯೂ ಭವ್ಯತೆಗೆ ಹೆಸರಾಗಿರುವ ಮೂಡಲಪಾಯ ಯಕ್ಷಗಾನವು ಭಾಗವತ ಪರಂಪರೆಯಲ್ಲಿಯೂ ಸಹ ತನ್ನದೇ ಆದ ಸ್ವಂತಿಕೆಯನ್ನು ಮೈಗೂಡಿಸಿಕೊಂಡಿದೆ.

ನಾಡಿನ ಮೂಡಲಪಾಯ ಯಕ್ಷಗಾನದಲ್ಲಿಯ ಅತ್ಯುತ್ತಮ ಬೆರಳೆಣಿಕೆ ಭಾಗವತರುಗಳಲ್ಲಿ, ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಅರಳಗುಪ್ಪೆಯ ಎ.ಎನ್. ಚನ್ನಬಸಯ್ಯನವರು ತಮ್ಮದೇ ಆದ ಛಾಪವನ್ನು ಮೂಡಿಸಿದ್ದಾರೆ. ಗುರು ಭಾಗವತ ಸಿದ್ಧಲಿಂಗಪ್ಪನವರ ಗರಡಿಯಲ್ಲಿ ಪಳಗಿದ ಚನ್ನಬಸವಯ್ಯನವರು ಹದವಾದ ಶಾರೀರ, ರಾಗದ ಏರಿಳಿತ ಆಕರ್ಷಕ ಕಥೆಗಾರಿಕೆಗಳಿಂದಾಗಿ ಹೆಸರಾಗಿದ್ದಾರೆ. ಕಂಠ ಮಾಧುರ್ಯ, ಸಭಾವಯುಕ್ತ ಹಡುಗಾರಿಕೆ, ಕುಶಲ ಮೃದಂಗ ವಾದನಗಳಿಂದ ಸಮರ್ಥ ಭಾಗವತರೆನಿಸಿಕೊಂಡಿದ್ದಾರೆ. ವಯಸ್ಸು ೬೫ ದಾಟಿದರೂ ಮೂಡಲಪಾಯ ಯಕ್ಷಗಾನ ಕಲೆಯನ್ನು ಉಳಿಸಬೇಕೆಂದು ಅಹರ್ನಿಶಿ ಹೆಣಗಾಡುತ್ತಿದ್ದಾರೆ. ತುಮಕೂರು ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಯಕ್ಷಗಾನ ಆಟಗಳನ್ನು ಕಲಿಸುತ್ತಿದ್ದಾರೆ. ಕರ್ಣಪರ್ವ, ದೇವಿಮಹಾತ್ಮೆ, ಅಭಿಮನ್ಯು ಕಾಳಗ, ದಕ್ಷಯಜ್ಞ, ಲವಕುಶ, ಚಿತ್ರಕೇತು, ಗಿರಿಜಾ ಕಲ್ಯಾಣ ಹೀಗೆ ಹತ್ತು ಹಲವು ಕಥೆಗಳನ್ನು ಆಡಿಸುತ್ತಾ ಬಂದಿರುವ ಚನ್ನಬಸವಯ್ಯನವರ ಭಾಗವತಿಕೆಯನ್ನು ಎಚ್. ಎಲ್. ನಾಗೇಗೌಡರು ಬಹಳಷ್ಟು ಹಿಂದೆಯೇ ಧ್ವನಿಮುದ್ರಿಸಿಕೊಂಡಿರುತ್ತಾರೆ. ಈಗಾಗಲೇ 'ಜಾನಪದ ಲೋಕ ಪ್ರಶಸ್ತಿ' ವಿಜೇತರಾದ ಚನ್ನಬಸವಯ್ಯನವರಿಗೆ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ಕೂಡಾ ನೀಡಿ ಗೌರವಿಸಿದೆ.

ಇಂತಹ ಅತ್ಯುತ್ತಮ ಮೂಡಲಪಾಯ ಯಕ್ಷಗಾನ ಭಾಗವತರಾದ ಎ. ಎನ್. ಚನ್ನಬಸವಯ್ಯನವರಿಗೆ ಎಚ್. ಎಲ್. ನಾಗೇಗೌಡರು ತಮ್ಮ ದೊಡ್ಡಮನೆ ಕುಟುಂಬದವರೆಲ್ಲರ ನೆನಪಿಗಾಗಿ ನೀಡಿರುವ 'ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೧೯. ಉಜ್ಜನಿ ಹಾಲಮ್ಮ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಉಜ್ಜನಿಯ ಹರಿಜನ ಕೇರಿಯ ಹಾಲಮ್ಮ

ಇಡೀ ಪ್ರದೇಶಕ್ಕೇ ಹೆಸರಾದ ಹಾಡುಗಾರ್ತಿ. ದಕ್ಷಿಣ ಕರ್ನಾಟಕದ ಮಹಿಳೆಯರ ಹಾಡುಗಾರಿಕೆಯಲ್ಲಿ ಏನೆಲ್ಲಾ ಪ್ರಭೇದಗಳಿರಬಹುದೋ ಅಷ್ಟನ್ನೂ ಸುಶ್ರಾವ್ಯವಾಗಿ ಹಾಡಬಲ್ಲ ಕೋಗಿಲೆಯ ಕಂಠ ಈಕೆಯದು. ಕಿತ್ತುತಿನ್ನುವ ಬಡತನ. ಹೊಟ್ಟೆಗಿಲ್ಲದ ಬದುಕಿನ ಬವಣೆಯಲ್ಲಿಯೂ ಹಾಡುಗಾರಿಕೆಯ ಉತ್ಸಾಹ ಕುಂದದಂತೆ ನಡೆಸಿಕೊಂಡು ಬಂದಿರುವ ಅತ್ಯಂತ ಹಿರಿಯ ಕಲಾವಿದೆ ಹಾಲಮ್ಮ. ಸೋಬಾನೆ ಪದ, ದೇವರ ಸೇವೆ ಪದಗಳೇ ಅಲ್ಲದೆ, ಬದುಕಿನ ಸಂಕಷ್ಟಗಳನ್ನು ಪದರ ಪದರವಾಗಿ ಬಿಚ್ಚುವ ಅನೇಕ ಜನಪದ ಕಾವ್ಯಗಳು ಹಾಲಮ್ಮನ ಸಿರಿಕಂಠದಲ್ಲಿ ಉಳಿದುಕೊಂಡು ಬಂದಿವೆ. ಹತ್ತಾರು ಗ್ರಂಥಗಳಿಗಾಗುವಷ್ಟು ಹಾಡಿನ ಸರಕು ಈಕೆಯಲ್ಲಿದೆ. ಹಾಲಮ್ಮನವರ ಹಾಡುಗಳನ್ನು ಎಚ್. ಎಲ್. ನಾಗೇಗಭಡರು ೧೯೮೦ ರಷ್ಟು ಹಿಂದೆಯೇ ಧ್ವನಿಮುದ್ರಿಸಿಕೊಂಡಿದ್ದಾರೆ.

ಹಾಲಮ್ಮ ನಾಡಿನ ಹಲವಾರು ಕಡೆ ಹಾಡಿ ಹತ್ತಾರು ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾರೆ. ೧೯೮೭ರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಈಕೆಗೆ ಲಭಿಸಿದೆ. ಇಂತಹ ಅತ್ಯುತ್ತಮ ಹಾಡುಗಾರ್ತಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೨೦. ಲಕ್ಷ್ಮೀಬಾಯಿ ಮಾದರ

ಕನ್ನಡ ಜಾನಪದ ಸಾಹಿತ್ಯದಲ್ಲಿ ಗೀಗೀಪದಗಳಿಗೆ ಸುಮಾರು ನೂರು ವರ್ಷಗಳ ಇತಿಹಾಸವಿದೆ. ಜನಸಮೂಹದಲ್ಲಿ ಸಂವಹನ ಮಾಧ್ಯಮವಾಗಿ ಗೀಗೀ ಪದಗಳು ಬೆಳೆದು ಬಂದಿವೆ. ಸಮುದಾಯಕ್ಕೆ ಅರಿವು ಮೂಡಿಸುವಲ್ಲಿ ಗೀಗೀಪದ ಗಾಯಕರ ಪಾತ್ರವೂ ಸಹ ತುಂಬಾ ಮಹತ್ವಪೂರ್ಣವಾದುದಾಗಿದೆ. ಈ ದಿಸೆಯಲ್ಲಿ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ತೊದಲಬಾಗಿಯ ಲಕ್ಷ್ಮೀಬಾಯಿ ಮಾದರ ಅವರ ಹೆಸರು ಗಮನಾರ್ಹವಾದುದು. ಅತ್ಯುತ್ತಮ ಗೀಗೀ ಪದಗಳನ್ನು ಹಾಡುವುದರಲ್ಲಿ ನಿಸ್ಸೀಮರಾಗಿದ್ದ ಲಕ್ಷ್ಮೀಬಾಯಿಯವರು ನಾಗೇಶಿ ಸಂಪ್ರದಯಕ್ಕೆ ಸೇರಿದವರಾಗಿದ್ದರು. ಉತ್ತರ ಕರ್ನಾಟಕದಾದ್ಯಂತ ಗೀಗೀ ಪದಗಳ ಜನಪ್ರಿಯತೆಯನ್ನು ಹರಡುವುದರಲ್ಲಿ ನಾಗೇಶಿ ಸಂಪ್ರದಾಯವನ್ನು ಉಳಿಸಿ ಬೆಳೆಸುವಲ್ಲಿ ಲಕ್ಷ್ಮೀಬಾಯಿಯವರ ಪಾತ್ರ ಹಿರಿದಾಗಿತ್ತು. ಸರ್ಕಾರದ ಕುಟುಂಬ ಕಲ್ಯಾಣ ಯೋಜನೆ, ಸಾಕ್ಷರತಾ ಆಂದೋಲನ ಮುಂತಾದವುಗಳಲ್ಲಿ ಸಾಮುದಾಯಿಕ ಜಾಗೃತಿ ಉಂಟುಮಾಡುವಲ್ಲಿ ಲಕ್ಷ್ಮೀಬಾಯಿಯವರು ಸಾಂಸ್ಕೃತಿಕ ವಕ್ತಾರರಾಗಿ ಕಾರ್ಯ ನಿರ್ವಹಿಸಿದ್ದರು.

ಇಂತಹ ಅಪರೂಪದ ವಿಶಿಷ್ಟ ಗೀಗೀಪದ ಗಾಯಕಿ ಲಕ್ಷ್ಮೀಬಾಯಿ ಮಾದರ ಅವರು ತಮ್ಮ ಚಿಕ್ಕಪ್ರಾಯದಲ್ಲಿಯೇ ಅಂದರೆ ೪೫ ರ ವಯಸ್ಸಿನಲ್ಲಿಯೇ ದುರದೃಷ್ಟವಶಾತ್ ವಿಧಿವಶರರಾದರು. ಇವರ ಸಾವು ಕನ್ನಡ ಜಾನಪದ ಕ್ಷೇತ್ರಕ್ಕೆ ತುಂಬಲಾಗದ ನಷ್ಟವನ್ನುಂಟು ಮಾಡಿದೆ. ಲಕ್ಷ್ಮೀಬಾಯಿ ಮಾದರ ಅವರಿಗೆ 'ಲೋಕ ಮರಣೋತ್ತರ ಜಾನಪದ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೧. ತಲಕಾಡು ಮಾದಮ್ಮ

ಗ್ರಾಮೀಣ ಬದುಕಿನ ಜಂಜಾಟ, ಸುಖ-ದುಃಖಗಳ ಪರಿಚಯವಾಗಬೇಕಾದರೆ ಹಳ್ಳಿಯ ಹೆಂಗಸರ ಹಾಡುಗಳ ಮೊರೆಹೋಗಬೇಕು. ಕೋಳಿ ಕೂಗುವುದರೊಂದಿಗೆ ರಾಗಿಕಲ್ಲಿನ ಮೇಲೆ ಆರಂಭವಾಗುವ ಈ ಪದಗಳು ಸೂರ್ಯೋದಯದ ಹೊತ್ತಿಗೆ ಕೊನೆಗೊಳ್ಳುತ್ತವೆ. ಬದುಕಿನ ನೂರಾರು ಚಿತ್ರಗಳನ್ನು ಕಣ್ಣಿಗೆಕಟ್ಟುವಂತೆ ಸಶಕ್ತವಾಗಿ ಹಾಡುವ ಅನೇಕ ಹಿರಿಯ ಹಾಡುಗಾರ್ತಿಯರಲ್ಲಿ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ತಲಕಾಡು ಮಾದಮ್ಮನವರೂ ಒಬ್ಬರು. ಅತ್ತೆ ಮಾವಂದಿರಿಂದ ಹಾಡಲು ಕಲಿತು ಕಳೆದ ೪೦ ವರ್ಷಗಳಿಂದಲೂ ಹಾಡುತ್ತಾ ಬಂದಿರುವ ಮಾದಮ್ಮನವರು ದಲಿತ ಜನಾಂಗಕ್ಕೆ ಸೇರಿದ ಎಪ್ಪತ್ತರ ಹರೆಯದ ಅತ್ಯುತ್ತಮ ಕಲಾವಿದೆ. ವೈವಿಧ್ಯಮಯವಾದ ರಾಶಿರಾಶಿ ಹಾಡುಗಳ ಸಂಗ್ರಹ ಈಕೆಯ ನೆನಪಿನ ಕೋಶದಲ್ಲಿದೆ. ಮಾದೇಶ್ವರನ ಪದಗಳು, ಚೌಡೇಶ್ವರಿ ಪದಗಳು, ಚಾಮುಂಡೇಶ್ವರಿ ಪದಗಳು, ಸೋಬಾನೆ ಪದಗಳು, ಮಾದಮ್ಮನವರ ಶ್ರೀಮಂತ ಕಂಠದಲ್ಲಿ ಮರುಜೀವ ಪಡೆದಿವೆ. ಈಕೆಯ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೮೧ ರಷ್ಟು ಹಿಂದೆಯೇ ಮತ್ತು ಆ ನಂತರ ಹಲವಾರು ಸಂದರ್ಭಗಳಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ.

ಮೈಸೂರು ಜಗನ್ಮೋಹನ ಅರಮನೆಯಲ್ಲಿ, ಚುಂಚನಗಿರಿಯಲ್ಲಿ, ಮಲೆಮಾದೇಶ್ವರ, ಮುಡುಕುತೊರೆ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಹೀಗೆ ಅರಮನೆ-ಗುರುಮನೆ-ದೇವಸ್ಥಾನಗಳಲ್ಲೆಲ್ಲಾ ತಮ್ಮ ಅಪರೂಪದ ಹಾಡುಗಾರಿಕೆಯನ್ನು ಪ್ರದರ್ಶಿಸಿರುವ ತಲಕಾಡು ಮಾದಮ್ಮನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೨. ಎಲಚಕೆರೆ ಕಾಟಮ್ಮ

ಕರ್ನಾಟಕದ ವಿವಿಧ ಜನಾಂಗಗಳಲ್ಲಿ ಗೊಲ್ಲರದು ಪ್ರಮುಖ ಪಂಗಡ. ಪ್ರಧಾನವಾಗಿ ಪಶುಪಾಲನೆಯನ್ನು ಅವಲಂಬಿಸಿರುವ ಈ ಪಂಗಡದಲ್ಲಿ ಜನಪದ ಹಾಡುಗಾರಿಕೆ ಮತ್ತು ಕಲೆಗಳಿಗೆ ಮಹತ್ವದ ಸ್ಥಾನವಿದೆ. ಗೊಲ್ಲರ ಸಾಂಸ್ಕೃತಿಕ ನಾಯಕ ಜುಂಜಪ್ಪನ ಬಗ್ಗೆ ಜನಪದ ಮಹಾಕಾವ್ಯವೇ ರೂಢಿಯಲ್ಲಿದೆ. ಇಂತಹ ಜನಾಂಗದಿಂದ ಉದಿಸಿಬಂದ ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೂಕಿನ ಎಲಚಕೆರೆಯ ಕಾಟಮ್ಮ ಅತ್ಯುತ್ತಮ ಹಾಡುಗಾರ್ತಿ. ಹುಟ್ಟಿದ ಮನೆಯಲ್ಲಿ ತಾಯಿ, ಕೊಟ್ಟ ಮನೆಯಲ್ಲಿ ಅತ್ತೆ ಹಾಡುತ್ತಿದ್ದುದನ್ನು ಕೇಳುತ್ತಾ ಸ್ವಇಚ್ಛೆಯಿಂದ ಅವುಗಳಿಗೆ ದನಿಗೂಡಿಸಿ ಕಲಿತು, ಕಳೆದ ೩೦ ವರ್ಷಗಳಿಂದಲೂ ಹಾಡುತ್ತಾ ಬಂದಿರುವ ಕಾಟಮ್ಮನಿಗೀಗ ಎಪ್ಪತ್ತರ ಇಳಿಪ್ರಾಯವಾದರೂ ಅತ್ಯಂತ ಮಧುರವಾದ ಕಂಠವನ್ನು ಹೊಂದಿರುವ ಆಕರ್ಷಕ ಹಾಡುಗಾರಿಕೆ ಈಕೆಯದು. ಹಟ್ಟಿಲಕ್ಕಮ್ಮ, ಚುಂಚನಗಿರಿ ಭೈರವನ ಮೇಲಲ್ಲದೆ ತಮ್ಮ ಕುಲದೈವಗಳಾದ ಜುಂಜಪ್ಪ ಈರಣ್ಣ, ಕಾಟಲಿಂಗಪ್ಪ ಮುಂತಾದ ದೇವತೆಗಳ ಮೇಲೂ ಅತ್ಯಂತ ಸುಶ್ರಾವ್ಯವಾಗಿ ದೇವರ ಸೇವೆ ಪದಗಳನ್ನು ಹಾಗೂ ಸೋಬಾನೆ ಪದಗಳನ್ನು

ಹಾಡುವುದರ ಮೂಲಕ ಕೇಳುಗರ ಮನಸ್ಸಿನಲ್ಲಿ ಹರ್ಷದ ಹೊನಲನ್ನು ಹರಿಸಿದ್ದಾರೆ. ಕಾಟಮ್ಮನವರ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೮೧ ರಷ್ಟು ಹಿಂದೆಯೆ ಧ್ವನಿಮುದ್ರಿಸಿಕೊಂಡಿರುತ್ತಾರೆ.

ಮಂಡ್ಯ, ಬೆಂಗಳೂರು, ಮೈಸೂರು ಮೊದಲಾದ ಜಿಲ್ಲೆಗಳಲ್ಲಿ ತಮ್ಮ ಹಾಡುಗಾರಿಕೆಯ ಮೂಲಕ ಹೆಸರಾಗಿರುವ ಎಲಚಕೆರೆ ಕಾಟಮ್ಮನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೩. ಸಾವಿತ್ರಿ ಸೋಮಣ್ಣ ಖೈರಾಟ

ಇಡೀ ಕನ್ನಡ ನಾಡಿನಲ್ಲಿ ಬಹು ಬಗೆಯ ಕಲೆಗಳು ಮತ್ತು ಕಲಾವಿದರನ್ನು ಒಳಗೊಂಡ ಊರೆಂದರೆ ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಸಾಲೋಟಗಿ. ಈ ಊರಿನ ಸಾವಿತ್ರಿ ಸೋಮಣ್ಣ ಖೈರಾಟರು ಜನಪದ ಕರಕುಶಲಕಲೆಯಲ್ಲಿ ಪರಿಣತಿ ಸಾಧಿಸಿದ ಉತ್ತಮ ಕಲಾವಿದೆ. ವಂಶಪಾರಂಪರ್ಯವಾಗಿ ಬಂದ ವಸ್ತ್ರವಿನ್ಯಾಸ ಕಲೆಯನ್ನು ಕಳೆದ ೪೦ ವರ್ಷಗಳಿಂದಲೂ ರೂಢಿಸಿಕೊಂಡು ಬಂದಿರುವ ಈಕೆಯದು ನೈಪುಣ್ಯತೆ ಸಾಧಿಸಿದ ಕೈಚಳಕ. ದುಬಟಿ, ಕೌದಿ, ಕುಲಾವಿ, ಕುಂಚಿಗೆ, ಕುಪ್ಪಸ, ಜಂಪರು ಹಾಗೂ ಮೂಲಿಕೆಯೊಂದಿಗೆ ವೈವಿಧ್ಯಮಯ ರಂಗುರಂಗಿನ ಬಟ್ಟೆಗಳನ್ನು ತಯಾರಿಸುವುದು ಸಾವಿತ್ರಿ ಖೈರಾಟರ ಕಲಾಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ೬೦ರ ಹರೆಯದಲ್ಲಿ ಕಿತ್ತುತಿನ್ನುವ ಬಡತನದ ನಡುವೆ ತನ್ನ ಕಲಾಕೌಶಲ್ಯವನ್ನು ಉಳಿಸಿ ಬೆಳೆಸಲು ಹೆಣಗಾಡುತ್ತಿರುವ ಇವರ ಪ್ರತಿಭೆಯನ್ನು ಮೆಚ್ಚಿ ತವರು ಜಿಲ್ಲೆಯು ಹತ್ತು ಹಲವು ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಿದೆ. ಕರ್ನಾಟಕ ಚಿತ್ರಕಲಾ ಪರಿಷತ್ತು ಏರ್ಪಡಿಸಿದ್ದ ಜನಪದ ಮತ್ತು ಬುಡಕಟ್ಟು ಕಲಾ ಪ್ರದರ್ಶನದಲ್ಲಿಯೂ ಭಾಗವಹಿಸಿರುವ ಸಾವಿತ್ರಿ ಖೈರಾಟರು ಸಂಪ್ರದಾಯದ ಹಾಡುಗಳ ಗಾಯಕಿಯೂ ಹೌದು. ಇಂತಹ ಪ್ರತಿಭಾವಂತ ಕರಕುಶಲ ಕರ್ಮಿಗೆ, ಬೆಂಗಳೂರಿನ ಎಂ. ಕೃಷ್ಣಪ್ಪನವರು ತಮ್ಮ ತಂದೆ ಮುನಿಸ್ವಾಮಪ್ಪ ಮತ್ತು ತಾಯಿ ರಂಗಮ್ಮನವರ ನೆನಪಿಗಾಗಿ ಕೊಟ್ಟಿರುವ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೪. ಎಲೆಕೊಪ್ಪದ ಬಸವೇಗೌಡ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಎಲೆಕೊಪ್ಪದ ಬಸವೇಗೌಡರು ಬಯಲು ಸೀಮೆಯ ವೈಷ್ಣವ ಸಂಪ್ರದಾಯದ ಭಾಗವಂತಿಕೆ ಕುಣಿತದಲ್ಲಿ ಪರಿಣತಿ ಪಡೆದ ಕಲಾವಿದರು. ಒಕ್ಕಲಿಗ ಜನಾಂಗಕ್ಕೆ ಸೇರಿದ ಇವರು ಅರ್ಜಿ ರಂಗೇಗೌಡರಿಂದ ಕಲಿತ ತಮ್ಮೀ ಕಲೆಯನ್ನು ಕಳೆದ ೪೪ ವರ್ಷಗಳಿಂದಲೂ ಪ್ರದರ್ಶಿಸುತ್ತಾ ಬಂದಿದ್ದಾರಲ್ಲದೆ ಮುಂದಿನ ತಲೆಮಾರಿಗೂ ಉಳಿಸಿ ಬೆಳೆಸಬೇಕೆನ್ನುವ ಆಕಾಂಕ್ಷೆಯಿಂದ ತಮ್ಮೂರಿನ ಸುಮುತ್ತಲ ಯುವಕರಿಗೆ ಕಲಿಸುತ್ತಿದ್ದಾರೆ. ಭಾಗವಂತಿಕೆ ಕುಣಿತದ ಜೊತೆಗೆ ಹನ್ನೆರಡು ಸೆರಗಿನ ಕುಣಿತ, ಪಟದ ಕುಣಿತ, ತಮಟೆ

ಮೇಳ, ಭಾಂಕಿ ಮೇಳಗಳನ್ನ ಸಹ ಪ್ರದರ್ಶಿಸುತ್ತಾ ಬಂದಿರುವ ಬಸವೇಗೌಡರದು ಬಹುಮುಖ ಪ್ರತಿಭೆ. ಇವರ ಕುಣಿತದ ವೈಖರಿ, ಹೆಜ್ಜೆಯ ಗತ್ತು ಸೊಬಗುಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ. ಮಂಡ್ಯ, ಚಿಕ್ಕಮಗಳೂರು, ಧಾರವಾಡ, ಕೊಳ್ಳೇಗಾಲ, ಕೊಡಗು, ಚಿತ್ರದುರ್ಗ, ಬಳ್ಳಾರಿ, ಉಡುಪಿ ಹೀಗೆ ನಾಡಿನಾದ್ಯಂತ ನಡೆದ ಜನಪದ ಕಲಾಮೇಳಗಳಲ್ಲಿ ಭಾಗವಹಿಸಿ ತಮ್ಮ ಕಲೆಯನ್ನು ಪ್ರದರ್ಶಿಸಿ ಪ್ರಶಸ್ತಿ ಪತ್ರಗಳನ್ನು ಪಡೆದಿರುವ ಬಸವೇಗೌಡರ ಕಲಾಪ್ರೌಢಿಮೆಯನ್ನು ಮೆಚ್ಚಿ ಅನೇಕ ಸಂಘಸಂಸ್ಥೆಗಳು ಗೌರವಿಸಿವೆ. ಇಂತಹ ಅತ್ಯುತ್ತಮ ಕಲಾವಿದರಿಗೆ, ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರಿನ ಎಂ. ಕೃಷ್ಣಪ್ಪನವರು ತಮ್ಮ ತಂದೆ ಮುನಿಸ್ವಾಮಪ್ಪ ಮತ್ತು ತಾಯಿ ರಂಗಮ್ಮನವರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೫. ನೆಲ್ಲೀಗೆರೆ ತಿಮ್ಮಪ್ಪಾಚಾರ್ಯ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಜನಪದ ಕಲೆಗಳ ಮತ್ತು ಕಲಾವಿದರ ತವರೂರು. ಇಲ್ಲಿಯ ಜಾನಪದ ಸಿರಿಯನ್ನು ಜಗತ್ತಿನಾದ್ಯಂತ ಹರಡಿದ ಹಲವಾರು ಮಹನೀಯರುಗಳಲ್ಲಿ ನೆಲ್ಲೀಗೆರೆಯ ತಿಮ್ಮಪ್ಪಾಚಾರ್ಯರು ಒಬ್ಬರು. ಮುತ್ಥಲಿಗೊಂಬೇ ಮತ್ತು ಯಕ್ಷಗಾನ ಸೂತ್ರದಗೊಂಬೆಯಾಟಗಳ ಮೂಲಕ ನಾಡಿನಾದ್ಯಂತ ಪ್ರಸಿದ್ಧರಾಗಿದ್ದಾರೆ. ತಂದೆ ಮಾಯಾಚಾರ್ಯರ ಕಲಾಗರಡಿಯಲ್ಲಿ ಪಳಗಿದ ಶ್ರೀಯುತರು ತಮ್ಮ ವಂಶದಲ್ಲಿ ನಾಲ್ಕು ತಲೆಮಾರುಗಳಿಂದಲೂ ಉಳಿದು ಬೆಳೆದುಕೊಂಡು ಬಂದಿರುವ ಸೂತ್ರದಗೊಂಬೆಯಾಟವನ್ನು ಉಳಿಸಿಕೊಳ್ಳಲು ಅಹರ್ನಿಶಿ ಶ್ರಮಿಸುತ್ತಿದ್ದಾರೆ. ಸೊಂಟಕ್ಕೆ ಮೃದಂಗ ಕಟ್ಟಿಕೊಂಡು ಹಾಡುತ್ತಾ ಕುಣಿಯುತ್ತಾ ಬರುವ ಇವರ ಸೊಗಸು ಹೇಳತೀರದು. ರಾತ್ರಿ ಇಡೀ ಪ್ರದರ್ಶನ ನೀಡಿದರೂ ೭೫ರ ಇಳಿಹರೆಯದ ತಿಮ್ಮಪ್ಪಾಚಾರ್ಯರಿಗೆ ಆಯಾಸ, ಎಂಬುದಿಲ್ಲ. ಕರೀಬಂಟನ ಕಥೆ, ಭರತೇಶ ವೈಭವ, ದೇವಿ ಮಹಾತ್ಮೆ, ಭಕ್ತ ಮಾರ್ಕಂಡೇಯ, ಸುಂದರಕಾಂಡ, ಇಂದ್ರಜಿತುವಧೆ ಇವೇ ಮೊದಲಾದ ಕಥಾ ಪ್ರಸಂಗಗಳನ್ನು ಸೂತ್ರದ ಬೊಂಬೆ ಆಟಕ್ಕೆ ಅಳವಡಿಸಿಕೊಂಡು ಪ್ರದರ್ಶನ ನೀಡಿ ಕಲಾಭಿಮಾನಿಗಳ ಹೃದಯವನ್ನು ಸೂರೆಗೊಂಡಿದ್ದಾರೆ. ಸುಮಾರು ೪೦೦೦ಕ್ಕೂ ಹೆಚ್ಚು ಯಕ್ಷಗಾನ ಸೂತ್ರದ ಬೊಂಬೆಯಾಟ ಪ್ರದರ್ಶನಗಳನ್ನು ನೀಡಿರುವುದು ಇವರ ಕಲಾಬದುಕಿನ ಅಪರೂಪದ ದಾಖಲೆಯಾಗಿರುತ್ತದೆ. ಆಕಾಶವಾಣಿ, ದೂರದರ್ಶನಗಳಲ್ಲಿ ಶ್ರೀಯುತರ ಕಲಾಪ್ರದರ್ಶನ ಬಿತ್ತರಗೊಂಡಿದೆ.

ಶ್ರೀ ಕಾಳಿಕಾಂಬ ಪ್ರಸನ್ನ ಯುವಜನ ಯಕ್ಷಗಾನ ಮಂಡಳಿ ಎಂಬ ಸಂಸ್ಥೆಯನ್ನು ಸ್ಥಾಪಿಸಿ ತಮ್ಮ ಸುತ್ತಲಿನ ಗ್ರಾಮೀಣ ಯುವಕರಿಗೆ ಈ ಕಲೆಯಲ್ಲಿ ತರಬೇತಿ ನೀಡುತ್ತಿದ್ದಾರೆ. ನಟರಾಗಿ, ಭಾಗವತರಾಗಿ ಸೂತ್ರದ ಗೊಂಬೆಗಳಿಗೆ ಜೀವತುಂಬಿ ಕುಣಿಯುವಂತೆ ಮಾಡುವ ತಿಮ್ಮಪ್ಪಾಚಾರ್ಯರ ಕಲಾಪ್ರೌಢಿಮೆಯನ್ನು ಮೆಚ್ಚಿ ನಾಡಿನ ಅಸಂಖ್ಯಾತ ಸಂಘ ಸಂಸ್ಥೆಗಳು ಅವರನ್ನು ಗೌರವಿಸಿ ಸನ್ಮಾನಿಸಿವೆ. ತಮ್ಮ ಗೊಂಬೆಯಾಟಕ್ಕೆ ಬೇಕಾದ ವೇಷಭೂಷಣ, ಸೂತ್ರದ ಗೊಂಬೆ,

ರಂಗಸಜ್ಜಿಕೆಯನ್ನು ತಾವೇ ನಿರ್ಮಿಸಿಕೊಳ್ಳುವರಲ್ಲದೆ, ಮರದ ಗಾಡಿಗಳ ತಯಾರಿಕೆಯಲ್ಲಿ ಸಿದ್ಧಹಸ್ತರಾದ ತಿಮ್ಮಪ್ಪಾಚಾರ್ಯರ ಬಹುಮುಖ ಪ್ರತಿಭೆಯನ್ನು ಮೆಚ್ಚಿ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿವೆ. ೧೯೮೧ ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ೧೯೯೮ ರಲ್ಲಿ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಇಂತಹ ಅತ್ಯುತ್ತಮ ರಂಗಭೂಮಿ ಕಲಾವಿದರಿಗೆ ಕೇರಳಾಪುರದ ಪ್ರೊ. ಸಿ. ಜಿ. ಪುರುಷೋತ್ತಮ ಅವರು ತಮ್ಮ ತಾತ ಶ್ರೀ ಶಂಭೂಗೌಡರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೬. ಎನ್. ಚಿಕ್ಕವೆಂಕಟಪ್ಪ

ಮೂಡಲಪಾಯ ಯಕ್ಷಗಾನ ಕಲೆಯ ಶ್ರೀಮಂತಿಕೆಯನ್ನು ಹೆಚ್ಚಿಸಿ, ಅದಕ್ಕೆ ಜನಮನ್ನಣೆಯನ್ನು ದೊರಕಿಸಿಕೊಟ್ಟ ಕೆಲವೇ ಮಂದಿ ಭಾಗವತರುಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ ಎನ್. ಚಿಕ್ಕವೆಂಕಟಪ್ಪನವರೂ ಒಬ್ಬರು. ಗುರು ಎನ್. ಅಶ್ವತ್ಥನಾರಾಯಣ ಶೆಟ್ಟರ ಗರಡಿಯಲ್ಲಿ ಪಳಗಿದ ಇವರ ಕಂಠ ಮಾಧುರ್ಯ, ಸಭಾವಯುಕ್ತ ಹಾಡುಗಾರಿಕೆ, ಕುಶಲ ಮೃದಂಗ ವಾದನಗಳಿಂದ ಉತ್ತಮ ಭಾಗವತರಾಗಿ ರೂಪುಗೊಂಡರು. ಕಳೆದ ೫೦ ವರ್ಷಗಳಿಂದಲೂ ಮೂಡಲಪಾಯ ಯಕ್ಷಗಾನದ ವೈವಿಧ್ಯಮಯ ಕಥಾ ಪ್ರಸಂಗಗಳನ್ನು ಕಲಿಸುತ್ತಾ, ಆಡಿಸುತ್ತಾ ಬಂದಿರುವ, ದೇವಾಂಗ ಜನಾಂಗಕ್ಕೆ ಸೇರಿದ ೭೬ರ ಇಳಿ ಹರೆಯದ ಚಿಕ್ಕವೆಂಕಟಪ್ಪನವರು ಜನಪದ ರಂಗಭೂಮಿಯ ಅತ್ಯಂತ ಮಹತ್ವದ ಕಲಾವಿದರು. ಇವರ ಕಲಾನೈಪುಣ್ಯತೆಯನ್ನು ಮೆಚ್ಚಿ ಅನೇಕ ಸಂಘಸಂಸ್ಥೆಗಳು ಗೌರವಿಸಿ ಸನ್ಮಾನಿಸಿವೆ. ೧೯೮೬ ರಲ್ಲಿ ಯುವರಂಗದ ವಿಶೇಷ ಪುರಸ್ಕಾರ ಪ್ರಶಸ್ತಿ, ೧೯೮೮ ರಲ್ಲಿ ಕನಕದಾಸ ಪ್ರಶಸ್ತಿ ಮತ್ತು ೧೯೯೦ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಯಕ್ಷಗಾನ ಕ್ಷೇತ್ರದಲ್ಲಿ ಚಿಕ್ಕವೆಂಕಟಪ್ಪನವರು ಸಲ್ಲಿಸಿದ ಸುದೀರ್ಘ ಸೇವೆಗಾಗಿ ಕೇರಳಾಪುರದ ಪ್ರೊ. ಸಿ. ಜಿ. ಪುರುಷೋತ್ತಮ ಅವರು ತಮ್ಮ ತಾತ ಶ್ರೀ ಶಂಭೂಗೌಡರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೭. ಕೆಬ್ಬೇಪುರದ ಢಕ್ಕೆ ಸಿದ್ಧಯ್ಯ

ಕನ್ನಡ ನಾಡಿನ ಉತ್ಕೃಷ್ಟ ಧಾರ್ಮಿಕ ವೃತ್ತಿಗಾಯಕ ಪರಂಪರೆಯಲ್ಲಿ ನೀಲಗಾರ ಸಂಪ್ರದಾಯವೂ ಒಂದು. ಮಂಟೇಸ್ವಾಮಿ ನೀಲಗಾರರ ಆರಾಧ್ಯದೈವ. ಮಂಟೇಸ್ವಾಮಿಯ ಗುಡ್ಡರೆಂದು ಕರೆಸಿಕೊಳ್ಳುವ ನೀಲಗಾರರು ಮಂಟೇಸ್ವಾಮಿ ಮಹಿಮೆಯನ್ನು ಪ್ರಸಾರ ಮಾಡುತ್ತಾ, ಮಂಟೇಸ್ವಾಮಿ ಪೂಜಾರಾಧನೆಗಳಲ್ಲಿ ಭಾಗವಹಿಸುತ್ತಾ ಸದಾ ದೈವದ ಸೇವೆಯಲ್ಲಿ ನಿರತರಾಗಿರುತ್ತಾರೆ. ನೀಲಗಾರರು ಬಳಸುವ ವಾದ್ಯಗಳಲ್ಲಿ ಢಕ್ಕೆಯೂ ಸಹ ಒಂದು. ಶಿವನ

ಡಮರುಗವನ್ನು ಹೋಲುವ ಈ ಚಿಕ್ಕವಾದ್ಯವನ್ನು ಅತ್ಯಂತ ಸೊಗಸಾಗಿ ನುಡಿಸುವುದರಲ್ಲಿ ಪರಿಣತಿ ಪಡೆದಿರುವ ಅಂಧ ಕಲಾವಿದ ಸಿದ್ಧಯ್ಯನವರು ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಕೆಬ್ಬೇಪುರದವರು. ಪ್ರಸಿದ್ಧ ಜನಪದ ವೃತ್ತಿಗಾಯಕರಾಗಿದ್ದ ನೀಲಗಾರ ಕೆಬ್ಬೇಪುಪರದ ರಾಚಯ್ಯನವರ ಹಾಡುಗಾರಿಕೆ ಮತ್ತು ತಂಬೂರಿ ನಿನಾದಕ್ಕೆ ಸಿದ್ಧಯ್ಯನವರು ತಮ್ಮ ಢಕ್ಕೆಯ ದನಿಗೂಡಿಸಿ ಕಾರ್ಯಕ್ರಮಗಳನ್ನು ಚಂದಗೊಳಿಸುತ್ತಿದ್ದರು. ತಾಳಕ್ಕೆ ತಕ್ಕಂತೆ ಢಕ್ಕೆ ಬಾರಿಸುತ್ತಾ, ಢಕ್ಕೆಯ ನಾದಕ್ಕೆ ತಮ್ಮ ತಲೆಯನ್ನು ಓಲಾಡಿಸುತ್ತಾ ತಮ್ಮ ಕಲಾ ನೈಪುಣ್ಯತೆಯನ್ನು ಮೆರೆಯುವ ಸಿದ್ಧಯ್ಯನವರನ್ನು ನೋಡುವುದು ಮತ್ತು ಅವರ ಢಕ್ಕೆವಾದನವನ್ನು ಕೇಳುವುದಂತೂ ಮತ್ತೂ ಚಂದ. ಇಂತಹ ಪ್ರತಿಭಾವಂತ ಅಂಧ ಕಲಾವಿದರನ್ನು ಗುರುತಿಸಿ. ಮಂಡ್ಯ ಜಿಲ್ಲೆಯ ಕಟ್ಟಗೆರೆ ಸಿದ್ದೇಗೌಡರು ತಮ್ಮ ಗುರುಗಳಾದ ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮ ಅವರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೮. ಮುನಿವೆಂಕಟಪ್ಪ

ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಪಿಂಡಪಾಪನಹಳ್ಳಿಯ ಹರಿಜನರ ಮುನಿವೆಂಕಟಪ್ಪ ಚಿಕ್ಕಂದಿನಿಂದಲೇ ತಮಟೆ ಬಾರಿಸುವುದನ್ನು ರೂಢಿಸಿಕೊಂಡವರು. ಕಿತ್ತು ತಿನ್ನುವ ಬಡತನದಲ್ಲಿ ತಮಟೆಯ ಸದ್ದನ್ನೇ ಉಂಡು ಬೆಳೆದವರು. ಹಲಗೆ ಬಡಿತದ ಜೊತೆಗೆ ನಾನಾ ರೀತಿಯ ಕೌಶಲ್ಯಗಳನ್ನು ಬೆಳೆಸಿಕೊಂಡರು. ಇವರು ಕೈಯಲ್ಲಿ ತಮಟೆ ಹಿಡಿದು ಕಾಲಿಗೆ ಗೆಜ್ಜೆ ಕಟ್ಟಿ ರಂಗಕ್ಕಿಳಿದರೆಂದರೆ ಪ್ರೇಕ್ಷಕರಲ್ಲಿ ಹರುಷ ಉಕ್ಕೇರುತ್ತದೆ. ತಮಟೆ ವಾದನದಲ್ಲಿ ನಿಷ್ಣಾತರಾಗಿರುವ ಮುನಿವೆಂಕಟಪ್ಪ ತಮಟೆ ಬಡಿಯುವುದರಲ್ಲಿ ನಾನಾ ರೀತಿಯ ಹೊಸ ಮಾದರಿಗಳನ್ನು ರೂಪಿಸಿಕೊಂಡಿದ್ದಾರೆ. ಗಂಟೆಗಟ್ಟಲೆ ದಣಿವಿಲ್ಲದಂತೆ ತಮಟೆ ಬಡಿಯುವ ಮುನಿವೆಂಕಟಪ್ಪನವರು ತಮಟೆ ಬಡಿಯುತ್ತಲೇ ಗತ್ತಿಗೆ ತಕ್ಕಂತೆ ಕುಣಿಯುವುದು. ಮಧ್ಯೇ ಮಧ್ಯೆ ಲಾಗ ಹಾಕುವುದು, ಕಣ್ಣಿನಿಂದ ಸೂಜಿ ಎತ್ತುವುದು, ಹಣೆಯಿಂದ ನಾಣ್ಯ ಎತ್ತುವುದು ಇವೇ ಮೊದಲಾದ ಚಮತ್ಕಾರಗಳನ್ನು ಮಾಡುತ್ತಾರೆ.

ವಂಶಪಾರಂಪರ್ಯವಾಗಿ ಬಂದಿರುವ ತಮಟೆವಾದನ ಕಲೆಯನ್ನು ತಮ್ಮ ಸುತ್ತಲಿನ ಯುವಕರಿಗೆ ಕಲಿಸುತ್ತಿರುವ ೬೮ರ ಹರೆಯದ ಮುನಿವೆಂಕಟಪ್ಪನವರ ಪ್ರತಿಭೆ ಮತ್ತು ಕಲಾನೈಪುಣ್ಣತೆಯನ್ನು ಗುರುತಿಸಿ, ಮಂಡ್ಯ ಜಿಲ್ಲೆಯ ಕಟ್ಟಗೆರೆ ಸಿದ್ದೇಗೌಡರು ಆಚಾರ್ಯ ಕಾಕಾ ಕಾಲೇಲ್ಕರ್ ಅವರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೯. ವಿಶೇಷ ಪುರಸ್ಕಾರ–ಕೆ. ಆರ್. ಲಿಂಗಪ್ಪ

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಕಲ್ಲೇನಹಳ್ಳಿಯಲ್ಲಿ ಅರಳಿದ ಜಾನಪದ ನುಡಿ ಗಾರುಡಿಗ ಕೆ. ಆರ್. ಲಿಂಗಪ್ಪನವರು ವೃತ್ತಿಯಲ್ಲಿ ನ್ಯಾಯವಾದಿಗಳಾದರೂ ಪ್ರವೃತ್ತಿಯಲ್ಲಿ ಜನಪದ ಗಾಯಕರು ಹಾಗೂ ಸಮರ್ಥ ವ್ಯಾಖ್ಯಾನಕಾರರು. ಲಿಂಗಪ್ಪನವರ ಬಾಯಿಂದ

ಕೇಳಿಯೇ ಜನಪದ ಗೀತೆಗಳ ರಸದೌತಣವನ್ನು ಸವಿಯಬೇಕು. ತಾಯಿ ಬಸಮ್ಮನವರ ಹಾಡಿನ ಮೋಡಿಯೇ ಲಿಂಗಪ್ಪನವರ ಜನಪದ ಹಾಡುಗಾರಿಕೆಯ ಸ್ಫೂರ್ತಿ. ಕಳೆದ ೬೦ ವರ್ಷಗಳಿಂದಲೂ ಜನಪದ ಹಾಡುಗಾರರಾಗಿ ಕರ್ನಾಟಕ, ಭಾರತ ಮತ್ತು ಅಮೆರಿಕಾಗಳಲ್ಲಿಯೂ ಜಾನಪದದ ಇಂಪಿನ ಕಂಪನ್ನು ಹರಡಿ ಬಂದ ಕಲಾವಿದರಿವರು.

ಜನಪದ ಸಾಹಿತ್ಯದೊಂದಿಗೆ ಲಿಂಗಪ್ಪನವರ ಉಸಿರು ಬೆರೆತುಹೋಗಿದೆ. ಅವರು ಮೈದುಂಬಿ ಹಾಡುತ್ತಿದ್ದರೆ ಕೇಳುಗರು ಭಾವನಾಲೋಕದಲ್ಲಿ ವಿಹರಿಸಲಾರಂಭಿಸುತ್ತಾರೆ. ಗೀತೆಯಿಂದ ಮೈಮರೆಸಿ ಮಾತಿನಿಂದ ಮನವೊಲಿಸುವ ಲಿಂಗಪ್ಪನವರು ಜಾನಪದ ಪರಿಮಳವನ್ನು ಜಗತ್ತಿನ ಮೂಲೆ ಮೂಲೆಗೂ ಹರಡಬೇಕೆನ್ನುವ ನಿಷ್ಠೆಯನ್ನುಳ್ಳವರು.

ಲಿಂಗಪ್ಪನವರ ಜಾನಪದದ ಅಖಂಡ ಸೇವೆಯನ್ನು ಗುರುತಿಸಿ ನೂರಾರು ಮಾನ ಸನ್ಮಾನ ಬಿರುದುಗಳು ಅವರಿಗೆ ಸಂದಿವೆ. ಗ್ರಾಮ ಜೀವನದ ರಸ ಮೋಡಿಗಾರ, ಜಾನಪದ ಸಾಹಿತ್ಯರತ್ನ, ಜಾನಪದ ಜಾದುಗಾರ ಎಂಬುವು ಇವರಿಗೆ ಲಭಿಸಿರುವ ಹಲವಾರು ಬಿರುದುಗಳಲ್ಲಿ ಕೆಲವು. ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಲಿಂಗಪ್ಪನವರ ಜಾನಪದ ನಿಷ್ಠೆ, ಪ್ರೀತಿಯನ್ನು ಮೆಚ್ಚಿ ಕರ್ನಾಟಕ ಜಾನಪದ ಪರಿಷತ್ತು 'ವಿಶೇಷ ಪುರಸ್ಕಾರ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೩೦. ಯಾ. ಸು. ನಾಗರಾಜು

ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಯಾಚೇನಹಳ್ಳಿಯ ಯಾ.ಸು. ನಾಗರಾಜು ಅವರದು ಬಹುಮುಖಿ ಪ್ರತಿಭೆ. ವಿದ್ಯಾರ್ಥಿ ದೆಸೆಯಿಂದಲೇ ಕ್ರೀಡೆ, ಸಾಹಿತ್ಯ, ಸಮಾಜಸೇವೆ, ಕಲೆ, ರಾಜಕೀಯ, ಜಾನಪದ ಹೀಗೆ ಹತ್ತಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಓದಿದ್ದು ವಕೀಲಿಯಾದರೂ ಬದುಕನ್ನು ಅರ್ಪಿಸಿಕೊಂಡದ್ದು ಗ್ರಾಮೀಣಾಭ್ಯುದಯಕ್ಕೆ. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಕುವೆಂಪು ಮುಂತಾದ ಮಹನೀಯರ ಪ್ರಭಾವಕ್ಕೊಳಗಾಗಿ ಬ್ರಹ್ಮಚಾರಿಯಾಗಿದ್ದುಕೊಂಡು ಶಾಲಾ ಕಾಲೇಜು, ವಿಜ್ಞಾನಕೇಂದ್ರ, ಪ್ರಕಾಶನಾಲಯಗಳನ್ನು ಸ್ಥಾಪಿಸಿ ಸಮಾಜಸೇವೆಯನ್ನೇ ತಮ್ಮ ಧ್ಯೇಯವನ್ನಾಗಿರಿಸಿಕೊಂಡಿದ್ದಾರೆ.

ತಮ್ಮ ಊರಿನ ಸುತ್ತಮುತ್ತಲ ಜನಪದ ಕಲೆಗಳಾದ ಕೋಲಾಟ, ಹಾಡುಗಾರಿಕೆ, ತಮಟೆ ವಾದ್ಯ, ಕಸರತ್ತುಗಳು, ಗ್ರಾಮದೇವತೆಗಳ ಹಬ್ಬ–ಜಾತ್ರೆಗಳು ಹೀಗೆ ಜಾನಪದದ ಪುನರುಜ್ಜೀವನ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಜೊತೆಗೆ ಜನಪದ ಕಲಾವಿದರುಗಳಿಗೆ ಪ್ರೋತ್ಸಾಹ ನೀಡಿ ನಾಡಿನಾದ್ಯಂತ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶಿಸಿದ್ದಾರೆ. ಇಂತಹ ಅಪರೂಪದ ಸಂಘಟನಾಕಾರರ ಜಾನಪದ ನಿಷ್ಠೆಯನ್ನು ಮೆಚ್ಚಿ ಕರ್ನಾಟಕ ಜಾನಪದ ಪರಿಷತ್ತು 'ವಿಶೇಷ ಪುರಸ್ಕಾರ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೩೧. ಎಸ್. ವೆಂಕಟೇಶಪ್ಪ

ಕೋಲಾರ ಜಿಲ್ಲೆಯ ಕಾಡಹಳ್ಳಿ ಗ್ರಾಮದಲ್ಲಿ ಹುಟ್ಟಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ನೆಲೆ ನಿಂತಿರುವ ಎಸ್. ವೆಂಕಟೇಶಪ್ಪನವರು ವೃತ್ತಿಯಲ್ಲಿ ಶಿಕ್ಷಕರು. ಪ್ರವೃತ್ತಿಯಲ್ಲಿ ಲೇಖಕರು, ಜಾನಪದ ಆಸಕ್ತರು ಆಗಿದ್ದಾರೆ. ಜಾನಪದ ಲೋಕದ ವಸ್ತುಸಂಗ್ರಹಾಲಯಕ್ಕೆ ಗ್ರಾಮೀಣ ವಸ್ತು ಪರಿಕರಗಳನ್ನು ಸಂಗ್ರಹಿಸಿಕೊಡುವಲ್ಲಿ ವೆಂಕಟೇಶಪ್ಪನವರು ತೋರುತ್ತಿರುವ ಶ್ರದ್ಧೆ ಅನನ್ಯವಾದದ್ದು. ಕೋಲಾರ ಜಿಲ್ಲೆಯ ಸುಗಟೂರು ಕ್ಷೇತ್ರದಿಂದ ಮೂರ್ತಿ ವಿಗ್ರಹಗಳನ್ನು ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನ ಹತ್ತಾರು ಗ್ರಾಮಗಳಿಂದ ಹಲವಾರು ಅಪರೂಪದ ವಸ್ತುಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯಿಂದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದಿರುವ ವೆಂಕಟೇಶಪ್ಪನವರ ಅತ್ಯುತ್ತಮ ಜಾನಪದ ನಿಷ್ಠೆಯನ್ನು ಮೆಚ್ಚಿ ಕರ್ನಾಟಕ ಜಾನಪದ ಪರಿಷತ್ತು 'ವಿಶೇಷ ಪುರಸ್ಕಾರ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

ಪರಿಚಯ : **ಡಾ. ಚಕ್ಕೆರೆ ಶಿವಶಂಕರ್**

## ಪ್ರಶಸ್ತಿ ಪುರಸ್ಕೃತರು – ೨೦೦೧

[ತಾರೀಖು ೧೧–೨––೨೦೦೧ ರಂದು ಸಂಜೆ ಜಾನಪದ ಲೋಕದ ಆಹ್ಲಾದಕರ ವಾತಾವರಣದಲ್ಲಿ, ಗೋಧೂಳಿ ಸಮಯದಲ್ಲಿ ಈ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಿತ್ತು. ಆದರೆ ಕರ್ನಾಟಕ ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದ ಹಾಗೂ ನಮ್ಮೆಲ್ಲರ ಪ್ರೀತಿಯ ರಾಜಣ್ಣನವರ ಅಕಾಲಿಕ ಸಾವು ಅಧ್ಯಕ್ಷರಾದಿಯಾಗಿ ಎಲ್ಲರನ್ನೂ ಕಂಗೆಡಿಸಿತ್ತು. ನೋವು ಮತ್ತು ದುಗುಡಗಳು ಎಲ್ಲರ ಎದೆಯಲ್ಲೂ ಹೆಪ್ಪುಗಟ್ಟಿತ್ತು. ಪ್ರೀತಿಯ ಮಗನನ್ನು ಕಳೆದುಕೊಂಡ ದುಃಖ ಅಗಾಧವಾಗಿ ಬಾಧಿಸುತ್ತಿದ್ದರೂ ಸಹ ಶ್ರೀ ಎಚ್. ಎಲ್. ನಾಗೇಗೌಡರು ಜನಪದ ಕಲಾವಿದರ ಬಗೆಗಿನ ಅನನ್ಯವಾದ ಕಾಳಜಿಯಿಂದಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಾನಪದ ಲೋಕದ ಭವ್ಯ ಬಯಲು ರಂಗಮಂದಿರದಲ್ಲಿ ಹಲಗೆ ಬಳಪ ಹಿಡಿದು ಗೊತ್ತಿಲ್ಲದ, ಶ್ರೀ ಗುರುವಿನಿಂದ ಓದಿಸಿಕೊಂಡು ಕಲಿಯದ ಜನಪದ ಕಲಾವಿದರುಗಳನ್ನು ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ತುಂಬು ಹೃದಯದಿಂದ ಗೌರವಿಸಿ ಸನ್ಮಾನಿಸಿದರು. ಪ್ರತಿಯೊಬ್ಬ ಕಲಾವಿದರಿಗೂ ಪ್ರಶಸ್ತಿ ಫಲಕ ಮತ್ತು ಒಂದು ಸಾವಿರ ರೂ. ನಗದು ಹಣದೊಂದಿಗೆ ಗಂಡಸರಿಗೆ ಶಾಲು, ಪಂಚೆಗಳನ್ನು, ಹೆಂಗಸರಿಗೆ ಸೀರೆ ಮತ್ತು ಕಣಗಳನ್ನು ನೀಡಲಾಯಿತು. ೨೦೦೧ರ ಸಾಲಿನಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಪ್ರಶಸ್ತಿ ಪುರಸ್ಕೃತ ವಿವರಗಳು ಕೆಳಕಂಡಂತಿವೆ.]

### ೩೨. ಬೊಮ್ಮಾಳ ಎಲಿಸವ್ವ

ಬದುಕಿನುದ್ದಕ್ಕೂ ಹಳ್ಳಿಯ ಹಾಡುಗಳನ್ನು ಹಾಡುವ ಹುಚ್ಚು ಹತ್ತಿಸಿಕೊಂಡಿರುವ, ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಉಚ್ಚಂಗಿ ದುರ್ಗದ ಬೊಮ್ಮಾಳ ಎಲಿಸವ್ವ ದೇವದಾಸಿ ಸಂಪ್ರದಾಯಕ್ಕೆ ಸೇರಿದ ಹೆಣ್ಣು ಮಗಳು. ಬೂವನಹಳ್ಳಿ ಹಿರಿಯವ್ವ ಹೊಲದಲ್ಲಿ ಕಳೆ ತೆಗೆಯುವಾಗ, ಕಡ್ಲಿ ಕೀಳುವಾಗ, ಹರಿವಾಗ, ಒಕ್ಕುವಾಗ ಎಲಿಸವ್ವನಿಗೆ ಗುರುವಾಗಿ ಹಾಡು ಕಲಿಸಿದಳು. ಕಾಳಿಂಗರಾಯ, ಕೆಂಚವ್ವ, ಗುಣಸಾಗರಿ, ದಂಡೆಪ್ಪ ಹನುಮಂತ, ಸೋಬಾನೆ, ತತ್ವ, ಕಳೆಕೀಳುವ ಪದಗಳು, ದೇವರ ಪದಗಳು ಹೀಗೆ ಬೂವನಹಳ್ಳಿ ಹಿರಿಯವ್ವನಿಂದ ಎಲಿಸವ್ವ ಕಲಿತದ್ದು ಒಂದೆರಡಲ್ಲ; ನೂರಾರು ಬಗೆಯ ಹಾಡುಗಳು. ಅನಕ್ಷರಸ್ಥೆಯಾದರೂ ಎಲಿಸವ್ವನ ಸ್ಮೃತಿಕೋಶದಲ್ಲಿ ಇವೆಲ್ಲ ಹಾಡುಗಳು ಉಳಿದು ಬಂದಿದ್ದು, ಜನಪದ ಗೀತ ಸಾಹಿತ್ಯವನ್ನು ನಶಿಸಿ ಹೋಗದಂತೆ ಕಾಪಾಡಿಕೊಂಡು ಬಂದಿವೆ. ಎಲಿಸವ್ವನಿಗೆ ವಯಸ್ಸು ಎಪ್ಪತ್ತಾದರೂ ಅತ್ಯಂತ ಸೊಗಸಾಗಿ ವಾರಗಟ್ಟಲೆ ಹಾಡಬಲ್ಲರು. ೧೯೮೫ ರಲ್ಲೇ ಎಲಿಸವ್ವನ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ಧ್ವನಿಮುದ್ರಿಸಿಕೊಂಡಿದ್ದಾರೆ. ದೇವದಾಸಿ ಪದ್ಧತಿಯ ಬಗ್ಗೆ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುವ ಎಲಿಸವ್ವ ತಮ್ಮ ಹೆಣ್ಣು ಮಕ್ಕಳಿಗೆ ಗಂಡು ಹುಡುಕಿ ಲಗ್ನ ಮಾಡಿದ್ದಾರೆ.

ಅಪರೂಪದ ಹಾಡುಗಾರಿಕೆಗಾಗಿ ಎಲಿಸವ್ವನಿಗೆ ಅನೇಕ ಬಗೆಯ ಮಾನ ಸನ್ಮಾನಗಳು ದೊರೆತಿವೆ. ೧೯೭೮ ರಲ್ಲಿ ತರೀಕೆರೆ ಜಾನಪದ ಸಮ್ಮೇಳನದಲ್ಲಿ, ೧೯೭೧ ರಲ್ಲಿ ನಾಗಮಂಗಲದಲ್ಲಿ, ೧೯೭೭ ರಲ್ಲಿ ಬಳ್ಳಾರಿಯಲ್ಲಿ ಈಕೆಯನ್ನು ಸನ್ಮಾನಿಸಿ ಗೌರವಿಸಲಾಗಿದೆ. ಆಕಾಶವಾಣಿ, ದೂರದರ್ಶನಗಳಲ್ಲಿ ಇವರ ಗೀತಗಾಯನ ಪ್ರದರ್ಶನಗಳು ಪ್ರಸಾರವಾಗಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರೂ ಆಗಿದ್ದ ಎಲಿಸವ್ವನಿಗೆ ಹೆಬ್ಬೆಟ್ಟಿನ

ಗುರುತು ಹಾಕುವುದು ಬಿಟ್ಟರೆ ಅನ್ಯಮಾರ್ಗ ತಿಳಿದಿಲ್ಲ. ಇಂತಹ ಮುಗ್ಧ, ಪ್ರತಿಭಾವಂತ, ಅಪರೂಪದ ಹಾಡುಗಾರ್ತಿಗೆ ಎಚ್. ಎಲ್. ನಾಗೇಗೌಡರು ತಮ್ಮ ಅಜ್ಜಿಯಂದಿರಾದ ಮಾತೋಶ್ರೀ ಬಂಗಲಿ ಗಿರಿಯಮ್ಮನವರು ಮತ್ತು ಹೆರಗನಹಳ್ಳಿ ಚಿಕ್ಕಮ್ಮನವರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ ಸುಶ್ರಾವ್ಯವಾದ ಹಾಡುಗಾರಿಕೆಗೆ ನೀಡುವ 'ಸೋಬಾನೆ ಚಿಕ್ಕಮ್ಮ' ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೩೩. ಭಜಗೂರು ಎಲ್ಲಯ್ಯ

ಸವದತ್ತಿ ಎಲ್ಲಮ್ಮನ ಭಕ್ತರು ಬಳಸುವ ತಂತೀ ವಾದ್ಯವನ್ನು ಚೌಡಿಕೆ ಎಂದು ಕರೆಯುತ್ತಾರೆ. ಎಲ್ಲಮ್ಮನ ಹೆಸರಿನಲ್ಲಿ ದೀಕ್ಷೆ ಪಡೆದು, ಚೌಡಿಕೆ ಕೈಯಲ್ಲಿ ಹಿಡಿದು, ಎಲ್ಲಮ್ಮನ ಮಹಿಮೆಯನ್ನು ಪ್ರಸಾರ ಮಾಡುತ್ತಾ, ಎಲ್ಲಮ್ಮನ ಪೂಜೆಗಳಲ್ಲಿ ಭಾಗವಹಿಸುತ್ತಾ ಸದಾ ಅವಳ ಸೇವೆಯಲ್ಲಿ ನಿರತರಾಗಿರುವ ಧಾರ್ಮಿಕ ವೃತ್ತಿಗಾಯಕರೇ ಚೌಡಿಕೆಯವರು. ಎಲ್ಲಮ್ಮನನ್ನು ಕುರಿತು ಮಹಾಕಾವ್ಯವನ್ನು ಹಾಡುವವರಲ್ಲದೆ ಕುಣಿತದ ಮೂಲದ ಮೇಳವನ್ನು ನಡೆಸುತ್ತಾರೆ. ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಭಜಗೂರಿನ ಎಲ್ಲಯ್ಯನವರು ಈ ಸಂಪ್ರದಾಯಕ್ಕೆ ಸೇರಿದ ಉತ್ತಮ ವೃತ್ತಿಗಾಯಕರಾಗಿದ್ದು ಎಲೆಮರೆಯ ಕಾಯಿಯಾಗಿ ಉಳಿದಿದ್ದಾರೆ. ಎಲ್ಲಮ್ಮನನ್ನು ಕುರಿತು ಜನಪದ ಮೂಲದ ಕತೆ, ಪುರಾಣ ಮೂಲದ ಕತೆ ಎರಡನ್ನೂ ಹಾಡುವುದರೊಂದಿಗೆ ಸರ್ಜಪ್ಪನಾಯಕ ಮತ್ತಿತರ ಕಥನ ಕಾವ್ಯಗಳನ್ನು ಸಹ ಹಾಡುತ್ತಾರೆ. ಹಾಡಿನ ಅನಂತರ ಕತೆಯ ನಿರೂಪಣೆ ಇವರ ವೈಶಿಷ್ಟ್ಯ. ಎಲ್ಲಯ್ಯನವರು ಕುಣಿಯುವುದಲ್ಲಿ ಮತ್ತು ಕತೆ ನಿರೂಪಿಸುವುದರಲ್ಲಿ ನಿಷ್ಣಾತರು. ಸುಮಾರು ೬೦ರ ಪ್ರಾಯದ ಎಲ್ಲಯ್ಯನವರು ಸರಳ ಸಜ್ಜನಿಕೆಯ ಕಲಾವಿದ. ಆರ್ಥಿಕ ಸ್ಥಿತಿ ಅಷ್ಟೇನೂ ಸುಧಾರಿಸಿರದ ಎಲ್ಲಯ್ಯನವರು ತಮ್ಮ ಮಕ್ಕಳಿಗೂ ಈ ಕಲೆಯನ್ನು ಕಲಿಸಿದ್ದು, ಅವರ ಜೊತೆ ಸೇರಿ ಪ್ರದರ್ಶನ ನೀಡುತ್ತಾರೆ. ಮಾನ–ಸನ್ಮಾನಗಳಿಂದ ವಂಚಿತರಾಗಿರುವ ಇಂತಹ ಪ್ರತಿಭಾವಂತ ವೃತ್ತಿಗಾಯಕರನ್ನು ಗುರುತಿಸಿ ಶ್ರೀ ಎಚ್. ಎಲ್. ನಾಗೇಗೌಡರು ತಮ್ಮ ತಂದೆ ತಾಯಂದಿರಾದ ಹರಗನಹಳ್ಳಿ ದೊಡ್ಡಮನೆ ಲಿಂಗೇಗೌಡರು ಮತ್ತು ಮಾತೋಶ್ರೀ ಹುಚ್ಚಮ್ಮ ತಾಯಿಯವರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ದೊಡ್ಡಮನೆ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೩೪. ಅರಳಗುಪ್ಪೆ ಸಿದ್ಧಲಿಂಗಪ್ಪ

ಮೂಡಲಪಾಯ ಯಕ್ಷಗಾನವು ಜನಪದ ರಂಗಭೂಮಿಯ ಅತ್ಯಂತ ವಿಶಿಷ್ಟ ಕಲಾಪ್ರಕಾರ. ಬಯಲುಸೀಮೆಯ ಈ ಗಂಡುಕಲೆಯನ್ನು ಉಳಿಸಿ, ಬೆಳೆಸಲು ನೂರಾರು ಜನ ಭಾಗವತರು, ಕಲಾವಿದರು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಮೂಡಲಪಾಯ ಯಕ್ಷಗಾನ ಕಲೆಯ ಶ್ರೀಮಂತಿಕೆಯನ್ನು ಹೆಚ್ಚಿಸಿ ಅದಕ್ಕೆ ಜನಮನ್ನಣೆಯನ್ನು ದೊರಕಿಸಿಕೊಟ್ಟ ಕೆಲವೇ ಮಂದಿ ಭಾಗವತರುಗಳಲ್ಲಿ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕು ಅರಳಗುಪ್ಪೆಯ

ಸಿದ್ಧಲಿಂಗಪ್ಪನವರೂ ಒಬ್ಬರು. ಗುರು ಭಾಗವತ ಸಿದ್ಧಲಿಂಗಪ್ಪನವರ ಗರಡಿಯಲ್ಲಿ ಪಳಗಿದ ಸಿದ್ಧಲಿಂಗಪ್ಪನವರು ಹದವಾದ ಶಾರೀರ, ರಾಗದ ಏರಿಳಿತ, ಆಕರ್ಷಕ ಕಥೆಗಾರಿಕೆಗಳಿಂದಾಗಿ ಸಮರ್ಥ ಭಾಗವತರೆನಿಸಿಕೊಂಡಿದ್ದಾರೆ. ಮೃದಂಗ ಹಿಡಿದು ಅಟ್ಟ ಏರಿದರೆ ಸಿದ್ಧಲಿಂಗಪ್ಪನವರಲ್ಲಿ ಎಲ್ಲಿಲ್ಲದ ಉತ್ಸಾಹ ಪುಟದೇಳುತ್ತದೆ. ಕಂಠಮಾಧುರ್ಯ, ಸಭಾವಯುಕ್ತ ಹಾಡುಗಾರಿಕೆ, ಕುಶಲ ಮೃದಂಗ ವಾದನಗಳಲ್ಲಿ ಪರಿಣತಿ ಸಾಧಿಸಿರುವ ಶ್ರೀಯುತರು ಕಳೆದ ೩೦ ವರ್ಷಗಳಿಂದಲೂ ಲವಕುಶ, ಚಿತ್ರಕೇತು, ದಕ್ಷಯಜ್ಞ, ಬಾಣಾಸುರ, ಭಸ್ಮಾಸುರ, ಗಯ ಚರಿತ್ರೆ, ಗಿರಿಜಾ ಕಲ್ಯಾಣ, ಕರ್ಣಪರ್ವ, ದೇವಿ ಮಹಾತ್ಮೆ, ಅಭಿಮನ್ಯು ಕಾಳಗ ಇವೇ ಮೊದಲಾದ ಮೂಡಲಪಾಯ ಯಕ್ಷಗಾನದ ವೈವಿಧ್ಯಮಯ ಕಥಾಪ್ರಸಂಗಗಳನ್ನು ಕಲಿಸುತ್ತಾ, ಆಡಿಸುತ್ತಾ ಬಂದಿದ್ದಾರೆ. ಇಂತಹ ಅತ್ಯುತ್ತಮ ಮೂಡಲಪಾಯ ಯಕ್ಷಗಾನ ಭಾವತರಾದ ಶ್ರೀ ಸಿದ್ಧಲಿಂಗಪ್ಪನವರಿಗೆ ಎಚ್. ಎಲ್. ನಾಗೇಗೌಡರು ತಮ್ಮ ದೊಡ್ಡಮನೆ ಕುಟುಂಬದವರೆಲ್ಲರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೩೫. ಸಾಧು ಹನುಮಯ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕು ಕನಸವಾಡಿ ಕಾಲೋನಿಯ ಶ್ರೀ ಸಾಧು ಹನುಮಯ್ಯನವರು ಅಪರೂಪದ ತತ್ವಪದಗಳ ಹಾಡುಗಾರರು. ಕೇಳುವವರ ಕಿವಿಗಳಿಗಿಂಪೆನಿಸುವಂಥ ಸೊಗಸಾದ ಸಿರಿಕಂಠವನ್ನು ಹೊಂದಿರುವ ಸಾಧು ಹನುಮಯ್ಯನವರದು ಸುಸ್ಪಷ್ಟವಾದ ಉಚ್ಛಾರಣೆ. ಏಕತಾರಿ ಮೀಟುತ್ತಾ ಪತ್ನಿಯ ಜತೆಗೂಡಿ ಹಾಡಲಾರಂಭಿಸದರೆ ಇವರ ದನಿ ಚಂದ; ನುಡಿವ ನುಡಿ ಚಂದ. ವೈವಿಧ್ಯಮಯ ಧಾಟಿಗಳಲ್ಲಿ ತತ್ವಪದಗಳು, ತಮಾಶೆ ಪದಗಳನ್ನಲ್ಲದೆ, ದಾಸರ ಪದಗಳನ್ನು ಸಹ ಹಾಡುತ್ತಾರೆ. ಎಚ್. ಎಲ್. ನಾಗೇಗೌಡರು ಇವರ ಹಾಡುಗಳನ್ನು ೧೯೮೩ ರಷ್ಟು ಹಿಂದೆಯೇ ಧ್ವನಿಮುದ್ರಿಸಿಕೊಂಡಿರುತ್ತಾರೆ.

ಸಾಧು ಹನುಮಯ್ಯನವರಿಗೆ ೧೯೮೭ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಇದೀಗ ಕರ್ನಾಟಕ ಜಾನಪದ ಪರಿಷತ್ತು ವತಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೩೬. ಬನ್ನೂರು ಕೆಂಪಮ್ಮ

ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕು ಬನ್ನೂರಿನ ದಕ್ಷಿಣ ಬೀದಿಯಲ್ಲಿರುವ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದ ಸುಮಾರು ೬೫ರ ಪ್ರಾಯದ ಕೆಂಪಮ್ಮ ತೀರಾ ಇತ್ತೀಚೆಗೆ ಕರ್ನಾಟಕ ಜಾನಪದ ಪರಿಷತ್ತಿನ ಧ್ವನಿಮುದ್ರಣ ಭಂಡಾರಕ್ಕೆ ಸೇರ್ಪಡೆಯಾದ ಹೆಣ್ಣುಮಗಳು. ತನ್ನ ಚಿಕ್ಕವ್ವನಿಂದ ಸರಸ್ವತಿ, ಸೀಹಳ್ಳಿ ಹುಚ್ಚಮ್ಮ, ಸಿದ್ಧಪ್ಪಾಜಿ, ಮಾದೇಶ್ವರ, ಬಿಳಿಗಿರಿ ರಂಗಸ್ವಾಮಿ, ಬನ್ನೂರು ಕರಿಯಪ್ಪಸ್ವಾಮಿ, ಚಾಮುಂಡೇಶ್ವರಿ ಮೊದಲಾದ ದೇವರುಗಳ ಮೇಲಿನ ಪದಗಳು,

ಬೀಸು ಪದಗಳು, ತತ್ವಪದಗಳು, ತಮಾಶೆ ಪದಗಳು, ನಾಟಕದ ಪದಗಳು, ಸತ್ತವರನ್ನು ಹೊಗಳುವ ಪದಗಳನ್ನು ಕಲಿತ ಕೆಂಪಮ್ಮ ಕೈಯಲ್ಲಿ ತಾಳ ಇಲ್ಲವೆ ದಮಡಿ ಹಿಡಿದು ಮಟ್ಟಸವಾಗಿ ಕುಳಿತು ಹಾಡಲಾರಂಭಿಸಿದರೆ ಅದೇನು ಕಂಠ, ಅದೇನು ಧಾಟಿ, ಅದೇನು ರಾಗ, ತಾಳಗಳ ಜ್ಞಾನ! ಮೈಸೂರು ಆಕಾಶವಾಣಿಯಲ್ಲಿ ಹನ್ನೆರಡು ಸಲ ಹಾಡಿರುವ ಕೆಂಪಮ್ಮನದು ವಿಶಿಷ್ಟವಾದ ಕಂಠ. ತಾನು ಕೇಳುವ ಯಾವುದೇ ಧಾಟಿಯನ್ನು ಅದು ಆಧುನಿಕರದಿರಲಿ ಅಥವಾ ನಾಟಕದ ಮಟ್ಟುಗಳೇ ಇರಲಿ ಸಲೀಸಾಗಿ ತಾವು ಹಾಡುವ ಹಾಡಿನೊಂದಿಗೆ ಜೋಡಿಸಿಕೊಂಡು ಹಾಡುವ ಜಾಣ್ಮೆ ಕೆಂಪಮ್ಮನವರಲ್ಲಿದೆ. ತಾಳ-ದಮಡಿಗಳು ಸಿಗದಿದ್ದಲ್ಲಿ, ನಶ್ಯ ಏರಿಸುವ ಚಟವುಳ್ಳ ಕೆಂಪಮ್ಮನವರು ತಮ್ಮ ನಶ್ಯದ ಡಬ್ಬಿಯನ್ನೇ ಚಿಟಕಿ ತಾಳವನ್ನಾಗಿಸಿಕೊಂಡು ಕೇಳುಗರ ಮೈಮರೆಸುವ ರೀತಿಯಲ್ಲಿ ಹಾಡುತ್ತಾರೆ. ಬನ್ನೂರು ಕೆಂಪಮ್ಮನವರ ಎಲ್ಲಾ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೮೭ ರಲ್ಲಿ ಮತ್ತು ನಂತರ ದಿನಗಳಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ. ಇಂತಹ ಪ್ರತಿಭಾವಂತ ಹಾಡುಗಾರ್ತಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೩೭. ಜೋಗಿ ನಿಂಗಯ್ಯ

ಊರವರ ಬಾಯಲ್ಲಿ ಜೋಗಿ ಎಂದೇ ಹೆಸರಾಗಿರುವ ನಿಂಗಯ್ಯ ನೀತಿಯಲ್ಲಿ ಮೇಲಾದವರು. ಹೊಟ್ಟೆಪಾಡಿಗಾಗಿ ಸರಗೂರು ಸಾಮಂದಿಪುರದಿಂದ ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆಗೆ ವಲಸೆ ಬಂದು ಊರವರಲ್ಲಿ ಒಂದಾಗಿ ಜನಪ್ರೀತಿ ಗಳಿಸಿ ಇಲ್ಲಿಯೇ ತಳವಾಗಿ ನಿಂತರು. ಬದುಕುವುದಕ್ಕಾಗಿ ಅಣ್ಣ ಕಾಟುಗಯ್ಯನಿಂದ ಹಾಡು ಕಲಿತು ಬಾಳಿನುದ್ದಕ್ಕೂ ಹಾಡುತ್ತಲೇ ಬಂದಿದ್ದಾರೆ. ಜೋಗಿ ನಿಂಗಯ್ಯನವರಿಗೆ ಮನೆ ತುಂಬಾ ಮಕ್ಕಳು; ಎದೆ ತುಂಬಾ ಪದಗಳು. ಹಾಡಲಾರಂಭಿಸಿದರೆ ಬೈಗು ಬೆಳಗುಗಳನ್ನು ಮರೆತು, ಊಟ ನಿದ್ದೆಗಳನ್ನು ತೊರೆದು ಹಾಡಬಲ್ಲರು. ಹತ್ತಾರು ದಿನಗಳ ಕಾಲ ಒಂದೇ ಸಮನಾಗಿ ಹಾಡಿದರೂ ಬತ್ತಲಾರದಷ್ಟು ಜನಪದ ಸಾಹಿತ್ಯದ ಭಂಡಾರ ಇವರಲ್ಲಿದೆ. ಕೇಳುಗರ ಎದೆ ಕರಗಿ ಕಣ್ಣಲ್ಲಿ ನೀರಿಳಿಯುವಂತೆ ಮಾಡುವ ಆರ್ದ್ರ ಶಕ್ತಿ ನಿಂಗಯ್ಯನವರ ಗಾಯನಕ್ಕಿದೆ. ತಮ್ಮದೇ ಆದ ವೈಶಿಷ್ಟ್ಯಪೂರ್ಣ ಧಾಟಿಯಲ್ಲಿ, ವೈವಿಧ್ಯಮಯ ರೀತಿಯಲ್ಲಿ ದನಿಯನ್ನು ಏರಿಳಿಸುವ ಬಗೆ ಇವರದು. ನೀಲಗಾರರು ಬಳಸುವ ತಂಬೂರಿ, ಚಿಟಿಕೆಗಳನ್ನು ವಾದ್ಯಗಳನ್ನಾಗಿ ಬಳಸಿಕೊಂಡು ಗಂಗೆ-ಗೌರಿ, ಸಾರಂಗಧರ, ಬಂಜೆ ಹೊನ್ನಮ್ಮ, ನೀಲವೇಣಿ, ಮೈದಾಳರಾಮ ಮೂಂತಾದ ಹತ್ತಾರು ಕಾವ್ಯಗಳನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಾರೆ. ಜನಪದ ಮಹಾಕಾವ್ಯಗಳಾದ ಮಲೆ ಮಾದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯಗಳನ್ನು ಸಹ ಇವರು ಹಾಡಬಲ್ಲರು.

ಇಂತಹ ಅಪರೂಪದ ಸಮೃದ್ಧ ಹಾಡುಗಾರನಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೩೮. ಲಕ್ಷ್ಮೀಬಾಯಿ ಅಯ್ಯಪ್ಪ ಮಾದರ

ಬಿಜಾಪುರ ಜಿಲ್ಲೆಯ ತಿಕೋಟಾ ಗ್ರಾಮಕ್ಕೆ ಸೇರಿದ ಮಾದಿಗರ ಜನಾಗಂಗದ ಲಕ್ಷ್ಮೀಬಾಯಿ ಅಯ್ಯಪ್ಪ ಮಾದರ ಸವದತ್ತಿ ಎಲ್ಲಮ್ಮನ ಜೋಗತಿ. ಇವರ ಅಕ್ಕ ಗೌರವ್ವ ಮಾದರ. ಈ ಇಬ್ಬರು ಅಕ್ಕ ತಂಗಿಯರು ಚೌಡಿಕೆ ನುಡಿಸಿಕೊಂಡು ಹಾಡಲಾರಂಭಿಸಿದರೆ ಎಂಥವರೂ ತಲೆದೂಗಬೇಕು. ಅಕ್ಕ ಚೌಡಿಕೆ ಹಿಡಿದರೆ; ತಂಗಿ ಬಾರಿಕೆ; ಒಂದು ತಾಳ; ಇನ್ನೊಂದು ಶೃತಿ. ಅಪೂರ್ವ ಕಂಠ ಹಾಗೂ ಧಾಟಿಗಳು. ಈರ್ವರೂ ಹಾಡುವುದರಲ್ಲಿ ಎತ್ತಿದ ಕೈ. ಎಲ್ಲಮ್ಮ, ಗಣಪತಿ, ದುರುಗವ್ವ, ಮಾಲಗಾರ ನಾಗಶೆಟ್ಟಿ, ಗೀಗೀ, ಜೋಗಳ ಪದಗಳು, ಸೋಬಾನೆ ಪದಗಳು, ಬೀಸುವ ಪದಗಳನ್ನು ಹಾಡುತ್ತಾರೆ. ಉತ್ತರ ಕರ್ನಾಟಕದಾದ್ಯಂತ ಗೀಗೀ ಪದಗಳ ಜನಪ್ರಿಯತೆಯನ್ನು ಹರಡುವುದರಲ್ಲಿ, ನಾಗೇಶಿ ಸಂಪ್ರದಾಯವನ್ನು ಉಳಿಸಿ ಬೆಳೆಸುವಲ್ಲಿ ಲಕ್ಷ್ಮೀಬಾಯಿಯವರು ಪಾತ್ರ ಹಿರಿದಾದುದು. ಸರ್ಕಾರದ ಕುಟುಂಬ ಕಲ್ಯಾಣ ಯೋಜನೆ, ಸಾಕ್ಷರತಾ ಆಂದೋಲನ ಮುಂತಾದವುಗಳಲ್ಲಿ, ಸಾಮುದಾಯಿಕ ಜಾಗೃತಿ ಉಂಟುಮಾಡುವಲ್ಲಿ ಲಕ್ಷ್ಮೀಬಾಯಿಯವರು ಸಾಂಸ್ಕೃತಿಕ ವಕ್ತಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

೧೯೮೧ ರಲ್ಲಿ ದೆಹಲಿಗೆ ಹೋಗಿ, ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರ ಮುಂದೆ ಹಾಡಿ ಸೈ ಎನಿಸಿಕೊಂಡು ಬಂದ ಸೋದರಿಯರ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೮೧ ರಲ್ಲಿ ಮತ್ತು ಅನಂತರದ ದಿನಗಳಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ. ಲಕ್ಷ್ಮೀಬಾಯ ಮಾದರರ ಅಪರೂಪದ ಗಾಯನ ಕಲೆಯನ್ನು ಮೆಚ್ಚಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಇದೀಗ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸಿರುತ್ತದೆ.

## ೩೯. ಬಿ. ಕೆ. ರಾಮಣ್ಣ

ಕನ್ನಡ ನಾಡಿನ ವಿಶಿಷ್ಟ ಲೌಕಿಕ ಕುಣಿತಗಳಲ್ಲಿ ಅತ್ಯಂತ ಆಕರ್ಷಕವಾದದ್ದು ಪಟಾ ಕುಣಿತ. ಬಣ್ಣ ಬಣ್ಣದ ಬಟ್ಟೆಯ ಜಲ್ಲರಿಗಳನ್ನು ಸುತ್ತಿದ ಸುಮಾರು ಹನ್ನೆರಡಡಿ ಉದ್ದದ ಜವಲಿ ಕೋಲನ್ನು ಸೊಂಟದ ನೇವಾರಕ್ಕೆ ಸಿಕ್ಕಿಸಿ ಗೆಜ್ಜೆ ಕಟ್ಟಿದ ಕಾಲುಗಳನ್ನು ಹೆಜ್ಜೆ ಹಾಕುತ್ತಾ ಕುಣಿಯುವುದನ್ನು ನೋಡುವುದೇ ಒಂದು ಚಂದ. ಇಂತಹ ವರ್ಣರಂಜಿತ ಪಟಾಕುಣಿತದಲ್ಲಿ ಬಿ. ಕೆ. ರಾಮಣ್ಣ ಹೆಸರಾದ ಕಲಾವಿದರು. ಪಟಗಳನ್ನು ಕುಣಿಸುವುದಷ್ಟೇ ಅಲ್ಲದೆ ತಮಟೆ ಬಡಿಯುವುದು, ಸೋಮಗಳನ್ನು ಕುಣಿಸುವುದರಲ್ಲೂ ರಾಮಣ್ಣನವರು ಪರಿಣತರು. ಕನ್ನಡ ನಾಡಿನ ಉದ್ದಗಲಕ್ಕೂ ಪ್ರದರ್ಶನ ನೀಡಿರುವ ಇವರು ದೂರದ ದೆಹಲಿಗೆ ಪಟಗಳನ್ನು ಕೊಂಡೊಯ್ದು ಗಣರಾಜ್ಯೋತ್ಸವದ ವಿಶೇಷ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಸೈ ಎನಿಸಿಕೊಂಡಿದ್ದಾರೆ.

ಇಂತಹ ಅಪರೂಪದ ಕಲಾವಿದನಿಗೆ ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರಿನ ಎಂ. ಕೃಷ್ಣಪ್ಪನವರು ತಮ್ಮ ತಂದೆ ಮುನಿಸ್ವಾಮಪ್ಪ ಮತ್ತು ತಾಯಿ ರಂಗಮ್ಮನವರ ನೆನಪಿಗಾಗಿ ನೀಡಿರುವ ದತ್ತಿ ನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೪೦. ವಿಠೋಬ ಕಲ್ಲಪ್ಪ ಮರಡಿ

ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಸಾಲೋಟಗಿಯ 'ಶ್ರೀ ಕೃಷ್ಣ ಪಾರಿಜಾತ'ದ ಕಲಾವಿದ ವಿಠೋಬ ಕಲ್ಲಪ್ಪ ಮರಡಿಯವರ ಕೈ ಚಳಕದಿಂದ ಹೊರಡುವ ತಾಳದ ದನಿಯನ್ನು ಕೇಳಿಯೇ ಸವಿಯಬೇಕು. ತಾಳದ ಕರಾರು ವಾಕ್ಯದ ಏರಿಳಿತ, ತೀವ್ರತೆ, ಬಗೆ ಬಗೆಯ ಗತ್ತು ಗಮ್ಮತ್ತುಗಳ ವೈಖರಿ ಎಂಥವರನ್ನೂ ಸೆಳೆಯುವಂಥದ್ದು. ತುಂಬಿದ ಸಭೆಯಲ್ಲಿ ಎದ್ದು ಕಾಣುವ ವ್ಯಕ್ತಿತ್ವವನ್ನುಳ್ಳ ಎಪ್ಪತ್ತರ ಹರೆಯದ ಮರಡಿಯವರ 'ಶ್ರೀ ಕೃಷ್ಣ ಪಾರಿಜಾತ' ಸಣ್ಣಾಟದಲ್ಲಿ ದೂತಿ ಪಾತ್ರವು ಅಬಾಲವೃದ್ಧರಾದಿಯಾಗಿ ಸಮಸ್ತರಿಂದಲೂ ಮೆಚ್ಚುಗೆಗೆ ಪಾತ್ರವಾಗಿದೆ. ಮರಡಿಯವರ ಮುಂದಾಳತ್ವದಲ್ಲಿ ಸಾಲೋಟಗಿಯ 'ಶ್ರೀಕೃಷ್ಣ ಪಾರಿಜಾತ' ತಂಡವು ಕನ್ನಡ ನಾಡಿನಲ್ಲಷ್ಟೇ ಅಲ್ಲದೆ ಹೊರ ರಾಜ್ಯಗಳಾದ ಮಹಾರಾಷ್ಟ್ರ ಆಂಧ್ರಪ್ರದೇಶಗಳಲ್ಲಿಯೂ ಪ್ರದರ್ಶನ ನೀಡಿ ಪ್ರೇಕ್ಷಕರಿಂದ ಸೈ ಎನಿಸಿಕೊಂಡಿದೆ. ಆಕಾಶವಾಣಿ, ದೂರದರ್ಶನಗಳಲ್ಲಿಯೂ ಪ್ರದರ್ಶನ ನೀಡಿರುವ ಮರಡಿಯವರ ಹಾಡಿನ ರೀತಿ, ತಾಳದ ಗತ್ತು, ಅಭಿನಯ ಕೌಶಲ್ಯಗಳು ಪ್ರಶಂಸಾರ್ಹ ಗುಣಗಳಾಗಿವೆ. ಇಷ್ಟಾಗಿಯೂ ಮರಡಿಯವರು ಎಳ್ಳಷ್ಟೂ ಗರ್ವವಿರದ ಮುಗ್ಧ, ಸಹೃದಯ ಸಂಪನ್ನ ಕಲಾವಿದರೆನಿಸಿಕೊಂಡಿದ್ದಾರೆ. ಇಂತಹ ಸುಸಂಸ್ಕೃತ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರಿನ ಎಂ. ಕೃಷ್ಣಪ್ಪನವರು ತಮ್ಮ ತಂದೆ ಮುನಿಸ್ವಾಮಪ್ಪ ಮತ್ತು ತಾಯಿ ರಂಗಮ್ಮನವರ ನಿನಪಿಗಾಗಿ ನೀಡಿರುವ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

## ೪೧. ಗೊರವರ ಪುಟ್ಟಮಲ್ಲೇಗೌಡ

ಕರ್ನಾಟಕದ ಧಾರ್ಮಿಕ ವೃತ್ತಿ ಗಾಯಕರುಗಳಲ್ಲಿ ಗೊರವರದು ಪ್ರಧಾನ ಪರಂಪರೆ. ತಲೆಗೆ ಕರಡಿ ಕೂದಲಿನ ಕುಲಾವಿ, ಎದೆಯ ಮೇಲೆ ಕವಡೆ ಸರದ ಅಡ್ಡಪಟ್ಟಿ ದರಿಸಿ, ಕರಿಯ ನಿಲುವಂಗಿಯನ್ನುಟ್ಟು, ಕೈಯಲ್ಲಿ ಕೊಳಲು, ಢಮರುಗ ಹಿಡಿದು, ಹಾಡಿ ಕುಣಿಯುವ ಮೈಲಾರಲಿಂಗದ ಭಕ್ತರಾದ ಗೊರವರು ಕಾವ್ಯ ಮತ್ತು ಕಲೆಗಳೆರಡರಲ್ಲೂ ಪರಿಣಿತರು. ಚಾಮರಾಜನಗರ ಜಿಲ್ಲೆ ರಾಮಸಮುದ್ರದ ತೊಂಬತ್ತರ ಇಳಿಪ್ರಾಯದ ಶ್ರೀ ಪುಟ್ಟಮಲ್ಲೇಗೌಡರು ಈ ಪರಂಪರೆಯ ಅತ್ಯಂತ ಉತ್ಕೃಷ್ಟ ಕಲಾವಿದರು. ತಮ್ಮ ಹೆಸರಿನವರೇ ಆದ ಗುರುಗಳಿಂದ ಬಾಲ್ಯದಲ್ಲೇ ಹಾಡುಗಾರಿಕೆ ಮತ್ತು ಕುಣಿತವನ್ನು ಕಲಿತ ಗೌಡರು ಸುಮಾರು ೩೦ ವರ್ಷಗಳಿಂದಲೂ ಮೊದಲೇ ತಮ್ಮ ಊರಿನಲ್ಲಿ ತಮ್ಮದೇ ಆದ ಗೊರವರ ತಂಡವೊಂದನ್ನು ರೂಪಿಸಿ ನಾಡಿನುದ್ದಗಲಕ್ಕೂ ಸಂಚಾರಮಾಡಿದರು. ತಂಡದ ನಾಯಕರಾಗಿ ನಿಂತು

ಡಮರುಗಳನ್ನು ನುಡಿಸುತ್ತ, ಕೊಳಲನ್ನು ಊದುತ್ತ ಕುಣಿಯಲಾರಂಭಿಸಿದರೆ ನೋಡುವವರಲ್ಲಿ ರೋಮಾಂಚನವುಂಟಾಗುತ್ತಿತ್ತು. ಅವರು ಕುಣಿದು, ಕುಪ್ಪಳಿಸಿ ಕೇಕೆಹಾಕುತ್ತಿದ್ದರೆ ಪ್ರೇಕ್ಷಕರಿಗೆ ಸುಮ್ಮನಿರಲು ಆಗುತ್ತಿರಲಿಲ್ಲ. ದೂರದ ದೆಹಲಿಯವರೆಗೂ ಗೊರವರ ಕುಣಿತವನ್ನು ಕೊಂಡೊಯ್ದು ಅದಕ್ಕೊಂದು ಪ್ರತಿಷ್ಠೆಯನ್ನು, ಜನಪ್ರಿಯತೆಯನ್ನು ತಂದುಕೊಟ್ಟ ಯಶಸ್ಸು ಪುಟ್ಟಮಲ್ಲೇಗೌಡರದಾಗಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೧ ರಲ್ಲೆ ಇವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಜಾನಪದ ಪರಿಷತ್ತು ಕೇರಳಾಪುರದ ಪ್ರೊ. ಸಿ. ಜಿ. ಪುರುಷೋತ್ತಮ ಅವರು ತಮ್ಮ ತಾತ ಶ್ರೀ ಶಂಭೂಗೌಡರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ ರಾಮಸಮುದ್ರದ ಹಿರಿಯ ಗೊರವ ಕಲಾವಿದರಾದ ಪುಟ್ಟಮಲ್ಲೇಗೌಡರಿಗೆ 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

## ೪೨. ಜಲ್ದಿಗೆರೆ ಗಂಗಹುಚ್ಚಮ್ಮ

ಗ್ರಾಮೀಣ ಬದುಕಿನ ಜಂಜಾಟ, ಸುಖ-ದುಃಖಗಳ ಪರಿಚಯವಾಗಬೇಕಾದರೆ ಹಳ್ಳಿಯ ಹೆಂಗಸರ ಹಾಡುಗಳ ಮೊರೆಹೋಗಬೇಕು. ಕೋಳಿ ಕೂಗುವುದರೊಂದಿಗೆ ರಾಗೀಕಲ್ಲಿನ ಮೇಲೆ ಆರಂಭವಾಗುವ ಈ ಪದಗಳು ಸೂರ್ಯೋದಯದ ಹೊತ್ತಿಗೆ ಕೊನೆಗೊಳ್ಳುತ್ತಿದ್ದವು. ಬದುಕಿನ ನೂರಾರು ಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಸಶಕ್ತವಾಗಿ ಹಾಡುವ ಅನೇಕ ಹಾಡುಗಾರ್ತಿಯರಲ್ಲಿ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಜಲ್ದಿಗೆರೆ ಗಂಗಹುಚ್ಚಮ್ಮನವರೂ ಒಬ್ಬರು. ಆದಿದ್ರಾವಿಡ ಜನಾಂಗಕ್ಕೆ ಸೇರಿಸ ಕದ್ರಿ ನರಸಿಂಹಸ್ವಾಮಿಯ ಒಕ್ಕಲಾದ ಗಂಗಹುಚ್ಚಮ್ಮ ಭಾವಪೂರ್ಣ ಹಾಡುಗಾರ್ತಿ. ಹೊಸ ಹೊಸ ಪಲ್ಲವಿಗಳೊಂದಿಗೆ ಅತ್ಯಂತ ಸುಶ್ರಾವ್ಯವಾಗಿ ಹಾಡುವ ಇವರು ಸುಮಾರು ೨೦ಕ್ಕೂ ಹೆಚ್ಚು ಪಲ್ಲವಿಗಳನ್ನು ಜೋಡಿಸಿ ಜಲ್ದಿಗೆರೆ ದೊಡ್ಡಮ್ಮ ದೇವರ ಮೇಲೆ ಹಾಡುತ್ತಾರೆ. ಜಾಂಬಯ್ಯ, ಗುಣಸಾಗರಿ, ಹೊನ್ನಮ್ಮ, ಮಳೆರಾಯ, ಕದ್ರಿ ನರಸಿಂಹ, ಭೈರವ, ಮೂಡಲಗಿರಿಯಪ್ಪ ಮುಂತಾದ ದೇವರುಗಳ ಮೇಲೆ ಅಲ್ಲದೆ ಅಸಂಖ್ಯಾತ ಬಿಡಿಗೀತೆಗಳು, ತಮಾಶೆ ಪದಗಳು, ಮೊಸರು ಕಡೆಯುವ ಪದಗಳನ್ನು ಹಾಡುತ್ತಾರೆ.

ಶ್ರೀಮತಿ ಗಂಗಹುಚ್ಚಮ್ಮನವರು ಎಲ್ಲಾ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೬೦ ರಷ್ಟು ಹಿಂದೆಯೇ ಧ್ವನಿಮುದ್ರಿಸಿಕೊಂಡಿದ್ದಾರೆ. ಇಂತಹ ಅಪರೂಪದ ಹಾಡುಗಾರ್ತಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೪೩. ಹೊರೆಯಾಲದ ಮಹದೇವಮ್ಮ

ಬಯಲು ಸೀಮೆಗೆ ಸಹಜವಾದ ಕಪ್ಪು ಬಣ್ಣದ ಮುಗ್ಧ ಮುಖಭಾವದ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಹೊರೆಯಾಲದ ಸುಮಾರು ಐವತ್ತರ ಪ್ರಾಯದ ಹರಿಜನರ ಮಹದೇವಮ್ಮ ಕನ್ನಡ ನಾಡು ಕಂಡ ಅಪರೂಪದ ಹಾಡುಗಾರ್ತಿ. ನಮ್ಮ ಗ್ರಾಮಾಂತರ ಗಾಯಕಿಯರು ತಮ್ಮ ಬದುಕಿನ ದುಃಖ ದುಮ್ಮಾನಗಳನ್ನು ಮರೆಯಲು ಹಳ್ಳಿ ಹಾಡುಗಳಲ್ಲಿ

ನೆಮ್ಮದಿ ಮತ್ತು ತೃಪ್ತಿಯನ್ನು ಕಂಡುಕೊಂಡಿದ್ದಾರೆ. ಮಹದೇವಮ್ಮನೂ ಸಹ ಮನದಲ್ಲಿ ನೂರು ನೋವಿದ್ದರೂ ಮನೆಗೆಲಸ-ಹೊಲಗೆಲಸಗಳ ನಡುವೆ ಹಿರಿಯರಿಂದ ಜನಪದ ಹಾಡುಗಳನ್ನು ಕಲಿತು ಮೈಗೂಡಿಸಿಕೊಂಡು ಹಾಡುತ್ತಾ ಬಂದಿದ್ದಾರೆ. ಅನಕ್ಷರಸ್ಥರಾದ ಮಹದೇವಮ್ಮನವರ ಸ್ಮೃತಿಕೋಶದಲ್ಲಿ ಅಗಾಧವಾದ ಜನಪದ ಗೀತ ಸಾಹಿತ್ಯ ಅಡಗಿದೆ. ದೇವರ ಪದಗಳು, ಶಾಸ್ತ್ರದ ಪದಗಳನ್ನು ಹಾಡುವುದಲ್ಲದೆ ಒಗಟುಗಳನ್ನು ಬಿಡಿಸುವುದರಲ್ಲೂ ಈಕೆ ಜಾಣೆ. ಮಹದೇವಮ್ಮನವರ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೬೧ ರಷ್ಟು ಹಿಂದೆಯೇ ಧ್ವನಿಮುದ್ರಿಸಿಕೊಂಡಿರುತ್ತಾರೆ. ಇಂತಹ ಅಪರೂಪದ ಹಾಡುಗಾರ್ತಿಗೆ ಕರ್ನಾಟಕ ಜಾನಪದ ಪರಿಷತ್ತು, ಮಂಡ್ಯ ಜಿಲ್ಲೆಯ ಕಚ್ಚಿಗೆರೆ ಸಿದ್ಧೇಗೌಡರು ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮ ಅವರ ನೆನಪಿಗಾಗಿ ನೀಡಿದ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸುತ್ತದೆ.

## ೪೪. ಬಾಬು ನಲ್ಕೆ

ದಕ್ಷಿಣ ಕನ್ನಡ ಜಿಲ್ಲೆಯ ವಿಶಿಷ್ಟ ಆರಾಧನೆಗಳೊಂದಾದ ಭೂತಾರಾಧನೆಯು ಅಲ್ಲಿನ ಜನಗಳ ಬದುಕಿನ ಅವಿಭಾಜ್ಯ ಅಂಗವಾಗಿದೆ. ಧಾರ್ಮಿಕ ಸಂದರ್ಭಗಳಲ್ಲಿ ಪ್ರದರ್ಶನಗೊಳ್ಳುವ ಈ ಕಲೆಯು ಉಜ್ವಲ ಸಂಪ್ರದಾಯದ ತೆಕ್ಕೆಯಲ್ಲಿ ಅರಳುತ್ತಿದೆ. ಮುಖದ ತುಂಬಾ ಢಾಳಾಗಿ ಬಳಿದುಕೊಂಡ ಬಣ್ಣ ಕೈಯಲ್ಲಿ ಹಿಡಿದ ಉರಿಯುತ್ತಿರುವ ಪಂಜು, ಕಿವಿಗಡಚಿಕ್ಕುವ ಹಿನ್ನೆಲೆ, ವಾದ್ಯದ ಆರ್ಭಟ, ಪಾತ್ರಧಾರಿಯ ಹೂಂಕಾರಗಳು ನೋಡುಗರ ಕಣ್ಣ ಮುಂದೆ ಭೂತ ಪ್ರಪಂಚವನ್ನೇ ಸೃಷ್ಟಿಸುತ್ತದೆ. ಸಂಪ್ರದಾಯದ ಆಚರಣೆಯೊಂದಿಗೆ ಸೊಗಸಾದ ಮನರಂಜನೆಯನ್ನು ಒದಗಿಸುವ ಈ ಕಲೆಯಲ್ಲಿ ಕಾರ್ಕಳ ತಾಲ್ಲೂಕು ಬೋಳ ಪಿಲಿಯೂರಿನ ಸುಮಾರು ೬೫ರ ಹರೆಯದ ಶ್ರೀ ಬಾಬು ನಲ್ಕೆಯವರು ಖ್ಯಾತ ಭೂತಾರಾಧನ ನರ್ತಕರೆಂದು ಹೆಸರುವಾಸಿಯಾಗಿದ್ದಾರೆ.

ಕಳೆದ ೩೦ ವರ್ಷಗಳಿಂದಲೂ ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಬಾಬು ನಲ್ಕೆಯವರು ಬೋಳ, ಕುಂಟಾಡಿ, ಕಾಪು, ಇನ್ನಂಜೆ, ಮುಕ್ಕ, ಮುದ್ರಾಡಿ ಮುಂತಾದ ಕಡೆಗಳಲ್ಲಿ ದೀರ್ಘಕಾಲ ನಡೆಸುವ ಪ್ರಮುಖ ದೈವಗಳ ಕೋಲದಲ್ಲಿ ಪ್ರಧಾನ ನರ್ತಕರಾಗಿ ಭಾಗವಹಿಸಿದ್ದಾರೆ. ನಲ್ಕೆಯವರು ಭೂತದ ವೇಷ ಧರಿಸಿ ಆವೇಶಭರಿತರಾಗಿ ನರ್ತಿಸ ತೊಡಗಿದರೆಂದರೆ ನೋಡುಗರ ಎದೆ ಝಲ್ಲೆನ್ನುತ್ತದೆ. ಭೂತಾರಾಧನೆಯ ವಿಶಿಷ್ಟ ಪಾತ್ರಗಳನ್ನು ವಹಿಸಿ, ನಶಿಸಿ ಹೋಗುತ್ತಿರುವ ಕಲೆಯನ್ನು ಜೀವಂತವಾಗಿರಿಸಲು ಶ್ರಮಿಸುತ್ತಿರುವ ನಲ್ಕೆಯವರದು ಈ ಕ್ಷೇತ್ರದಲ್ಲಿ ಸಾರ್ಥಕ ಸೇವೆ. ಇಂತಹ ಪ್ರತಿಭಾವಂತ ಭೂತಾರಾಧನಾ ಕಲಾವಿದರನ್ನು ಗುರುತಿಸಿದ ಕರ್ನಾಟಕ ಜಾನಪದ ಪರಿಷತ್ತು, ಮಂಡ್ಯ ಜಿಲ್ಲೆಯ ಕಚ್ಚಿಗೆರೆ ಸಿದ್ಧೇಗೌಡರು ಆಚಾರ್ಯ ಕಾಕಾ ಕಾಲೇಲ್ಕರ ಅವರ ನೆನಪಿಗಾಗಿ ನೀಡಿದ ದತ್ತಿನಿಧಿಯಿಂದ 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸಿರುತ್ತದೆ.

## ೪೫. ಸಿದ್ಧಗಂಗಯ್ಯ ಬಿ. ಕಂಬಾಳು

ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಶಿವಗಂಗೆ ಬೆಟ್ಟದ ತಪ್ಪಲಿನಲ್ಲಿರುವ ಕಂಬಾಳು ಗ್ರಾಮದ ವಿಶಿಷ್ಟ ಪ್ರತಿಭೆ ಶ್ರೀ ಸಿದ್ದಗಂಗಯ್ಯ ಬಿ ಕಂಬಾಳು ಅವರು. ಜಾನಪದ ಸಂಗ್ರಾಹಕರಾಗಿ, ಸಂಶೋಧಕರಾಗಿ, ಉತ್ತಮ ನಾಟಕಕಾರರಾಗಿ ಹೆಸರಾಗಿರುವ ಸಿದ್ಧಗಂಗಯ್ಯನವರು, 'ಇಲ್ಲಿಗರು' ಎಂಬ ಬುಡಕಟ್ಟು ಜನಾಂಗವನ್ನು ಕುರಿತು ಅಧ್ಯಯನ ನಡೆಸಿದವರಲ್ಲಿ ಮೊದಲಿಗರು. ಇವರ ಅನೇಕ ಕೃತಿಗಳಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ನಾಟಕ ಅಕಾಡೆಮಿಗಳ ಪ್ರಶಸ್ತಿಗಳು ಸಂದಿವೆ. ಕರ್ನಾಟಕ ಜಾನಪದ ಪರಿಷತ್ತಿನ ವಸ್ತುಸಂಗ್ರಹ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ ಕಾರ್ಯಗಳಲ್ಲಿ ಸಕ್ರಿಯವಾಗಿ ಸಹಾಯಹಸ್ತ ನೀಡುತ್ತಿರುವ ಸಿದ್ಧಗಂಗಯ್ಯ ಬಿ. ಕಂಬಾಳು ಅವರ ಜಾಪದ ಗಾಢ ನಿಷ್ಠೆಯನ್ನು ಗೌರವಿಸುವುದರ ಕುರುಹಾಗಿ ಕರ್ನಾಟಕ ಜಾನಪದ ಪರಿಷತ್ತು 'ವಿಶೇಷ ಪುರಸ್ಕಾರ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

ಪರಿಚಯ : **ಡಾ. ಚಕ್ಕೆರೆ ಶಿವಶಂಕರ್**

# ಪ್ರಶಸ್ತಿ ಪುರಸ್ಕೃತರು – ೨೦೦೨

[ತಾ|| ೧೦-೨-೨೦೦೨ ರಂದು ಸಂಜೆ ಜಾನಪದ ಲೋಕದ ರಮ್ಯ ಪರಿಸರದಲ್ಲಿ ಭವ್ಯ ಬಯಲು ರಂಗಮಂದಿರದಲ್ಲಿ ೨೦೦೨ರ ಸಾಲಿನ ಎಲ್ಲಾ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಅನಾರೋಗ್ಯದಿಂದಾಗಿ ಕೆಲದಿನಗಳ ಕಾಲ ಆಸ್ಪತ್ರೆಯಲ್ಲಿದ್ದ ನಮ್ಮ ಪ್ರೀತಿಯ ಅಧ್ಯಕ್ಷರು ಜನಪದ ಕಲಾವಿದರ ಬಗೆಗಿನ ಅನನ್ಯ ಕಾಳಜಿಯಿಂದಾಗಿ, ವಿಶ್ರಾಂತಿಯಲ್ಲಿರಬೇಕೆಂಬ ವೈದ್ಯರ ಕಡ್ಡಾಯ ಆದೇಶವನ್ನು ಬದಿಗಿರಿಸಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಶಸ್ತಿ ಪುರಸ್ಕೃತರಾದ ಪ್ರತಿಯೊಬ್ಬ ಕಲಾವಿದರಿಗೂ ಪ್ರಶಸ್ತಿ ಫಲಕ ಮತ್ತು ಒಂದು ಸಾವಿರ ರೂ. ನಗದು ಹಣದೊಂದಿಗೆ ಗಂಡಸರಿಗೆ ಶಾಲು, ಹೆಂಗಸರಿಗೆ ಸೀರೆ ಮತ್ತು ಕಣಗಳನ್ನು ನೀಡಲಾಯಿತು. ೨೦೦೨ರ ಸಾಲಿನಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಪ್ರಶಸ್ತಿ ಪುರಸ್ಕೃತರ ವಿವರಗಳು ಕೆಳಕಂಡಂತಿವೆ.]

## ೪೬. ಕಾಡುಸೂರು ಮುದಿಗೆರೆ ಗಿರಿಯಮ್ಮ

ತುರುವೇಕೆರೆ ತಾಲ್ಲೂಕು, ಕಾಡಸೂರು ಮುದಿಗೆರೆಯ ಆದಿಜಾಂಬವ ಜನಾಂಗಕ್ಕೆ ಸೇರಿದ ಸುಮಾರು ೬೫ ರ ಹರೆಯದ ಶ್ರೀಮತಿ ಗಿರಿಯಮ್ಮನವರು ಜನಪದ ಗೀತ ಸಾಹಿತ್ಯವನ್ನು ತಮ್ಮ ಎದೆಯಾಳದಲ್ಲಿ ಬತ್ತದನಿಧಿಯಾಗಿ ಕಾಯ್ದುಕೊಂಡು ಬಂದಿರುವ ಅಭಿಜಾತ ಕಲಾವಿದೆ. ಅಕ್ಷರ ಜ್ಞಾನದಿಂದ ವಂಚಿತರಾದ ಗಿರಿಯಮ್ಮನವರು ತಮ್ಮ ೧೨ನೆಯ ವಯಸ್ಸಿನಿಂದಲೇ ಮನೆಗೆಲಸ, ಹೊಲಗೆಲಸಗಳೊಂದಿಗೆ ಜನಪದ ಹಾಡುಗಳನ್ನು ಮೈಗೂಡಿಸಿಕೊಂಡವರು. ತಮ್ಮ ತಾಯಿ ತಿಮ್ಮಮ್ಮನರೊಂದಿಗೆ ಕೂಲಿ ನಾಲಿಗೆ ಹೋಗುತ್ತಿದ್ದ ಗಿರಿಯಮ್ಮ ನಾಟಿ ಮಾಡುವಾಗ, ಕಳೆ ಕೀಳುವಾಗ, ರಾಗಿ ಬೀಸುವಾಗ, ಕೇರುವಾಗ, ಕುಟ್ಟುವಾಗ ತನ್ನ ಅವ್ವನ ಸೊಲ್ಲಿಗೆ ದನಿಗೂಡಿಸುತ್ತಾ ಅವರ ಹಾಡುಗಳನ್ನು ಕೇಳಕೇಳುತ್ತಲೇ ತಮ್ಮ ನೆನಪಿನ ಕೋಶದೊಳಕ್ಕೆ ಒಂದೊಂದಾಗಿ ಸೇರಿಕೊಂಡು, 'ಸಾವಿರ ಪದವ ಒಂಟೆ ಮ್ಯಾಲೆ ಹೇರಿಕೊಂಡು ಬಂದ' ಹಾಡಿನ ಕಣಜವಾಗಿ ಪರಿಣಮಿಸಿದರು.

ಗಿರಿಯಮ್ಮನವರು ತಮ್ಮ ಎದೆಯ ಗೂಡಿನಲ್ಲಿ ಹಚ್ಚಿಟ್ಟಿರುವ ಜಾನಪದ ಸರಸ್ವತಿಯು ಜ್ವಾಜ್ವಲ್ಯಮಾನಳು. ಮುಗ್ಧತೆ, ಸರಳತೆ, ಗೇಯತೆ, ಭಾವತೀವ್ರತೆಗಳು ಇವರ ಹಾಡಿನ ಜೀವದ್ರವ್ಯಗಳು. ದೇವರ ಸೇವೆ ಪದಗಳು, ಕಗ್ಗದ ಪದಗಳು, ನಕಲಿ ಪದಗಳು, ಸೋಬಾನೆ ಪದಗಳು, ಧರ್ಮದ ಪದಗಳು, ಜೋಗುಳ ಪದಗಳು, ಕಥನ ಗೀತೆಗಳು ಹೀಗೆ ಗಿರಿಯಮ್ಮನವರ ಸಾಹಿತ್ಯ ಪರಂಪರೆ ಸಮೃದ್ಧವಾದುದಾಗಿದೆ. ಗಿರಿಯಮ್ಮನವರ ಎಲ್ಲಾ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೮೩ ರಲ್ಲಿಯೇ ಧ್ವನಿಮುದ್ರಿಸಿಕೊಂಡಿದ್ದಾರೆ. ಕಳೆದ ಹತ್ತಾರು ವರ್ಷಗಳಿಂದಲೂ ಬೆಂಗಳೂರು ಆಕಾಶವಾಣಿಯಲ್ಲಿ ಜನಪದ ಗೀತೆಗಳನ್ನು ಹಾಡುತ್ತಾ ಬಂದಿರುವ ಗಿರಿಯಮ್ಮನವರು ಪ್ರತೀ ವರ್ಷ ಆದಿಚುಂಚನಗಿರಿಯಲ್ಲಿ ನಡೆಯುವ ಜನಪದ ಗೀತಗಾಯನ ಮೇಳಕ್ಕೆ ಹಾಜರಾಗಿ ಶ್ರೀ ಭೈರವೇಶ್ವನಿಗೆ ತಮ್ಮ ಗಾಯನ ಸೇವೆಯನ್ನು ನಿವೇದಿಸಿ ಬರುವುದು ರೂಢಿ. ತಮ್ಮ ಬಾಳಿನ ಉದ್ದಕ್ಕೂ ಪದ ಮತ್ತು ಬದುಕು ಎರಡನ್ನೂ ಒಂದಕ್ಕೊಂದು

ಪೂರಕವಾಗಿಸಿಕೊಂಡೇ ಬಂದಿರುವ ಗಿರಿಯಮ್ಮನವರಂತಹ ಮುಗ್ಧ ಪ್ರತಿಭಾವಂತ, ಅಪರೂಪದ ಹಾಡುಗಾರ್ತಿಗೆ 'ಸೋಬಾನೆ ಚಿಕ್ಕಮ್ಮ ಪ್ರಶಸ್ತಿ'ಯನ್ನು ತಾ॥ ೧೦-೦೨-೨೦೦೨ ರಂದು ನೀಡಿ ಗೌರವಿಸಿರುತ್ತದೆ.

## ೪೭. ಚೌಡಿಕೆ ಗೋವಿಂದಪ್ಪ

ನಿಸರ್ಗ ಸೌಂದರ್ಯದ ನೆಲೆವೀಡಾದ ಮಲೆನಾಡಿಗೆ ಸೇರಿದ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಹಿರೇನಲ್ಲೂರು ಗ್ರಾಮದ ಸುಮಾರು ಎಂಬತ್ತೆರಡರ ಹರೆಯದ ಚೌಡಿಕೆ ಗೋವಿಂದಪ್ಪನವರು ಹುಟ್ಟಿದ್ದು ಬಲೆ ಬೀಸಿ ಮೀನು ಹಿಡಿದು ಬದುಕುವ ಬೆಸ್ತರ ಜನಾಂಗದಲ್ಲಿ. ಆದರೆ ಕಲಿತದ್ದು ಅಸಂಖ್ಯಾತ ಕೇಳುಗರನ್ನು ಮಾತು ಮತ್ತು ಹಾಡಿನ ಮೂಲಕ ಮರುಳು ಬಲೆ ಬೀಸಿ ಮೋಡಿಮಾಡುವ ಚೌಡಿಕೆ ಕಲೆಯನ್ನು. ತಮ್ಮ ಚಿಕ್ಕಪ್ಪನವರಾದ ತಿಮ್ಮಪ್ಪ, ಅಂಧ ಕಲಾವಿದ ದಮಡಿ ಗೋವಿಂದಪ್ಪ, ಭಂಡಾರಿ ಮರುಳಪ್ಪ, ಹೆಚ್. ಆರ್. ತಿಮ್ಮಪ್ಪ ಇವರೇ ಮೊದಲಾದ ಎಲ್ಲರೊಳಗೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೇ ಆದವರು ಗೋವಿಂದಪ್ಪ. 'ಮುದ್ದಿ, ನಿದ್ದಿ, ಸುದ್ದಿ, ಪ್ರಸಿದ್ಧಿ ಇವು ಯಾರಿಗೆ ಬ್ಯಾಡ ಸ್ವಾಮಿ' ಎಂದು ಹುಸಿನಗುತ್ತಾ ಕೆಣಕುವ ಗೋವಿಂದಪ್ಪನವರು ಅಪ್ರತಿಮ ಮಾತುಗಾರರು. ಶಿವನಿಯಿಂದ ಶಿವಮೊಗ್ಗದವರೆಗೆ, ಹಿರೇನಲ್ಲೂರಿನಿಂದ ಹೈದ್ರಾಬಾದ್‌ನವರೆಗೆ ತಮ್ಮ ಕಲೆಯ ಅಸಂಖ್ಯಾತ ಪ್ರದರ್ಶನಗಳನ್ನು ನೀಡಿರುವ ನಿಷ್ಣಾತ ಕಲಾವಿದರು. ಹಾಡಿನ ನಂತರದ ನಿರೂಪಣೆಯಲ್ಲಿ ಇವರ ಕಥನ ಕಲೆಯ ವೈಶಿಷ್ಟ್ಯ ಅಡಗಿದೆ. ನವುರಾದ ಹಾಸ್ಯ, ನಕಲಿ ಮಾತುಕಥೆಗಳಿಂದಾಗಿ ಜನಮನವನ್ನು ಗೆದ್ದಿರುವ ಶ್ರೀಯುತರು, ಗಂಭೀರ ಕಥೆಗಳೊಂದಿಗೆ ಹಾಸ್ಯದ ಸರಕನ್ನು ಉಲ್ಲಾಸಕರವಾಗಿ ಬಿಚ್ಚಿಡುವ, ಹಾವಭಾವ ವಿನ್ಯಾಸಗಳಲ್ಲಿ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಮಾಡುವಲ್ಲಿ ಇವರ ಚೌಡಿಕೆ ಮೇಳ ಅಪೂರ್ವವಾದುದೆನಿಸಿಕೊಂಡಿದೆ.

ಜನಸಮುದಾಯಕ್ಕೆ ಜನಪದ ಸಾಹಿತ್ಯದ ಸವಿಯನ್ನು ಉಣಿಸುವುದರ ಜೊತೆಗೆ ಶುದ್ಧ ಮನರಂಜನೆಯನ್ನು ನೀಡುತ್ತಿದ್ದಾರಲ್ಲದೆ, ತಮ್ಮ ಅನೇಕ ಕಥೆಗಳನ್ನು ಸರ್ಕಾರದ ಕುಟುಂಬ ಯೋಜನಾ ಪ್ರಚಾರದಂತಹ ಜನಪರ ಕಾರ್ಯಕ್ರಮಗಳಿಗೆ ಪರಿಣಾಮಕಾರಿಯಾದ ಮಾಧ್ಯಮವಾಗಿ ಒದಗಿಸುತ್ತಿರುವುದು ಗೋವಿಂದಪ್ಪನವರ ಕಲಾನೈಪುಣ್ಯಕ್ಕೆ ಅತ್ಯುತ್ತಮ ನಿದರ್ಶನವಾಗಿದೆ. ಶ್ರೀಯುತರು ಚೌಡಿಕೆ ಕಲೆಯ ಪ್ರಸಾರಕರಷ್ಟೇ ಆಗಿರದೆ ತಮ್ಮ ಮೊಮ್ಮಕ್ಕಳಿಗೆ ಮತ್ತು ಅನೇಕ ಶಿಷ್ಯರಿಗೆ ಈ ಕಲೆಯನ್ನು ಕಲಿಸುವ ಮೂಲಕ ಚೌಡಿಕೆ ಪರಂಪರೆಯ ವಾಹಕರಾಗಿಯೂ ಕಂಗೊಳಿಸುತ್ತಾರೆ. ಗೋವಿಂದಪ್ಪನವರಿಗೆ ನಾಡಿನಾದ್ಯಂತ ಹತ್ತು ಹಲವು ಪ್ರಶಸ್ತಿಗಳು, ಮಾನ ಸನ್ಮಾನಗಳು ಸಂದಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೧ರ ಸಾಲಿನಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ೨೦೦೧ರ ಸಾಲಿನ ಕೆ. ಆರ್. ಲಿಂಗಪ್ಪ ಜಾನಪದ ಪ್ರಶಸ್ತಿಯು ಲಭಿಸಿದೆ. 'ದೊಡ್ಡಮನೆ ಪ್ರಶಸ್ತಿ'ಯನ್ನು ತಾ॥ ೧೦-೦೨-೨೦೦೨ ರಂದು ಹಿರೇನಲ್ಲೂರು ಚೌಡಿಕೆ ಗೋವಿಂದಪ್ಪನವರಿಗೆ ನೀಡಿ ಗೌರವಿಸಿರುತ್ತದೆ.

## ೪೮. ಬಲಿಪ ನಾರಾಯಣ ಭಾಗವತರು

ಕಾಸರಗೋಡು ತಾಲ್ಲೂಕು ಪಡ್ರೆ ಗ್ರಾಮದ ಅರವತ್ತನಾಲ್ಕರ ಹರೆಯದ ಬಲಿಪ ನಾರಾಯಣ ಭಾಗವತರು ಅಚ್ಚ ಯಕ್ಷಗಾನದ ಗಾಯನವನ್ನು ಉಳಿಸಿಕೊಟ್ಟಿರುವ ತೆಂಕುತಿಟ್ಟಿನ ಏಕೈಕ ಭಾಗವತರು. ಸದ್ಯ ಯಕ್ಷಗಾನದ ಎಲ್ಲ ಅಂಶಗಳನ್ನು ಕುರಿತಾದ ಅಧಿಕೃತ ವಕ್ತಾರರು. ತಮ್ಮ ಅಜ್ಜನಿಂದ ಸಂಗೀತದ ಸ್ವರಾಭ್ಯಾಸ, ಸರಳ ವರಸೆ, ಜಂಟಿ ವರಸೆ ಸಹಿತ ಗಾನ ಹಾಡುಗಾರಿಕೆಯ ಮೂಲ ಪಾಠಗಳನ್ನು ಕಲಿತು ತನ್ನ ಹದಿಮೂರನೆಯ ವಯಸ್ಸಿನಲ್ಲಿ ಮೇಳದ ತಿರುಗಾಟ ಆರಂಭಿಸಿದ ಬಲಿಪರ ಮೊದಲ ತಿರುಗಾಟ ಮೂಲ್ಕಿ ಮೇಳದಲ್ಲಿ ಸಂಗೀತಗಾರನಾಗಿ, ಅಲ್ಲಿಂದ ಕೂಡ್ಲು ಮೇಳದಲ್ಲಿ ಭಾಗವತನಾಗಿ ಬಡ್ತಿ ಪಡೆದ ನಂತರ ಮತ್ತೆ ಹಿಂದಿರುಗಿ ನೋಡಲಿಲ್ಲ. ಕಳೆದ ಮುವತ್ತು ವರ್ಷಗಳಿಂದ ಕಟೀಲು ಮೇಳದಲ್ಲಿ ನಿರಂತರ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ನೂರಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳು ಕಂಠಸ್ಥ ಇರುವ ಬಲಿಪ ನಾರಾಯಣರು ಸಾಹಿತ್ಯ ಭಾವಸ್ಫುಟತೆಯುಳ್ಳ, ನಿಖರ ಉಚ್ಚಾರ, ಖಚಿತ ತಾಳಬದ್ಧತೆ ಮತ್ತು ಸುಭಗವಾದ ಸ್ವರ ಶುದ್ಧಿಯೊಂದಿಗೆ ಹಾಡುತ್ತಾ ಬಂದಿರುವ ಭಾಗವತರು. ಆಟವನ್ನು ಕಳೆಗಟ್ಟಿಸುವುದರಲ್ಲಿ ನಿಪುಣರು. ವೀರರಸದಲ್ಲಿ ಠೇಂಕರಿಸುವ ಇವರ ಕಂಠಕ್ಕೆ ಸರಿಗಟ್ಟುವ ಇನ್ನೊಂದು ಕಂಠ ಇತ್ತೀಚಿನ ವರ್ಷಗಳಲ್ಲಿ ಕಂಡುಬಂದಿಲ್ಲ ಎಂಬುದು ಯಕ್ಷಗಾನ ಪ್ರಿಯರ ಅಭಿಪ್ರಾಯ.

೧೯೭೦ರ ದಶಕದಿಂದೀಚೆಗೆ ತೆಂಕುತಿಟ್ಟಿನಲ್ಲಿ ನಡೆದ ಯಕ್ಷಗಾನ ಪುನರುಜ್ಜೀವನದ ಕಮ್ಮಟ, ಪ್ರಾತ್ಯಕ್ಷಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿ ಮಾಹಿತಿಯನ್ನು ದಾಖಲೆಗೆ ಒದಗಿಸಿದ ಹೆಚ್ಚುಗಾರಿಕೆ ಇವರದು. ಖಚಿತ ತಿಳುವಳಿಕೆ, ನಿಸ್ಸಂದಿಗ್ಧ ವಿವರಣೆ ಮತ್ತು ಮುಕ್ತ ಮನಸ್ಸಿನ ಪರ್ಯಾಲೋಚನೆ ಇವು ಬಲಿಪ ಭಾಗವತರನ್ನು ಯಕ್ಷಗಾನ ರಂಗದ ಅಮೂಲ್ಯ ಸಂಪನ್ಮೂಲ ವ್ಯಕ್ತಿಯನ್ನಾಗಿಸಿವೆ. ನಳಚರಿತೆ, ಭಸ್ಮಾಸುರ ಮೋಹಿನಿ, ನಾಗವಿಜಯ, ರಕ್ತರಾತ್ರಿ, ಅಶ್ವತ್ಥಾಮ ಇವೇ ಮುಂತಾದ ಮೂವತ್ತೈದಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿದ ಕವಿ ಬಲಿಪ ಭಾಗವತರು.

ದಕ್ಷಿಣ ಕನ್ನಡ ಜಿಲ್ಲೆಯ ಹತ್ತಾರು ಕಡೆ ಬಲಿಪ ನಾರಾಯಣ ಭಾಗವತರಿಗೆ ಹಲವು ಮಾನ-ಸನ್ಮಾನಗಳು ಸಂದಿವೆ. ಇದೀಗ, ಯಕ್ಷಗಾನದ ಭಾಗವತರಾಗಿ ಅರ್ಧ ಶತಮಾನ ಪೂರೈಸಿರುವ ಶ್ರೀ ಬಲಿಪ ನಾರಾಯಣ ಭಾಗವತರಿಗೆ ಕರ್ನಾಟಕ ಜಾನಪದ ಪರಿಷತ್ತು 'ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ'ಯನ್ನು ತಾ॥ ೧೦-೦೨-೨೦೦೨ ರಂದು ನೀಡಿ ಗೌರವಿಸಿರುತ್ತದೆ.

## ೪೯. ಹಚ್ಚೆ ವೆಂಕಟಮ್ಮ

ಉಣ್ಣುವಾಗ ಉಡುವಾಗ ಲೋಕವೆಲ್ಲ ನೆಂಟರು, ಸತ್ತಾಗ ಯಾರೂ ಇಲ್ಲ ಎಂಬುದು ಲೋಕೋಕ್ತಿ. ಆದರೆ ಸತ್ತಾಗಲೂ ಜತೆಗೆ ಬರವುದು ಒಂದಿದೆ. ಅದೇ ಹಚ್ಚೆ. ಮನುಷ್ಯನ ಅಂಗಾಂಗಗಳ ಮೇಲೆ ಶಾಶ್ವತವಾಗಿ ಉಳಿಯುವ ವರ್ಣರಂಜಿತ ಚಿತ್ತಾರದ ಕಲೆಯಾದ ಹಚ್ಚೆಯಲ್ಲಿ ಕೌಶಲ್ಯ ಸಾಧಿಸಿರುವ ಅಪೂರ್ವ ಕಲಾವಿದೆ. ಎಪ್ಪತ್ತೈದರ ಹರೆಯದ ಶ್ರೀಮತಿ ವೆಂಕಟಮ್ಮನವರು

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ದೇವರಹೊಸಹಳ್ಳಿ ಗ್ರಾಮದವರು. ಬಾಲ್ಯದಿಂದಲೇ ಹಚ್ಚೆಯ ಚಿತ್ತಾರಗಳೊಂದಿಗೆ ಒಡನಾಟ ಮತ್ತು ಸಖ್ಯ ಬೆಳೆಸಿಕೊಂಡ ವೆಂಕಟಮ್ಮನವರು ಹಚ್ಚೆಯೊಂದಿಗೇ ಬೆಳೆದು ಬದುಕು ಕಂಡವರು. ತಮ್ಮ ಜೀವನದ ಬಹುಭಾಗವನ್ನು ಸಹಸ್ರಾರು ಜನರ ಅಂಗಾಂಗಗಳನ್ನು ಚಿತ್ತಾರಗಳಿಂದ ಅಂದ ಚಂದಗೊಳಿಸುವುದರಲ್ಲಿ ಸವೆಸಿದವರು. ವೆಂಕಟಮ್ಮನವರ ಚಿತ್ತಾರದ ಕೌಶಲ್ಯವೂ ಸಹ ಅಮೋಘ ಮತ್ತು ಅಪರಿಮಿತವಾದುದು. ಸಣ್ಣ ಹಣಚೀಬಟ್ಟಿನಿಂದ ಮೊದಲುಗೊಂಡು ಕೃಷ್ಣನ ತೊಟ್ಟಿಲು, ಶಿವನ ಬಾಸಿಂಗ, ಮುತ್ತಿನ ಆರತಿ, ಮುತ್ತೈದೆ ಜಡೆ, ಪಗಡೆಕಾಯಿ, ಗೌರಿಗದ್ದಿಗೆ, ಗಂಡಭೇರುಂಡ, ಬಾಳೆಗೊನೆ, ಪಾರಿವಾಳ, ಗಿಳಿ ಹೀಗೆ ವೆಂಕಟಮ್ಮನವರ ಚಿತ್ತಾರಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಹಚ್ಚೆ ಹುಯ್ಯುವುದರ ಜೊತೆಗೆ ಅತ್ಯಂತ ಸುಶ್ರಾವ್ಯವಾಗಿ, ಲಯಬದ್ಧವಾಗಿ ಸಮೃದ್ಧ ಪಚ್ಚೆಪದಗಳನ್ನು ಸಹ ವೆಂಕಟಮ್ಮನವರು ಹಾಡುತ್ತಾರೆ. ಹಚ್ಚೆ ಹಾಕಿಸಿಕೊಳ್ಳುವವರಿಗೆ ಹಚ್ಚೆ ಮುಳ್ಳಿನ ನೋವು ಎಳ್ಳಷ್ಟು ಕಾಣದಂತೆ ಮರೆಸಿಬಿಡುವ ಮೋಹಕತೆ ಇವರ ಹಾಡುಗಳಲ್ಲಿದೆ. ಇಂತಹ ಅಪರೂಪದ ಅಲೆಮಾರಿ ಕಲಾವಿದೆಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೦೨-೨೦೦೨ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೫೦. ಬರಗೂರು ನಿಂಗಮ್ಮ

ಚಿತ್ರದುರ್ಗ ಜಿಲ್ಲೆ ಶಿರಾ ತಾಲ್ಲೂಕು ಬರಗೂರಿನ ಆದಿಜಾಂಬವ ಜನಾಂಗಕ್ಕೆ ಸೇರಿ ಸುಮಾರು ನಲವತ್ತೈದರ ಹರಯದ ಶ್ರೀಮತಿ ನಿಂಗಮ್ಮ ಆರ್ಥಿಕ ಅನುಕೂಲತೆ ಇಲ್ಲದೆ ಕೂಲಿ-ನಾಲಿ ಮಾಡಿಕೊಂಡು ಪದ ಕಲಿತ ಹೆಣ್ಣುಮಗಳು. ಅನಕ್ಷರಸ್ಥೆಯಾದ ಈಕೆಯ ನೆನಪಿನ ಕೋಶದಲ್ಲಿ ನೂರಾರು ಹಾಡುಗಳು ನೆಲೆಯಾಗಿವೆ. ಸುತ್ತೇಳು ಹಳ್ಳಿಯ ದೇವರ ಜಾತ್ರೆಗಳಲ್ಲಿ, ಒಸಗೆ ಮದುವೆ ಮುಂಜಿ ಮುಂತಾದ ಶುಭಕಾರ್ಯಗಳಲ್ಲಿ ನಿಂಗಮ್ಮನ ಹಡುಗಾರಿಕೆ ಇರಲೇಬೇಕು. ಸುಶ್ರಾವ್ಯವಾದ ಕಂಠವನ್ನುಳ್ಳ ನಿಂಗಮ್ಮ ಲಯಬದ್ಧವಾಗಿ ಹಾಡುವ ಸಾಮರ್ಥ್ಯವುಳ್ಳವರಾಗಿದ್ದಾರೆ. ಇವರ ಹಾಡುಗಾರಿಕೆ ವೈವಿಧ್ಯಮಯವಾದುದು. ಜಾಂಬಯ್ಯ, ನರಸಿಂಹಸ್ವಾಮಿ, ಕರಿಯಣ್ಣ, ಈರಣ್ಣ, ಜುಂಜಪ್ಪ, ಹನುಮಂತರಾಯ, ಮೈಲಾರಲಿಂಗ, ಈರಗ್ಯಾಟಪ್ಪ ಮೊದಲಾದ ದೇವರುಗಳ ಮೇಲೆ ಅಸಂಖ್ಯಾತ ತ್ರಿಪದಿಗಳನ್ನು ಹಾಡುವ ನಿಂಗಮ್ಮ ತವರಿನ ಪದಗಳು, ಸೋಬಾನೆ ಪದಗಳು, ತಮಾಷೆ ಪದಗಳನ್ನು; ಧರಣಿಯಮ್ಮ, ಗುಣಸಾಗರಿ, ಸೀತೆ ಸತ್ವಪರೀಕ್ಷೆ ಮುಂತಾದ ಕಥನಕಾವ್ಯಗಳನ್ನು ಹಾಡುತ್ತಾರೆ. ನಿಂಗಮ್ಮನವರ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೮೩ ರಷ್ಟು ಹಿಂದೆಯೇ ಧ್ವನಿಮುದ್ರಿಸಿ ಕೊಂಡಿರುತ್ತಾರೆ. ಅಜ್ಞಾತ ಹಾಡಗಾರ್ತಿಯಾದ ನಿಂಗಮ್ಮನಿಗೆ ವರ್ಷಕ್ಕೊಮ್ಮೆ ಆದಿಚುಂಚನಗಿರಿಯಲ್ಲಿ ನಡೆಯುವ ಶ್ರೀ ಭೈರವೇಶ್ವರ ಜನಪದ ಗೀತಗಾಯನ ಮೇಳಕ್ಕೆ ಹಾಜರಾಗುವುದನ್ನು ಬಿಟ್ಟರೆ ಮತ್ತಾವ ಸಭೆ ಸಮಾರಂಭಗಳ ಅರಿವಿಲ್ಲ. ಇದೀಗ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೦೨-೨೦೦೨ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ

## ೫೧. ಫಕೀರಪ್ಪ ಗೌರಕ್ಕನವರ

ಜನಪದ ರಂಗಭೂಮಿಯ ಕಲಪ್ರಕಾರವಾದ ದೊಡ್ಡಾಟವು ಬಿಜಾಪುರದ ಗೋಲ್‌ಗುಂಬಜ್, ಶ್ರವಣಬೆಳಗೊಳದ ಗೊಮ್ಮಟೇಶ್ವರನಷ್ಟೇ ಭವ್ಯವಾದುದು. ದೊಡ್ಡಾಟದ ತವರೂರದ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕಲಕೇರಿ ಗ್ರಾಮದ ಶ್ರಿ ಫಕೀರಪ್ಪ ಗೌರಕ್ಕನವರ ಅವರು ದೊಡ್ಡಾಟದ ನಿಷ್ಣಾತ ಕಥೆಗಾರರು. ದೊಡ್ಡಾಟದ ಯಶಸ್ಸು ವಾಸ್ತವವಾಗಿ ಕಥೆಗಾರನೆಂದು ಕರೆಯಲಾಗುವ ಭಾಗವತನ ಕೌಶಲ್ಯ ಮತ್ತು ಪರಿಣತಿಗಳನ್ನು ಅವಲಂಬಿಸಿರುತ್ತದೆ. ಬಾಲ್ಯದಿಂದಲೇ ದೊಡ್ಡಾಟವನ್ನು ನೋಡುವ ಮತ್ತು ಆಡುವ ಹುಚ್ಚನ್ನು ಹತ್ತಿಸಿಕೊಂಡ ಫಕೀರಪ್ಪನವರನ್ನು ರಂಗದ ಮೇಲೆ ತಂದವರು ಅವರದೇ ಊರಿನ ಕಥೆಗಾರರಾದ ರುದ್ರಪ್ಪ ಹಳ್ಳೂರ ಅವರು. ಸುಮಾರು ಅರವತ್ತರ ಹರೆಯದ ಫಕೀರಪ್ಪನವರು ದೊಡ್ಡಾಟದ ಯಾವುದೇ ಕಥೆಯನ್ನಾದರೂ ಸರಿಯೆ ಅತ್ಯಂತ ಸರಾಗವಾಗಿ ಹಾಡಬಲ್ಲವರು. ಇವರ ಕಂಠದ ತಾಕತ್ತು ಬಲುದೊಡ್ಡದು. ಹಾಡಿದರೆ ಹರಿದಾರಿ ಕೇಳಬೇಕು. ಇಲ್ಲದಿದ್ದರೆ ಅದು ಹಾಡುಗಾರಿಕೆಯೇ ಅಲ್ಲ ಎಂಬುದು ಫಕೀರಪ್ಪನವರ ನಿಲುವು. ದೊಡ್ಡಾಟದ ಕಥಾ ಪ್ರಸಂಗಗಳನ್ನು ಕಲಿಸುವುದರಲ್ಲಿ, ಹಾಡುವುದರಲ್ಲಿ ಸ್ವತಃ ಅಟ್ಟಹತ್ತಿ ಕುಣಿಯುವುದರಲ್ಲಿ ಅಪಾರವಾದ ಅನುಭವವನ್ನು ಹೊಂದಿದ್ದಾರೆ. ಸಮಷ್ಟಿ ಕಲೆಯಾದ ದೊಡ್ಡಾಟ ಪ್ರಕಾರದಲ್ಲಿ ಎಲೆಮರೆಯ ಕಾಯಿಯಂತಿದ್ದ ಶ್ರೀಯುತರನ್ನು ಕರ್ನಾಟಕ ಜಾನಪದ ಪರಿಷತ್ತು ಗುರುತಿಸಿ, ತಾ॥ ೧೦-೦೨-೨೦೦೨ ರಂದು ಜಾನಪದ ಲೋಕ ಪ್ರಶಸ್ತಿಯನ್ನು ನೀಡಿ ಗೌರವಿಸಿರುತ್ತದೆ.

## ೫೨. ಸೋಬಾನೆ ಕೃಷ್ಣೇಗೌಡ

ತಿಳಿಯಾದ ಹಾಸ್ಯ, ಲೇವಡಿ, ಲಘು ಮನರಂಜನೆಗಳಿಂದ ಕೂಡಿದ ಸೋಬಾನೆ ಪದಗಳು ಗ್ರಾಮೀಣ ಗರತಿಯರ ಸ್ವಂತ ಆಸ್ತಿ. ಹೆಂಗಸರ ಈ ಆಸ್ತಿಯನ್ನು ಕದ್ದು ಅದರಲ್ಲಿ ಸಿದ್ಧಿಯನ್ನು ಸಾಧಿಸಿ ತಮ್ಮದನ್ನಾಗಿಸಿಕೊಂಡುದಲ್ಲದೆ ತಮ್ಮದೇ ಆದ ವಿಶಿಷ್ಟ ಛಾಪನ್ನು ಒತ್ತಿದವರು ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಲಕ್ಷ್ಮೀಸಾಗರ ಗ್ರಾಮದ ಶ್ರೀ ಕೃಷ್ಣೇಗೌಡರು. ಅರವತ್ತೆಂಟರ ಹರೆಯದ ಕೃಷ್ಣೇಗೌಡರಿಗೆ ಸೋಬಾನೆ ಪದಗಳ ಗುರು ಅವರ ತಾಯಿ ಮಂಗಮ್ಮ ಮತ್ತು ಅಕ್ಕ ಕಲ್ಯಾಣಮ್ಮನವರು. ಹಾಡಿನ ಕಣಜ ಎನಿಸಿಕೊಂಡಿದ್ದ ತಾಯಿ ಮಂಗಮ್ಮನವರು ತಮ್ಮಲ್ಲಿದ್ದ ಬೀಸುವ ಪದಗಳು, ಸೋಬಾನೆ ಪದಗಳು, ದೂರೀ ಪದಗಳು, ಲಾಲಿ ಪದಗಳು, ಬೀಗರ ಪದಗಳು, ತಿಂಗಳ ಮಾವನ ಪದಗಳು, ಧರ್ಮರ ಪದಗಳು, ಮದುವೆ ಶಾಸ್ತ್ರದ ಪದಗಳೆಲ್ಲವನ್ನು ಮಗನಿಗೆ ಧಾರೆ ಎರೆದರು.

ಸೋಬಾನೆ ಪದಗಳನ್ನು ಕಲಿಯುತ್ತಿದ್ದ ಕೃಷ್ಣೇಗೌಡರನ್ನು ಗಂಡಸ್‌ಗ್ಯಾಕೆ ಸೋಬಾನ ಎಂದು ಜತೆಯಲ್ಲಿ ಹಾಡುವ ಹೆಂಗಸರು ಮೂತಿ ತಿವಿದದ್ದುಂಟು. ಆದರೆ ಛಲ ಬಿಡದ ತ್ರಿವಿಕ್ರಮನಂತೆ ಸೋಬಾನೆ ಪದಗಳಿಗೆ ಗಂಟುಬಿದ್ದ ಕೃಷ್ಣೇಗೌಡರು ಮುಂದೆ ಸೋಬಾನ ಕೃಷ್ಣೇಗೌಡ ಎಂದೇ ಜನಪ್ರಿಯರಾದರು. ಕೃಷ್ಣೇಗೌಡರ ಮತ್ತೊಂದು ವಿಶಿಷ್ಟವಾದ ಕೊಡುಗೆ ಕೊರವಂಜಿ ಕೋಲಾಟ. ಶ್ರೀಯುತರು ನಾಡಿನಾದ್ಯಂತ ತಮ್ಮ ಸೋಬಾನೆ ಹಾಡುಗಾರಿಕೆ

ಮತ್ತು ಕೊರವಂಜಿ ಕೋಲಾಟ ಪ್ರದರ್ಶನಗಳನ್ನು ನೀಡಿ ಸೈ ಎನಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಷ್ಟೇ ಅಲ್ಲದೆ, ಭಾರತದ ಹೆಹಲಿ, ಮುಂಬಯಿ, ಮಧ್ಯಪ್ರದೇಶ, ಆಂಧ್ರಪ್ರದೇಶ, ಮದ್ರಾಸ್, ಗೋವಾ, ಪಾಂಡಿಚೆರಿ ಮುಂತಾದ ಬೇರೆ ಬೇರೆ ರಾಜ್ಯಗಳಲ್ಲೂ, ೧೯೯೮ ರಲ್ಲಿ ಅಮೆರಿಕಾ ಪ್ರವಾಸ ಕೈಗೊಂಡು ಅರಿಜೋನಾ, ನ್ಯೂಯಾರ್ಕ್, ವಾಷಿಂಗ್‌ಟನ್, ಸ್ಯಾನ್‌ಫ್ರಾನ್ಸಿಸ್ಕೊ, ಫ್ಲಾರಡಾ, ಡೆಟ್ರಾಯಿಟ್ ಮುಂತಾದ ಕಡೆಗಳಲ್ಲೂ ಸೋಬಾನೆ ಪದಗಳನ್ನು ಹಾಡಿ ಜನಪ್ರಿಯರಾಗಿದ್ದಾರೆ. ೧೯೯೭ ರಿಂದ ೨೦೦೧ರ ವರೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವ ಕೃಷ್ಣೇಗೌಡರಿಗೆ ನಾಡಿನಾದ್ಯಂತ ಹಲವಾರು ಪ್ರಶಸ್ತಿಗಳು, ಮಾನ-ಸನ್ಮಾನಗಳು ಸಂದಿವೆ. ೧೯೭೯ ರಲ್ಲಿ ಮೈಸೂರು ಮಹಾರಾಜರ ಪುರಸ್ಕಾರ, ೧೯೯೪ರ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಲಭಿಸಿವೆ. ಜನಪದ ಕಲಾವಿದರ ಸಂಘಟನಾಕಾರರು, ಜನಪದ ಕಲೆಗಳ ಪ್ರವರ್ತಕರೂ ಆಗಿರುವ ಸೋಬಾನೆ ಕೃಷ್ಣೇಗೌಡರಿಗೆ ತಾ|| ೧೦-೦೨-೨೦೦೨ ರಂದು ಜಾನಪದ ಲೋಕ ಪ್ರಶಸ್ತಿಯನ್ನು ನೀಡಿ ಗೌರವಿಸಿರುತ್ತದೆ.

## ೫೩. ತಳಗವಾದಿ ಚೀರಕುಣಯ್ಯ

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ತಳಗವಾದಿಯು ಹತ್ತು ಹಲವು ಜನಪದ ಕಲೆಗಳಿಗೆ ಹೆಸರುವಾಸಿಯಾದ ಊರು. ಬಯಲುಸೀಮೆಯ ವಿಶಿಷ್ಟ ಜನಪದ ಕಲಾಪ್ರಕಾರವಾದ ಪೂಜಾ ಕುಣಿತದ ಶ್ರೀ ಚೀರಕುಣಯ್ಯನವರು ಸದರೀ ಗ್ರಾಮಕ್ಕೆ ಸೇರಿದ ಗಮನಾರ್ಹ ಪ್ರತಿಭಾವಂತ ಕಲಾವಿದ. ಸಾಕಷ್ಟು ಭಾರವಿರುವ ಮರೆದೇವರ ಪೂಜೆಯನ್ನು ತಲೆಯ ಮೇಲೆ ಹೊತ್ತು ಬಾಗುತ್ತಾ, ಬಳಕುತ್ತಾ, ಗಿರಗಿರನೆ ಓಲಾಡಿಸುತ್ತಾ ನಾನಾ ವಿಧ ಗತ್ತುಗಳಲ್ಲಿ ಕುಣಿಯುವುದನ್ನು ಕಾಣುವುದು ಕಣ್ಣುಗಳಿಗೆ ಹಬ್ಬ. ಮಗುಚಿ ಹಾಕಿದ ಮಡಿಕೆಗಳ ಮೇಲೆ ನಡೆಯುವುದರೊಂದಿಗೆ, ಭಾರದ ಪೂಜೆಯನ್ನು ಹೊತ್ತು ಏಣಿಯ ಮೇಲೆ ಹತ್ತಿ ನಾನಾ ರೀತಿಯ ಭಾವಭಂಗಿಗಳಲ್ಲಿ ಕುಣಿಯುವುದು ಸಾಮಾನ್ಯರಿಗೆ ನಿಲುಕದ ಮಾತು. ಅರವತ್ತರ ಹರೆಯದ ಚೀರಕುಣಿಯವರೊಬ್ಬರಿಗೆ ಮಾತ್ರವೇ ಇದು ಸಾಧ್ಯವಾಗುವಂಥದ್ದು. ತಮ್ಮ ಕಲೆಯ ಬಗ್ಗೆ ಅಪಾರವಾದ ಅಭಿಮಾನವನ್ನಿರಿಸಿಕೊಂಡಿರುವ ಶ್ರೀಯುತರು ಈ ಕಲೆಯು ತಮ್ಮೊಂದಿಗೇ ಮುಗಿದುಹೋಗಬಾರದೆಂಬ ಆಶಯದಿಂದ ಅಪ್ಪಟ ಪುರಷಪ್ರಧಾನ ಕಲೆಯಾದ ಪೂಜಾಕುಣಿತವನ್ನು ತಮ್ಮ ಮಗಳಿಗೆ ಕಲಿಸುವುದರ ಮೂಲಕ ಹೊಸ ಸಾಧ್ಯತೆಗೆ ನಾಂದಿ ಹಾಡಿದ್ದಾರೆ. ಶ್ರೀಯುತರ ಅನುಪಮ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರಿನ ಶ್ರೀ ಎಂ. ಕೃಷ್ಣಪ್ಪನವರು ತಮ್ಮ ತಂದೆ ಮುನಿಸ್ವಾಮಪ್ಪ ಮತ್ತು ತಾಯಿ ರಂಗಮ್ಮನವರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ ತಾ|| ೧೦-೦೨-೨೦೦೨ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೫೪. ಗಣಪತಿ ಹಣಮಂತ ಕಟಬ

ತೊಗಲುಗೊಂಬೆಯಾಟವು ಕನ್ನಡ ನಾಡಿನ ಅತ್ಯಂತ ಪ್ರಾಚೀನ ಹಾಗೂ ವರ್ಣರಂಜಿತ ಕಲೆ. ರಂಗಭೂಮಿ ಮತ್ತು ಸಿನಿಮಾಗಳೆರಡಕ್ಕೂ ಮಾತೃಪ್ರಾಯವಾಗಿರುವ ತೊಗಲುಗೊಂಬೆಯಾಟವು ಪರದೆಯ ಹಿಂದೆ ಪ್ರದರ್ಶನಗೊಳ್ಳುವ ಮನಮೋಹಕ ಕಲೆ. ಇತ್ತೀಚೆಗೆ ನಶಿಸುತ್ತಿರುವ ಈ ಕಲೆಯನ್ನು ಕರ್ನಾಟಕದಲ್ಲಿ ಶತಶತಮಾನಗಳಿಂದಲೂ ಎದೆಯ ಗೂಡಿನೊಳಗಿನ ಜೀವಪಕ್ಷಿಯಂತೆ ಕಾಪಾಡಿಕೊಂಡು ಬಂದವರು. ಕಿಳ್ಳೇಕ್ಯಾತ ಜನಾಂಗಕ್ಕೆ ಸೇರಿದ ತಳ ಸಂಸ್ಕೃತಿಯ ಜನರು. ಗೊಂಬೆರಾಮರು, ಚಕ್ಕಳದ ಗೊಂಬೆಯವರು ಎಂದೆಲ್ಲಾ ಕರೆಸಿಕೊಳ್ಳುವ ಇವರನ್ನು ಕರ್ನಾಟಕದ ಉತ್ತರ ಭಾಗದಲ್ಲಿ ಕಟಬರು ಎಂದು ಕರೆಯುತ್ತಾರೆ.

ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಶಿರಸ್ಯಾಡ ಗ್ರಾಮದ ಸುಮಾರು ಎಪ್ಪತ್ತೈದರ ಹರೆಯದ ಶ್ರೀ ಗಣಪತಿ ಹಣಮಂತ ಕಟಬರ ಅವರು ಸಾಂಪ್ರದಾಯಿಕ ತೊಗಲುಗೊಂಬೆಯಾಟದ ಅತ್ಯಂತ ಹಿರಿಯ ಕಲಾವಿದರಲ್ಲಿ ಒಬ್ಬರು. ಕಳೆದ ೩೫ ವರ್ಷಗಳಿಂದಲು ನಿರ್ಜೀವ ತೊಗಲುಗೊಂಬೆಗಳಿಗೆ ರಾಗ-ರಂಗುಗಳೊಂದಿಗೆ ಜೀವ ತುಂಬುತ್ತಾ ಬಂದಿರುವ ಗಣಪತಿಯವರು ಈ ಕಲೆಯನ್ನು ತಮ್ಮ ಬದುಕಿನ ಸರ್ವಸ್ವ ಎಂದು ನಂಬಿದವರು. ತಮಗೇ ನಿಲ್ಲಲು ಅಂಗೈಯಗಲ ನೆಲೆ ಇಲ್ಲದಿದ್ದರೂ ಕೂಡಾ ಎರಡು ತಲೆಮಾರುಗಳಷ್ಟು ಹಳೆಯದಾದ ಗೊಂಬೆಗಳನ್ನು ತಮ್ಮ ಜೀವಕ್ಕಿಂತ ಹೆಚ್ಚಾಗಿ ಕಾಯ್ದುಕೊಂಡು ಬಂದಿದ್ದಾರೆ. ಕಟಬರ ಇಡೀ ಕುಟುಂಬವೇ ತೊಗಲುಗೊಂಬೆಯಾಟದಲ್ಲಿ ಸಾಮುದಾಯಿಕವಾಗಿ ಪಾಲ್ಗೊಳ್ಳುತ್ತದೆ. ಗೊಂಬೆಯಾಟ ಆಡಿಸುವುದರೊಂದಿಗೆ ಗೊಂಬೆಗಳನ್ನು ತಯಾರಿಸುವುದರಲ್ಲೂ ನಿಷ್ಣಾತರೆನಿಸಿರುವ ಕಟಬರಲ್ಲಿ ಕಲಾ ಶ್ರೀಮಂತಿಕೆಯಿದೆ; ವಿಪರ್ಯಾಸವೆಂದರೆ ಅವರ ಬದುಕಿನಲ್ಲಿ ದಟ್ಟದಾರಿದ್ರ್ಯ ತುಳುಕಾಡುತ್ತಿದೆ. ನಶಿಸುತ್ತಿರುವ ತಮ್ಮ ಅಪೂರ್ವ ಕಲೆಯನ್ನು ಉಳಿಸಿ ಬೆಳೆಸಬೇಕೆಂಬ ಅದಮ್ಯ ಹಂಬಲವಿದೆ. ಸರ್ಕಾರದ ಜನಪರ ಕಾರ್ಯಕ್ರಮಗಳಲ್ಲಿ ತೊಗಲು ಗೊಂಬೆಯಾಟದ ಮುಖಾಂತರ ಸಮುದಾಯದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ ಕಾರ್ಯದಲ್ಲಿ ನಿರತರಾಗಿರುವ ಶ್ರೀ ಗಣಪತಿ ಹಣಮಂತ ಕಟಬರ ಅವರು ಎಲೆಮರೆಯ ಕಾಯಿಯಂತೆ ತಮ್ಮ ಪಾಡಿಗೆ ತಾವು ಪ್ರೀತಿ, ಅಭಿಮಾನ, ಪ್ರಾಮಾಣಿಕತೆಗಳಿಂದ ತಮ್ಮ ಕಲಾ ಪ್ರದರ್ಶನವನ್ನು ಮುಂದುವರಿಸುತ್ತಾ ಬಂದಿದ್ದಾರೆ. ಇಂತಹ ಅಪರೂಪದ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರಿನ ಎಂ. ಕೃಷ್ಣಪ್ಪನವರು ತಮ್ಮ ತಂದೆ ಮುನಿಸಾಮಪ್ಪ ಮತ್ತು ತಾಯಿ ರಂಗಮ್ಮನವರ ನೆನಪಿಗಾಗಿ ನೀಡಿರುವ ದತ್ತಿ ನಿಧಿಯಿಂದ ತಾ॥ ೧೦-೦೨-೨೦೦೨ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೫೫. ಹೆಚ್. ಎಸ್. ನೀಲಕಂಠಯ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮಾಗಡಿ ತಾಲ್ಲೂಕು, ಹುಲಿಕಲ್ಲು ಗ್ರಾಮದ ಶ್ರೀ ಹೆಚ್. ಎಸ್. ನೀಲಕಂಠಯ್ಯನವರು ಕನ್ನಡ ನಾಡು ಕಂಡ ಅಪರೂಪದ ಜಾನಪದ ಕಲಾ

ಪ್ರತಿಭೆ. ಕನ್ನಡ ನಾಡಿನ ಗಂಡು ಕಲೆ ಎಂದೇ ಹೆಸರಾದ ವೀರಭದ್ರ ಕುಣಿತವನ್ನು ಅತ್ಯಂತ ಜನಪ್ರಿಯಗೊಳಿಸಿದ ಯಶಸ್ಸು ಇವರದು. ಪ್ರೌಢಶಾಲಾ ಮಟ್ಟದಲ್ಲೇ ಜನಪದ ಕಲೆಗಳ ಬಗ್ಗೆ ಅಭಿರುಚಿಯನ್ನು ಬೆಳೆಸಿಕೊಂಡ ಶ್ರೀಯುತರು ಕೊನೆಗೆ ಬಲವಾಗಿ ಅಪ್ಪಿಕೊಂಡಿದ್ದು ವೀರಭದ್ರನ ಕುಣಿತವನ್ನು. ಫಲವಾಗಿ ನಾಡಿನಾದ್ಯಂತ 'ಅಭಿನವ ವೀರಭದ್ರ'ನೆಂದೇ ಹೆಸರಾದರು. ವೀರಭದ್ರ ಕುಣಿತದ ಮೂಲ ಚೂಲಗಳನ್ನು, ಆಳ-ವಿಸ್ತಾರಗಳನ್ನು ಅರಿತವರಾಗಿರುವ ನೀಲಕಂಠಯ್ಯನವರು ಎತ್ತರದ ಗಂಭೀರ ನಿಲುವಿನ ಪುಷ್ಟ ಮೈಕಟ್ಟಿನ ವ್ಯಕ್ತಿವುಳ್ಳವರು. ವೀರಭದ್ರನ ಪಾರಂಪರಿಕ ವೇಷ-ಭೂಷಣಗಳನ್ನು ಧರಿಸಿ, ಕೈಯಲ್ಲಿ ಖಡ್ಗ ಹಿಡಿದು, ತಾಳವಾದ್ಯಗಳ ಮೇಳದ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ ವೀರರಸ ಪ್ರತಾಪದಿಂದ ಕುಣಿಯುತ್ತಾ, ಆರ್ಭಟಿಸುತ್ತಾ, ಗುಡುಗುತ್ತಾ ತಮ್ಮ ಕಂಚಿನ ಕಂಠದಿಂದ ಸುಸ್ಪಷ್ಟವಾಗಿ ಒಡಪುಗಳನ್ನು ಹೇಳಲಾರಂಭಿಸಿದರೆ ನೋಡುಗರ ಮೈ ರೋಮಾಂಚನಗೊಳಿಸುತ್ತದೆ; ಎದೆ ಪುಳಕಗೊಳ್ಳುತ್ತದೆ, ಕಣ್ಣುಗಳಿಗೆ ಹಬ್ಬವೆನಿಸುತ್ತದೆ.

ವೀರಭದ್ರನ ಕುಣಿತಕ್ಕೆ ನೂತನ ಆಯಾಮ ಮತ್ತು ಆಕರ್ಷಣೆಗಳನ್ನು ತಮ್ಮ ಕುಣಿತದ ಮೂಲಕ ತಂದುಕೊಟ್ಟಿರುವ ನೀಲಕಂಠಯ್ಯನವರು ಈ ಕಲಾ ಪರಂಪರೆಯನ್ನು ನಾಡಿನಲ್ಲಷ್ಟೇ ಅಲ್ಲ, ದೂರದ ದೆಹಲಿ, ರಾಜಸ್ತಾನ, ಒರಿಸ್ಸಾ, ವಾರಣಾಸಿ, ಮುಂಬಯಿ, ಕೇರಳ, ಆಂಧ್ರ, ತಮಿಳುನಾಡು, ಗೋವಾ, ಅಂಡಮಾನ್ ನಿಕೋಬಾರ್ ದ್ವೀಪಗಳವರೆಗೂ ಕೊಂಡೊಯ್ದಿದ್ದಾರೆ. ನಾಲ್ಕು ದಶಕಗಳಷ್ಟು ಹಿಂದೆಯೇ ವಿಶ್ವಜ್ಯೋತಿ ಶ್ರೀ ವೀರಭದ್ರೇಶ್ವರ ಜಾನಪದ ಕಲಾಸಂಘವನ್ನು ಸ್ಥಾಪಿಸಿ ತನ್ಮೂಲಕದ ಅಸಂಖ್ಯಾತ ಶಿಷ್ಯರಿಗೆ ಈ ಕಲೆಯನ್ನು ಕಲಿಸುತ್ತಾ ಬಂದಿರುವ ನೀಲಕಂಠಯ್ಯನವರಿಗೆ ನಾಡಿನಾದ್ಯಂತ ಹತ್ತು ಹಲವು ಪ್ರಶಸ್ತಿಗಳು, ಮಾನ-ಸನ್ಮಾನಗಳು, ಬಿರುದು ಬಾವಲಿಗಳು ಲಭಿಸಿವೆ. ಶ್ರೀಯುತರ ಅನುಪಮ ಕಲಾ ಸೇವೆಗಾಗಿ ಕರ್ನಾಟಕ ಸರ್ಕಾರವು ೧೯೯೨ ರಲ್ಲೇ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಜನಮನ್ನಣೆ, ರಾಜಮನ್ನಣೆ, ಗುರುಮನ್ನಣೆ ಪಡೆದಿರುವ 'ವೀರಭದ್ರ ನೃತ್ಯ ಭಾಸ್ಕರ' ಬಿರುದಾಂಕಿತರಾದ ಶ್ರೀ ಹೆಚ್. ಎಸ್. ನೀಲಕಂಠಯ್ಯನವರಿಗೆ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಜಾನಪದ ಪರಿಸತ್ತು ೧೦-೦೨-೨೦೦೨ ರಂದು 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸಿರುತ್ತದೆ.

## ೫೬. ಕಾಶೀಬಾಯಿ

ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕು ದಾದಾನಟ್ಟಿ ಗ್ರಾಮದ ಶ್ರೀಮತಿ ಕಾಶೀಬಾಯಿ ಕರ್ನಾಟಕದ ಉತ್ತರ ಭಾಗದಲ್ಲಿ 'ಸಣ್ಣಾಟಗಳ ರಾಜ'ನೆಂದೇ ಹೆಸರಾದ ಶ್ರೀ ಕೃಷ್ಣ ಪಾರಿಜಾತ ಬಯಲಾಟದ ಹೊಸ ತಲೆಮಾರಿನ ಅಭಿಜಾತ ಕಲಾವಿದೆ. ತಮ್ಮ ಎಂಟನೆಯ ವಯಸ್ಸಿನಲ್ಲಿಯೇ ಪಾರಿಜಾತ ರಂಗ ಪ್ರವೇಶ ಮಾಡಿದ ಕಾಶೀಬಾಯಿಯವರು ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿ ಪರಿಪೂರ್ಣ ಕಲಾವಿದೆಯಾಗಿ ಗುರ್ತುಗೊಂಡಿದ್ದಾರೆ. ಕೃಷ್ಣ ಪಾರಿಜಾತದ ಸುಪ್ರಸಿದ್ಧ ಕಲಾವಿದರಾದ ಕೌಜಲಗಿ ನಿಂಗಮ್ಮ, ಬರಗಿ ರಾಚಯ್ಯ, ಕೃಷ್ಣಾಜಿ ದೇಶಪಾಂಡೆಯವರ ಗರಡಿಯಲ್ಲಿ ಪಳಗಿದ ಕಾಶೀಬಾಯಿಯವರು ಪಾರಿಜಾತದಾಟಯಲ್ಲಿನ ಗೌಳಗಿತ್ತಿ, ಸತ್ಯಭಾಮೆ,

ಕೊರವಂಜಿ, ರುಕ್ಮಿಣಿ ಪಾತ್ರಗಳನ್ನಷ್ಟೇ ಅಲ್ಲದೆ ಪುರುಷ ಪಾತ್ರಗಳಾದ ಕೃಷ್ಣ, ನಾರದ ಪಾತ್ರಗಳನ್ನು ಸಹ ಅತ್ಯಂತ ಲೀಲಾಜಾಲವಾಗಿ ಅಭಿನಯಿಸಿ ಆಟಕ್ಕೆ ಕಳೆ ಕಟ್ಟುವ ಕಲೆಯನ್ನು ಸಿದ್ಧಿಸಿಕೊಂಡಿದ್ದಾರೆ. ವಿನಯ ಸೌಜನ್ಯಗಳೆರಡೂ ಮೇಳೈಸಿರುವ ಕಾಶೀಬಾಯಿಯವರ ಅನುಪಮ ಕಲಾ ಸೇವೆಯನ್ನು ಗುರುತಿಸಿ ನಾಡಿನಾದ್ಯಂತ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿದೆ. ೧೯೯೬–೯೭ರ ಸಾಲಿನ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಇವರಿಗೆ ಲಭಿಸಿದೆ. ಕರ್ನಾಟಕ ಸರ್ಕಾರವು ೧೯೯೯ ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇದೀಗ ರಾಮನಗರದ ಜನಪ್ರಿಯ ವೈದ್ಯರಾದ ಡಾ|| ಎಸ್. ಎಲ್. ತಿಮ್ಮಯ್ಯನವರು ತಮ್ಮ ಮಗಳು ಮತ್ತು ಮೊಮ್ಮಕ್ಕಳ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ೧೦–೦೨–೨೦೦೨ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೫೭. ಮೀಸೆ ಕಾಳದುರ್ಗಯ್ಯ

ಒಲೆ ಇಲ್ಲದ ಮನೆ ಇಲ್ಲ; ತಮಟೆ ಇಲ್ಲದ ಊರಿಲ್ಲ. ಮನುಷ್ಯನ ಬದುಕಿನಲ್ಲಿ ಹುಟ್ಟು ಸಾವುಗಳೆರಡಕ್ಕೂ ತಮಟೆ ಬೇಕೇಬೇಕು. ಇಂತಹ ತಮಟೆಯನ್ನು ಜನಪ್ರಿಯ ಕಲಾಪ್ರಕಾರವಾಗಿ ರೂಪಿಸಿದ ಯಶಸ್ಸು ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕು ವಿಭೂತಿಕೆರೆಯ ಸುಮಾರು ಅರವತ್ತರ ಹರೆಯದ ಶ್ರೀ ಮೀಸೆ ಕಾಳದುರ್ಗಯ್ಯನವರಿಗೆ ಸಲ್ಲುತ್ತದೆ. ಬಾಲ್ಯದಿಂದಲೇ ಚರ್ಮವಾದ್ಯವಾದ ತಮಟೆಯ ಬಡಿತದೊಂದಿಗೆ ಬೆಳೆದು ಬಂದ ಕಾಳದುರ್ಗಯ್ಯನವರು ಕಾಲಿಗೆ ಗೆಜ್ಜೆ ಕಟ್ಟಿ ಕೈಯಲ್ಲಿ ತಮಟೆ ಹಿಡಿದು ರಂಗಕ್ಕಿಳಿದರೆಂದರೆ ಪ್ರೇಕ್ಷಕರ ಹರ್ಷ ಮುಗಿಲಿಗೇರುತ್ತದೆ. ತಮಟೆ ಬಡಿತದಲ್ಲಿ ಸಾಂಪ್ರದಾಯಿಕ ವಿಧಾನದೊಂದಿಗೆ ಅನೇಕ ಬಗೆಯ ಹೊಸ ಮಾದರಿಗಳನ್ನು, ಚಮತ್ಕಾರಗಳನ್ನು ಆವಿಷ್ಕರಿಸಿರುವ ಕಾಳದುರ್ಗಯ್ಯನವರು ಗಂಟೆಗಟ್ಟಲೆ ದಣಿವಿಲ್ಲದೆ ತಮಟೆ ನುಡಿಸುತ್ತಾರೆ. ತಮಟೆ ಬಡಿಯುತ್ತಲೇ ಗತ್ತಿಗೆ ತಕ್ಕಂತೆ ಕುಣಿಯುವುದು, ಕಸರತ್ತುಗಳನ್ನು ಮಾಡುವುದು ಇವರ ವಿಶೇಷ. ತಮಟೆ ವಾದನದಲ್ಲಿ ಇವರ ಪರಿಣತಿ, ಪಳಗಿದ ಕೈಚಳಕವನ್ನು ಗುರುತಿಸಿದ ಕರ್ನಾಟಕ ಜಾನಪದ ಪರಿಷತ್ತು ತಾ|| ೧೦–೦೨–೨೦೦೨ ರಂದು ಜಾನಪದ ಲೋಕ ಪ್ರಶಸ್ತಿಯನ್ನು ನೀಡಿ ಗೌರವಿಸಿರುತ್ತದೆ.

## ೫೮. ಕರಿಯಣ್ಣ ಶೆಟ್ಟಿ

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹಂದನಕೆರೆಯ ಕುಂಬಾರ ಜನಾಂಗದ, ೭೫ರ ಹರೆಯದ ಶ್ರೀ ಕರಿಯಣ್ಣ ಶೆಟ್ಟಿ ಅವರದು ಬಹುಮುಖ ಪ್ರತಿಭೆ. ಶೆಟ್ಟರಿಗೆ ತಂದೆಯಿಂದ ಬಂದ ಬಳುವಳಿ ಮಡಿಕೆ ಮಾಡುವುದು ಮತ್ತು ಪಂಚಾಂಗ ಹೇಳುವುದು. ಆದರೆ ಸ್ವಸಾಮರ್ಥ್ಯದಿಂದ ಕಲಿತದ್ದು ಹತ್ತು ಹಲವು ಕಲಾಪ್ರಕಾರಗಳನ್ನು. ಶೂದ್ರ ಪುರೋಹಿತರೆನಿಸಿಕೊಂಡ ಕರಿಯಣ್ಣ ಶೆಟ್ಟರು ಅಂದ ಚಂದದ ಮಡಿಕೆ ಕುಡಿಕೆಗಳನ್ನು ತಯಾರಿಸುವುದರ ಜೊತೆಗೆ, ಬೂತಾಳೆ ಮರದಿಂದ ಹರಿಗೆಗಳನ್ನು, ಸೋಮನ ಮುಖವಾಡಗಳನ್ನು, ಗ್ರಾಮದೇವತೆಗಳ ವಿಗ್ರಹಗಳನ್ನು ತಯಾರಿಸುವಲ್ಲಿ ಪರಿಣತರು. ಎಲ್ಲ

ದೇವರುಗಳು ಮನುಷ್ಯನಿಗೆ ಜೀವಗಳೆ ತುಂಬಿದರೆ ನಮ್ಮ ಕರಿಯಣ್ಣ ಶೆಟ್ಟರು ಗ್ರಾಮದೇವತೆಗಳಿಗೆ ಜೀವಗಳೆ ನೀಡುತ್ತಾರೆ. ಗುಡಿ ಗೋಪುರಗಳನ್ನು ನಿರ್ಮಿಸಿ ಊರದೇವರುಗಳ ಕೀರ್ತಿ ಕಳಸವನ್ನು ಎತ್ತಿಹಿಡಿದಿದ್ದಾರೆ. ಹಾಸನ, ಚಿಕ್ಕಮಗಳೂರು, ಮಂಡ್ಯ, ತುಮಕೂರು ಜಿಲ್ಲೆಗಳಾದ್ಯಂತ ಇವರು ತಯಾರಿಸಿದ ನೂರಾರು ಗ್ರಾಮದೇವತೆಗಳ ವಿಗ್ರಹಗಳು, ಗುಡಿಗೋಪುರಗಳೂ ಶ್ರೀಯುತರ ನಿರ್ಮಾಣ ಕೌಶಲ್ಯಕ್ಕೆ ಉತ್ತಮ ನಿದರ್ಶನಗಳಾಗಿವೆ. ಹದಿನಾರನೆಯ ವಯಸ್ಸಿನಲ್ಲೆ ಮಾಟ ವಿದ್ಯೆಯನ್ನು ಕಲಿಯಲಾರಂಭಿಸಿದ ಕರಿಯಣ್ಣ ಶೆಟ್ಟರು ತಮ್ಮ ಚಿಕ್ಕಪ್ಪ ವರದಶೆಟ್ಟರ ನೆರವಿನಿಂದ ರಾಜಮೋಡಿ, ರಣಮೋಡಿಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದುಕೊಂಡರು. ಮಧುಗಿರಿ, ಶಿಕಾರಿಪುರದ ಕಡೆಯ ಕಂಚಿಗೊಲ್ಲರ ಗಜರಿ ಮುಟ್ಟಿ ಮಣ್ಣು ಮುಕ್ಕಿಸಿದ ಯಶಸ್ಸು ಕರಿಯಣ್ಣ ಶೆಟ್ಟರದು. ಅದೇ ಚಿಕ್ಕಪ್ಪನವರ ಗರಡಿಯಲ್ಲಿ ಮೂಡಲಪಾಯ ಯಕ್ಷಗಾನ ಭಾಗವತರಾಗಿಯೂ ಹೆಸರು ಗಳಿಸಿದವರು. ಕರಿಯಣ್ಣ ಶೆಟ್ಟರು ಮೇಳ ಮತ್ತು ಕುಣಿತಗಳೆರಡರಲ್ಲೂ ಎತ್ತಿದ ಕೈ ಇವರು ಹಾಕುತ್ತಿದ್ದ ದೈತ್ಯ ಪಾತ್ರಗಳಂತೂ ಪ್ರೇಕ್ಷಕರನ್ನು ಬೆಚ್ಚಿ ಬೆರಗಾಗಿಸುತ್ತಿದ್ದವು. ಮೊಹರಂ ಹಬ್ಬದ ಸಂದರ್ಭದಲ್ಲಿ ಶ್ರೀಯುತರು ಹಾಕುತ್ತಿದ್ದ ಹುಲಿ ವೇಷ, ಪಾಳೇಗಾರನ ವೇಷಗಳು ಊರವರಲ್ಲಿ ಭೀತಿಯನ್ನು ಹುಟ್ಟಿಸುವುದರ ಜೊತೆಗೆ ಅಪಾರವಾದ ಪ್ರಶಂಸೆಯನ್ನು ತಂದುಕೊಟ್ಟವು.

ಕರಿಯಣ್ಣ ಶೆಟ್ಟರು ಮಾರುತಿ ಕೃಪಾಪೋಷಿತ ನಾಟಕ ಸೀನರಿ ಕಂಪನಿಯ ಮಾಲೀಕರಾಗಿದ್ದರು. ಪೌರಾಣಿಕ ನಾಟಕಗಳಿಗೆ ಅದ್ಧೂರಿಯ ಸೀನರಿಗಳನ್ನು ಒದಗಿಸುವುದರ ಜೊತೆಗೆ ಬಣ್ಣದ ಕಿರೀಟಗಳನ್ನು ತಯಾರಿಸಿ ಕೊಡುತಿದ್ದರು. ಗುಬ್ಬಿ ಕಂಪನಿಯ ನಟಭಯಂಕರ ಎಸ್. ಎಂ. ಗಂಗಾಧರರಾಯರೊಂದಿಗೆ ಭಕ್ತಪ್ರಹ್ಲಾದ ನಾಟಕದಲ್ಲಿ ಶೆಟ್ಟರು ನಿರ್ವಹಿಸುತ್ತಿದ್ದ ಕಯಾದು ಪಾತ್ರ, ವಾಲಿ, ಸುಗ್ರೀವರ ಕಾಳಗದಲ್ಲಿ ಸೋರಟ್ ಅಶ್ವಥ್‌ರೊಂದಿಗೆ ನಟಿಸುತ್ತಿದ್ದ ಸುಗ್ರೀವನ ಪಾತ್ರವು ಜನಜನಿತವಾಗಿದ್ದಿತು. ಕರಿಯಣ್ಣ ಶೆಟ್ಟರು ಜನಪದ ವೈದ್ಯರೂ ಹೌದು. ಲಕ್ವ, ಕ್ಯಾನ್ಸರ್, ಮಧುಮೇಹದಂತಹ ಗುಣವಾಗದ ಖಾಯಿಲೆಗಳಿಗೆ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಿ ನೀಡುವುದರಲ್ಲಿ ಸಿದ್ಧಹಸ್ತರು. ಹಂದನಕೆರೆ ಗ್ರಾಮಾಂತರ ವಿದ್ಯಾಪೀಠದ ಸ್ಥಾಪಕ ಅಧ್ಯಕ್ಷರಾಗಿರುವ ಕರಿಯಣ್ಣ ಶೆಟ್ಟರ ಕಲಾಪ್ರತಿಭೆಯನ್ನು ಮೆಚ್ಚಿ ಕರ್ನಾಟಕ ಕ್ರಾಫ್ಟ್ ಕೌನ್ಸಿಲ್ ಗೌರವಿಸಿದೆ. ಕರ್ನಾಟಕ ಜ್ಯೋತಿರ್ವಿಜ್ಞಾನ ಮಹಾ ಸಮ್ಮೇಳನವು ಅಭಿನಂದಿಸಿದೆ. ಇದೀಗ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೦೨-೨೦೦೨ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೩೯. ತೂಬಿನಕೆರೆ ಮೇಲುಗಿರಯ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕು ತೂಬಿನಕೆರೆ ಗ್ರಾಮದ ಒಕ್ಕಲಿಗ ಜನಾಂಗಕ್ಕೆ ಸೇರಿದ ಅರವತ್ತೈದರ ಹರೆಯದ ಶ್ರೀ ಮೇಲುಗಿರಯ್ಯನವರು ಪಾರಂಪರಿಕ ಕೋಲುಪದಗಳಿಗೆ ಹೆಜ್ಜೆ ಮತ್ತು ಕೈಗಳನ್ನು ಬಳಸಿ ಹಲವು ವಸಂತಗಳನ್ನು ಕಳೆದಿರುವ

ಅಪರೂಪದ ಪ್ರತಿಭಾವಂತ ಕೋಲಾಟದ ಕಲಾವಿದರು. ಕೋಲಾಟವೇ ಅಲ್ಲದೆ ಪಟಾಕುಣಿತ, ಸೋಮನಕುಣಿತ, ಸೋಬಾನೆ ಪದಗಳ ಹಾಡುಗಾರಿಕೆ ಮುಂತಾದ ಜನಪದ ಕಲಾಪ್ರಕಾರಗಳನ್ನು ಕರಗತ ಮಾಡಿಕೊಂಡಿರುವ ಶ್ರೀಯುತರು, ಗುರು ಕುಣಿಗಲ್ ತಿಮ್ಮಯ್ಯನವರ ಗರಡಿಯಲ್ಲಿ ಪಳಗಿದವರು. ಮೂಲತಃ ಕೃಷಿಕರಾದ ಮೇಲುಗಿರಯ್ಯನವರನ್ನು ಕಲಾವಿದರನ್ನಾಗಿ ರೂಪಿಸಿದವರು ತಂದೆ ಮೂಡಲಗಿರಿಯಪ್ಪನವರು. ಕಾಲಿಗೆ ಗೆಜ್ಜೆ ಕಟ್ಟಿ ಕೈಗಳಲ್ಲಿ ಕೋಲು ಹಿಡಿದು ಊರೂರು ಸುತ್ತಿ ಕೋಲಾಟದ ವಿವಿಧ ವರಸೆಗಳನ್ನು ಪ್ರದರ್ಶಿಸುವುದರೊಂದಿಗೆ, ಸುಶ್ರಾವ್ಯವಾಗಿ ಕೋಲಾಟದ ಪದಗಳನ್ನು ಹಾಡುವ ಮೇಲುಗಿರಯ್ಯನವರು ಅನುಭವಸ್ಥ ತಂಡಗಳೊಡನೆ ಬೆರೆತು ಅವುಗಳಿಗೂ ತರಬೇತಿ ಕೊಟ್ಟು ಕನ್ನಡ ನಾಡಿನಲ್ಲಷ್ಟೇ ಅಲ್ಲದೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮುಂಬಯಿ ಮುಂತಾದ ರಾಷ್ಟ್ರದ ಇತರ ರಾಜ್ಯಗಳಲ್ಲೂ ಕಲಾಪ್ರದರ್ಶನ ನೀಡಿ ಭೇಷ್ ಎನಿಸಿಕೊಂಡಿದ್ದಾರೆ. ತಮ್ಮ ಕಲೆಯ ಬಗೆಗೆ ಅಪಾರ ಅಭಿಮಾನವನ್ನು ಹೊಂದಿರುವ ಶ್ರೀಯುತರು ಅದರ ಉಳಿವಿಗಾಗಿ ಅಹರ್ನಿಸಿ ಶ್ರಮಿಸುತ್ತಿದ್ದಾರೆ.

ಶ್ರೀ ಮೇಲುಗಿರಯ್ಯನವರು ನಾಡಿನ ಅನೇಕ ಸಂಘಸಂಸ್ಥೆಗಳು ಸನ್ಮಾನಿಸಿವೆ. ಇದೀಗ ಕರ್ನಾಟಕ ಜಾನಪದ ಪರಿಷತ್ತು. , ಬೆಂಗಳೂರಿನ ಶ್ರೀ ಟಿ. ತಿಮ್ಮೇಗೌಡರು ತಮ್ಮ ತಂದೆ ಶ್ರೀ ದೊಡ್ಡಿ ತಿಮ್ಮೇಗೌಡ ಮತ್ತು ತಾಯಿ ಶ್ರೀಮತಿ ಲಿಂಗಮ್ಮ ಅವರುಗಳ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ ತಾ॥ ೧೦–೦೨–೨೦೦೨ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬೦. ಜಯಮ್ಮ

ಜನಪದ ಸಾಹಿತ್ಯದ ಅತ್ಯಂತ ಜನಪ್ರಿಯ ಪ್ರಕಾರವೇ ಹಾಡುಗಾರಿಕೆ. ನಮ್ಮ ಹಳ್ಳಿಯ ಹೆಣ್ಣುಮಕ್ಕಳು ಹಾಡು ಕಲಿತದ್ದು–ಹಾಡುತ್ತಾ ಬಂದಿದ್ದು ಯಾರನ್ನೂ ಮೆಚ್ಚಿಸುವುದಕ್ಕಲ್ಲ. ತಮ್ಮ ಅಂದಂದಿನ ದಂದುಗಕ್ಕೆ ಮೈಸೋತು ಮನಸೋತಾಗ, ಎದೆಯೊಳಗೆ ಹೆಪ್ಪುಗಟ್ಟಿದ ನೋವು–ಸಂಕಟ–ಬೇಸರ–ವ್ಯಥೆಗಳನ್ನು ಹೊರಹಾಕುವುದಕ್ಕಾಗಿ ಕಂಡುಕೊಂಡ ಕಾವ್ಯ ಕಾವೇರಿಯೇ ಹಾಡುಗಾರಿಕೆ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಹಟ್ನ ಗ್ರಾಮದ ದಲಿತ ಜನಾಂಗಕ್ಕೆ ಸೇರಿದ ಐವತ್ತಾರು ಹರೆಯದ ಜಯಮ್ಮ ತನ್ನ ನೆಮ್ಮದಿಗಾಗಿ, ತೃಪ್ತಿಗಾಗಿ, ಎದೆಯ ದುಗುಡವನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿ ಚಿಕ್ಕಂದಿನಿಂದಲೂ ಹಾಡುತ್ತಾ ಬಂದ ಕಲಾವಿದೆ. ಭಾವಪೂರ್ಣವಾಗಿ ಸವಿಯಾದ ಕಂಠದಲ್ಲಿ ಹಾಡುವ ಜಯಮ್ಮನವರ ಎದೆಯೊಳಗಿನ ಪದಗಳು ವೈವಿದ್ಯಮಯವಾದವು. ಸೋಬಾನೆ ಪದಗಳು, ತಿಂಗಳು ಮಾವನ ಪದಗಳು, ಬೀಸುವ ಪದಗಳು, ಮಳೆರಾಯನ ಪದಗಳು, ಕುಂತಿ ಪದಗಳು, ಭೈರವೇಶ್ವರ, ಚಲುವಯ್ಯ, ಬಸವಯ್ಯ, ಕೆಂಪಮ್ಮ, ಹಟ್ಟಿಲಕ್ಕಮ್ಮ ಮುಂತಾದ ದೇವರ ಸೇವೆ ಪದಗಳನ್ನು ಹಾಡುತ್ತಾರೆ. ಶ್ರೀಮತಿ ಜಯಮ್ಮನವರ ಎಲ್ಲಾ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೮೬ ರಷ್ಟು ಹಿಂದೆಯೇ ಧ್ವನಿಮುದ್ರಿಸಿಕೊಂಡಿರುತ್ತಾರೆ.

ಜಯಮ್ಮ ಎಲೆಮರೆಯಕಾಯಿ. ಯಾವ ಸಭೆ ಸಮಾರಂಭಗಳಲ್ಲಿ ಹಾಡಿದವರಲ್ಲ. ಯಾವ ಮಾನ-ಸನ್ಮಾನಗಳೂ ಇವರನ್ನು ತಲುಪಿಲ್ಲ. ಇದೀಗ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೦೨-೨೦೦೨ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬೧. ವಿಶೇಷ ಪುರಸ್ಕಾರ : ಶ್ರೀಧರ ಹಂದೆ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು-ಉಡುಪಿ ಹೆದ್ದಾರಿಯಲ್ಲಿ ಕೋಟಾದ ಬಳಿ ನಿಸರ್ಗದೊಂದಿಗೆ ಹೊಂದಿಕೊಂಡು ಬಾಳುವೆ ನಡೆಸುತ್ತಿರುವ, ಸಾಹಿತ್ಯ, ಸಂಸ್ಕೃತಿ, ಯಕ್ಷಗಾನ, ಜನಪದ ಕಲೆಗಳಿಗೆ ಸದಾ ಪ್ರೋತ್ಸಾಹ ಮತ್ತು ಆಶ್ರಯ ನೀಡುತ್ತಿರುವ ಪ್ರಸಿದ್ಧ ಹಂದೆ ಮನೆತನದಲ್ಲಿ ಜನಿಸಿದ ಶ್ರೀಧರ ಹಂದೆಯವರು ಅತಿಥಿ ಸತ್ಕಾರಕ್ಕೆ ಎತ್ತಿದ ಕೈ. ಹಂದೆಯವರು ಹಿಂದಿ ಶಿಕ್ಷಕರು, ಸ್ವತಃ ಕಲಾವಿದರು, ಯಕ್ಷಗಾನ ಪಟುಗಳು. ಮಕ್ಕಳ ಯಕ್ಷಗಾನ ಮೇಳವನ್ನು ಸ್ಥಾಪಿಸಿ ಅಂತರರಾಜ್ಯ ಸಾಂಸ್ಕೃತಿಕ ವಿನಿಮಯ ತಂಡದೊಂದಿಗೆ ಜಮ್ಮು, ಕಾಶ್ಮೀರ, ಪಂಜಾಬ್, ಅಸ್ಸಾಂ, ಮಣಿಪುರ, ಪಶ್ಚಿಮ ಬಂಗಾಳ, ತಮಿಳುನಾಡು, ಉತ್ತರ ಪ್ರದೇಶ, ದೆಹಲಿ ಮುಂತಾದ ದೇಶದ ವಿವಿಧೆಡೆ ಪ್ರದರ್ಶನ ನೀಡಿರುವುದಲ್ಲದೆ, ದೂರದ ಇಂಗ್ಲೆಂಡ್, ಲಂಡನ್, ಬೆಹರಿನ್ ಗಳಂತಹ ಪಾಶ್ಚಾತ್ಯ ದೇಶಗಳಿಗೂ ಕೊಂಡೊಯ್ದು ಕರಾವಳಿ ಯಕ್ಷಗಾನ ಪರಂಪರೆಯನ್ನು ಪಸರಿಸಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತಿನ ವಸ್ತು ಸಂಗ್ರಹ ಕಾರ್ಯ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ನೆರವಾದ ಶ್ರೀಧರ ಹಂದೆಯವರಿಗೆ ಜಾನಪದ ಮತ್ತು ಯಕ್ಷಗಾನಗಳೆರಡರ ಬಗೆಗೂ ಅನನ್ಯವಾದ ಪ್ರೀತಿ ಮತ್ತು ಕಾಳಜಿಗಳಿವೆ. ಎಚ್. ಎಲ್. ನಾಗೇಗೌಡರು ಈಗಾಗಲೇ ಹಂದೆಯವರ ಮನೆಯಲ್ಲಿ ಜಾನುವಾರುಕಟ್ಟೆ ಶ್ರೀ ಗೋಪಾಲಕೃಷ್ಣ ಕಾಮತ್ ಹಾಗೂ ಮತ್ತಿತರ ಹಿರಿಯ ಯಕ್ಷಗಾನ ಕಲಾವಿದರ ಯಕ್ಷಗಾನದ ಹಾಡುಗಳನ್ನು ಧ್ವನಿಮುದ್ರಿಸಿಕೊಂಡಿರುತ್ತಾರೆ.

ಆಕಾಶವಾಣಿಯ 'ಎ' ಗ್ರೇಡ್ ಕಲಾವಿದರೂ ಹಿರಿಯ ಅಧ್ಯಾಪಕರ ತಾಳಮದ್ದಲೆ ತಂಡದ ನೇತಾರರೂ ಆಗಿರುವ ಶ್ರೀಧರ ಹಂದೆಯವರು ಶಿಕ್ಷಣ, ಸಾಹಿತ್ಯ, ನಾಟಕ, ಯಕ್ಷಗಾನ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟಿದ್ದಾರೆ. ಶ್ರೀಯುತರ ಸಾಹಿತ್ಯಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಗುರುತಿಸಿ ಭಾರತ ಸರ್ಕಾರವು ೧೯೯೧ರ ಸಾಲಿನಲ್ಲಿ ರಾಷ್ಟ್ರಪ್ರಶಸ್ತಿ ನೀಡಿ ಗೌರವಿಸಿದೆ. ಶ್ರೀಧರ ಹಂದೆಯವರ ಜಾನಪದ ಪ್ರೀತಿ ಮತ್ತು ಸಂಘಟನಾ ಶಕ್ತಿಯನ್ನು ಗೌರವಿಸುವುದರ ಕುರುಹಾಗಿ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೦೨-೨೦೦೨ ರಂದು 'ವಿಶೇಷ ಪುರಸ್ಕಾರ'ವನ್ನು ನೀಡಿ ಗೌರವಿಸಿರುತ್ತದೆ.

## ೬೨. ಎಂ. ಟಿ. ಜಯಣ್ಣ

ಬೆಂಗಳೂರು ಆಕಾಶವಾಣಿಯ ಅತೀ ಜನಪ್ರೀಯ ಕಾರ್ಯಕ್ರಮದ 'ಕೃಷಿರಂಗ' ಕಾರ್ಯಕ್ರಮದ ಕೇಳುಗರಿಗೆ ಅತ್ಯಂತ ಚಿರಪರಿಚಿತವಾದ ಹೆಸರು ಶ್ರೀ ಎಂ. ಟಿ. ಜಯಣ್ಣನವರದು. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕು ಮಲ್ಲೋಹಳ್ಳಿಯ ಕೃಷಿಕ

ಮನೆತನಕ್ಕೆ ಸೇರಿದ ಸುಮಾರು ೬೨ರ ಹರೆಯದ ಶ್ರೀ ಜಯಣ್ಣನವರಿಗೆ, ಬೆಂಗಳೂರು ಆಕಾಶವಾಣಿ ಕೇಂದ್ರದ ಕೃಷಿರಂಗ ವಿಭಾಗವನ್ನು ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಕೃಷಿ ವಿಭಾಗವನ್ನಾಗಿ ರೂಪಿಸಿದ ಯಶಸ್ಸು ಸಲ್ಲುತ್ತದೆ.

ಕೃಷಿ ಸಂಬಂಧಿ ವಿಚಾರಗಳನ್ನು ಅತ್ಯಂತ ಸರಳವಾಗಿ ಸ್ಪಷ್ಟವಾಗಿ ಶ್ರೋತೃಗಳ ಮನಮುಟ್ಟುವಂತೆ ತಲುಪಿಸುವ ಸೊಗಸಾದ ಮಾತುಗಾರಿಕೆ ಶ್ರೀ ಜಯಣ್ಣನವರಿಗೆ ಸಿದ್ಧಿಸಿದೆ. ವಿಷಯ ಮಂಡನೆಯಲ್ಲಿನ ಸ್ಪಷ್ಟತೆಯಿಂದಾಗಿ ಸಂಭಾಷಣೆಯಲ್ಲಿ ಮಾನವೀಯವಾದ ಆತ್ಮೀಯಭಾವವು ತಲೆದೋರುತ್ತದೆ. ಖ್ಯಾತ ವೈಣಿಕ ಶ್ರೀ ದೊರೆಸ್ವಾಮಿ ಅಯ್ಯಂಗಾರ್ ಅವರು 'ಜಯಣ್ಣನವರ ರೈತರ ಸಲಹೆ ಕಾರ್ಯಕ್ರಮ ಕೇಳುತ್ತಿದ್ದರೆ ಒಳ್ಳೆಯ ತಾಳ ಹಾಕಿದಂತಿರುತ್ತದೆ.' ಎಂದು ಮೆಚ್ಚುಗೆ ಮಾತುಗಳ್ನಾಡಿರುವುದು ಜಯಣ್ಣನವರ ಅನನ್ಯ ವಾಕ್ ಶೈಲಿಗೆ ಹಿಡಿದ ಕನ್ನಡಿಯಾಗಿದೆ. ಪ್ರಯೋಗಶೀಲತೆ ಮತ್ತು ಕಾರ್ಯಕ್ರಮ ನಿರೂಪಣೆಯ ಸೊಗಸಿಗೆ ಹೆಸರಾದ ಶ್ರೀ ಜಯಣ್ಣನವರ ಮತ್ತೊಂದು ಹೆಗ್ಗಳಿಕೆ ಎಂದರೆ, ಕೃಷೀವಲ ಸಂಸ್ಕೃತಿಯ ಉತ್ಪತ್ತಿಯಾದ ಜಾನಪದಕ್ಕೆ ಆಕಾಶವಾಣಿಯ ಬಾಗಿಲು ತೆರೆದದ್ದು. ಗ್ರಾಮೀಣ ಜನಪದರು ಧೈರ್ಯವಾಗಿ ಆಕಾಶವಾಣಿಯೊಳಗೆ ಕಾಲಿಡಲು ಕಾರಣಕರ್ತರು ಜಯಣ್ಣನವರೆಂದರೆ ಉತ್ಪ್ರೇಕ್ಷೆಯಲ್ಲ. ಜನಪದ ಹಾಡುಗಾರರು, ಕಲಾವಿದರು ಮತ್ತು ವಿದ್ವಾಂಸರು ಜಯಣ್ಣನವರ ಆಕಾಶವಾಣಿ ಆಧಿಕಾರಾವಧಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಶ್ರೋತಗಳ ಮನೆ-ಮನೆಗಳನ್ನು ತಲುಪಿ ಜನಪ್ರಿಯರಾದರು. ಭಾರತೀಯ ಕೃಷಿಕೇತ್ರದಲ್ಲಿ ಜಯಣ್ಣನವರ ಅಮೂಲ್ಯವಾದ ಸೇವೆಯನ್ನು ಗುರುತಿಸಿ ರಾಜ್ಯ ಸರ್ಕಾರವು ಗೌರವಿಸಿದೆ. ರಾಷ್ಟ್ರಮಟ್ಟದ ಸಂಸ್ಥೆಯಾದ ಭಾರತ ಕೃಷಿ ಸಮಾಜವು ೧೯೮೬ರ ಸಾಲಿನಲ್ಲಿ ರಾಷ್ಟ್ರಪ್ರಶಸ್ತಿ ನೀಡಿ ಗೌರವಿಸಿದೆ. ಎಂ. ಟಿ. ಜಯಣ್ಣನವರ ಜಾನಪದ ಪ್ರೀತಿ ಮತ್ತು ಸಂಘಟನಾ ಶಕ್ತಿಯನ್ನು ಗೌರವಿಸುವುದರ ಕುರುಹಾಗಿ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೦೨-೨೦೦೨ ರಂದು 'ವಿಶೇಷ ಪುರಸ್ಕಾರ'ವನ್ನು ನೀಡಿ ಗೌರವಿಸಿರುತ್ತದೆ.

## ೬೩. ಡಾ॥ ಎಲ್. ಜಿ. ಸುಮಿತ್ರ

ಕನ್ನಡ ಪ್ರಸಿದ್ಧ ವಿದ್ವಾಂಸರಾದ ಎಲ್. ಗುಂಡಪ್ಪನವರ ಪುತ್ರಿ ಡಾ॥ ಎಲ್. ಜಿ. ಸುಮಿತ್ರ ಅವರದು ಕನ್ನಡ ಜನಪದ ಸಂಗೀತ ಮತ್ತು ಸಮೂಹ ಮಾಧ್ಯಮದಲ್ಲಿ ಅತ್ಯಂತ ಎತ್ತರದ ಹೆಸರು. ಗಣಿತ ಸ್ನಾತಕೋತ್ತರ ಪದವೀಧರೆಯಾದ ಸುಮಿತ್ರ ಅವರು ೧೯೬೬ ರಲ್ಲಿ 'ಕರ್ನಾಟಕ ಜನಪದ ಸಂಗೀತ' ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿದ ಡಾಕ್ಟರೇಟ್ ಪದವಿಯನ್ನು ಪಡೆದ ಪ್ರತಿಭಾವಂತರು. ಜಾನಪದ ಸ್ವರಾಂತರಗಳ ವಿಶಿಷ್ಟತೆಗಳನ್ನು ಮತ್ತು ಛಂದಸ್ಸನ್ನು ಜನಪದರು ಸಂಗೀತದಲ್ಲಿ ಮುಡಿಸಿಕೊಂಡಿರುವ ಕ್ರಮವನ್ನು ಸಮಗ್ರವಾಗಿ ಪರಿಚಯಿಸುವ ಈ ಮಹಾಪ್ರಬಂಧವು ಕನ್ನಡ ಜನಪದ ಸಂಗೀತವನ್ನು ಕುರಿತು ಅಧ್ಯಯನ ಮಾಡುವರಿಗೆ ಅತ್ಯತ್ತಮ ಆಕರ ಗ್ರಂಥವೆನಿಸಿದೆ. ಕಳೆದ ೩೫ ವರ್ಷಗಳಿಂದಲೂ ಆಕಾಶವಾಣಿಯಲ್ಲಿ ಹತ್ತು ಹಲವು ಹುದ್ದೆಗಳಲ್ಲೆ ಸೇವೆ ಸಲ್ಲಿಸಿರುವ ಡಾ॥ ಸುಮಿತ್ರ ಅವರು

ದೆಹಲಿಯ ಎನ್.ಸಿ.ಇ. ಆರ್.ಟಿ.ಯ ಧ್ವನಿ ಮಾಧ್ಯಮ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ ಸೇವೆಸಲ್ಲಿಸುವುದರ ಜೊತೆಗೆ ಕರ್ನಾಟಕದಲ್ಲಿ ಎನ್.ಸಿ.ಇ.ಆರ್.ಟಿ.ಯ ಧ್ವನಿಮಾಧ್ಯಮ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ, ಕರ್ನಾಟಕದಲ್ಲಿ ಎನ್.ಸಿ.ಇ.ಆರ್.ಟಿ ವತಿಯಿಂದ ಫೀಲ್ಡ್ ಅಡ್ವೈಸರ್ ಆಗಿಯೂ ಸಹ ಕಾರ್ಯನಿರ್ವಹಿಸಿದ್ದಾರೆ.

೧೯೫೭ರಲ್ಲಿ ತಮ್ಮ 'ಕಾವ್ಯ ಕಾವೇರಿ' ಕವನ ಸಂಕಲನಕ್ಕೆ ಮೈಸೂರು ಸರ್ಕಾರದ ಪ್ರಶಸ್ತಿಯನ್ನು, ೧೯೭೫ ರಲ್ಲಿ 'ಕರ್ನಾಟಕದ ವೃತ್ತಿಗಾಯಕರು' ಸಾಕ್ಷ್ಯಶಬ್ದ ಚಿತ್ರಕ್ಕೆ ಏಷಿಯನ್ ಬ್ರಾಡ್‌ಕಾಸ್ಟಿಂಗ್ ಯೂನಿಯನ್ನಿನ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುವ ಸುಮಿತ್ರ ಅವರು ತಮ್ಮ ಸೋದರಿಯರಾದ ಶ್ರೀಮತ ವಿಮಲಾ ರಾಜಗೋಪಾಲ್ ಮತ್ತು ಶ್ರೀ ಕಮಲಾಬಾಲು ಅವರುಗಳೊಂದಿಗೆ ಸಂಸ್ಕೃತಿ ಪ್ರಸಾರದಡಿಯಲ್ಲಿ ಕನ್ನಡ ನಾಡಿನ ಹಳ್ಳಿ ಹಳ್ಳಿಗಳಿಂದ ಮೊದಲುಗೊಂಡು ಬೆಂಗಳೂರು, ಮೈಸೂರು, ಧಾರವಾಡ, ನವದೆಹಲಿಗಳೇ ಅಲ್ಲದೇ ಕೆನಡಾ, ಅಮೆರಿಕಾ, ಇಂಗ್ಲೆಂಡ್ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿಯೂ ಕನ್ನಡ ಜನಪದ ಗೀತೆಗಳನ್ನು ಹಾಡುವುದರ ಮೂಲದ ಜಾನಪದ ಸಂಗೀತದ ಮೂಲತತ್ತ್ವವನ್ನು ಮತ್ತು ಮೂಲಧಾಟಿಗಳನ್ನು ಪ್ರಚುರಪಡಿಸುತ್ತಾ ಬಂದಿದ್ದಾರೆ. ಆಕಾಶವಾಣಿಯಲ್ಲಿ ಅನೇಕ ಜನಪದ ರೂಪಕಗಳನ್ನು ಪ್ರಸಾರ ಮಾಡಿರುತ್ತಾರೆ.

ಡಾ॥ ಸುಮಿತ್ರ ಅವರು ವೃತ್ತಿನಿರತರಾಗಿದ್ದಾಗ ಯುನೆಸ್ಕೋದಿಂದ ಧ್ವನಿಮಾಧ್ಯಮದ ವಿಶೇಷ ತಜ್ಞರಾಗಿ ಇಂಗ್ಲೆಂಡಿನ ಬಿಬಿಸಿ ರೇಡಿಯೊ ಮುಖಾಂತರ ನೆದರ್ ಲ್ಯಾಂಡ್ಸ್, ಮಲೇಷಿಯಾಗಳಿಗೆ ಭೇಟಿ ನೀಡಿ ಅಲ್ಲಿನ ಮೂಲ ಸಂಗೀತದ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಜನಪದ ಸಂಗೀತ ಮತ್ತು ವಿದ್ಯಾಭ್ಯಾಸದಲ್ಲಿ ಧ್ವನಿಮಾಧ್ಯಮದ ಬಳಕೆಯ ಬಗ್ಗೆ ಅನೇಕ ಸಂಶೋಧನಾತ್ಮಕ ಲೇಖನಗಳನ್ನು ಬರೆದು ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಿಸಿರುತ್ತಾರೆ. ಆಕಾಶವಾಣಿ ಸಿ.ಐಇ.ಟಿ., ಎನ್.ಸಿ.ಇ.ಆರ್.ಟಿ. ಆಯ್ಕೆ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಿತ್ರ ಅವರು ಸದ್ಯ ಜ್ಞಾನವಾಹಿನಿ ಎಫ್.ಎಂ. ಚಾನಲ್ ನ ಹೈಪವರ್ ಸ್ಟೀರಿಂಗ್ ಕಮಿಟಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ಜನಪದ ಸಂಗೀತದಲ್ಲಿ ಆಳವಾದ ತಜ್ಞತೆಯನ್ನು ಸಾಧಿಸಿರುವ, ಉತ್ತಮ ಜನಪದ ಗಾಯಕಿಯೂ ಆಗಿರುವ ಡಾ॥ ಎಲ್. ಜಿ. ಸುಮಿತ್ರ ಅವರನ್ನು ಅವರ ಅನನ್ಯವಾದ ಜನಪದ ಪ್ರೀತಿ ಮತ್ತು ಸಂಗೀತ ತಜ್ಞತೆಯನ್ನು ಗುರುತಿಸಿ ಗೌರವಿಸುವುದರ ಕುರುಹಾಗಿ ಕರ್ನಾಟಕ ಜನಪದ ತಾ॥ ೧೦-೦೨-೨೦೦೨ ರಂದು ವಿಶೇಷ ಪುರಸ್ಕಾರ ನೀಡಿ ಗೌರವಿಸಿರುತ್ತದೆ.

ಪರಿಚಯ : **ಡಾ. ಚಕ್ಕೆರೆ ಶಿವಶಂಕರ್**

## ಪ್ರಶಸ್ತಿ ಪುರಸ್ಕೃತರು – ೨೦೦೩

[ತಾ|| ೧೦-೨-೨೦೦೩ ರಂದು ಸಂಜೆ ಜಾನಪದ ಲೋಕದ ರಮ್ಯ ಪರಿಸರದಲ್ಲಿ ಭವ್ಯ ಬಯಲು ರಂಗಮಂದಿರದಲ್ಲಿ ೨೦೦೩ರ ಸಾಲಿನ ಎಲ್ಲಾ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಸಮಾರಂಭವನ್ನ ಏರ್ಪಡಿಸಲಾಗಿತ್ತು. ಪ್ರಶಸ್ತಿ ಪುರಸ್ಕೃತರಾದ ಪ್ರತಿಯೊಬ್ಬ ಕಲಾವಿದರಿಗೂ ಪ್ರಶಸ್ತಿ ಫಲಕ ಮತ್ತು ಒಂದು ಸಾವಿರ ರೂ. ನಗದು ಹಣದೊದಿಗೆ ಗಂಡಸರಿಗೆ ಶಾಲು, ಹೆಂಗಸರಿಗೆ ಸೀರೆ ಮತ್ತು ಖಣಗಳನ್ನು ನೀಡಲಾಯಿತು. ೨೦೦೩ರ ಸಾಲಿನಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಪ್ರಶಸ್ತಿ ಪುರಸ್ಕೃತರ ವಿವರಗಳು ಕೆಳಕಂಡಂತಿವೆ.

### ೬೪. ಹೂಲಿಪುರ ಚಿಕ್ಕಮ್ಮ

ತುಮಕೂರು ಜಿಲ್ಲೆ ಹೂಲಿಪುರ ಗ್ರಾಮದ ಆದಿಜಾಂಬವ ಜನಾಂಗಕ್ಕೆ ಸೇರಿದ ಸುಮಾರು ೬೦ರ ಹರೆಯದ ಶ್ರೀಮತಿ ಚಿಕ್ಕಮ್ಮನವರು ಬಾಲ್ಯದಿಂದಲೇ ಮನೆಗೆಲಸ–ಹೊಲಗೆಲಸಗಳೊಂದಿಗೆ ಜನಪದ ಹಾಡುಗಳನ್ನು ಮೈಗೂಡಿಸಿಕೊಂಡವರು. ತಮ್ಮ ಅಜ್ಜಿಯೊಂದಿಗೆ ಕೂಲಿನಾಲಿಗೆ ಹೋಗುತ್ತಿದ್ದ ಚಿಕ್ಕಮ್ಮ ನಾಟಿಹಾಕುವಾಗ, ಕಳೆಕೀಳುವಾಗ, ರಾಗಿಬೀಸುವಾಗ, ಕೇರುವಾಗ, ಕುಟ್ಟುವಾಗೆಲ್ಲಾ ಅಜ್ಜಿಯ ಹಾಡುಗಳಿಗೆ ದನಿಗೂಡಿಸುತ್ತಾ ಒಂದೊಂದನ್ನೇ ತಮ್ಮ ಎದೆಯಾಳದೊಳಕ್ಕಿಳಿಸಿಕೊಂಡವರು. ಅಕ್ಷರ ತಿಳಿದಿರದ, ಹಲಗೆ ಬಳಪ ಹಿಡಿದು ಗೊತ್ತಿಲ್ಲದ ಚಿಕ್ಕಮ್ಮ ಜಾನಪದ ಸರಸ್ವತಿಯ ಆರಾಧಕಿ. ದೇವರ ಪದಗಳು, ನಕಲಿ ಪದಗಳು, ಕಗ್ಗದ ಪದಗಳು, ಸೋಬಾನೆ ಪದಗಳು, ಆರತಿ ಪದಗಳು, ಧರ್ಮರ ಪದಗಳು, ತವರಿನ ಪದಗಳು, ಕಥನಗೀತೆಗಳು ಹೀಗೆ ಚಿಕ್ಕಮ್ಮನವರ ಸಾಹಿತ್ಯ ಅಭಿವ್ಯಕ್ತಿ ಸಮೃದ್ಧ ಹಾಗೂ ವೈವಿಧ್ಯಮಯವಾದುದು. ತಮ್ಮ ಕುಲದೇವರಾದ ಆದಿಜಾಂಬಯ್ಯನವರು ಮೇಲಿನ ಹಾಡುಗಳಂತೂ ಚಿಕ್ಕಮ್ಮನ ಅಸಾಧಾರಣ ಪ್ರತಿಭೆಗೆ ಹಿಡಿದ ಕನ್ನಡಿ. ಚಿಕ್ಕಮ್ಮನವರ ಎಲ್ಲಾ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೮೩ ರಲ್ಲಿಯೇ ಧ್ವನಿಮುದ್ರಿಸಿಕೊಮಡಿದ್ದಾರೆ. ವರ್ಷಕ್ಕೊಮ್ಮೆ ಆದಿಚುಂಚನಗಿರಿಯಲ್ಲಿ ನಡೆಯುವ ಭೈರವೇಶ್ವರ ಜನಪದ ಗೀತಗಾಯನ ಮೇಳಕ್ಕೆ ತಪ್ಪದೆ ಹಾಜರಾಗಿ ತಮ್ಮ ಗಾಯನಸೇವೆ ನಡೆಸಿಕೊಡುತ್ತಾ ಬಂದಿರುವ ಚಿಕ್ಕಮ್ಮನವರಂತಹ ಮುಗ್ಧ ಪ್ರತಿಭಾವಂತ ಹಾಡುಗಾರ್ತಿಗೆ ಸೋಬಾನೆ ಚಿಕ್ಕಮ್ಮ ಪ್ರಶಸ್ತಿಯನ್ನು ಕರ್ನಾಟಕ ಜಾನಪದ ಪರಿಷತ್ತು ನೀಡಿ ಗೌರವಿಸಿರುತ್ತದೆ.

### ೬೫. ಬಿಷ್ಟಪ್ಪನಹಳ್ಳಿ ಕೊಳ್ಳಪ್ಪ

ಕರ್ನಾಟಕದ ಜನಪ್ರಿಯ ವೃತ್ತಿಗಾಯಕರಾದ ಕಿನ್ನರಿಜೋಗಿಗಳು ಸೌಂದರ್ಯಕ್ಕೆ ಮತ್ತು ಆಕರ್ಷಣೆಗೆ ಹೆಸರಾದವರು. ಇವರ ವೇಷಭೂಷಣಗಳು ಮನಮೋಹಕವಾದುವು. ತಲೆಗೆ ಚಂದ್ರಬಿಲ್ಲೆ, ಮಣಿಕುಚ್ಚು, ಗುಳಾಪುಗಳಿಂದ ಅಲಂಕರಿಸಿದ ಮುಂಡಾಸು, ಬಣ್ಣದ ನಿಲುವಂಗಿ, ಎದೆಯ ಮೇಲೆ ಮಣಿಮಾಲೆಗಳು, ಕೊರಳಿಗೆ ರುದ್ರಾಕ್ಷಿ ಹಾರ, ಕಿವಿಗಳಿಗೆ ಕರ್ಣಕುಂಡಲ, ಹೆಗಲಿಗೆ ಜೋಳಿಗೆ ಧರಿಸಿ, ಕೈಯಲ್ಲಿ ಕಿನ್ನರಿ ಹಿಡಿದು ಊರಾಡಲು ಹೊರಟರೆಂದರೆ ಎಂಥವರೂ ಮರಳಾಗಬೇಕು.

ಜನಪದರ ತಂತಿ ವಾದ್ಯಗಳಲ್ಲಿ ಕಿನ್ನರಿಗೆ ಮೈಮರೆಸುವ ಶಕ್ತಿ ಇದೆ. ಅಂತಹ ಕಿನ್ನರಿ ಹಿಡಿದು, ತಂತಿ ಮೀಟುತ್ತಾ, ಎಡಗೈಯ ಗಗ್ಗರಗಳಿಂದ ಕಿನ್ನರಿಯ ಸೋರೆ ಬುರುಡೆಗೆ ತಾಳ ಬಡಿಯುತ್ತಾ, ತನ್ನ ಸುಶ್ರಾವ್ಯ ಕಂಠದಿಂದ ಪಾಂಡವರ ಕತೆ ಹೇಳುವ ಅತ್ಯುತ್ತಮ ಕಲಾವಿದ ದಾವಣಗೆರೆ ಜಿಲ್ಲೆ ನೇರ್ಲಿಗಿ ತಾಲ್ಲೂಕಿನ ಬಿಷ್ಟಪ್ಪನಹಳ್ಳಿ ಕೊಳ್ಳಪ್ಪನವರು. ಸುಮಾರು ೬೬ರ ಹರೆಯದ ಕೊಳ್ಳಪ್ಪನವರಿಗೆ ಕಿನ್ನರಿನುಡಿಸುವುದು ಮತ್ತು ಹಾಡುವುದು ವಂಶಪಾರಂಪರ್ಯವಾಗಿ ಬಂದ ಬಳುವಳಿ. ಕೊಳ್ಳಪ್ಪನವರ ಕಥನಕಲೆ ರಂಜನೀಯವಾದುದು. ಜೋಡಿ ಸೋರೆಬುರುಡೆಯ, ನವಿಲುಗರಿಯಿಂದ ಅಲಂಕರಿಸಿದ ತಂತೀವಾದ್ಯ ಕಿನ್ನರಿ ಇವರ ಮೋಹಕ ಕಂಠಕ್ಕೆ ಸುಂದರ ಶ್ರುತಿ. ಹಾಡಿನ ರಾಗಭಾವಗಳಿಗೆ ಅನುಗುಣವಾಗಿ ಹೆಜ್ಜೆಹಾಕುತ್ತಾ ಕುಣಿದರೆ, ದನಿಯ ಏರಿಳಿತಗಳಿಗೆ ಕೈಯ ತಾಳ ಚಿಟಿಕೆ ಸಹಕಾರಿಯಾಗಿ ಕಿನ್ನರಿಮೇಳ ಕಳೆಗಟ್ಟುತ್ತದೆ. ತಮ್ಮ ಕಿರಿಯ ವಯಸ್ಸಿನಿಂದಲೇ ಜೋಗಿ ಸಂಪ್ರದಾಯದ ಹಾಡು-ಕುಣಿತಗಳನ್ನು ಪ್ರಸಾರ ಮಾಡುತ್ತಾ ಬಂದಿದ್ದಾರೆ. ಹಾಡುವ ಹಾಡು ಯಾವುದೇ ಇರಲಿ ಕೇಳುಗರ ಮನಮುಟ್ಟುವಂತೆ ಮೇಳ ನಡೆಸುವ ಇವರು ಪ್ರಬುದ್ಧ ಕಿನ್ನರಿ ಕಲಾವಿದರು. ಪಾಂಡವರ ಕತೆಯೊಂದಿಗೆ ಸತ್ಯ ಶೀಲಾವತಿ, ಬಾಳಭಿಕ್ಷುಕ, ರಾಜಹಂಸ ಪರಮಹಂಸ, ಲಕ್ಷಾಪತಿರಾಜನ ಕಥೆ, ಸೋಮಶೇಖರ ಚಿತ್ರಶೇಖರ ಇವೇ ಮೊದಲಾದ ಕಥನ ಕಾವ್ಯಗಳನ್ನು ಹಾಡುತ್ತಾರೆ. ಇವರ ಎಲ್ಲಾ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೮೦ ರಲ್ಲಿಯೇ ಧ್ವನಿಮುದ್ರಣ ಮಾಡಿರುತ್ತಾರೆ. ಜನಪದ ಮೂಲಭಾಷಾ ಬಳಕೆ, ಅಂದಗೆಡದ ಮೂಲಮಟ್ಟುಗಳ ಪ್ರಯೋಗ, ಮಧುರಕಂಠ, ಗದ್ಯ ಪದ್ಯಗಳೆರಡರಲ್ಲೂ ನಿರರ್ಗಳ ನಿರೂಪಣೆ, ಆಯಾಸವರಿಯದ ಕಥನ ಕೌಶಲ, ಹಾಡುಗಾರಿಕೆಯಲ್ಲಿನ ಶ್ರದ್ಧೆ ಮತ್ತು ಏಕಾಗ್ರತೆ ಕೊಳ್ಳಪ್ಪನವರ ವೈಶಿಷ್ಟ್ಯಗಳು.

ಕೊಳ್ಳಪ್ಪನವರಿಗೆ ನಾಡಿನಾದ್ಯಂತ ಅನೇಕ ಮಾನ-ಸನ್ಮಾನಗಳು ಸಂದಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೦ರ ಸಾಲಿನಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ರಾಜ್ಯಮಟ್ಟದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಕಿನ್ನರಿ ಕಲೆಯನ್ನು ಮೆರೆದಿದ್ದಾರೆ. ಭಿಕ್ಷಾಟನೆಯಿಂದಲೇ ಬದುಕುತ್ತಿರುವ ಇಂತಹ ಅಪರೂಪದ ಕಲಾವಿದರಿಗೆ 'ದೊಡ್ಡಮನೆ ಪ್ರಶಸ್ತಿ'ಯನ್ನು ಕರ್ನಾಟಕ ಜಾನಪದ ಪರಿಷತ್ತು ನೀಡಿ ಗೌರವಿಸಿರುತ್ತದೆ.

## ೬೬. ಎ. ಎಸ್. ನಂಜಪ್ಪ

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಅರಳಗುಪ್ಪೆ ಮೂಡಲಪಾಯ ಯಕ್ಷಗಾನ ಭಾಗವತರ ನೆಲೆವೀಡು. ಇದೇ ಊರಿನ ದಿವಂಗತ ಸಿದ್ಧಲಿಂಗಪ್ಪನವರು ಕನ್ನಡ ನಾಡು ಕಂಡ ಅತ್ಯಂತ ಹಿರಿಯ ಭಾಗವತರಲ್ಲಿ ಒಬ್ಬರಾಗಿದ್ದರು. ಮೃದಂಗವನ್ನು ಹಿಡಿದು ಅಟ್ಟವನ್ನೇರಿದರೆ ಇಳಿವಯಸ್ಸಿನಲ್ಲಿಯೂ ಇನ್ನಿಲ್ಲದ ಉತ್ಸಾಹ ಅವರಲ್ಲಿ ಚಿಮ್ಮುತ್ತಿತ್ತು. ಇಂತಹ ಭಾಗವತ ಶ್ರೇಷ್ಠರ ಗರಡಿಯಲ್ಲಿ ಪಳಗಿದವರು ಇದೇ ಊರಿನ ಮತ್ತೊಬ್ಬ ಅತ್ಯುತ್ತಮ ಭಾಗವತ ಶ್ರೀ ಎ. ಎಸ್. ನಂಜಪ್ಪನವರು.

ಮೂಡಲಪಾಯ ಯಕ್ಷಗಾನವು ಅತ್ಯಂತ ಪ್ರಾಚೀನವಾದ ಗಂಡುಕಲೆ. ಕರ್ನಾಟಕದ ಉತ್ತರ ಮತ್ತು ದಕ್ಷಿಣ ಭಾಗಗಳೆರಡರಲ್ಲೂ ಪ್ರಚಲಿತದಲ್ಲಿರುವ ಈ ಕಲೆಯನ್ನು ಉಳಿಸಿ ಬೆಳೆಸಲು ಹಲವಾರು ಭಾಗವತರು ಶ್ರಮಿಸುತ್ತಿದ್ದಾರೆ. ಶ್ರೇಷ್ಠಮಟ್ಟದ ಕಲಾವಿದರು ಮತ್ತು ಭಾಗವತರು ಈ ಸಂಪ್ರದಾಯದಲ್ಲಿ ಉಳಿದಿದ್ದು ಈಗಲೂ ಈ ಕಲೆ ಅಲ್ಲಲ್ಲಿ ಉಸಿರಾಡಿಕೊಂಡಿರುವಂತೆ ನೋಡಿಕೊಂಡಿದ್ದಾರೆ. ಅರಳಗುಪ್ಪೆಯ ಕಲ್ಲುಮನೆ ನಂಜಪ್ಪನವರು ಈ ಪರಂಪರೆಯ ಶುದ್ಧ ಯಕ್ಷಗಾನೀಯ ಧಾಟಿಗಳನ್ನು ಉಳಿಸಿಕೊಂಡು ಬಂದಿದ್ದಾರೆ. ತಮ್ಮ ಎಂಟನೆಯ ವಯಸ್ಸಿನಲ್ಲೆ ಮೂಡಲಪಾಯಕ್ಕೆ ಪಾದಾರ್ಪಣೆ ಮಾಡಿದ ನಂಜಪ್ಪನವರು ಬಾಲಕೃಷ್ಣನಿಂದ ಹಿಡಿದು ರಕ್ತಬೀಜಾಸುರನವರೆಗೂ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಮೂಡಲಪಾಯ ಯಕ್ಷಗಾನ ಪ್ರಸಂಗಗಳು ಕಂಠಸ್ಥವಾಗಿರುವ ಶ್ರೀಯುತರಲ್ಲಿ ಸಾಹಿತ್ಯ ಸ್ಫುಟತೆ ಇದೆ. ಖಚಿತ ತಾಳಜ್ಞಾನವಿದೆ. ಸುಭಗ ಸ್ವರ ಶುದ್ಧಿಯೊಂದಿಗೆ ಹಾಡಿ ಆಟವನ್ನು ಕಳಗಟ್ಟಿಸುವುದರಲ್ಲಿ ನಿಪುಣರು. ದೇವಿ ಮಹಾತ್ಮೆ, ಸತ್ಯ ಚಿತ್ರಕೇತು, ಶಿವಜಲಂಧರ, ಗಿರಿಜಾ ಕಲ್ಯಾಣ, ದಕ್ಷಯಜ್ಞ, ಮಹಿರಾವಣ ವಧೆ, ಇಂದ್ರಜಿತು ಕಾಳಗ ಇವೇ ಮೊದಲಾದ ಪ್ರಸಂಗಗಳನ್ನು ಕಲಿಸುತ್ತಾರೆ. ಈ ಪರಂಪರೆಯನ್ನು ಉಳಿಸಿ ಬೆಳೆಸಬೇಕೆಂಬ ಹಂಬಲದಿಂದ 'ಶ್ರೀ ಕಲ್ಲೇಶ್ವರ ಸ್ವಾಮಿ ಯಕ್ಷಗಾನ ಸಂಘ'ವನ್ನು ಸ್ಥಾಪಿಸಿ ತಮ್ಮ ಮಕ್ಕಳಿಗಷ್ಟೇ ಅಲ್ಲದೆ, ಸುತ್ತೇಳು ಹಳ್ಳಿಯ ತರುಣರನ್ನು ಕಲೆಹಾಕಿ ಕಲಿಸುತ್ತಿದ್ದಾರೆ. ಮಾತುಗಾರಿಕೆ, ಅಭಿನಯ, ಕುಣಿತಗಳನ್ನು ಕಲಾತ್ಮಕವಾಗಿ ರೂಢಿಸಿಕೊಂಡಿರುವ ನಂಜಪ್ಪನವರ ನಿಜವಾದ ಆಸ್ತಿ ಅವರ ಯಕ್ಷಗಾನ ಕಲಾಪ್ರೌಢಿಮೆ. 'ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ'ಯನ್ನು ಕರ್ನಾಟಕ ಜಾನಪದ ಪರಿಷತ್ತು ಶ್ರೀ ಎ. ಎಸ್. ನಂಜಪ್ಪನವರಿಗೆ ನೀಡಿ ಗೌರವಿಸಿರುತ್ತದೆ.

## ೬೭. ದಂಡಿನಶಿವರದ ಚನ್ನವೀರಮ್ಮ

ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ದಂಡಿನಶಿವರದ ಚನ್ನವೀರಮ್ಮನವರು ಸುಮಾರು ೭೦ರ ಹರೆಯದ ಅಜ್ಞಾತ ಹಾಡುಗಾರ್ತಿ. ವರ್ಷಕ್ಕೊಮ್ಮೆ ಆದಿಚುಂಚನಗಿರಿಯಲ್ಲಿ ನಡೆಯುವ ಶ್ರೀ ಭೈರವೇಶ್ವರ ಜನಪದ ಗೀತಗಾಯನ ಮೇಳಕ್ಕೆ ಹಾಜರಾಗಿರುವುದನ್ನು ಬಿಟ್ಟರೆ ಇವರಿಗೆ ಮತ್ತಾವ ಸಭೆ ಸಮಾರಂಭಗಳ ಅರಿವಿಲ್ಲ. ಬೆಳ್ಳೆ ಮೂಡುವ ಮುನ್ನ ಬೀಸು ಕಲ್ಲಿನ ಮುಂದೆ ಕುಳಿತು ಹಾಡುತ್ತಾ ಬಂದ ಚನ್ನವಿರಮ್ಮನವರು ಹುಟ್ಟಿದ ಮನೆಯಲ್ಲಿ ತಾಯಿಯಿಂದ, ಕೊಟ್ಟ ಮನೆಯಲ್ಲಿ ಅತ್ತೆಯಿಂದ ಹಾಡು ಕೇಳಿ ಕಲಿತವರು. ಹಾಡುತ್ತಲೇ ಬದುಕು ಸವೆಸಿದವರು. ಹಾಡಿನಲ್ಲಿಯೇ ತಮ್ಮೆಲ್ಲ ಸುಖ ದುಃಖವನ್ನು ಹಂಚಿಕೊಳ್ಳುವ ಚನ್ನವಿರಮ್ಮನವರದು ಸೋಲದ ದನಿ. ಅಕ್ಕಪಕ್ಕ ಊರುಗಳಲ್ಲಿ ಯಾರದೇ ಮನೆಯಲ್ಲಿ ಮದುವೆಯಾಗಲಿ, ತೊಟ್ಟಿಲು ಶಾಸ್ತ್ರವಾಗಲಿ, ಋತುಮತಿಯಾಗಲಿ ಅಲ್ಲಿ ಚನ್ನವೀರಮ್ಮನವರ ಸುಶ್ರಾವ್ಯ ಹಾಡುಗಾರಿಕೆ ಇದ್ದೇ ಇರುತ್ತದೆ. ಚಿಕ್ಕಂದಿನಿಂದಲೂ ಹಾಡುತ್ತಾ ಬಂದಿರುವ ಇವರಿಗೆ ಅಕ್ಷರ ಜ್ಞಾನವಿಲ್ಲ. ಆದರೆ ಅನುಭವ ಅಪಾರವಾಗಿದೆ. ಸೋಬಾನೆ ಪದಗಳು, ಒಸಗೆ ಪದಗಳು, ಬೀಸುವ ಪದಗಳು, ದೇವರ

ಪದಗಳು, ತಿಂಗಳಮಾಮನ ಪದಗಳು, ಮಳೆರಾಯನ ಪದಗಳು, ಕೊಂತಿ ಪದಗಳು ಮುಂತಾದವುಗಳನ್ನು ಭಾವಪೂರಿತವಾಗಿ ಹಾಡುವ ಚನ್ನವೀರಮ್ಮನವರನ್ನು ಶ್ರೀ ಎಚ್. ಎಲ್. ನಾಗೇಗೌಡರು ಗುರುತಿಸಿ ಗೌರವಿಸಿದ್ದಾರೆ. ಇಂತಹ ಪ್ರತಿಭಾವಂತ ಹಾಡುಗಾರ್ತಿಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬೮. ಕೆ. ಆರ್. ಹೊಸಳ್ಳಯ್ಯ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನಲ್ಲಿರುವ ಎಡೆಯೂರು ಸಿದ್ಧರ ನೆಲೆವೀಡು. ತೋಂಟದ ಸಿದ್ಧಲಿಂಗೇಶ್ವರರು ಜೀವಂತವಾಗಿ ಲಿಂಗೈಕ್ಯರಾದ ಪುಣ್ಯಕ್ಷೇತ್ರ. ಯಡಿಯೂರು ದೇವಾಲಯದಲ್ಲಿ ಪ್ರತೀ ಅಮಾವಾಸ್ಯೆ ದಿನದಂದು ನಡೆಯುವ ವಿಶೇಷ ಪೂಜಾ ಸಂದರ್ಭದಲ್ಲಿ ವೀರಭದ್ರನ ಕುಣಿತ ಪ್ರದರ್ಶನಗೊಳ್ಳುತ್ತದೆ. ಈ ಪ್ರದರ್ಶನಕ್ಕಾಗಿ ದೇವಸ್ಥಾನದ ವತಿಯಿಂದ ಯಾವುದೇ ಸಂಭಾವನೆ ನಿರೀಕ್ಷಿಸದೆ, ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಕಿತ್ತಾಘಟ್ಟದ ರುದ್ರಪ್ಪನವರ ಮಗ ಕೆ. ಆರ್. ಹೊಸಳ್ಳಯ್ಯ ತಮ್ಮ ೧೦ನೆಯ ವಯಸ್ಸಿನಲ್ಲೇ ವಂಶಪಾರಂಪರ್ಯವಾಗಿ ಬಂದ ಕಲೆಯನ್ನು ತಮ್ಮ ತಂದೆಯಿಂದ ಕಲಿತು ಆರಾಧಿಸುತ್ತಾ ಬಂದಿದ್ದಾರೆ. ಕುಣಿತದ ಸಂದರ್ಭದಲ್ಲಿ ವೇಷಧರಿಸಿದ ಹೊಸಳ್ಳಯ್ಯ ವೀರಭದ್ರನ ಅಪರಾವತಾರಿಯಂತೆ. ನೋಡುಗರ ಕಣ್ಮನ ಸೆಳೆಯುತ್ತಾರೆ. ತಮ್ಮಲ್ಲಿನ ಕಲಾನೈಪುಣ್ಯತೆಯನ್ನು ಇಂಚಿಂಚು ಬಿಡಿಸುವ ಹೊಸಳ್ಳಯ್ಯ ಪ್ರತೀ ಪ್ರದರ್ಶನದಲ್ಲೂ ಹೊಸತನ ಪ್ರದರ್ಶಿಸುತ್ತಾರೆ. ತಮ್ಮ ಮಗನಿಗೂ ಈ ಕಲೆ ಧಾರೆ ಎರೆದಿದ್ದಾರೆ. ೧೯೯೦ ರಲ್ಲಿ ದೆಹಲಿಯಲ್ಲಿ, ೧೯೯೩ ರಲ್ಲಿ ಮಧ್ಯಪ್ರದೇಶದಲ್ಲಿ, ೧೯೯೫ ರಲ್ಲಿ ಕೇರಳದ ಎರ್ನಾಕುಲಂನಲ್ಲಿ, ೧೯೯೬ ರಲ್ಲಿ ಮುಂಬಯಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. ಸಿಂಹದ ಮರಿಸೈನ್ಯ ಮತ್ತು ಎಕೆ ೪೭ ಚಲನಚಿತ್ರಗಳಲ್ಲಿಯೂ ನಟಿಸಿದ್ದಾರೆ. ದುಡ್ಡಿಗಾಗಿ ಆಸೆಪಟ್ಟವರಲ್ಲ. ವೀರಭದ್ರನ ಕುಣಿತವನ್ನು ಕಲೆ ಎಂದು ನಂಬಿದವರಲ್ಲ. ಸಾಧನೆಯಿಂದ ಸಿದ್ಧವಾದ ದೈವೀಕೃಪೆ ಎಂಬುದು ಅವರ ಅಚಲವಾದ ನಂಬಿಕೆ. ಕಲಾಪ್ರದರ್ಶನಕ್ಕೆ ನಿಂತರೆಂದರೆ ಲೀಲಾಜಾಲವಾಗಿ ಕುಣಿಯುವ, ಕುಣಿತದ ಗತ್ತಿಗೆ ಚಮ್ಮಾಳ ಬಡಿಯುವ, ರಸಾನುಸ್ಪಂದಿಯಾಗಿ ಹಾವಭಾವ ಪ್ರದರ್ಶಿಸುವ ಹೊಸಳ್ಳಯ್ಯನವರು ಕಳೆದ ೪೮ ವರ್ಷಗಳಿಂದ ವೀರಗಾಸೆ ಪ್ರದರ್ಶಿಸುತ್ತಾ ಬಂದಿದ್ದು, ಆಧುನಕತೆಗೆ ಅನುಗುಣವಾಗಿ ಪುನರ್ರೂಪಿಸುತ್ತಾ ಬಂದಿರುವ ಪ್ರಯೋಗಶೀಲ ಕಲಾವಿದರು. ಇವರು ಒಡಬು ಹೇಳುವಾಗಿನ ಉಚ್ಚಾರದ ಸ್ಪಷ್ಟತೆ ಕಲಿತವರಿಗೂ ಬಾರದಂತಹುದು. ಗಡುಸಾದ ಧ್ವನಿ, ಗಂಭೀರವಾದ ಮುಖಭಾವ, ಸಮ್ಮಾಳದ ಧ್ವನಿ ಕೇಳಿದರೆ ಸಾಕು ಹೊಸಳ್ಳಯ್ಯವನರ ಮೈಯಲ್ಲಿ ವೀರಭದ್ರನೇ ತುಂಬುತ್ತಾನೆ. ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೧೯. ವೆಂಕಪ್ಪ ಪುಲಿ

ಕರಡೆ ಕರ್ನಾಟಕದ ಅತ್ಯಂತ ಪ್ರಾಚೀನ ವಾದ್ಯ. ಕರೆಯೊಂದಿಗೆ ಶಹನಾಯಿ, ದಿಮ್ಮು, ಡೊಳ್ಳು–ತಾಳಗಳೆಲ್ಲವೂ ಸೇರಿ ಇದೊಂದು ವಾದ್ಯಮೇಳವಾಗಿ ಪರಿಣಮಿಸಿದೆ. ತಾಳ ಲಯ, ಹೆಜ್ಜೆಗಳ ಪ್ರಸ್ತಾರಗಳೊಂದಿಗೆ ಕುಣಿತವೂ ಸೇರಿ ಕರಡೆಯೊಂದಿಗೆ ಮಜಲು ಕಟ್ಟಿಕೊಳ್ಳುವುದನ್ನೇ ಕರಡೀಮಜಲು ಎಂದು ಕರೆಯುತ್ತಾರೆ. ಹಿಂದೊಮ್ಮೆ ಕರ್ನಾಟಕದಾದ್ಯಂತ ಪ್ರಚಲಿತದಲ್ಲಿದ್ದ ಈ ವಾದ್ಯಮೇಳ ಇಂದು ಉತ್ತರ ಕರ್ನಾಟಕದಲ್ಲಿ ಮಾತ್ರ ಉಳಿದುಕೊಂಡು ಬಂದಿದೆ. ಕರಡೀ ಮಜಲಿನಲ್ಲಿ ಜಿದ್ದಿನ ಮಜಲು, ಮದುವೆ ಮಜಲು, ಜಾತ್ರೆ ಮಜುಲ, ಪಲ್ಲಕ್ಕಿ ಸೇವೆ ಮುಂತಾದ ಬಗೆಗಳಿದ್ದು ಇದು ಸಂಭ್ರಮದ ಸಂಕೇತವಾಗಿದೆ. ವೀರಭದ್ರ ದೇವರ ಗುಗ್ಗುಳ ಕಾರ್ಯಕ್ಕಂತೂ ಈ ವಾದ್ಯಮೇಳ ಇರಲೇಬೇಕು.

ಗುರುಮುಖೇನ ಕರಡೆಯನ್ನು ಕಲಿತು ನಂತರದ ದಿನಗಳಲ್ಲಿ ಆ ಕಲೆಯ ಅತ್ಯುತ್ತಮ ಕಲಾವಿದರಾಗಿ ಹೊರಹೊಮ್ಮಿದವರು ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಗಿರಿಯಾಲದ ಶ್ರೀ ವೆಂಕಪ್ಪ ಪುಲಿಯವರು. ಸುಮಾರು ೬೫ರ ಹರೆಯದ ಪುಲಿಯವರು ತಮ್ಮ ೧೬ನೆಯ ವಯಸ್ಸಿನಲ್ಲಿ ಈ ಕಲೆಗೆ ಕಾಲಿರಿಸಿದರು. ಕರಡೀ ಮಜಲಿನ ತಾಳ, ಪೆಟ್ಟು, ಕಲಾಪ್ರಕಾರ ಒಳ ಹೊರಗೆಲ್ಲವನ್ನು ಚೆನ್ನಾಗಿ ಅಭ್ಯಸಿಸಿದರು. ನಿಷ್ಣಾತರೆನಿಸಿಕೊಂಡರು. ಕರಡೀ ಮಜಲಿನ ವೈವಿಧ್ಯಮಯ ನಾದ–ತಾಳಗಳ ಗತ್ತಿಗೆ ಮರುಳಾಗಿ ಅದನ್ನು ಶ್ರದ್ಧೆಯಿಂದ ಕಲಿತು ಮುಂದೆ ಅದರ ತಾಳಜ್ಞಾನ ವಿಸ್ತಾರಗಳನ್ನು ಅರಿತು ಕರಡಿವಾದನ ಎಂಬ ಪಾಂಡಿತ್ಯಪೂರ್ಣ ಪುಸ್ತಕ ಬರೆದರು. ಕರಡೀ ಮಜಲಿನ ವಾದನದಲ್ಲಿ ಪುಲಿಯವರು ತೋರುವ ಪರಿಣತಿ ಮತ್ತು ಹಿಡಿತ ಪ್ರಶಂಸಾರ್ಹವಾದುದು. ಕರಡೀ ಮಜಲಿನಲ್ಲಿ ೫೩ ತಾಳಗಳನ್ನು ನುಡಿಸುವ ಮತ್ತು ೧೦೧ ತಾಳಗಳನ್ನು ವಿವರಿಸುವ ವೆಂಕಪ್ಪ ಪುಲಿಯಂತಹ ವಾದ್ಯ ಗಾರುಡಿಗರಿಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೨೦. ಕೆಂಬೋಡಿ ನಾರಾಯಣಪ್ಪ

ಕೋಲಾಟವು ಗ್ರಾಮೀಣ ಜನರ ಸುಲಭ ಮನರಂಜನಾ ಸಾಧನ. ಸುಗ್ಗಿಯ ದಿನಗಳಲ್ಲಿ, ಹಬ್ಬಹರಿದಿನಗಳಲ್ಲಿ, ಬೆಳದಿಂಗಳ ರಾತ್ರಿಗಳಲ್ಲಿ ಕೋಲು ಹುಯ್ಯುತ್ತಾ ಹಾಡುವುದು ಸರ್ವೇಸಾಮಾನ್ಯ. ಸಾಹಿತ್ಯ–ಸಂಗೀತ–ನೃತ್ಯ ಇವು ಮೂರೂ ಮುಪ್ಪುರಿಗೊಂಡಿರುವ ಕೋಲಾಟವು ಸಂಮಿಶ್ರ ಕಲೆ. ಗೆಜ್ಜೆಯ ನಾದ, ಕೋಲುಗಳ ಕ್ರಮಬದ್ಧವಾದ ಸಂಘಟಣೆ, ವಿನೋದಪೂರ್ಣ ಸಾಹಿತ್ಯ, ಹೆಜ್ಜೆಯ ಕುಣಿತ ಇವುಗಳಿಂದ ಕೋಲಾಟಕ್ಕೆ ರಂಗೇರುತ್ತದೆ. ಗೀರುಕೋಲು, ಜಡೆಕೋಲು, ಸುತ್ತು ಕೋಲು, ಕೊರವಂಜಿ ಕೋಲು, ಉಯ್ಯಾಲೆ ಕೋಲು, ಮಲಕಿನ ಕೋಲು, ಅಂಗಡಿ ಕೋಲು ಹೀಗೆ ಸುಮಾರು ೩೫ ಕ್ಕೂ ಮಿಕ್ಕ ಕೋಲು ಕುಣಿತದ ವೈಖರಿಗಳನ್ನು ಕೋಲಾಟದಲ್ಲಿ ಕಾಣಬಹುದು. ಕೋಲಾಟದಂತೆಯೇ ಕೋಲುಪದಗಳೂ ಸಹ ವೈವಿಧ್ಯಮಯವಾದುವು. ಈ ಕೋಲು ಪದಗಳನ್ನು ಹಾಡುವುದರಲ್ಲಿ ರುಸ್ತುಮ ಎಂದರೆ

ಕೋಲಾರ ಜಿಲ್ಲೆ ಕೆಂಬೋಡಿಯ ನಾರಾಯಣಪ್ಪನವರು. ದೇವರಪದಗಳಲ್ಲದೆ ಸರಸ, ತಮಾಷೆ, ರಸಿಕತೆಯಿಂದ ಕೂಡಿದ ಪ್ರಣಯಗೀತೆಗಳನ್ನು ಸೊಗಸಾಗಿ ಕೋಲುಹುಯ್ಯುತ್ತಾ ಹಾಡುವುದರಲ್ಲಿ ನಾರಾಯಣಪ್ಪನವರು ಹೆಸರುವಾಸಿಯಾಗಿದ್ದಾರೆ. ಸಾಂಪ್ರದಾಯಿಕವಾಗಿರುವ ಕೋಲಾಟದ ಪದಗಳಿಗೆ ಹೆಜ್ಜೆ ಮತ್ತು ಕೈಗಳನ್ನು ಪಳಗಿಸಿ ಹಲವು ವಸಂತಗಳನ್ನು ಕಳೆದಿರುವ ಕೋಲಾಟದ ನಾರಾಯಣಪ್ಪ, ಆ ಕಲೆಯನ್ನು ೨೧ನೆ ಶತಮಾನಕ್ಕೂ ಪ್ರಸ್ತುಪಡಿಸುತ್ತಿರುವಂಥ ಅಪರೂಪದ ಪ್ರತಿಭಾವಂತ ಕಲಾವಿದರು. ಕೋಲಾಟದ ಕಲೆಯನ್ನು ಬಾಲ್ಯದಲ್ಲೇ ಮೈಗೂಡಿಸಿಕೊಂಡು, ಕಾಲಿಗೆ ಗೆಜ್ಜೆ ಕಟ್ಟಿ ಕೈಗಳಲ್ಲಿ ಕೋಲುಹಿಡಿದು ನೋಡುವವರ, ಕೇಳುಗರ ಮೈಮನ ನವಿರೇಳುವಂತೆ ಹಾಡುತ್ತಾರೆ; ಕೋಲು ಹುಯ್ಯುತ್ತಾರೆ. ತಮ್ಮ ಊರಿನಲ್ಲಿ 'ಶಾರದಾಂಬ ರೈತ ಯುವಕ ಸಂಘ'ವನ್ನು ಸ್ಥಾಪಿಸಿ ಆ ಮೂಲಕ ನಾಡಿನ ಹಲವಾರು ಭಾಗಗಳಲ್ಲಿ ತಮ್ಮ ಕೋಲಾಟ ಕಲೆಯನ್ನು ಪ್ರದರ್ಶಿಸಿದ್ದಾರೆ. ಕೆಂಬೋಡಿ ನಾರಾಯಣಪ್ಪನವರು ಹಾಡುವ ಕೋಲಾಟದ ಹಾಡುಗಳನ್ನು ೧೯೮೩ ರಲ್ಲೇ ಶ್ರೀ ಎಚ್. ಎಲ್. ನಾಗೇಗೌಡರು ಧ್ವನಿಮುದ್ರಣಮಾಡಿಕೊಂಡಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತು ನಾರಾಯಣಪ್ಪನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭೧. ನಾಗವಾರ ಮೋಟಪ್ಪ

ಬಣ್ಣ ಬಣ್ಣದ ಬಟ್ಟೆಯ ಪಟ್ಟಿಗಳನ್ನು ಸುತ್ತಿದ ಸುಮಾರು ಹತ್ತುಹದಿನೈದು ಅಡಿ ಉದ್ದದ ಬಿದಿರಿನ ಜವಳಿಗಳೇ ಪಟಗಳು. ಈ ಪಟಗಳ ತುದಿಯಲ್ಲಿ ಹಿತ್ತಾಳೆ ಅಥವಾ ಬೆಳ್ಳಿಯ ಛತ್ರಿ ತೊಡಿಸಿದ್ದು, ನೋಡಲು ಆಕರ್ಷನೀಯವಾಗಿರುತ್ತದೆ. ಪಟಗಳನ್ನು ಕೈಗಳಲ್ಲಿ ಹಿಡಿದುಕೊಂಡ ಕಲಾವಿದರು ತಮಟೆ ನಗಾರಿಗಳ ಗತ್ತಿಗನುಗುಣವಾಗಿ ವಿವಿಧ ಭಾವಭಂಗಿಗಳಲ್ಲಿ ಕುಣಿಯುತ್ತಾರೆ. ಈ ಕುಣಿತಕ್ಕೆ ಇಷ್ಟೇ ಜನರಿರಬೇಕೆಂಬ ನಿಯಮವೇನಿಲ್ಲ. ಕುಣಿಯುವವರು ಎರಡು ಸಾಲುಗಳಲ್ಲಿ ಪರಸ್ಪರ ಅಭಿಮುಖವಾಗಿ ನಿಂತು ಕುಣಿಯುವಾಗ ಪಟದ ಜವಳಿಗಳು ಅತ್ತಿತ್ತ ಬಾಗುವುದು, ಬಳುಕುವುದು, ವೃತ್ತಾಕಾರವಾಗಿ ಚಲಿಸುತ್ತ ಪಟಗಳನ್ನು ಹಿಂದಕ್ಕೆ ಮುಂದಕ್ಕೆ ಬಾಗಿಸಿ ಕುಣಿಯುವಾಗ ಅವುಗಳಿಗೆ ಸುತ್ತಿದ ಬಟ್ಟೆಯ ಜಾಲರಿಗಳ ಚಲ್ಲಾಟದ ದೃಶ್ಯವಂತೂ ನೋಡಲು ಬಲು ಚಂದ. ಇಂಥ ಸೊಬಗನ್ನು ಪಟಾಕುಣಿತದ ಮೋಟಪ್ಪ ಮನಮೋಹಕವಾಗಿ ಪ್ರದರ್ಶಿಸುತ್ತಾರೆ. ತಮಟೆಯ ಸದ್ದು ಕೇಳಿದಲ್ಲೇ ನಿಂತು , ಅದರ ಗತ್ತಿಗೆ ತಕ್ಕಂತೆ ಹೆಜ್ಜೆಹಾಕುತ್ತಾ ಕೋಲೊಂದನ್ನು ಪಟದಂತೆ ಹಿಡಿದು ಎಮ್ಮೆ-ದನ ಕಾಯುವಾಗಲೆಲ್ಲ ಕುಣಿಯುತ್ತ ಪಟಾಕುಣಿತದ ಹುಚ್ಚು ಹತ್ತಿಸಿಕೊಂಡವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ನಾಗಾವಾರದ ಶ್ರೀ ಮೋಟಪ್ಪನವರು. ನಾಗವಾರದ ದೀವಳಿಗೆ ಹಬ್ಬ, ಕೆಂಗಲ್ ಹನುಮಂತರಾಯನ ಜಾತ್ರೆಯಲ್ಲಿ ವಿಶೇಷವಾಗಿ ಪಟ ಹಿಡಿದು ಕುಣಿಯುತ್ತಿದ್ದ ಶ್ರೀಯುತರು ಕ್ರಮೇಣ ಈ ಕಲಾಪ್ರಕಾರದ ಉತ್ತಮ ಕಲಾವಿದರಾಗಿ ರೂಪುಗೊಂಡರು. ತಮ್ಮ ಕಲೆ ಹಾಗೂ ವಿನಯಶೀಲ ನಡವಳಿಕೆಗಳಿಗೆ ಹೆಸರಾದರು. ಯುವಜನ ಸೇವಾ ಇಲಾಖೆಯ ತರಬೇತಿ ಶಿಬಿರದಲ್ಲಿ ಯುವಕರಿಗೆ ಮತ್ತು ತಮ್ಮೂರಿನ ಯುವಕರಿಗೆ

ಪಟಾಕುಣಿತ ಕಲಿಸಿದ್ದಾರೆ. ಶ್ರೀಯುತರ ಅನುಪಮ ಕಲಾಸೇವೆಯನ್ನ ಗುರುತಿಸಿ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭೨. ಶೆಟ್ಟಿ ಚಿಕ್ಕಯ್ಯ

ಹಾಸನ ಜಿಲ್ಲೆ ಆಲೂರು ತಾಲ್ಲೂಕು ಮರಸು ಹೊಸಹಳ್ಳಿಯ ಶೆಟ್ಟಿ ಚಿಕ್ಕಯ್ಯನವರು ಅತ್ಯಂತ ಉತ್ಕೃಷ್ಟ ಜನಪದ ಕಥೆಗಾರರು. ಸರಳ ಕಥೆಗಳಿಂದ ಮೊದಲುಗೊಂಡು ಸಂಕೀರ್ಣ ಕಥೆಗಳವರೆಗೆ ಇವರ ಬಳಿ ಮುಗಿಯದ ಜನಪದ ಕಥಾಭಂಡಾರವೇ ಅಡಗಿದೆ. ಕಥೆ ಹೇಳುವಲ್ಲಿನ ಇವರ ಜಾಣ್ಮೆ ಕೌಶಲ್ಯ ಅಸಾಧಾರಣವಾದುದು. ಚಿಕ್ಕಯ್ಯನವರು ಕೇವಲ ಜನಪದ ಕಥೆಗಾರರಷ್ಟೇ ಅಲ್ಲದೆ ಚರ್ಮವಾದ್ಯ ತಯಾರಕರೂ ಹೌದು. ಹದಗೊಳಿಸಿದ ಚರ್ಮದಿಂದ ತಮಟೆ, ತಗಾರಿ, ಹರೆ, ದೋಣುಗಳನ್ನು ಸಿದ್ಧಗೊಳಿಸಿ ಬಿಗಿದು ಕಟ್ಟಿ ಬಾರಿಸಿದರೆಂದರೆ ಅದರಿಂದ ಹೊರಡುವ ಕಣಿಕಣಿ ನಾದ ಕೇಳುಗರನ್ನು ಬಡಿದೆಬ್ಬಿಸುವಂತಿರುತ್ತದೆ. ಚಿಕ್ಕಯ್ಯನವರು ಗ್ರಾಮೀಣ ಬಡಗಿ. ಕೃಷಿ ಸಂಬಂಧಿ ಸಲಕರಣೆಗಳನ್ನು ಸಿದ್ಧಪಡಿಸಿ ಸುತ್ತೇಳು ಹಳ್ಳಿಯ ಕೃಷಿಕರಿಗೆ ಒದಗಿಸಿದ್ದಾರೆ. ಡಾ. ರಾಜೇಗೌಡ ಹೊಸಹಳ್ಳಿಯವರು ಇವರ ಮೌಖಿಕ ಸಾಹಿತ್ಯವನ್ನು ಧ್ವನಿಮುದ್ರಿಸಿಕೊಂಡಿರುತ್ತಾರೆ. ಕರ್ನಾಟಕ ಜಾನಪದ ಪರಿಷತ್ತು ಚಿಕ್ಕಯ್ಯನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭೩. ರೇವಣ್ಣಸಿದ್ದಪ್ಪ ಸೈದಪ್ಪ ಕಂಬಾರ

ಬಿಜಾಪುರ ಜಿಲ್ಲೆಯ ಸಾಲೋಟಗಿ ಗ್ರಾಮವು ಜನಪದ ಕಲೆಗಳ ತವರೂರು. ಸುಮಾರು ಎಂಬತ್ತರ ಹರೆಯದ ರೇವಣ್ಣ ಸಿದ್ದಪ್ಪ ಸೈದಪ್ಪ ಕಂಬಾರ ಅವರು ವೃತ್ತಿಯಿಂದ ಕಂಬಾರರು; ಪ್ರವೃತ್ತಿಯಲ್ಲಿ ಜನಪದ ಕಲಾವಿದರು, ಕಂಬಾರರಿಗೆ ಹಿರಿಯರಿಂದ ಬಳುವಳಿಯಾಗಿ ಬಂದದ್ದು ಒಂದೆರಡಲ್ಲ. ದೊಡ್ಡಾಟ, ಸಣ್ಣಾಟ, ಲಾವಣಿ, ಗೀಗೀ, ಭಜನೆ, ಹೆಜ್ಜೆಮೇಳ, ಚಿನ್ನದ ಕೋಲಾಟ ಇತ್ಯಾದಿ ಕಲೆಗಳು. ಗೀಗೀ ಪದಗಳನ್ನು ಸುಶ್ರಾವ್ಯವಾಗಿ ಹಾಡುವುದರೊಂದಿಗೆ ದಪ್ಪು, ದಿಮಡಿ, ತಾಳು, ಏಕತಾರಿ ಇತ್ಯಾದಿ ವಾದ್ಯಗಳನ್ನು ನುಡಿಸುತ್ತಾರೆ. ಸುಮಾರು ಐದುನೂರು ಕಲೆಗಳನ್ನು ಬಲ್ಲೆನೆಂದು ಆತ್ಮವಿಶ್ವಾಸದಿಂದ ಹೇಳಿಕೊಳ್ಳುವ ಶ್ರೀಯುತರು ಶ್ರೀಕೃಷ್ಣಪಾರಿಜಾತದಲ್ಲಿ ಅಂತರ ರಾಜ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯಕ್ಕೆ ದ್ವಿತೀಯ ಸ್ಥಾನ ತಂದುಕೊಟ್ಟವರು. ರಾಜ್ಯದ ನಾನಾ ಕಡೆಗಳಲ್ಲಿ ತಮ್ಮ ಕಲಾಪ್ರದರ್ಶನ ನೀಡಿರುತ್ತಾರೆ. ಹೈದರಾಬಾದ್, ಗುಲಬರ್ಗ ದೂರದರ್ಶನ ಕೇಂದ್ರಗಳು ಇವರ ವೈವಿಧ್ಯಮಯ ಜನಪದ ಕಲೆಯನ್ನು ಪ್ರಸಾರ ಮಾಡಿರುತ್ತವೆ. ೧೯೮೧ ರಲ್ಲೇ ಶ್ರೀ ಎಚ್. ಎಲ್. ನಾಗೇಗೌಡರು ಇವರ ಹಂತಿ ಹಾಡುಗಳು, ಗೀಗೀ ಪದಗಳು, ತಮಾಷೆ ಪದಗಳು, ಭಜನೆ ಪದಗಳು, ಸವಾಲ್ ಜವಾಬ್ ಪದಗಳನ್ನು ಧ್ವನಿಮುದ್ರಿಸಿಕೊಂಡಿರುತ್ತಾರೆ.

ಶ್ರೀ ಕೃಷ್ಣ ಪಾರಿಜಾತವು ಸಣ್ಣಾಟಗಳ ರಾಜ. ರೇವಣ್ಣ ಸಿದ್ದಪ್ಪನವರು ಶ್ರೀ ಕೃಷ್ಣ ಪಾರಿಜಾತದ ಎಲ್ಲಾ ಪಾತ್ರಗಳಲ್ಲೂ ಪಳಗಿದವರು. ಆಟವೆಂದರೆ ಇವರಿಗೆ ಊಟವೂ ಬೇಕಿಲ್ಲ.

ಕಲೆಯಿಂದಲೇ ಬದುಕು ನಡೆಸಬೇಕೆಂದು ೪೦ ವರ್ಷಕ್ಕು ಮಿಕ್ಕು ಪಾರಿಜಾತದಲ್ಲಿ ಅಭಿನಯದ ಅನುಭವ ಪಡೆದರು. ಆಟಕ್ಕೆ ಬಿಡುವು ದೊರೆತಾಗ ಗೀಗೀ ಮೇಳ ಕಟ್ಟಿಕೊಂಡು ಅಲೆದರು. ಕುಸ್ತಿ ಪಟುಗಳಾದ ಕಂಬಾರರು ಬದುಕಿರುವುದು ಬಡತನದಲ್ಲಾದರೂ ಕಲಾಕಾರರಾಗಿ ಹಿರಿತನದ ಬಾಳು ಸಾಗಿಸಿದ್ದಾರೆ. ಇವರ ಕಲೆಯನ್ನು ಸಾಲೋಟಗಿಯವರು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತು ಶ್ರೀ ರೇವಣ್ಣನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭೪. ಎಲ್. ಶಂಕರಪ್ಪ

ಬಯಲಾಟ ಇನ್ನೂ ದಟ್ಟವಾಗಿ ಕಾಣಸಿಗುವ ಜಿಲ್ಲೆಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರಮುಖವಾದುದು. ಕುಂಬಳಗೂಡಿನ ನಂಜಾಚಾರ್ಯ, ಕೆರೆಕೆತ್ತಗನೂರಿನ ರಾಘವ, ಲಕ್ಕೇನಹಳ್ಳಿ ವೆಂಕಟಶಾಮಯ್ಯ, ಸುಂಕದಕಟ್ಟೆ ರಾಮಕೃಷ್ಣಯ್ಯ, ಸುರಧೇನುಪುರದ ದೊಡ್ಡಮುನಿಯಪ್ಪ ಮುಂತಾದವರನ್ನು ನೆನೆಸಿಕೊಳ್ಳುವಾಗ ಬೆಂಗಳೂರು ಸುತ್ತಮುತ್ತಲಿನ ಪ್ರದೇಶ ಒಂದು ಕಾಲಕ್ಕೆ ಮೂಡಲಪಾಯ ಯಕ್ಷಗಾನದ ತವರೂರಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಬಯಲು ರಂಗದಲ್ಲಿ ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುತ್ತಾ ಹಾಡುತ್ತಾ ಹಗಲು ದಣಿದ ಜನತೆಗೆ ರಾತ್ರಿ ಪುಕ್ಕಟೆ ಮನರಂಜನೆಯನ್ನು ನೀಡುತ್ತಿದ್ದ ಯಕ್ಷಗಾನ ಬಯಲಾಟದ ಕಲಾವಿದರು ಇತ್ತೀಚೆಗೆ ಕಡಿಮೆಯಾಗುತ್ತಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ದೊಡ್ಡಬಳ್ಳಾಪುರದವರಾದ ಶ್ರೀ ಎಲ್. ಶಂಕರಪ್ಪನವರು ಬಯಲಾಟದ ಸಂಸ್ಕಾರವುಳ್ಳ ಕುಟುಂಬದಲ್ಲಿ ಜನಿಸಿದವರು; ಮಗ್ಗಗಳ ಒಡನಾಟದಲ್ಲಿ ಬೆಳೆದುಬಂದವರು. 'ಕರಿರಾಜ ಚರಿತ್ರೆ' ಇವರ ಅಚ್ಚುಮೆಚ್ಚಿನ ಪ್ರಸಂಗ. ಯದ್ಲಳ್ಳಿ ಪಾಪಣ್ಣನವರ ಗರಡಿಯಲ್ಲಿ ಪಳಗಿದವರು. ಯದ್ಲಳ್ಳಿ ಪಾಪಣ್ಣನವರ ಯಕ್ಷಗಾನ ಮಂಡಳಿ ಎಂದರೆ ನಾಡಿನಾದ್ಯಂತ ಪ್ರಸಿದ್ಧಿ. ಈ ಮಂಡಳಿ ಸಾಕಷ್ಟು ಕಲಾವಿದರನ್ನು ಬೆಳೆಸಿದೆ; ಪೋಷಿಸಿದೆ. ಕರಿರಾಜ ಚರಿತ್ರೆಯಲ್ಲಿ ತೊಂಡನೂರು ರಕ್ಕಸಿ ಪಾತ್ರವನ್ನು ಕಳೆದ ೩೦ ವರ್ಷಗಳಿಂದಲೂ ಸತತವಾಗಿ ಅಭಿನಯಿಸಿಕೊಂಡು ಬಂದ ಶಂಕರಪ್ಪನವರು, ಯದ್ಲಳ್ಳಿ ಪಾಪಣ್ಣನವರ ಯಕ್ಷಗಾನ ಮಂಡಳಿಗೆ ಬಾಲ್ಯದಲ್ಲೇ ಪಾದಾರ್ಪಣೆ ಮಾಡಿದವರು. ತಂದೆಯಿಂದ ತೊಂಡನೂರು ರಕ್ಕಸಿ ಪಾತ್ರ ಬಳುವಳಿಯಾಗಿ ಬಂತು. ಅಭಿನಯ ಪ್ರತಿಭೆಗಾಗಿ ಇವರಿಗೆ ಹಲವಾರು ಪುರಸ್ಕಾರಗಳು ಲಭಿಸಿವೆ. ರಾಜ್ಯದಾದ್ಯಂತ ಪ್ರದರ್ಶನಗಳನ್ನು ನೀಡಿದ್ದಾರೆ. ಅಪಾರ ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದಾರೆ. ರಕ್ಕಸಿಯೊಂದಿಗೆ ಈಶ್ವರ, ಕುಂಭಿಣಿದೇವಿ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಶಂಕರಪ್ಪನವರ ನೆನಪಿನಲ್ಲಿ ಅಪಾರ ಪದಗಳು, ಮಟ್ಟುಗಳು ತುಂಬಿ ತುಳುಕುತ್ತಿವೆ. ಇಂದಿಗೂ ನಟರಾಗಿ ಬಯಲಾಟದಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ. ಪರಿಷತ್ತು ಶಂಕರಪ್ಪನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭೫. ಬನ್ನೂರು ಪಾರ್ವತಮ್ಮ

ಕನ್ನಡ ನಾಡಿನ ಹಳ್ಳಿಹಳ್ಳಿಗಳಲ್ಲಿ ಭಜನಾ ತಂಡಗಳಿವೆ. ಪುರುಷರ ಭಜನಾ ಮೇಳಗಳ

ಜೊತೆಗೆ ಹೆಂಗಸರ ಭಜನೆ ಮೇಳಗಳಿರುವುದು ಗಮನಾರ್ಹವಾಗಿದೆ. ಭಕ್ತಿ, ತತ್ವ ಈ ಭಜನೆಗಳಲ್ಲಿ ಕಂಡುಬರುವ ಅಂಶ. ಗುರುಮುಖೇನ ದೀಕ್ಷೆ ಪಡೆದು ಏಕದಾರಿ, ದಮಡಿ, ತಾಳಗಳನ್ನು ನುಡಿಸುತ್ತಾ ಹಾಡುವ ಈ ಭಜನೆಗಳೇ ತತ್ವಪದಗಳು, ಅನುಭಾವ ಗೀತೆಗಳು. ಹಬ್ಬಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಬೆಳತನಕ ಈ ತತ್ವಪದಗಳನ್ನು ಹಾಡುವುದುಂಟು. ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಬನ್ನೂರು ಗ್ರಾಮದ ಪಾರ್ವತಮ್ಮನವರು ಮುತ್ತುಗದ ಎಲೆಗಳನ್ನು ಆರಿಸಿ ತಂದು ದೊನ್ನೆ ಕಟ್ಟಿ ಮಾರಿ ಜೀವನ ನಡೆಸುತ್ತಿರುವುದರಿಂದ ಇವರಿಗೆ ಊರ ಜನ ದೊನ್ನೆಕಟ್ಟೊ ತಾರ್ವತಮ್ಮ ಎಂದೇ ಕರೆಯುತ್ತಾರೆ. ಪಾರ್ವತಮ್ಮನವರು ಅತ್ಯುತ್ತಮ ತತ್ವಪದಕಾರರು. ಕಳೆದ ೧೫ ವರ್ಷಗಳಿಂದಲೂ ಅನುಭಾವ ಅಧ್ಯಾತ್ಮ ನೀತಿ ತತ್ವಗಳಿಂದ ಕೂಡಿದ ತತ್ವಪದ ಮತ್ತು ಲಾವಣಿಗಳನ್ನು ಹಾಡುತ್ತಾ ಬಂದಿದ್ದಾರೆ. ದೊಡ್ಡ ಹಾರುವಳ್ಳಿ ಪುಟ್ಟೇಗೌಡರು ಇವರಿಗೆ ತತ್ವಪದಗಳ ದೀಕ್ಷೆ ನೀಡಿದ ಗುರುಗಳು. ಮೈಸೂರು ಬಾನುಲಿಯಲ್ಲಿ ಇವರ ತತ್ವಪದಗಳು ಪ್ರಸಾರವಾಗಿವೆ. ಜಯಂತಿ, ಹಬ್ಬಹರಿದಿನಗಳು, ಜಾತ್ರೆ ಉತ್ಸವಗಳಲ್ಲಿ ಇವರ ಇಂಪಾದ ಹಾಡುಗಾರಿಕೆ, ಭಕ್ತಿರಸದಿಂದ ಕೂಡಿದ ತತ್ವಪದ ಗಾಯನ ನಡೆಯುತ್ತದೆ. ಪರಿಷತ್ತು ಪಾರ್ವತಮ್ಮನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭೬ ಸೂರನಹಳ್ಳಿ ಬೀಯಪ್ಪ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಸೂರನಹಳ್ಳಿಯ ಸುಮಾರು ೬೩ರ ಹರೆಯದ ಬೀಯಪ್ಪನವರಿಗೆ ತೊಗಲುಗೊಂಬೆಯಾಟವು ವಂಶಪಾರಂಪರ್ಯವಾಗಿ ಬಂದ ಬಳುವಳಿ. ಕಳೆದ ೫೩ ವರ್ಷಗಳಿಂದಲೂ ತೊಗಲುಗೊಂಬೆಗಳನ್ನು ಆಡಿಸುತ್ತಾಬಂದಿರುವ ಪರಿಣತ ಕಲಾವಿದರು. ಶ್ರುತಿಬದ್ಧವಾಗಿ, ತಾಳಬದ್ಧವಾಗಿ ಸಾಂದರ್ಭಿಕ ಘಟನೆಗಳನ್ನು ಅನುಭವಕ್ಕೆ ತರುವ ಗಾಯನ ನೈಪುಣ್ಯ ಬೀಯಪ್ಪನವರಿಗಿದೆ. ಶಾಸ್ತ್ರೀಯ ರಾಗಗಳನ್ನು ಚೆನ್ನಾಗಿ ಬಲ್ಲವರು. ತೊಗಲು ಗೊಂಬೆಗಳನ್ನು ತಯಾರಿಸುವುದು, ಆಡಿಸುವುದು ಮತ್ತು ಹಾಡುವುದು ಬೀಯಪ್ಪನವರ ಕಲಾಪ್ರಪಂಚ. ಬಿಳಿಯ ಪರದೆಯ ಮೇಲೆ ಬಣ್ಣದ ಮಾಯಾಲೋಕವನ್ನು ಸೃಷ್ಟಿಸುವುದರೊಂದಿಗೆ, ರಾಮಾಯಣ–ಮಹಾಭಾರತ ಕಥೆಗಳನ್ನು ನಿರರ್ಗಳವಾಗಿ ಹಾಡುತ್ತಾರೆ. ಬೀಯಪ್ಪನವರು ವೃತ್ತಿಯಲ್ಲಿ ಕೃಷಿಕರಾದರೂ, ವಂಶಪಾರಂಪರ್ಯವಾಗಿ ಬಂದ ಅಪೂರ್ವ ತೊಗಲುಗೊಂಬೆಗಳನ್ನು ಕುಣಿಸಿ ವರ್ಣಮಯ ಪ್ರಪಂಚವನ್ನು ಸೃಷ್ಟಿಸುವುದರಲ್ಲಿ ನಿಷ್ಣಾತರು. ಕಥಾನಿರೂಪಣೆಯಲ್ಲಿಯೂ ಅಷ್ಟೇ ಪ್ರತಿಭಾವಂತರು. ಸೀತಾ ಕಲ್ಯಾಣ, ಪಂಚವಟಿ, ವೈಕುಂಠ ರಾವಣ, ಲವಕುಶ ಮುಂತಾದ ರಾಮಾಯಣ, ಮಹಾಭಾರತ, ಶಿವಪುರಾಣಗಳಿಂದ ಆಯ್ದ ಪ್ರಸಂಗಗಳನ್ನು ಆಧರಿಸಿ ಆಟ ಆಡಿಸುತ್ತಾರೆ. ಯುವಜನಾಂಗ ಈ ಕಲೆಯತ್ತ ಗಮನ ಹರಿಸುತ್ತಿಲ್ಲವೆಂಬ ಕೊರಗು ಇವರದು. ಗೊಂಬೆಯಾಟಕ್ಕೆ ಶಾಸ್ತ್ರೀಯ ಸಂಗೀತದ ಅರಿವು ಅತ್ಯಗತ್ಯವೆಂದು ಪ್ರತಿಪಾದಿಸುತ್ತಾರೆ. ಕರ್ನಾಟಕ ಜಾನಪದ ಪರಿಷತ್ತು ಬೀಯಪ್ಪನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭೭. ಜಿ. ಎನ್. ನಾರಾಯಣಪ್ಪ

ಜನಪದ ಕಥೆಗಳಲ್ಲಿ ಕಂಡುಬರುವ ಅಲೌಕಿಕ ಕಲ್ಪನೆಯೊಂದನ್ನು ಮನರಂಜನೆಯ ಸಾಧನವನ್ನಾಗಿ ಬಳಸಿಕೊಂಡ ಜನಪದ ಕಲಾವಿದರ ಜಾಣ್ಮೆ ಮೆಚ್ಚತಕ್ಕದ್ದು. ಬಿದರಿನ ದಬ್ಬೆಗಳಿಂದ ಮಾಡಿದ ಕುದುರೆಯಾಕಾರದ ದಟ್ಟಕ್ಕೆ ಕಾಗದ, ಬಣ್ಣದ ಬಟ್ಟೆಗಳಿಂದ ಅಲಂಕರಿಸಿ ಅದನ್ನು ಕುಣಿಸುವವರು ತಮ್ಮ ಸೊಂಟಕ್ಕೆ ಕಟ್ಟಿಕೊಂಡು ಕುಣಿಸುತ್ತಾರೆ. ರಾಜಪೋಷಾಕು ಧರಿಸಿದ ಕಲಾವಿದರು ಲಗಾಮು ಕೈಯಯಲ್ಲಿ ಹಿಡಿದು, ಕುದುರೆಯ ತಲೆ ಬಾಲಗಳನ್ನು ಮುಂದಕ್ಕೆ ಹಿಂದಕ್ಕೆ ಮೇಲಕ್ಕೆ ಕೆಳಕ್ಕೆ ಜಗ್ಗಾಡಿಸುತ್ತಾ ಕುಣಿಸುತ್ತಾರೆ. ನೋಡುಗರಿಗೆ ನಿಜವಾದ ಕುದುರೆಯೇ ಕುಣಿಯುತ್ತಿರುವಂತೆ ಭಾಸವಾಗುತ್ತದೆ. ನಾಗಸ್ವರ, ಡೋಲು ತಮಟೆ ಮೊದಲಾದ ವಾದ್ಯಗಳೊಂದಿಗೆ ಉತ್ಸವ, ಮೆರವಣಿಗೆ ಸಂದರ್ಭಗಳಲ್ಲಿ ಕೀಲುಕುದುರೆ ಕುಣಿತ ಪ್ರದರ್ಶಿಸುತ್ತಾರೆ.

ಕೀಲುಕುದುರೆ ಕುಣಿತ ಅತ್ಯಂತ ಮನರಂಜನೀಯವಾದ ಕಲಾಪ್ರಕಾರ. ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆಯ ಶ್ರೀ ಜಿ. ಎನ್. ನಾರಾಯಣಪ್ಪ ಕೀಲುಕುದುರೆ ಕುಣಿಸುವುದರಲ್ಲಿ ಹೆಸರಾದ ಕಲಾವಿದರು. ವೃತ್ತಿಯಲ್ಲಿ ಕುಂಬಾರರು. ಮಣ್ಣಿನಲ್ಲಿ ಬಿದಿರಿನಲ್ಲಿ ಅಥವಾ ಸರಿಹೊಂದಬಹುದಾದ ಇನ್ನಾವುದೇ ವಸ್ತುವಿನಲ್ಲಿ ಆಕೃತಿಗಳನ್ನು ತಯಾರಿಸಿ ರೂಪು ಕೊಟ್ಟು ಜೀವತುಂಬಿ ಕುಣಿಸುವುದು ನಾರಾಯಣಪ್ಪನವರಿಗೆ ಕರತಲಾಮಲಕ. ಗಾರುಡಿಗೊಂಬೆ ಮತ್ತು ಕೀಲುಕುದುರೆಗಳನ್ನು ನಿರ್ಮಾಣ ಮಾಡುವ ಮತ್ತು ಆಡಿಸುವ ಕಲೆ ಇವರಿಗೆ ಸಿದ್ಧಿಸಿದೆ. ನಾಡಿನಲ್ಲಷ್ಟೇ ಅಲ್ಲದೆ ಕೇರಳ, ತಮಿಳುನಾಡು, ದೆಹಲಿ, ಮುಂಬಯಿ, ಪಾಂಡಿಚೇರಿ ಮೊದಲಾದ ಹೊರನಾಡುಗಳಲ್ಲೂ ತಮ್ಮ ಕಲಾಪ್ರದರ್ಶನ ನೀಡಿದ್ದಾರೆ. 'ಶ್ರೀ ಕುಂಭೇಶ್ವರಸ್ವಾಮಿ ಜಾನಪದ ಕಲಾಸಂಘ'ವನ್ನು ಸ್ಥಾಪಿಸಿ ತರುಣರಿಗೆ ಕಲಿಸುತ್ತಿದ್ದಾರೆ. ಪರಿಷತ್ತು ನಾರಾಯಣಪ್ಪನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭೮. ಕೋರೇನಹಳ್ಳಿ ವೆಂಕಟೇಗೌಡ

ಸುಗ್ಗಿಯ ನಂತರ ನಡೆಯುವ ಗ್ರಾಮದೇವತೆಯ ಹಬ್ಬಹರಿದಿನಗಳಲ್ಲಿ ರಂಗದ ಕುಣಿತ ನಡೆಯುತ್ತದೆ. ಊರ ದೇವರ ಗುಡಿಯ ಮುಂದಣ ಬಯಲೇ ರಂಗ. ಅಂಗಿ, ಕಾಸೆ, ಪಂಚೆ ಧರಿಸಿ ತಲೆಗೆ ಮತ್ತು ನಡುವಿಗೆ ವಸ್ತ್ರ ಬಿಗಿದು ಬಲಗೈಯಲ್ಲಿ ಸಣ್ಣ ಚೌಕ ಹಿಡಿದು ಕಾಲಿಗೆ ಗೆಜ್ಜೆ ಕಟ್ಟಿ ತಮಟೆಗಳ ಅಬ್ಬರದ ಸದ್ದಿನ ಗತ್ತಿಗೆ ತಕ್ಕಂತೆ ಮೂರ್ಹೆಜ್ಜೆ, ಐದೆಜ್ಜೆ, ಏಳ್ಹೆಜ್ಜೆ ವರಸೆಗಳಲ್ಲಿ ಕುಣಿಯುತ್ತಾರೆ. ಬಲಗೈಯಲ್ಲಿ ಹಿಡಿದಿರುವ ಚೌಕವನ್ನು ಬೀಸುತ್ತಾ ಬಲದಿಂದ ಎಡಕ್ಕೆ, ಎಡದಿಂದ ಬಲಕ್ಕೆ ಕುಣಿಯುತ್ತಾರೆ. ಹೆಜ್ಜೆ ಕುಣಿತದ ಪದಗತಿಯಲ್ಲಿ ಲಾಲಿತ್ಯವಿದ್ದರೆ, ಮಾರಿ ಕುಣಿತದ ಪದಗತಿಯಲ್ಲಿ ಬಿರುಸಿದೆ. ಒಕ್ಕಲುತ ಮಾಡುವವರಿಗೆ ಹಿಗ್ಗಿನ ಕುಣಿತವಿದು. ಕುಣಿತದ ಮಧ್ಯೆ ದಣಿವಾರಿಸಿಕೊಳ್ಳಲು ನಿಂತಾಗ ಪದಗಳನ್ನು ಹಾಡುತ್ತಾರೆ. ಪ್ರಣಯ, ರಸಿಕತೆ, ಕೀಟಲೆಗೆ ಸಂಬಂಧಿಸಿ ರಂಗದ ಪದಗಳು ಸಹಜವಾಗಿ, ಸರಾಗವಾಗಿ ರಂಗದ ಮೇಲೆ ನುಸುಳಿಕೊಂಡು ಬರುತ್ತವೆ.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಕೋರೇನಹಳ್ಳಿಯ ಶ್ರೀ ವೆಂಕಟೇಗೌಡರು ಈ ನಾಡು ಕಂಡ ಅಪರೂಪದ ರಂಗದ ಕುಣಿತ ಕಲಾವಿದರು. ಪರಿಷತ್ತು ನಿರ್ಮಾಣ ಮಾಡಿ ಬೆಂಗಳೂರು ದೂರದರ್ಶನದಲ್ಲಿ ಪ್ರಸಾರ ಮಾಡಿದ 'ಸಿರಿಗಂಧ' ಸಂಚಿಕೆಯಲ್ಲಿ ಶ್ರೀಯುತರ ರಂಗದ ಕುಣಿತ ಪ್ರದರ್ಶನವು ಅದ್ಭುತವಾಗಿ ಮೂಡಿಬಂದಿದೆ. ಗೌಡರು ತಮ್ಮ ಓರಿಗೆಯವರೊಂದಿಗೆ ಕುಣಿಯುವುದಲ್ಲದೆ, ಯುವಕರಿಗೂ ತಮ್ಮ ಕಲೆಯನ್ನು ಕಲಿಸಿ ಪೋಷಿಸಿಕೊಂಡು ಬಂದಿದ್ದಾರೆ. ಪರಿಷತ್ತು ವೆಂಕಟೇಗೌಡರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೭೯. ಅಂಬಲಜೀರಹಳ್ಳಿಯ ಚಂದ್ರಮ್ಮ

ಮದುವೆ ಮುಂಜಿ ಮುಂತಾದ ಶುಭಕಾರ್ಯಗಳಲ್ಲಿ ಹೆಣ್ಣುಮಕ್ಕಳು ಹಾಡುವ ಸೋಬಾನೆ ಪದಗಳು ವೈವಿಧ್ಯಮಯವಾದವುಗಳು. ಹೆಣ್ಣಿನವರು-ಗಂಡಿನವರೆಂದು ಎರಡು ಗುಂಪುಗಳಾಗಿ ವಿಂಗಡಿಸಿಕೊಂಡು ತಿಳಿಹಾಸ್ಯದಿಂದ ಕೂಡಿ ಹಾಡುವ ಈ ಪದಗಳು ಶಿವ-ಪಾರ್ವತಿಯರ ಮದುವೆಯವರೆಗೆ ಸಾಗುತ್ತವೆ. ತಮ್ಮ ಹಳ್ಳಿಗಳ ಕಡೆ ಸೋಬಾನದ ಹಕ್ಕಿಗಳು ಎಂದು ಒಂದು ಜಾತಿಯ ಹಕ್ಕಿಗಳಿವೆ. ಅವೂ ಹೀಗೆಯೇ ಎರಡು ಗುಂಪಾಗಿ ಕುಳಿತು ಹಾಡುತ್ತವೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಅಂಬಲಜೀರಹಳ್ಳಿಯ ಚಂದ್ದಮ್ಮ ಈ ಗುಂಪಿಗೆ ಸೇರಿದ ಹಾಡುಗಾರ್ತಿ. ಹಾಡಿನ ಬಗ್ಗೆ ಬಾಲ್ಯದಿಂದಲೇ ಆಸಕ್ತಿ ಬೆಳೆಸಿಕೊಂಡು ನೆರೆಹೊರೆಯವರಿಂದ, ಅಜ್ಜಿ, ತಾಯಿ, ಅತ್ತೆಯಿಂದ ಹಾಡು ಹೇಳಿಸಿಕೊಂಡು ಕಲಿತದ್ದಲ್ಲದೆ, ಹುಟ್ಟಿದ ಮನೆಯಲ್ಲಿ ಬಳುವಳಿಯಾಗಿ ಬಂದ ಸೋಬಾನೆ ಪದಗಳ ಬುತ್ತಿಗಂಟನ್ನು ಕೊಟ್ಟ ಮನೆಯಲ್ಲೂ ಬಿಚ್ಚಿದರು. ೧೨ನೆಯ ವಯಸ್ಸಿಗೆ ಸೋಬಾನೆ ಪದಗಳನ್ನು ಹಾಡುವುದಕ್ಕೆ ತಮ್ಮನ್ನು ತೊಡಗಿಸಿಕೊಂಡ ಚಂದ್ರಮ್ಮನವರು, ಸಾವಿರಾರು ತ್ರಿಪದಿಗಳನ್ನು ತಮ್ಮ ನೆನಪಿನ ಕೋಶದಲ್ಲಿರಿಸಿಕೊಂಡು 'ಆದಾವ ನಿಮ ಜೋಳ; ಉಳದಾವ ನಮ ಹಾಡು' ಎಂದು ಬಾಳಿನುದ್ದಕ್ಕು ಹಾಡುತ್ತಲೇ ಬಂದಿದ್ದಾರೆ. ಸುತ್ತೇಳು ಹಳ್ಳಿಗಳಲ್ಲಿ ನಡೆಯುವ ಮದುವೆಗಳಲ್ಲಿ ಚಂದ್ರಮ್ಮನ ಸೋಬಾನವಿಲ್ಲದೆ ನಡೆಯುವುದೇ ಇಲ್ಲ. ವರ್ಷಕ್ಕೊಮ್ಮೆ ಆದಿಚುಂಚನಗಿರಿಯಲ್ಲಿ ನಡೆಯುವ 'ಶ್ರೀ ಭೈರವೇಶ್ವರ ಜನಪದ ಗೀತಗಾಯನ' ಮೇಳಕ್ಕೆ ತಪ್ಪದೆ ಹಾಜರಾಗಿ ಭೈರವನಿಗೆ ತಮ್ಮ ಗಾಯನ ಸೇನೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯವು ನಡೆಸಿದ ೧೮ನೆಯ ಅಖಿಲ ಕರ್ನಾಟಕ ಜಾನಪದ ಸಮಾವೇಶದಲ್ಲಿ ಸಂಮಾನಿತರಾಗಿದ್ದಾರೆ ನಾಡಿನ ಅನೇಕ ಕಡೆ ನಡೆದ ಸಮಾರಂಭಗಳಲ್ಲಿ, ಸಮ್ಮೇಳನಗಳಲ್ಲಿ ಹಾಡಿ ಭೇಷ್ ಎನಿಸಿಕೊಂಡಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತು. ನಾಗಮಂಗಲ ತಾಲ್ಲೂಕು ಹನುಮನಹಳ್ಳಿಯ ಶ್ರೀ ಹ. ಕ. ರಾಜೇಗೌಡರು ತಮ್ಮ ತಂದೆ ದಿವಂಗತ ಶ್ರೀ ಕಪನೀಗೌಡ ಮತ್ತು ತಾಯಿ ದಿ. ಶ್ರೀಮತಿ ನಿಂಗಮ್ಮ ಅವರುಗಳ ನೆನಪಿಗಾಗಿ ನೀಡಿರುವ ದಿ. ಶ್ರೀಮತಿ ನಿಂಗಮ್ಮ ಕಪನೀಗೌಡ ದತ್ತಿನಿಧಿಯಿಂದ ಪರಿಷತ್ತು ಚಂದ್ರಮ್ಮನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೮೦. ಕರಡಗೆರೆ ನಿಂಗಮ್ಮ

ಹಾಡಿನ ಸಂಪತ್ತನ್ನು ನೆನಪಿನಲ್ಲಿರಿಸಿಕೊಂಡು ಸಮಯ ಸಂದರ್ಭ ಒದಗಿದಾಗ ಹಾಡಿನ ಸುಧೆಯನ್ನೇ ಹರಿಸುವ ಗರತಿಯರು ಗ್ರಾಮಾಂತರ ಪ್ರದೇಶಗಳಲ್ಲಿ ಬಹಳಷ್ಟು ಮಂದಿ ಇದ್ದಾರೆ. ಶುಭಕಾರ್ಯಗಳ ಎಲ್ಲಾ ಸಂದರ್ಭಗಳಿಗೂ ಅನ್ವಯವಾಗುವ ರೀತಿಯಲ್ಲಿ ಹಾಡುವುದು ಇವರ ಸೊಗಸುಗಾರಿಕೆ. ಕಿತ್ತು ತಿನ್ನುವ ಬಡತನದ ನಡುವೆಯು ತಮ್ಮೆಲ್ಲ ನೋವು-ಕಷ್ಟಗಳನ್ನು ಮರೆತು ಭಾವಪೂರ್ಣವಾಗಿ ಸುಶ್ರಾವ್ಯವಾಗಿ ಹಾಡುವ ಕೋಗಿಲೆಗಳಿವರು. ತುಮಕೂರು ಜಿಲ್ಲೆ ಕರಡಗೆರೆ ನಿಂಗಮ್ಮ ಈ ಗುಂಪಿಗೆ ಸೇರಿದ ಅಪರೂಪದ ಹಾಡುಗಾರ್ತಿ. ವರ್ಷಕ್ಕೊಮ್ಮೆ ಆದಿಚುಂಚನಗಿರಿಯಲ್ಲಿ ನಡೆಯುವ ಜನಪದ ಗೀತಗಾಯನ ಮೇಳದಲ್ಲಿ ಭೈರವನಿಗೆ ತನ್ನ ಗಾಯನ ಸೇವೆಯನ್ನು ನಿವೇದಿಸಿ ಬರುವ ನಿಂಗಮ್ಮ ನೆರೆಹೊರೆಯವರಿಂದ, ಅವ್ವನಿಂದ ಪದ ಕಲಿತವರು. ನಿಂಗಮ್ಮನವರದು ಲಯಬದ್ಧವಾದ ಮತ್ತು ಮಧುರವಾದ ಹಾಡುಗಾರಿಕೆ. ಸುತ್ತೇಳು ಹಳ್ಳಿಯ ದೇವರ ಜಾತ್ರೆಗಳಲ್ಲಿ ಮದುವೆಗಳಲ್ಲಿ ಈಕೆಯ ಕಂಠಕ್ಕೆ ಬಿಡುವಿರುವುದಿಲ್ಲ. ಕುರಿತೋದದೆಯು ಕಾವ್ಯ ಪ್ರಯೋಗ ಪರಿಣತಮತಿಯಾದ ನಿಂಗಮ್ಮನವರು, ಅಕ್ಷರದ ಗಂಧಗಾಳಿ ಗೊತ್ತಿಲ್ಲದಿದ್ದರೂ ತಮ್ಮ ನೆನಪಿನಿಂದಲೇ ಸೋಬಾನೆ ಪದ, ದೇವರ ಪದಗಳನ್ನು ಗಂಟೆಗಟ್ಟಲೆ ನಿರರ್ಗಳವಾಗಿ ಹಾಡುತ್ತಾರೆ. ಎಡಗೈ ಹೆಬ್ಬೆಟ್ಟಿನ ಪದವಿ ಇದ್ದರೂ ಸಾವಿರ ಪದಗಳನ್ನು ಒಂಟೆಯ ಮೇಲೆ ಹೇರಿಕೊಂಡು ಬಂದವರು. ದಿನ ನಿತ್ಯದ ನೋವು ನಲಿವುಗಳನ್ನು ಹಾಡುಗಳ ಮೂಲಕ ಹೊರಹಾಕಿದರು. ನಾಗಮಂಗಲ ತಾಲ್ಲೂಕು ಹನುಮನಹಳ್ಳಿಯ ಶ್ರೀ ಹ. ಕ. ರಾಜೇಗೌಡರು ತಮ್ಮ ತಂದೆ ದಿವಂಗತ ಶ್ರೀ ಕಪನೀಗೌಡ ಮತ್ತು ತಾಯಿ ದಿ. ಶ್ರೀಮತಿ ನಿಂಗಮ್ಮ ಅವರುಗಳ ನೆನಪಿಗಾಗಿ ನೀಡಿರುವ ದಿ. ಶ್ರೀಮತಿ ನಿಂಗಮ್ಮ ಕಪನೀಗೌಡ ದತ್ತಿನಿಧಿಯಿಂದ ಪರಿಷತ್ತು ನಿಂಗಮ್ಮನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೮೧. ಶಿವಲಿಂಗಪ್ಪ ಬಸಪ್ಪ ಕರವಿನಕೊಪ್ಪ

ಬೆಳಗಾವಿ ಜಿಲ್ಲೆ ಬೆಳಗಾವಿ ತಾಲ್ಲೂಕಿನ ಮಾರೀಹಾಳದ ಶಿವಲಿಂಗಪ್ಪ ಬಸಪ್ಪ ಕರವಿನಕೊಪ್ಪ ಸಣ್ಣಾಟದ ಅಪರೂಪದ ಕಲಾವಿದರು. ಬಾಲ್ಯದಿಂದಲೂ ಸಣ್ಣಾಟದಲ್ಲಿ ಬಲು ಆಸಕ್ತಿ. ದೊಡ್ಡಪ್ಪ ಶ್ರೀ ಮಲ್ಲಪ್ಪ ಕರವಿನಕೊಪ್ಪನವರ ಮಾರ್ಗದರ್ಶನದಲ್ಲಿ ತರಬೇತಿ. ಸಣ್ಣ ಊರಾದ ಮಾರೀಹಾಳದಲ್ಲಿ ಸಣ್ಣಾಟದ ತಂಡ ಕಟ್ಟಿ ನಾಡಿನ ತುಂಬಾ ಸಣ್ಣಾಟದ ಸೊಗಸು ಹರಡಿದ ಮಾಸ್ತರ ಕರವಿನಕೊಪ್ಪ, ಕಳೆದ ೪೦ ವರ್ಷಗಳಿಂದಲೂ ನಿರಂತರವಾಗಿ ಸಣ್ಣಾಟದ ಕಲಾವಿದರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಕರವಿನಕೊಪ್ಪ ಸಣ್ಣಾಟದ ಕಲಾವಿದರಷ್ಟೇ ಅಲ್ಲ ಅತ್ಯುತ್ತಮ ದಪ್ಪುವಾದಕರು. ಇವರು ದಪ್ಪು ಬಾರಿಸತೊಡಗಿದರೆ ಜನರು ಕಿಂದರಜೋಗಿಗೆ ಮರುಳಾದಂತೆ ಓಡೋಡಿ ಬಂದು ನೆರೆಯುತ್ತಾರೆ. ಇವರ ಕೈ ಚಳಕ ಅದ್ವಿತೀಯವಾದುದು, ಕೌಶಲ್ಯ ಅಸಾಧಾರಣವಾದುದು. ಇವರಿಗೆ ದೆಹಲಿಯಿಂದ ಗೌಳಗಿತ್ತಿ ಗಂಗಾಸಾನಿ ಚಿಮಣಾ ನಾಟಕ ಪ್ರಶಸ್ತಿ ಲಭಿಸಿದೆ. ಬೆಳಗಾವಿಯಲ್ಲಿ ಜಾನಪದ ಕಲಾವಿದರ ಸಂಘ ಕಟ್ಟಿದ್ದಾರೆ. ಕರ್ನಾಟಕದಲ್ಲಷ್ಟೇ

ಅಲ್ಲದೆ ಗೋವಾ, ಮಹಾರಾಷ್ಟ್ರಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಹಲವಾರು ಮಾನ ಸನ್ಮಾನಗಳು ಸಂದಿವೆ, ಪ್ರಶಸ್ತಿಗಳು ಲಭಿಸಿವೆ. ಜನಪರ ಕಾರ್ಯಕ್ರಮಗಳಲ್ಲಿಯೂ ಸಹ ಅನೇಕ ಸರ್ಕಾರೀ ಇಲಾಖೆಗಳು ಇವರ ಸೇವೆಯನ್ನು ಬಳಸಿಕೊಂಡಿವೆ. ಪರಿಷತ್ತು ಕರವಿನಕೊಪ್ಪ ಅವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ವಿಶೇಷ ಪುರಸ್ಕಾರ ಪ್ರಶಸ್ತಿ : ಜೆ. ಡಿ. ಗಂಗಯ್ಯ

ಸುಮಾರು ೬೬ರ ಹರೆಯದ ಶ್ರೀ ಜೆ. ಡಿ. ಗಂಗಯ್ಯನವರು ಕರ್ನಾಟಕದ ಸರ್ಕಾರದ ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್. ಮೈಸೂರು ವಿಶ್ವವಿದ್ಯಾಲಯದ ಬಿ. ಇ. ಪದವಿಧರರಾದ ಶ್ರೀಯುತರು ತಮ್ಮ ಸೇವಾವಧಿಯ ಉದ್ದಕ್ಕೂ ಪ್ರಾಮಾಣಿಕತೆ, ದಕ್ಷತೆ, ವಿನಯಶೀಲ ನಡವಳಿಕೆಗಳಿಂದಾಗಿ ಇಲಾಖೆಯ ಸಮಸ್ತರ ಮತ್ತು ಜನರ ಪ್ರೀತಿ, ಮೆಚ್ಚುಗೆಗಳಿಗೆ ಕಾರಣರಾದರು. ಸದ್ಯ ಶ್ರೀ ಗಂಗಯ್ಯನವರು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗ ನಿಪುಣರೆನಿಸಿಕೊಂಡಿದ್ದಾರೆ.

ಜಾನಪದ ಲೋಕವನ್ನು ಕಟ್ಟುವ ಸಂದರ್ಭದಲ್ಲಿ ರಾಮನಗರದ ಪಿಡಬ್ಲ್ಯುಡಿ ಇಲಾಖೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಗಂಗಯ್ಯನವರು ನೀಡಿದ ನೆರವು ಅಸಾಧಾರಣವಾದುದು. ತಮ್ಮ ಅತ್ಯಮೂಲ್ಯವಾದ ಸಲಹೆ, ರಚನಾತ್ಮಕ ಸಹಕಾರ ನೀಡುವುದರ ಮೂಲಕ ಜಾನಪದ ಲೋಕದ ನಿರ್ಮಾಣಕ್ಕೆ ನೆರವಾಗಿರುತ್ತಾರೆ. ಶ್ರೀ ಜೆ. ಡಿ. ಗಂಗಯ್ಯನವರಂತಹ ಹಲವರ ಶ್ರಮ, ಸಹಕಾರಗಳಿಂದಾಗಿ ಜಾನಪದ ಲೋಕವಿಂದು ಭಾರತದ ಅತಿದೊಡ್ಡ ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಳ್ಳುತ್ತಿದೆ. ಶ್ರೀ ಜೆ. ಡಿ. ಗಂಗಯ್ಯನವರ ಜಾನಪದ ಸೇವೆಯನ್ನು ಗೌರವಿಸುವುದರ ಕುರುಹಾಗಿ ಕರ್ನಾಟಕ ಜಾನಪದ ಪರಿಷತ್ತು 'ವಿಶೇಷ ಪುರಸ್ಕಾರ'ವನ್ನು ನೀಡಿ ಗೌರವಿಸಿರುತ್ತದೆ.

## ೮೩. ತೈಲೂರು ವೆಂಕಟಪ್ಪ

ತೈಲೂರು ವೆಂಕಟಪ್ಪ ಎಂದೇ ಹೆಸರಾದ ೫೪ರ ಹರೆಯದ ಶ್ರೀ ಎಚ್. ವೆಂಕಟಕೃಷ್ಣೇಗೌಡ ಅವರು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ತೈಲೂರು ಗ್ರಾಮದವರು. ಬಿ.ಎಸ್ಸಿ. ಪದವೀಧರರಾದ ಶ್ರೀಯುತರು ಜಾನಪದ ಜಗತ್ತಿಗೆ ಪಾದಾರ್ಪಣೆ ಮಾಡಿದ್ದು ಶ್ರೀ ಎಚ್. ಎಲ್. ನಾಗೇಗೌಡರ 'ನನ್ನೂರು' ಕೃತೀಯ ಮೂಲಕ. ಈ ಕೃತಿಯಲ್ಲಿ ಚಿತ್ರಿತವಾಗಿರುವ 'ಕಾರಹಬ್ಬದಲ್ಲಿ ದನಗಳನ್ನು ಬೆದರಿಸುವ' ಚಿತ್ರಣವು ತೈಲೂರು ಗ್ರಾಮದಲ್ಲಿ ನಿಂತುಹೋಗಿದ್ದ ಎತ್ತುಗಳನ್ನು ಓಡಿಸುವ ಸ್ಪರ್ಧೆಯನ್ನು ಪುನರಾರಂಭಿಸಲು ವೆಂಕಟಕೃಷ್ಣ ಅವರಿಗೆ ಸ್ಫೂರ್ತಿಯನ್ನು ತಂದುಕೊಟ್ಟಿತು. ತೈಲೂರರು ಶ್ರೀ ನಾಗೇಗೌಡರ ಮಾರ್ಗದರ್ಶನದಲ್ಲಿ ಜನಪದ ಗೀತ ಸಂಗ್ರಹಣ ಕಾರ್ಯದಲ್ಲಿ ಮತ್ತು ಜಾನಪದ ಲೋಕದ ವಸ್ತುಸಂಗ್ರಹಾಲಯಗಳಿಗೆ ಗ್ರಾಮೀಣ ಪರಿಕರಗಳನ್ನು ಸಂಗ್ರಹಿಸಿಕೊಡುವಲ್ಲಿ ನಿರತರಾದರು. ಪರಿಷತ್ತಿನ ನಿರ್ಮಾಣವಾದ 'ಸಿಗಿಗಂಧ' ಚಿತ್ರೀಕರಣಕ್ಕೆ ಸಹಾಯಕರಾದರು. ೧೯೮೫ ರಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ೫ನೇ ವಾರ್ಷಿಕೋತ್ಸವವನ್ನ

ಮಂಡ್ಯದಲ್ಲಿ ಅದ್ದೂರಿಯಾಗಿ ಆಚರಿಸಿದರು. ೧೯೮೬ ರಲ್ಲಿ ಮದ್ದೂರಿನಲ್ಲಿ ಅಖಿಲ ಕರ್ನಾಟಕ ಜನಪದ ಕಲಾಮೇಳವನ್ನು ಸಂಘಟಿಸಿದರು. ಮಂಡ್ಯ ಜಿಲ್ಲೆಯ ಜನಪದ ಕಲಾವಿದರುಗಳನ್ನು ಪ್ರೋತ್ಸಾಹಿಸಿದರು. ಅವರುಗಳ ಬಗ್ಗೆ ಪತ್ರಿಕೆಗಳಲ್ಲಿ ಬರೆದರು. 'ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ' ಯನ್ನು ಕುರಿತು ಉತ್ತಮ ಕೃತಿಯೊಂದನ್ನು ಪ್ರಕಟಿಸಿದರು. ಮಂಡ್ಯ ಜಿಲ್ಲೆಯಾದ್ಯಂತ 'ಸ್ಮಾರಕ ಉಳಿಸಿ; ಸಂಸ್ಕೃತಿ ಬೆಳೆಸಿ' ಕಾರ್ಯಯೋಜನೆಯನ್ನು ಹಮ್ಮಿಕೊಂಡು ನಿರಂತರ ಶ್ರಮಿಸಿದರು. ಶ್ರೀರಂಗಪಟ್ಟಣದಲ್ಲಿ 'ಮಂಡ್ಯ ಜಿಲ್ಲಾ ವಸ್ತುಸಂಗ್ರಹಾಲಯ' ಸ್ಥಾಪನೆಗೆ ಕಾರಣಕರ್ತರಾದರು. ಸದ್ಯ ಕರ್ನಾಟಕ ಗೆಜೆಟಿಯರ್ ಸಮಿತಿಯ ಸದಸ್ಯರಾಗಿರುವ ವೆಂಕಟಕೃಷ್ಣ ಅವರು ಸೃಜನಶೀಲ ಲೇಖಕರು. ಉತ್ಸಾಹೀ ಯುವ ಸಂಘಟನಕಾರರು ಆಗಿದ್ದಾರೆ. ಶ್ರೀ ತೈಲೂರು ವೆಂಕಟಕೃಷ್ಣ ಅವರ ಜಾನಪದ ಪ್ರೀತಿ ಮತ್ತು ಸಂಘಟನಾ ಶಕ್ತಿಯನ್ನು ಗೌರವಿಸುವುದರ ಕುರುಹಾಗಿ ಕರ್ನಾಟಕ ಜಾನಪದ ಪರಿಷತ್ತು 'ವಿಶೇಷ ಪುರಸ್ಕಾರ'ವನ್ನು ನೀಡಿ ಗೌರವಿಸಿರುತ್ತದೆ.

## ೮೪. ಡಾ|| ಬಸವರಾಜ ಮಲಶೆಟ್ಟಿ

ಬೆಳಗಾವಿ ಜಿಲ್ಲೆಯ ಕಿತ್ತೂರು ಸಮೀಪದ ತಿಗಡೊಳ್ಳಿ ಗ್ರಾಮದ ೫೪ರ ಹರೆಯದ ಡಾ|| ಬಸವರಾಜ ಮಲ್ಲಶೆಟ್ಟರ ತಂದೆ ಪ್ರಖ್ಯಾತ ಗೀಗೀ ಕವಿ ಹಾಗೂ ಹಾಡುಗಾರ. ತಂದೆಯ ಹಾಡುಗಾರಿಕೆಯಲ್ಲಿ ಮಲಶೆಟ್ಟರೂ ಪಾಲುಪಡೆದಿದ್ದಾರೆ. ಹೊಸಪೇಟೆಯ ವಿಜಯನಗರ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸ.ಲ್ಲಿಸುತ್ತಿರುವ ಮಲಶೆಟ್ಟರಿಗೆ 'ಉತ್ತರ ಕರ್ನಾಟಕದ ಬಯಲಾಟಗಳು' ಎಂಬ ಮಹಾ ಪ್ರಬಂಧಕ್ಕೆ ಪಿಎಚ್.ಡಿ ಪದವಿ ಲಭಿಸಿದೆ.

ಮಲಶೆಟ್ಟರು ೧೯೮೩ ರಿಂದ ೮೬ರ ರವರೆಗೆ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ರಾಜ್ಯಮಟ್ಟದ ಹಲವಾರು ಸಮಾವೇಶಗಳನ್ನು ಸಂಘಟಿಸಿದ್ದಾರೆ. 'ಗಿರಿಜಾ ಕಲ್ಯಾಣ' ಎಂಬ ದೊಡ್ಡಾಟವನ್ನು ಸಂಸ್ಕರಿಸಿ ಮೂರು ಗಂಟೆಗಳ ಕಾಲದ ಪ್ರದರ್ಶನ ಸಿದ್ಧಪಡಿಸಿ, ಅದನ್ನು ಮುಖ್ಯವಾಗಿ ನಿರ್ದೇಶಿಸಿ ದಿಲ್ಲಿ, ಮುಂಬೈ, ಬೆಂಗಳೂರು ಮುಂತಾದ ನಗರಗಳಲ್ಲಿ ನಡೆಯುವ ಎಲ್ಲಾ ಪ್ರಮುಖ ಸಾಂಸ್ಕೃತಿಕ ಸಮಾವೇಶಗಳಲ್ಲಿ ಪ್ರದರ್ಶಿಸಿದ್ದಾರೆ. ಬಯಲು ಸೀಮೆಯ ಬಹುಮುಖ್ಯ ಜನಪದ ರಂಗ ಪ್ರಕಾರವಾದ ದೊಡ್ಡಾಟದ ಬಗ್ಗೆ ಇದುವರೆಗೆ ಕಲಿತಂಥ ಯಾವ ವಿದ್ವಾಂಸರೂ ಮಾಡದಿದ್ದ ಕಾಯಕಲ್ಪ ಮಾಡಿರುವಂಥ ಸೃಜನಶೀಲ ಪ್ರತಿಭೆ ಇವರದು.

ಉತ್ತರ ಕರ್ನಾಟಕದ ಬಯಲಾಟಗಳು, ಉತ್ತರ ಕರ್ನಾಟಕದ ಜನಪದ ವಾದ್ಯಗಳು, ಉತ್ತರ ಕರ್ನಾಟಕದ ರಂಗ ಗೀತೆಗಳು, ಪ್ರಾಚೀನ ಕರ್ನಾಟಕದ ಜನಪದ ವಾದ್ಯಗಳು, ಉತ್ತರ ಕರ್ನಾಟಕದ ರಂಗ ಗೀತೆಗಳು, ಪ್ರಾಚೀನ ಕರ್ನಾಟಕದಲ್ಲಿ ನಾಟಕ ಪರಂಪರೆ ಇತ್ಯಾದಿ ೨೪ ಕೃತಿಗಳ ಕರ್ತೃವಾದ ಡಾ|| ಮಲಶೆಟ್ಟರಿಗೆ ಕಾವ್ಯಾನಂದ ಪ್ರಶಸ್ತಿ, ಸುತ್ತೂರು ಮಠ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ ಪುರಸ್ಕಾರ ಲಭಿಸಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೬ ರಲ್ಲಿ 'ಜಾನಪದ ತಜ್ಞ' ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಜಾನಪದ ಪರಿಷತ್ತಿನ ಆಡಳಿತ ಮಂಡಳಿ ಸದಸ್ಯರಾಗಿದ್ದ ಡಾ|| ಮಲಶೆಟ್ಟರ ಬಹುಮುಖ ಪ್ರತಿಭೆಯನ್ನು ಗಮನಿಸಿ ಕರ್ನಾಟಕ ಜಾನಪದ ಪರಿಷತ್ತು 'ವಿಶೇಷ ಪುರಸ್ಕಾರ'ವನ್ನು ನೀಡಿ ಗೌರವಿಸಿರುತ್ತದೆ.

ಪರಿಚಯ : **ಡಾ. ಕುರುವ ಬಸವರಾಜ್**

## ಪ್ರಶಸ್ತಿ ಪುರಸ್ಕೃತರು – ೨೦೦೪

ತಾ॥ ೯–೨–೨೦೦೪ ರಂದು ಸಂಜೆ ಜಾನಪದ ಲೋಕದ ರಮ್ಯ ಪರಿಸರದಲ್ಲಿ ಭವ್ಯ ಬಯಲು ರಂಗಮಂದಿರದಲ್ಲಿ ೨೦೦೪ರ ಸಾಲಿನ ಪ್ರಶಸ್ತಿಗಳನ್ನು ಪ್ರದಾನಮಾಡುವ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಪ್ರಶಸ್ತಿ ಪುರಸ್ಕೃತರಾದ ಪ್ರತಿಯೊಬ್ಬ ಕಲಾವಿದರಿಗೂ ಪ್ರಶಸ್ತಿಫಲಕ ಮತ್ತು ಒಂದು ಸಾವಿರ ರೂ. ನಗದು ಹಣದೊಂದಿಗೆ ಗಂಡಸರಿಗೆ ಶಾಲು, ಹೆಂಗಸರಿಗೆ ಸೀರೆ ಮತ್ತು ಖಣಗಳನ್ನು ನೀಡಲಾಯಿತು. ೨೦೦೪ರ ಸಾಲಿನಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಪ್ರಶಸ್ತಿಪುರಸ್ಕೃತರ ವಿವರಗಳು ಕೆಳಕಂಡಂತಿವೆ.

### ೮೫. ದೊಡ್ಡೇನಹಳ್ಳಿ ನಂಜಮ್ಮ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ದೊಡ್ಡೇನಹಳ್ಳಿಯ ನಂಜಮ್ಮ ಚಿಕ್ಕಂದಿನಿಂದಲೇ ಹಾಡಿನ ಬಗ್ಗೆ ಆಸಕ್ತಿ ಬೆಳೆಸಿಕೊಂಡ ಕಲಾವಿದೆ. ಕುಂತಲ್ಲಿ ನಿಂತಲ್ಲಿ, ಕೇಳಿದ ಗೀತೆಗಳನ್ನು ತಾಯಿಯೊಂದಿಗೆ ಗುಣುಗುಣಿಸುತ್ತಾ, ನೆರೆಹೊರೆಯವರಿಂದ ಅನೇಕ ಹಾಡುಗಳನ್ನು ಕಲಿತು ತನ್ನ ಹಾಡಿನ ಕಣಜವನ್ನು ತುಂಬಿಸಿಕೊಂಡಾಕೆ. ಜನಪದ ಗೀತೆಗಳನ್ನು ಅಪೂರ್ವ ಧಾಟಿಗಳಲ್ಲಿ ಹಾಡುವ ಅದ್ಭುತ ಪ್ರತಿಭೆ ನಂಜಮ್ಮನವರದು. ಮದುವೆ ಶಾಸ್ತ್ರ ಸಂದರ್ಭದಲ್ಲಿ ಹಾಡುವ ಪದಗಳು, ದೂರಿ ಪದಗಳು, ಜೋಗುಳ ಪದಗಳು, ದೇವರ ಪದಗಳು, ಮಂಗಳಾರತಿ ಪದಗಳನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡಬಲ್ಲ ನಂಜಮ್ಮನವರ ಎಲ್ಲಾ ಹಾಡುಗಳನ್ನು ಎಚ್. ಎಲ್. ನಾಗೇಗೌಡರು ೧೯೮೧ ರಷ್ಟು ಹಿಂದೆಯೇ ಧ್ವನಿಮುದ್ರಿಸಿಕೊಂಡಿದ್ದಾರೆ. ಇಂತಹ ಮುಗ್ಧ ಪ್ರತಿಭಾನ್ವಿತ, ಅಪರೂಪದ ಹಾಡುಗಾರ್ತಿಗೆ ಸುಶ್ರಾವ್ಯವಾದ ಹಾಡುಗಾರಿಕೆಗೆ ನೀಡುವ 'ಸೋಬಾನೆ ಚಿಕ್ಕಮ್ಮ ಪ್ರಶಸ್ತಿ'ಯನ್ನು ಕರ್ನಾಟಕ ಜಾನಪದ ಪರಿಷತ್ತು ನೀಡಿ ಗೌರವಿಸಿರುತ್ತದೆ.

### ೮೬. ಕಂಚನಹಳ್ಳಿ ಲಕ್ಕಯ್ಯ ಮರಿಯಯ್ಯ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕಂಚನಹಳ್ಳಿಯ ಹೆಳವರಾದ ಶ್ರೀ ಲಕ್ಕಯ್ಯ ಮತ್ತು ಮರಯಯ್ಯ ಅವರು ಹೆರಗಹಳ್ಳಿ ಲಕ್ಕವ್ವನ ಕಥೆಯನ್ನಲ್ಲದೆ ಚಾಮುಂಡಿ ಪುರಾಣ, ಮಾಗಡಿ ಕೆಂಪೇಗೌಡನ ಕಥೆ, ಕರಿಬಂಟನ ಕಥೆ, ನಂಜುಂಡೇಶ್ವರನ ಕಾವ್ಯ, ಯಮನಾಳು ದೇವಮ್ಮನ ಕಥೆ, ಹೀಗೆ ಹತ್ತಾರು ಗಂಟೆಗಳ ಕಾಲ ಹಾಡಬಲ್ಲ ಅದ್ಭುತ ಗಾಯಕರು. ಈ ಎಲಾ ಕಾವ್ಯಗಳನ್ನಲ್ಲದೆ, ಹೆಳವರು ಹಾಡುವ ಕುಲ ಕೊಂಡಾಡುವ ಪದಗಳನ್ನೂ, ಸತ್ತುಕೆಟ್ಟೋರನ್ನು ಹೊಗಳುವ ಪದಗಳನ್ನೂ ಸಹ ಶ್ರೀ ಎಚ್. ಎಲ್. ನಾಗೇಗೌಡರು ೧೯೭೦ರ ಸುಮಾರಿನಲ್ಲಿಯೇ ಧ್ವನಿಮುದ್ರಿಸಿಕೊಂಡಿದ್ದಾರೆ. ಇವರಿಗೆ 'ದೊಡ್ಡಮನೆ ಪ್ರಶಸ್ತಿ'ಯನ್ನು ಕರ್ನಾಟಕ ಜಾನಪದ ಪರಿಷತ್ತು ನೀಡಿ ಗೌರವಿಸಿರುತ್ತದೆ.

### ೮೭. ರಾಮಲಿಂಗೇಗೌಡ

ಕರ್ನಾಟಕ ಕರಾವಳಿ ಭಾಗವು ಪಡುವಲಪಾಯ ಯಕ್ಷಗಾನ ಸಂಪ್ರದಾಯಕ್ಕೆ ಹೆಸರುವಾಸಿಯಾದರೆ, ಉತ್ತರ ಮತ್ತು ದಕ್ಷಿಣ ಭಾಗಗಳು ಮೂಡಲಪಾಯ ಯಕ್ಷಗಾನ

ಸಂಪ್ರದಾಯಕ್ಕೆ ಮನೆಮಾತಾಗಿವೆ. ಬಣ್ಣಗಾರಿಕೆ, ವೇಷಭೂಷಣ, ಪ್ರಸಂಗ, ಬಿರುಸಾದ ಸಾಹಿತ್ಯ ವಿಶಿಷ್ಟ ರೀತಿಯ ಅಟ್ಟ, ಹೀಗೆ ಎಲ್ಲಾ ಮಜಲುಗಳಲ್ಲಿಯೂ ಭವ್ಯತೆಗೆ ಹೆಸರಾಗಿರುವ ಮೂಡಲಪಾಯ ಯಕ್ಷಗಾನವು ಭಾಗವತ ಪರಂಪರೆಯಲ್ಲಿಯೂ ಸಹ ತನ್ನದೇ ಆದ ಸ್ವಂತಿಕೆಯನ್ನು ಮೈಗೂಡಿಸಿಕೊಂಡಿದೆ. ನಾಡಿನ ಮೂಡಲಪಾಯ ಯಕ್ಷಗಾನದಲ್ಲಿಯ ಅತ್ಯುತ್ತಮ ಬೆರಳೆಣಿಕೆ ಭಾಗವತರುಗಳಲ್ಲಿ ಶ್ರೀ ರಾಮಲಿಂಗೇಗೌಡ ಅವರು ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಹದವಾದ ಶಾರೀರ, ರಾಗದ ಪರಿಳಿತ, ಆಕರ್ಷಕ ಕಥೆಗಾರಿಕೆಗಳಿಂದಾಗಿ ಹೆಸರಾಗಿದ್ದಾರೆ. ಕಂಠ ಮಾಧುರ್ಯ, ಸಭಾವಯುಕ್ತ ಹಾಡುಗಾರಿಕೆ, ಕುಶಲ ಮೃದಂಗ ವಾದನಗಳಿಂದಾಗಿ ಸಮರ್ಥ ಭಾಗವತರೆನಿಸಿಕೊಂಡಿದ್ದಾರೆ. ವಯಸ್ಸು ೬೫ ದಾಟಿದರೂ ಮೂಡಲಪಾಯ ಯಕ್ಷಗಾನ ಕಲೆಯನ್ನು ಉಳಿಸಬೇಕೆಂಬ ಅಹರ್ನಿಶಿ ಹೆಣಗಾಡುತ್ತಿದ್ದಾರೆ. ಮಂಡ್ಯ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಯಕ್ಷಗಾನ ಆಟಗಳನ್ನು ಕಲಿಸುತ್ತಿದ್ದಾರೆ. ಕರ್ಣಪರ್ವ, ದೇವಿಮಹಾತ್ಮೆ, ಅಭಿಮನ್ಯು ಕಾಳಗ, ದಕ್ಷಯಜ್ಞ, ಲವಕುಶ, ಚಿತ್ರಕೇತು, ಗಿರಿಜಾಕಲ್ಯಾಣ, ಶತಕಂಠರಾವಣ ಹೀಗೆ ಹತ್ತು ಹಲವು ಕಥೆಗಳನ್ನು ಆಡಿಸುತ್ತಾ ಬಂದಿದ್ದಾರೆ. ಇಂತಹ ಅತ್ಯುತ್ತಮ ಮೂಡಲಪಾಯ ಯಕ್ಷಗಾನ ಭಾಗವತರಿಗೆ 'ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೮೮. ಕತ್ತಿಗೆ ಮಹಾದೇವಮ್ಮ

ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಕತ್ತಿಗೆಯ ಮಹಾದೇವಮ್ಮ ಹುಟ್ಟಿದ ಮನೆ, ಸೇರಿದ ಮನೆಗಳೆರಡೂ ಕಲಾಶ್ರೀಮಂತಿಕೆಯ ನೆಲೆವೀಡುಗಳು. ತಂದೆ ಉಜ್ಜನಪ್ಪನವರಿಂದ ಹಾಡುಗಾರಿಕೆಯನ್ನು ಕಲಿತ ಮಹಾದೇವಮ್ಮ ಸೋಬಾನೆ ಪದಗಳು, ಮಂಗಳಾರತಿ ಪದಗಳು, ಬೆಳ್ದಿಂಗಳ ಪದಗಳು, ಒಸಗೆ ಪದ, ಸುಣಸಾಗರಿ, ಶಿವಸಂಪಿಗೆ ಮುಂತಾದ ಕಥನಗೀತೆಗಳನ್ನು ಸೊಗಸಾಗಿ ಹಾಡುತ್ತಾರೆ. ಅಲ್ಲದೆ ತಮ್ಮ ಮಕ್ಕಳಿಗೂ ಬಾಳಿನುದ್ದಕ್ಕೂ ಸಾಲುವಷ್ಟು ಹಾಡಿನ ಬುತ್ತಿಯನ್ನು, ಸಿರಿಕಂಠವನ್ನು ಬಳುವಳಿಯಾಗಿ ನೀಡಿದ್ದಾರೆ. ೧೯೮೩ ರಲ್ಲಿಯೇ ಇವರ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ಧ್ವನಿಮುದ್ರಿಸಿಕೊಂಡಿದ್ದಾರೆ ಕರ್ನಾಟಕ ಜಾನಪದ ಪರಿಷತ್ತು ಶ್ರೀಮತಿ ಮಹಾದೇವಮ್ಮನವರಿಗೆ 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೮೯. ಹೊಸಪಾಳ್ಯ ಲಕ್ಷ್ಮಮ್ಮ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹೊಸಪಾಳ್ಯದ ಸುಮಾರು ೯೨ರ ಇಳಿ ಹರೆಯದ ಲಕ್ಷ್ಮಮ್ಮ ತಮ್ಮ ಗಂಟಲಿನಲ್ಲಿ ಶಕ್ತಿ ಇರುವವರೆಗೂ ಜಾನಪದ ಸರಸ್ವತಿಯನ್ನು ಆರಾಧಿಸಿಕೊಂಡು ಬಂದ ಆರಾಧಕಿ. ಸುತ್ತೇಳು ಹಳ್ಳಿಗಳ ಮದುವೆ ಕಾರ್ಯಕ್ಕೂ ಲಕ್ಷ್ಮಮ್ಮನ ಸೋಬಾನೆ ಇರಬೇಕು. ಮದುವೆ ಶಾಸ್ತ್ರದ ಎಲ್ಲಾ ಪದಗಳು, ಭೈರವ, ದೊಡ್ಡಮ್ಮ, ಮಾಸ್ತ್ಯಮ್ಮ, ಹನುಮಂತ ಮುಂತಾದ ದೇವರುಗಳ ಮೇಲೆ ವೈವಿಧ್ಯಮಯವಾದ ಪಲ್ಲವಿಗಳನ್ನೂ ಹಾಡುತ್ತಾರೆ. ಲಕ್ಷ್ಮಮ್ಮನ ಹಾಡುಗಾರಿಕೆ ಮೆಚ್ಚಿದ ನಾಗೇಗೌಡರು ೧೯೮೩ ರಲ್ಲಿಯೇ ಅವರನ್ನೂ

ಅವರ ಜತೆಗಾತಿಯರನ್ನೂ ಬೆಂಗಳೂರಿಗೆ ಕರೆಸಿಕೊಂಡು ಅವರ ಎಲ್ಲಾ ಹಾಡುಗಳನ್ನು ಧ್ವನಿಮುದ್ರಿಸಿಕೊಂಡಿರುತ್ತಾರೆ. ಇಂತಹ ಅಪರೂಪದ ಕಲಾವಿದೆಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬೦. ಕುನ್ನಾಘಟ್ಟ ರಂಗಸ್ವಾಮಯ್ಯ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಕುನ್ನಾಘಟ್ಟದ ಸುಮಾರು ೬೦ರ ಹರೆಯದ ರಂಗಸ್ವಾಮಯ್ಯನವರು ಈ ನಾಡು ಕಂಡ ಅಪರೂಪದ ಕರಪಾಲ ಕಲಾವಿದರುಗಳಲ್ಲಿ ಒಬ್ಬರು. ದೊಡ್ಡಗುಣಿ ನಿಂಗಪ್ಪನವರಿಂದ ಕರಪಾಲವನ್ನು ಕಲಿತ ರಂಗಸ್ವಾಮಯ್ಯನವರು ೧೯೬೪ ರಿಂದಲೂ ನಾಡಿನಾದ್ಯಂತ ತಮ್ಮ ಕಲೆಯನ್ನು ಪಸರಿಸುತ್ತಾ ಬಂದಿದ್ದಾರೆ. ಹಾಡುಗಾರಿಕೆ, ಕುಣಿತ ಮತ್ತು ನಿರೂಪಣೆಗಳಲ್ಲಿ ತಮ್ಮದೇ ವಿಶಿಷ್ಟತೆಯನ್ನು ಮೈಗೂಡಿಸಿಕೊಂಡಿರುವ ಶ್ರೀಯುತರು ಕಾಡಸಿದ್ದಮ್ಮ, ನೀಲಕಂಠ–ರೂಪಾವತಿ, ಬಸವಕುಮಾರ–ಲೋಹಿತಕುಮಾರ ಇವೇ ಮೊದಲಾದ ಕಥನ ಕಾವ್ಯಗಳಲ್ಲದೆ ಅನೇಕ ಉಪಕಥೆಗಳನ್ನು ಸ್ವಾರಸ್ಯಪೂರ್ಣವಾಗಿ ಹೇಳಿ ಸಮುದಾಯದ ಮನಸ್ಸನ್ನು ರಂಜಿಸುತ್ತಾರೆ. ಕರ್ನಾಟಕದ ನಾನಾ ಕಡೆಗಳಲ್ಲಿ ಕಣ್ಣಿಗೆಕಟ್ಟುವಂತೆ ಕತೆ ಹೇಳಿ ರಂಜಿಸುವ ಇಂತಹ ಅತ್ಯುತ್ತಮ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬೧. ಮಹಾಲಿಂಗಪುರ ಮಡಿವಾಳಪ್ಪ

ಕರಡೆ, ಸನಾದಿ, ಶೃತಿ, ತಾಳ ಮುಂತಾದ ವಾದ್ಯಗಳನ್ನು ಹೊಂದಿಸಿ ನುಡಿಸುವ ಆಕರ್ಷಕ ವಾದ್ಯಮೇಳವಾದ ಕರಡೆ ಮಜಲು ಶುಭಕಾರ್ಯಗಳಲ್ಲಿ ಪ್ರದರ್ಶಿಸಲ್ಪಡುವ ಕಲೆ. ಇದರಲ್ಲಿ ಒಂದ್ಹೆಜ್ಜೆ–ಎರಡ್ಹೆಜ್ಜೆ, ಮೂರ್ಹೆಜ್ಜೆ ಮುಂತಾದ ಕುಣಿತದ ಗತ್ತುಗಳನ್ನು ಅತ್ಯಂತ ಆಕರ್ಷಕವಾಗಿ ಪ್ರಸ್ತುತಪಡಿಸುವ ಕಲಾವಿದರಲ್ಲಿ ಶ್ರೀ ಮಡಿವಾಳಪ್ಪ ಮಹಾಲಿಂಗಪ್ಪ ಕರಡಿ ಅವರದು ದೊಡ್ಡ ಹೆಸರು. ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಮಹಾಲಿಂಗಪುರದ ಮಡಿವಾಳಪ್ಪನವರು ತಮ್ಮ ೧೫ನೇ ವಯಸ್ಸಿನಲ್ಲೇ ಕಲಾದೀಕ್ಷೆಪಡೆದು ಕರಡೆವಾದನಕ್ಕೆ ತಮ್ಮನ್ನು ಸಮರ್ಪಿಸಿಕೊಂಡವರು. ೧೯೬೩ ರಿಂದಲೂ ಭಾರತದಾದ್ಯಂತ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿರುವ ಶ್ರೀಯುತರು ಪಡೆದ ಪ್ರಶಸ್ತಿ ಪಾರಿತೋಷಕಗಳು ಲೆಕ್ಕವಿಲ್ಲದಷ್ಟು. ದೂರದರ್ಶನ, ಆಕಾಶವಾಣಿಗಳಲ್ಲೂ ಹಲವು ಬಾರಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಶ್ರೀಮತಿ ಇಂದಿರಾಗಾಂಧಿ, ಶ್ರೀ ಪುಟ್ಟರಾಜಗವಾಯಿಗಳು, ಶ್ರೀ ಸಾಯಿಬಾಬಾ ಮುಂತಾದ ಮಹನೀಯರ ಮೆಚ್ಚುಗೆಯನ್ನೂ ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನಾಗಪುರದ ಸೌತ್ ಸೆಂಟ್ರಲ್ ಮುಂತಾದ ಸಂಸ್ಥೆಗಳಿಂದಲೂ ಪ್ರಶಸ್ತಿಯನ್ನು ಪಡೆದಿರುವ ಶ್ರೀ ಮಡಿವಾಳಪ್ಪ ಎಂ. ಕರಡಿ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬೨. ಸೋಮಣ್ಣ ನಾಗಪ್ಪ ಖೈರಾಟ

ವಿಜಾಪುರ ಜಿಲ್ಲೆ ಇಂಡಿ ತಾಲ್ಲೂಕು ಸಾಲೋಟಗಿಯ ೬೭ರ ಹರೆಯದ ಶ್ರೀ ಸೋಮಣ್ಣ ನಾಗಪ್ಪ ಖೈರಾಟ ಕಸದಿಂದ ರಸ ತಯಾರಿಸುವ ಸಿದ್ಧಿಪಡೆದವರು. ಹಳೆಯ, ಹರಿದ, ಚಿಂದಿಯಾದ ಬಟ್ಟೆಯ ತುಂಡುಗಳನ್ನು ಕಲಾತ್ಮಕವಾಗಿ ಜೋಡಿಸಿ ಹೊಲೆದು ಆಕರ್ಷಕ ಕೌದಿ, ದುಬಟೆ, ಕುಂಚಿಗೆ, ಕುಲಾವಿಗಳನ್ನು ತಯಾರಿಸುವುದರಲ್ಲಿ ಶ್ರೀಯುತರು ಎತ್ತಿದ ಕೈ. ಕಳೆದ ೫೦ ವರ್ಷಗಳಿಂದ ಈ ವೃತ್ತಿಯನ್ನು ಕೈಗೊಂಡು ಹಲವಾರು ಕಲಾಮೇಳಗಳು, ಕರಕುಶಲ ಪ್ರದರ್ಶನಗಳಲ್ಲಿ ಪಾಲ್ಗೊಂಡು ಜನಮನ್ನಣೆ ಪಡೆದಿರುವ ಶ್ರೀ ಸೋಮಣ್ಣನವರು ಸುಮಾರು ೨೦೦ಕ್ಕೂ ಹೆಚ್ಚು ಜನರಿಗೆ ಈ ವಿದ್ಯೆಯನ್ನು ಕಲಿಸಿಕೊಟ್ಟಿರುವುದು ಅಭಿಮಾನದ ಸಂಗತಿ. ವಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಿಷತ್ತು, ಸೌತ್ ಜೋನ್ ಕಲ್ಚರಲ್ ಸೆಂಟರ್ ಮುಂತಾದ ಸಂಸ್ಥೆಗಳಿಂದ ಪ್ರಶಸ್ತಿ ಪಡೆದಿರುವ ಶ್ರೀ ಸೋಮಣ್ಣ ನಾಗಪ್ಪ ಖೈರಾಟ ಅವರನ್ನು ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬೩. ಓಬದೇವನಹಳ್ಳಿ ನರಸಮ್ಮ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಓಬದೇವನಹಳ್ಳಿಯ ನರಸಮ್ಮ ಬಾಂಧವ್ಯದಪದ, ಕಗ್ಗದ ಪದ, ಆರತಿ ಪದ, ಕೋಲು ಪದಗಳನ್ನಲ್ಲದೆ ದಾಸಯ್ಯನ ಮೇಲೆ, ಬಳೆಗಾರನ ಮೇಲೆ ಈರದಿಮ್ಮವ್ವನ ಮೇಲೆ, ಶಿವಗಂಗೆ ಹೊನ್ನಾದೇವಿಯ ಮೇಲೆ ಕಥನಗೀತೆಗಳನ್ನೂ, ತೆಲಗು ಪದಗಳನ್ನೂ ಹಾಡುತ್ತಾರೆ. ೧೯೮೧ ರಲ್ಲಿಯೇ ಇವರ ಎಲ್ಲಾ ಹಾಡುಗಳನ್ನೂ ಶ್ರೀ ಎಚ್. ಎಲ್. ನಾಗೇಗೌಡರು ಧ್ವನಿಮುದ್ರಿಸಿಕೊಂಡಿರುತ್ತಾರೆ. ಇಂತಹ ಅಪರೂಪದ ಕಲಾವಿದೆಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬೪. ಎಂ. ಎನ್. ಬೋರಪ್ಪ

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಮಡೇನೂರಿನ ಎಂ. ಎನ್. ಬೋರಪ್ಪನವರು ಮೂಡಲಪಾಯದ ಪ್ರಸಿದ್ಧ ಭಾಗವತರುಗಳಲ್ಲೊಬ್ಬರು. ಬಾಲ್ಯದಿಂದಲೇ ಪಾತ್ರಧಾರಿಯಾಗಿ, ಮುದ್ದಳೆಕಾರನಾಗಿ, ನುರಿತ ಭಾಗವತರಾದ ಕೊನೇಹಳ್ಳಿಯ ಪಟೇಲ್ ನಾರಸಪ್ಪನವರೊಂದಿಗೆ ಹತ್ತಾರು ಪ್ರಸಂಗಗಳನ್ನು ನಡೆಸಿಕೊಟ್ಟಿದ್ದಾರೆ. ಮೈಸೂರು, ತಮಿಳುನಾಡು, ಮಹಾರಾಷ್ಟ್ರ, ನವದೆಹಲಿ, ಮಧ್ಯಪ್ರದೇಶ ಮುಂಬಯಿ ಮುಂತಾದ ಕಡೆಗಳಲ್ಲಿಯೂ ಪ್ರದರ್ಶನ ನೀಡಿದ್ದಾರೆ. ಇಂತಹ ಅಪರೂಪದ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೬೫. ಭೈರಸಂದ್ರದ ಅಕ್ಕಮ್ಮ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಭೈರಸಂದ್ರದ ಅಕ್ಕಮ್ಮ ೮೫ರ ಇಳಿ ಹರೆಯದಲ್ಲೂ ಜೀವನೋತ್ಸಾಹ ಕಳೆದುಕೊಂಡಿಲ್ಲ. ಹನುಮಯ್ಯನ ಮೇಲೆ, ಅಣ್ಣತಮ್ಮಂದಿರ ಮೇಲೆ ಪದಗಳು

ಮತ್ತು ಇತರ ಬಾಂಧವ್ಯದ ಪದಗಳು, ಬೀಸೋಪದ, ಒಸಗೆಪದ ಮುಂತಾದ ಪದಗಳನ್ನು ಆಕರ್ಷಕವಾಗಿ ಹಾಡುವ ಶ್ರೀ ಅಕ್ಕಮ್ಮನವರಿಗೆ ಪತಿ ಕೆಂಪೇಗೌಡರ ಬೆಂಬಲವೂ ಇದೆ. ಅಕಮ್ಮನವರ ಎಲ್ಲಾ ಹಾಡುಗಳನ್ನೂ ಶ್ರೀ ಎಚ್. ಎಲ್. ನಾಗೇಗೌಡರು ೧೯೮೬ ರಷ್ಟು ಹಿಂದೆಯೇ ಬೆಂಗಳೂರಿಗೆ ಕರೆಸಿಕೊಂಡು ಧ್ವನಿಮುದ್ರಿಸಿಕೊಂಡಿರುತ್ತಾರೆ. ದಣಿವರಿಯದ ಇಂತಹ ಅಪರೂಪದ ಕಲಾವಿದೆಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೯೬. ಪಂಚಲಿಂಗಯ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನಕಪುರ ತಾಲ್ಲೂಕು ದೊಡ್ಡಾಲಳ್ಳಿಯ ಒಕ್ಕಲಿಗ ಗೌಡರಾದ ಪಂಚಲಿಂಗಯ್ಯನವರು ಹೆಸರಾಂತ ನೀಲಗಾರರಾಗಿದ್ದ ಕೆಬ್ಬೇಪುರದ ರಾಚಯ್ಯನವರ ಶಿಷ್ಯರೂ ಹೌದು. ಇವರಿಗೆ ೬೦ ವರ್ಷ ತುಂಬಿದ್ದರೂ ದನಿ ನಡುಗದು. ಸಿದ್ಧಪ್ಪಾಜಿ ಕಥೆ, ಮಾದೇಶ್ವರ ಕಾವ್ಯ, ನಂಜುಂಡ–ಚಾಮುಂಡಿ, ಸಾರಂಗಧರ, ಅರ್ಜುನಜೋಗಿ, ನೀಲವೇಣಿ ಕಥೆ, ಮೈದಾಳರಾಮನ ಕಥೆಗಳನ್ನೂ ಗಂಟೆಗಟ್ಟಲೆ ಹಾಡಬಲ್ಲ ಇವರು ಉಪಕತೆಗಳನ್ನೂ ಸಹ ಅತ್ಯಂತ ಆಕರ್ಷಕವಾಗಿ ಹೇಳುತ್ತಾರೆ. ಕೇಳುಗರ ತಲೆದೂಗಿಸುವ ಕಥನ ಶೈಲಿ ಇವರದು. ಶ್ರೀ ಎಚ್. ಎಲ್. ನಾಗೇಗೌಡರು ಇವರ ಹಾಡುಗಾರಿಕೆಯನ್ನು ೨೦೦೧ ರಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ಇಂತಹ ಅತ್ಯುತ್ತಮ ವೃತ್ತಿಗಾಯಕರಿಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೯೭. ಪಿಂಡಕೂರು ತಿಮ್ಮನಹಳ್ಳಿ ಜಯಮ್ಮ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಪಿಂಡಕೂರು ತಿಮ್ಮನಹಳ್ಳಿಯ ಜಯಮ್ಮ ಕನ್ನಡ ತೆಲುಗು ಎರಡೂ ಭಾಷೆಗಳಲ್ಲಿ ಜನಪದ ಗೀತೆಗಳನ್ನು ನಿರರ್ಗಳವಾಗಿ ಗಂಟೆಗಟ್ಟಲೆ ಹಾಡಬಲ್ಲ ಕಲಾವಿದೆ. ತಮ್ಮ ಜತೆಗಾತಿ ವೆಂಕಟಮ್ಮನವರೊಂದಿಗೆ ಹಾಡಲು ಕುಳಿತರೆ ಆಯಾಸವೆಂಬುದೇ ಅರಿಯರು. ಸೀಮಂತದ ಪದ, ತುಳಸಿ ಪದ, ಕಗ್ಗದ ಪದ, ಶಾಸ್ತ್ರದ ಪದಗಳು, ಮಾರಮ್ಮ, ಶನಿದೇವ, ಮುತ್ಯಾಲಮ್ಮ ಮುಂತಾದ ದೇವರ ಪದಗಳು, ಈರೋಬಿ, ಹಿರಿದಿಮ್ಮವ್ವ ಗಂಗೆಗೌರಿ, ಉತ್ತರದೇವಿ ಮುಂತಾದ ಕಥನಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವ ಶ್ರೀಮತಿ ಜಯಮ್ಮನವರ ಎಲ್ಲ ಹಾಡುಗಳನ್ನೂ ಶ್ರೀ ಎಚ್. ಎಲ್. ನಾಗೇಗೌಡರು ೧೯೮೧ ರಲ್ಲೇ ಧ್ವನಿಮುದ್ರಿಸಿಕೊಂಡಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೯೮. ಬೊಮ್ಮಾಚನಹಳ್ಳಿ ಓಬಳಪ್ಪ

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಬೊಮ್ಮಾಚನಹಳ್ಳಿಯ ೮೧ರ ಹರೆಯದ ಓಬಳಪ್ಪ ಚಿಕ್ಕಂದಿನಿಂದಲೇ ತಮಟೆ ಬಾರಿಸುವುದನ್ನು ರೂಢಿಸಿಕೊಂಡವರು. ಕಿತ್ತು ತಿನ್ನುವ ಬಡತನದಲ್ಲಿ ತಮಟೆಯ ಸದ್ದನ್ನೆ ಉಂಡು ಬೆಳೆದವರು. ಹಲಗೆ ಬಡಿತದ ಜೊತೆಗೆ ನಾನಾ ರೀತಿಯ ಕೌಶಲ್ಯಗಳನ್ನು ಬೆಳೆಸಿಕೊಂಡರು. ಇವರು ಕೈಯಲ್ಲಿ ತಮಟೆ ಹಿಡಿದು, ಕಾಲಿಗೆ ಗೆಜ್ಜೆ

ಕಟ್ಟಿ ರಂಗಕ್ಕಿಳಿದರೆಂದರೆ ಪ್ರೇಕ್ಷಕರಲ್ಲಿ ಹರುಷ ಉಕ್ಕೇರುತ್ತದೆ. ತಮಟೆ ವಾದನದಲ್ಲಿ ನಿಷ್ಣಾತರಾಗಿರುವ ಓಬಳಪ್ಪ ತಮಟೆ ಬಡಿಯುವುದರಲ್ಲಿ ನಾನಾ ರೀತಿಯ ಹೊಸ ಮಾದರಿಗಳನ್ನು ರೂಪಿಸಿಕೊಂಡಿದ್ದಾರೆ. ಗಂಟೆಗಟ್ಟಲೆ ದಣಿವಿಲ್ಲದಂತೆ ತಮಟೆ ಬಡಿಯುವ ಮುನಿವೆಂಕಟಪ್ಪನವರು ತಮಟೆ ಬಡಿಯುತ್ತಲೇ ಗತ್ತಿಗೆ ತಕ್ಕಂತೆ ಕುಣಿಯುವುದು, ಮಧ್ಯೆ ಮಧ್ಯೆ ಲಾಗ ಹಾಕುವುದು, ಕಣ್ಣಿನಿಂದ ಸೂಜಿ ಎತ್ತುವುದು, ಹಣೆಯಿಂದ ನಾಣ್ಯ ಎತ್ತುವುದು ಇವೇ ಮೊದಲಾದ ಚಮತ್ಕಾರಗಳನ್ನು ಮಾಡುತ್ತಾರೆ. ವಂಶಪಾರಂಪರ್ಯವಾಗಿ ಬಂದಿರುವ ತಮಟೆವಾದನ ಕಲೆಯನ್ನು ತಮ್ಮ ಸುತ್ತಲಿನ ಯುವಕರಿಗೆ ಕಲಿಸುತ್ತಿರುವ ಓಬಳಪ್ಪನವರ ಪ್ರತಿಭೆ ಮತ್ತು ಕಲಾನೈಪುಣ್ಯತೆಯನ್ನು ಗುರುತಿಸಿ, ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೯೯. ಜೀಕವಾಂಡ್ಲಪಲ್ಲಿ ಸಾಂಬಯ್ಯ

ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಜೀಕವಾಂಡ್ಲಪಲ್ಲಿಯ ಶ್ರೀ ಸಾಂಬಯ್ಯ ೮೪ರ ಹರೆಯದಲ್ಲೂ ಪ್ರದರ್ಶನದಲ್ಲಿ ಪಾಲ್ಗೊಳ್ಳುತ್ತಿರುವ ತೊಗಲುಗೊಂಬೆ ಕಲಾವಿದ. ಸುಮಾರು ೬೦ ವರ್ಷಗಳಿಂದ ಕಲಾರಾಧನೆಗೆ ತಮ್ಮ ಜೀವನ ಸಮರ್ಪಿಸಿಕೊಂಡಿದ್ದಾರೆ. ೧೯೮೨ ರಲ್ಲಿ 'traditional leather pupets of Karnataka' ದ ಬಗ್ಗೆ ನಡೆದ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದ ಸಾಂಬಯ್ಯನವರು ನೀಡಿದ ಪ್ರದರ್ಶನಗಳು ಲೆಕ್ಕವಿಲ್ಲದಷ್ಟು. ಇಂತಹ ಅತ್ಯುತ್ತಮ ತೊಗಲುಗೊಂಬೆಯಾಟದ ಕಲಾವಿದರಿಗೆ ರಾಮನಗರದ ಡಾ|| ಎಸ್. ಎಲ್. ತಿಮ್ಮಯ್ಯ ಅವರು ತಮ್ಮ ಮಗಳು ಮತ್ತು ಮೊಮ್ಮಕ್ಕಳ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೧೦೦. ಕಾಡಂಕನಹಳ್ಳಿ ಮರಿ ಅರಸಮ್ಮ

ಬೆಳಗಿನಿಂದ ಬೈಗಿನವರೆಗಿನ ಬದುಕಿನ ಬವಣೆಗಳನ್ನೂ ಸುಖೋಲ್ಲಾಸಗಳನ್ನೂ ಹಾಡಿನ ಮೂಲಕವೇ ಅಭಿವ್ಯಕ್ತಿಸುವ ನಮ್ಮ ಹಳ್ಳಿಯ ಹೆಣ್ಣುಮಕ್ಕಳು ತಾವು ಕಂಡುಂಡದ್ದನ್ನೆಲ್ಲಾ ಹಾಡಾಗಿ ಹೊಮ್ಮಿಸಬಲ್ಲ ಅದ್ಭುತ ಶಕ್ತಿಯುಳ್ಳವರು. ನಾಗಮಂಗಲ ತಾಲ್ಲೂಕಿನ ಕಾಡಂಕನಹಳ್ಳಿಯ ಶ್ರೀಮತಿ ಮರಿ ಅರಸಮ್ಮ ಇಂತಹ ಅಭಿಜಾತ ಕಲಾವಿದೆಯರಲ್ಲಿ ಒಬ್ಬರು. ಸೋಬಾನೆ ಪದಗಳು, ದೇವರ ಪದಗಳು, ಶಿವಭಜನೆ ಹಾಡುಗಳು, ಚೆಲುವಯ್ಯ ವರನಂದಿ ಮುಂತಾದ ಗಿತೆಗಳನ್ನು ಹಾಡುವ ಇವರ ಕಂಠಸಿರಿಯನ್ನು ಶ್ರೀ ನಾಗೇಗೌಡರು ೧೯೮೧ ರಲ್ಲಿಯೇ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ಎಲೆಮರೆಕಾಯಿಯಾಗಿ ಉಳಿದುಬಂದಿರುವ ಇಂತಹ ಅಪರೂಪದ ಹಾಡುಗಾರ್ತಿಗೆ ಬೆಂಗಳೂರಿನ ಟಿ. ತಿಮ್ಮೇಗೌಡರು ತಮ್ಮ ತಂದೆ ಶ್ರೀ ದೊಡ್ಡಿ ತಿಮ್ಮೇಗೌಡ ಮತ್ತು ತಾಯಿ ಶ್ರೀಮತಿ ಲಿಂಗಮ್ಮ ಅವರುಗಳ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ.

## ೧೦೧. ಕೋಣನಹಳ್ಳಿ ನಿಂಗಮ್ಮ

ಗ್ರಾಮೀಣ ಪ್ರದೇಶಗಳಲ್ಲಿ ಜನಪದರ ಮಾನಸಿಕ ಆರೋಗ್ಯವನ್ನು ಜನಪದ ಸಾಹಿತ್ಯ ಮತ್ತು ಕಲೆಗಳು ಕಾಯ್ದುಕೊಂಡು ಬಂದರೆ, ಜನಪದರ ದೈಹಿಕ ಆರೋಗ್ಯವನ್ನು ತಲೆಮಾರುಗಳಿಂದಲೂ ನಾಟಿ ವೈದ್ಯರುಗಳು ಕಾಪಾಡಿಕೊಂಡು ಬರುತ್ತಿದ್ದಾರೆ. ನಾಟಿ ಚಿಕಿತ್ಸೆಗೆ ಹಿತ್ತಲಗಿಡವೇ ಮದ್ದು. ಇಂತಹ ಹಿತ್ತಲ ಗಿಡಮೂಲಿಕೆಗಳ ವೈದ್ಯ ಸಂಪತ್ತು ಮಂಡ್ಯ ಜಿಲ್ಲೆ ಮಂಡ್ಯ ತಾಲ್ಲೂಕು ಕೋಣನಹಳ್ಳಿಯ ಸುಮಾರು ೬೫ರ ಹರೆಯದ ನಿಂಗಮ್ಮ ಕಳೆದ ನಾಲ್ಕೈದು ದಶಕಗಳಿಂದಲೂ ಹಿತ್ತಲ ಗಿಡಮೂಲಿಕೆಗಳಿಂದಲೇ ಹತ್ತು ಹಲವು ಖಾಯಿಲೆಗಳಿಗೆ ಔಷಧಿ ನೀಡುತ್ತಾ ಜಿಲ್ಲೆಯಾದ್ಯಂತ ಪ್ರಸಿದ್ಧರಾಗಿದ್ದಾರೆ. ನಾಟಿ ವೈದ್ಯದಲ್ಲಿ ಹೆಸರಾದ ತಂದೆ ದೇವೇಗೌಡರೇ ನಿಂಗಮ್ಮನವರ ಗುರು. ಹರ್ಸ್ತಿ, ಬೆನ್ನಫಣಿ, ಕೀಲುಬಾವು, ಎದೆ ಬಾವು, ಶಂಕರದಾಳ, ಇಸಬುಗಳಂತಹ ಗಂಭೀರ ಖಾಯಿಲೆಗಳಿಗೆ ನಿಂಗಮ್ಮನವರ ನಾಟಿ ವೈದ್ಯ ಸಿದ್ಧೌಷಧ. ಗಿಡ ಮೂಲಿಕೆಗಳನ್ನು ತಂದು ಸಿದ್ಧಗೊಳಿಸಿ ಹಸುವಿನ ಬೆಣ್ಣೆ ಹಾಗೂ ಪುನಗಿನ ಮೂಲಕ ಔಷಧಿ ನೀಡಿ ಗುಣಪಡಿಸುವ ನಿಪುಣೆ, ಇಂಗ್ಲಿಷ್ ಔಷಧಿ ಪದ್ಧತಿಯಿಂದ ಗಿಡಮೂಲಿಕೆಗಳ ನಾಟಿ ವೈದ್ಯ ಪದ್ಧತಿ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ನಾಟಿ ವೈದ್ಯದ ಸಂಪತ್ತಾಗಿರುವ ನಿಂಗಮ್ಮನಂತಹ ಜನಪದ ವೈದ್ಯೆಗೆ, ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಹನುಮನ ಹಳ್ಳಿಯ ಶ್ರೀ ಹ. ಕ. ರಾಜೇಗೌಡರು ತಮ್ಮ ತಂದೆ ತಾಯಂದಿರಾದ ದಿವಂಗತ ಕಪನೀಗೌಡ ಮತ್ತು ನಿಏಂಗಮ್ಮ ಅವರುಗಳ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸಿರುತ್ತದೆ.

## ೧೦೨. ರಾಜಮ್ಮ

ರಾಜಸ್ಥಾನದ ಮೋಡಿಕಾರರ ಮನೆತನದಲ್ಲಿ ಹುಟ್ಟಿದ ರಾಜಮ್ಮ ತಂದೆ ತಾಯಿಯೊಂದಿಗೆ ಬಾಲ್ಯದಲ್ಲಿ ಮೈಸೂರು ದಸರಾ ನೋಡಲು ಬಂದವರು ಜನಜಂಗುಳಿಯಲ್ಲಿ ತಪ್ಪಿಸಿಕೊಂಡು, ಪಾಂಡವಪುರದ ನೆಲಮನೆಯ ಸಾಧುಗಳ ಆಶ್ರಯದಲ್ಲಿ ಬೆಳೆದು ತತ್ವಪದಗಳ ಹಾಡುಗಾರ್ತಿಯಾಗಿ ರೂಪುಗೊಂಡ ಕಲಾವಿದೆ. ತಂಬೂರಿ ದಮ್ಮಡಿ, ತಾಳಗಳ ಸದ್ದು ಮತ್ತು ನಾದದ ಗತ್ತಿಗೆ ಅನುಗುಣವಾಗಿ ಕಥೆ ಮಾಡುವುದನ್ನು ಕಲಿತ ರಾಜಮ್ಮ ಮಾದೇಶ್ವರ, ಮಂಟೇಸ್ವಾಮಿ, ಮೈದಾಳರಾಮ, ಜೋಗಿ ಹಾಡು, ಗಂಗೆ ಗೌರಿ ಕಥನ ಕಾವ್ಯಗಳನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಾರೆ. ಸಂದರ್ಭಾನುಸಾರ ಅಭಿನಯದೊಂದಿಗೆ ಕಥನವನ್ನು ದೃಶ್ಯೀಕರಿಸುವ ಪ್ರತಿಭಾನ್ವಿತ ರಾಜಮ್ಮ. ಇಂತಹ ಹಿರಿಯ ಕಲಾವಿದೆಗೆ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸಿರುತ್ತದೆ.

## ೧೦೩. ವಿಶೇಷ ಪುರಸ್ಕಾರ : ತಿಟ್ಟಮಾರನಹಳ್ಳಿ ವರದಪ್ಪ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ತಿಟ್ಟಮಾರನಹಳ್ಳಿಯ ಕೃಷಿಕ ಕುಟುಂಬದಲ್ಲಿ ೧೯೩೧ ರಲ್ಲಿ ಜನಿಸಿದ ವರದಪ್ಪನವರು ಸ್ವಾತಂತ್ರ್ಯ ಹೋರಾಟಗಾರರು.

ಓದುವಾಗಲೇ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾವವಹಿಸಿ ಜೈಲು ಕಂಡವರು. ವಿಜ್ಞಾನ-ಕಾನೂನು-ವೈದ್ಯಕೀಯ ಶಾಸ್ತ್ರಗಳನ್ನು ಅಧ್ಯಯನ ಮಾಡಿರುವ ಶ್ರೀಯುತರು ತಾಲ್ಲೂಕಿನ ಸುಪ್ರಸಿದ್ಧ ವೈದ್ಯರಾಗಿ ಜನಜನಿತರಾಗಿರುತ್ತಾರೆ. ಕೃಷಿಕ ಕುಟುಂಬದಿಂದ ಬಂದ ವರದಪ್ಪನವರು ರೈತಾಪಿ ಜನರ ಕಷ್ಟಸುಖಗಳನ್ನು ಬಲ್ಲವರಾಗಿದ್ದು ರೈತರ ಹಿತರಕ್ಷಣೆಗಾಗಿ ರೈತ ಸಂಘ ಕಟ್ಟಿ ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷರಾಗಿ ಕಳೆದ ೨೫ ವರ್ಷಗಳಿಂದಲೂ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಹಲವಾರು ಸಂಘ ಸಂಸ್ಥೆಗಳನ್ನು ಹುಟ್ಟುಹಾಕಿ ರಚನಾತ್ಮಕ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ಜಾನಪದ ಲೋಕವು ನಿರ್ಮಾಣವಾಗುವ ಸಂದರ್ಭದಲ್ಲಿ ವರದಪ್ಪನವರ ನೆರವು ಸ್ಮರಣಾರ್ಹವಾದುದು. ಜಾನಪದ ಲೋಕದ ಹತ್ತು ಹಲವು ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜಾನಪದ ಲೋಕಕ್ಕೆ ಆಸರೆಯಾಗಿ ನಿಂತಿರುವ ವರದಪ್ಪನವರ ಜಾನಪದ ನಿಷ್ಠೆಯನ್ನು ಮೆಚ್ಚಿ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸಿರುತ್ತದೆ.

## ೧೦೪. ರಾಮನಗರ ಡಾ. ಕೆ. ಜಿ. ಗೋಪಾಲ ಕೃಷ್ಣರಾವ್

ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರದ ಡಾ. ಕೆ. ಜಿ. ಗೋಪಾಲ ಕೃಷ್ಣರಾವ್ ವೃತ್ತಿಯಲ್ಲಿ ವೈದ್ಯರು. ಪ್ರವೃತ್ತಿಯಲ್ಲಿ ಇತಿಹಾಸದ ವಿದ್ವಾಂಸರು. ವಿಜಯನಗರದ ಇತಿಹಾಸದ ಬಗ್ಗೆ ಆಳವಾದ ಆಸಕ್ತಿಯನ್ನು ಬೆಳೆಸಿಕೊಂಡಿರುವ ಶ್ರೀಯುತರು ಕೆಂಪೇಗೌಡರ ಕಾಲದ ವಾಸ್ತುಶಿಲ್ಪವನ್ನು ಕುರಿತಾದ ಅಧ್ಯಯನದಲ್ಲಿ ತೊಡಗಿಸಿಕೊಂಡಿರುತ್ತಾರೆ. ಉತ್ತಮ ಭಾಷಾಂತಕಾರರೂ ಆಗಿರುವ ಗೋಪಾಲಕೃಷ್ಣರಾಯರ ಭಾಷಾಂತರದ ನೆರವನ್ನು ಪರಿಷತ್ತು ಪಡೆದುಕೊಂಡಿದೆ. ಶ್ರೀಯುತರ ಜಾನಪದ ನಿಷ್ಠೆಯನ್ನು ಮೆಚ್ಚಿ ಕರ್ನಾಟಕ ಜಾನಪದ ಪರಿಷತ್ತು 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸಿರುತ್ತದೆ.

ಪರಿಚಯ : **ಡಾ. ಚಕ್ಕೆರೆ ಶಿವಶಂಕರ್**

# ಪ್ರಶಸ್ತಿ ಪುರಸ್ಕೃತರು – ೨೦೦೫

ಜನಪದ ಕಲಾವಿದರು ಸಾವನ್ನಪ್ಪಿದರೆ, ಅವರೊಂದಿಗೆ ಅವರಲ್ಲಿರುವ ಸಮೃದ್ಧ ಸಾಹಿತ್ಯ ಮತ್ತು ಉತ್ಕೃಷ್ಟ ಕಲಾ ಪರಂಪರೆಯೂ ಸಹ ಮಣ್ಣಾಗಿ ಹೋಗುತ್ತದೆ. ಎಷ್ಟೋ ಕಲಾವಿದರು ಈಗಾಗಲೇ ಮಣ್ಣಾಗಿ ಹೋಗಿರುವುದೂ ಉಂಟು. ಆದ್ದರಿಂದಲೇ ಕನ್ನಡ ನಾಡಿನ ಹಿರಿಯ ಜಾನಪದ ಚೇತನರಾದ ಎಚ್. ಎಲ್. ನಾಗೇಗೌಡರು ಸರ್ಕಾರ, ಸಂಘಸಂಸ್ಥೆಗಳು ಮತ್ತು ವಿದ್ವಾಂಸರುಗಳನ್ನು ಪದೇ ಪದೇ ಆಗ್ರಹಪಡಿಸುತ್ತಿರುವುದು. "ಪ್ರಕಟಿಸಿದ್ದನ್ನೇ ಮತ್ತೆ ಮತ್ತೆ ಪ್ರಕಟಿಸಿ ಹಣ ಮತ್ತು ಕಾಗದವನ್ನು ಪೋಲು ಮಾಡಬೇಡಿ. ಮೊದಲು ಹಳ್ಳಿಗಳಿಗೆ ಹೋಗಿ, ಬದುಕಿರುವ ಸಾವಿರಾರು ಮಂದಿ ಕಲಾವಿದರನ್ನು ಭೇಟಿಮಾಡಿ ಅವರಲ್ಲಿರುವ ಸಾಹಿತ್ಯವನ್ನು ಸಂಗ್ರಹಿಸಿ, ಅಳಿದುಹೋಗುತ್ತಿರುವ ಜನಪದ ಸಾಹಿತ್ಯ ಶ್ರೀಮಂತಿಕೆಯನ್ನು, ಕಲಾ ಪರಂಪರೆಯನ್ನು ಉಳಿಸಿ" ಎಂದು. ಕರ್ನಾಟಕ ಸರ್ಕಾರ ಮತ್ತು ಹತ್ತು ಹಲವು ಸಂಘ ಸಂಸ್ಥೆಗಳು ಕನ್ನಡ ನಾಡು–ನುಡಿ, ಸಂಸ್ಕೃತಿಯ ಏಳಿಗೆಗಾಗಿ ಸೇವೆ ಸಲ್ಲಿಸುತ್ತಿರುವ ಮಹನೀಯರನ್ನು ಗುರುತಿಸಿ, ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿದೆ. ಆದರೆ ಇಲ್ಲಿಯೂ ಸಹ ಪ್ರಶಸ್ತಿಗಳು ದಕ್ಕುವುದು ಬಹುಪಾಲು ಶಿಷ್ಟ ಕಲಾವಿದರಿಗೇ ಹೊರತು ಅಸಂಖ್ಯಾತರೂ, ಅಜ್ಞಾತರೂ ಆಗಿರುವ ಜನಪದ ಕಲಾವಿದರಿಗಲ್ಲ. ಇಂತಹ ತಾರತಮ್ಯವನ್ನು ಮನಗಂಡ ಎಚ್. ಎಲ್. ನಾಗೌಡರು ಪೂರ್ಣಪ್ರಮಾಣದಲ್ಲಿ ಕನ್ನಡ ಜಾನಪದ ಜಗತ್ತಿನ ಉತ್ತಮ ಕಲಾವಿದರುಗಳಿಗೆ ಮಾನ ಸನ್ಮಾನಗಳು, ಪ್ರಶಸ್ತಿಗಳು ಲಭಿಸುವಂತಾಗಬೇಕೆಂದು ಆಶಿಸಿ, ನೂರಾರು ಮಂದಿ ಜನಪದ ಕಲಾವಿದರುಗಳನ್ನು ಗುರುತಿಸಿ, ಅವರುಗಳನ್ನು ಸಾರ್ವಜನಿಕವಾಗಿ ಗೌರವಿಸುತ್ತ ಬಂದಿದ್ದಾರೆ. ೧೯೯೪ ರಿಂದೀಚೆಗೆ ಕರ್ನಾಟಕ ಜಾನಪದ ಪರಿಷತ್ತಿನ ವತಿಯಿಂದ, ಹಳ್ಳಿಗಾಡಿನ ಮೂಲೆ ಮುಡುಕುಗಳಲ್ಲಿ ಬೆಳಕಿಗೆ ಬಾರದೆ ಮುಚ್ಚಿ ಹೋಗಿರುವ ಅಸಂಖ್ಯಾತ ಜನಪದ ಕಲಾವಿದರುಗಳನ್ನು ಗಂಡಸು ಹೆಂಗಸರೆನ್ನದೆ ಪತ್ತೆ ಹಚ್ಚಿ, ಅವರನ್ನು ನಗರಕ್ಕೆ ಕರೆತಂದು ಸಾವಿರಾರು ಮಂದಿ ಪ್ರೇಕ್ಷಕರ ಸಮ್ಮುಖದಲ್ಲಿ, ಪ್ರತಿಷ್ಠಿತ ವ್ಯಕ್ತಿಗಳನ್ನು ಆಹ್ವಾನಿಸಿ ಅವರುಗಳಿಂದ ಈ ಕಲಾವಿದರುಗಳಿಗೆ ಜಾನಪದ ಲೋಕ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಗೌರವಿಸುವ ಶಾಶ್ವತ ಪ್ರಶಸ್ತಿ ಪ್ರದಾನ ವ್ಯವಸ್ಥೆಯೊಂದನ್ನು ರೂಢಿಗೆ ತಂದಿದ್ದು, ಈ ವ್ಯವಸ್ಥೆಯು ನಿರಂತರವಾಗಿ ಮುಂದುವರಿದುಕೊಂಡು ಹೋಗುವಂತೆ ಏರ್ಪಾಟು ಮಾಡಿರುತ್ತಾರೆ.

ಕರ್ನಾಟಕ ಜಾನಪದ ಪರಿಷತ್ತಿಗೆ ದಾನಿಗಳು ನೀಡಿರುವ ವವಿಧ ದತ್ತಿ ನಿಧಿಗಳನ್ನು ಆಧರಿಸಿ ೧೭ ಜಾನಪದ ಲೋಕ ಪ್ರಶಸ್ತಿಗಳನ್ನು, ೩ ವಿಶೇಷ ಪುರಸ್ಕಾರಗಳನ್ನು ನೀಡುವುದರ ಜತೆಗೆ ಎಚ್. ಎಲ್. ನಾಗೇಗೌಡರು ತಮ್ಮ ಅಜ್ಜಿಯಂದಿರಾದ ಮಾತೋಶ್ರೀ ಬಂಗಲಿ ಗಿರಿಯಮ್ಮ ಮತ್ತು ಹೆರಗನಹಳ್ಳಿ ಚಿಕ್ಕಮ್ಮನವರ ನೆನಪಿಗಾಗಿ ಸುಶ್ರಾವ್ಯವಾದ ಹಾಡುಗಾರ್ತಿಗೆ ಸೋಬಾನೆ ಚಿಕ್ಕಮ್ಮ ಪ್ರಶಸ್ತಿ , ತಮ್ಮ ತಂದೆ ಲಿಂಗೇಗೌಡ ಮತ್ತು ತಾಯಿ ಹುಚ್ಚಮ್ಮನವರ ನೆನಪಿಗಾಗಿ ಅತ್ಯುತ್ತಮ ವೃತ್ತಿಗಾಯಕರಿಗೆ ದೊಡ್ಡಮನೆ ಪ್ರಶಸ್ತಿ, ತಮ್ಮನ್ನು ಪ್ರೀತಿಯಿಂದ ಸಾಕಿ ಸಲಹಿದ

ದೊಡ್ಡಮನೆ ಕುಟುಂಬದವರೆಲ್ಲರ ನೆನಪಿಗಾಗಿ, ಜನಪದ ರಂಗಭೂಮಿಯ ಅತ್ಯುತ್ತಮ ಭಾಗವತರಿಗೆ ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿಗಳನ್ನು ನೀಡುತ್ತಾ ಬರಲಾಗಿದೆ. ಇದುವರೆಗೂ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಚುಂಚನಹಳ್ಳಿ ಪಾಳ್ಯದ ಸೋಬಾನೆ ಗಿರಿಯಮ್ಮ, ಹೆರಗನಹಳ್ಳಿ ತಿಮ್ಮಮ್ಮ, ಟಿ. ನರಸೀಪುರ ತಾಲ್ಲೂಕು ಮೆಣಸಕ್ಯಾತನಹಳ್ಳಿಯ ನಿಂಗಮ್ಮ, ಕಾಡಸೂರು ಮುದಿಗೆರೆ ಗಿರಿಯಮ್ಮ ಇವರುಗಳಿಗೆ ಸೋಬಾನೆ ಚಿಕ್ಕಮ್ಮ ಪ್ರಶಸ್ತಿ, ಚಾಮರಾಜನಗರ ಜಿಲ್ಲೆ ಕೆಬ್ಬೇಪುರದ ನೀಲಗಾರ ರಾಚಯ್ಯ ಬಿನ್ ಲಿಂಗಯ್ಯ, ಹಾಸನ ಜಿಲ್ಲೆ ಹೊಳೆನರಸೀಪುರದ ತಂಬೂರಿ ಮರಿಯಪ್ಪ, ಹೆಬ್ಬಣಿಯ ಕಂಸಾಳೆ ಮಹದೇವಯ್ಯ, ಹಿರೀನಲ್ಲೂರು ಚೌಡಿಕೆ ಗೋವಿಂದಪ್ಪ ಇವರುಗಳಿಗೆ ದೊಡ್ಡಮನೆ ಪ್ರಶಸ್ತಿ, ಹಾಗೂ ಸೂತ್ರದ ಗೊಂಬೆಯಾಟದ ಅಭಿಜಾತ ಕಲಾವಿದರಾದ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಬೆಳ್ಳೂರಿನ ಬಿ. ಎಚ್. ಪುಟ್ಟಶಾಮಾಚಾರ್, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ಸುರಧೇನುಪುರದ ಮೂಡಲಪಾಯ ಯಕ್ಷಗಾನ ಭಾಗವತರಾದ ಎಂ. ದೊಡ್ಡಮುನಿಯಪ್ಪ ತಿಪಟೂರು ತಾಲ್ಲೂಕಿನ ಅರಳುಗುಪ್ಪೆಯ ಎ. ಎನ್. ಚನ್ನಬಸವಯ್ಯ, ಕಾಸರಗೋಡಿನ ಬಲಿಪ ನಾರಾಯಣ ಭಾಗವತ ಇವರುಗಳಿಗೆ ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿಗಳು ಲಭಿಸಿವೆ.

ತಾ॥ ೧೩-೨-೨೦೦೫ ರಂದು ಸಂಜೆ ಜಾನಪದ ಲೋಕದ ರಮ್ಯ ಪರಿಸರದ ಭವ್ಯ ಬಯಲು ರಂಗಮಂದಿರದಲ್ಲಿ ೨೦೦೫ರ ಸಾಲಿನ ಮೇಲ್ಕಂಡ ಎಲ್ಲಾ ಪ್ರಶಸ್ತಿಗಳನ್ನು ಪ್ರಧಾನ ಮಾಡುವ ಸಮಾರಂಭವನ್ನು ಏರ್ಪಡಿಸಲಾಗಿತ್ತು ಪ್ರಶಸ್ತಿ ಪುರಸ್ಕೃತರಾದ ಪ್ರತಿಯೊಬ್ಬ ಕಲಾವಿದರಿಗೂ ಪ್ರಶಸ್ತಿ ಫಲಕ ಮತ್ತು ಒಂದು ಸಾವಿರ ರೂ. ನಗದು ಹಣದೊಂದಿಗೆ ಗಂಡಸರಿಗೆ ಶಾಲು, ಹೆಂಗಸರಿಗೆ ಸೀರೆ ಮತ್ತು ಖಣಗಳನ್ನು ನೀಡಲಾಯಿತು. ೨೦೦೫ರ ಸಾಲಿನಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಪ್ರಶಸ್ತಿ ಪುರಸ್ಕೃತರ ವಿವರಗಳು ಕೆಳಕಂಡಂತಿವೆ.

## ೧೦೫. ಬನ್ನೂರು ಕೆಂಪಮ್ಮ

ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕು ಬನ್ನೂರಿನ ಸುಮಾರು ೬೧ರ ಹರೆಯದ ಶ್ರೀಮತಿ ಕೆಂಪಮ್ಮನವರು ಬಾಲ್ಯದಿಂದಲೇ ಮನೆಗೆಲಸ, ಕೂಲಿಕೆಲಸಗಳೊಂದಿಗೆ ಜನಪದ ಹಾಡುಗಳನ್ನು ಮೈಗೂಡಿಸಿಕೊಂಡವರು. ಬಡತನದಿಂದಾಗಿ ಕರೆದಲ್ಲಿಗೆ ಹೋಗುತ್ತಿದ್ದ ಕೆಂಪಮ್ಮ ನಾಟಿಹಾಕುವಾಗ, ಕಳೆಕೀಳುವಾಗ, ರಾಗಿಬೀಸುವಾಗ, ಕೇರುವಾಗ, ಕುಟ್ಟುವಾಗಲೆಲ್ಲಾ ಜತೆಗಾತಿಯರು ಹಾಡುತ್ತಿದ್ದ ಹಾಡುಗಳಿಗೆ ದನಿಗೂಡಿಸುತ್ತಾ ಒಂದೊಂದನ್ನೇ ತಮ್ಮ ಎದೆಯಾಳಕ್ಕಿಳಿಸಿಕೊಂಡವರು. ಹಲಗೆ ಬಳಪ ಹಿಡಿದು ಗೊತ್ತಿಲ್ಲದ ಕೆಂಪಮ್ಮ ಜಾನಪದ ಸರಸ್ವತಿಯ ಆರಾಧಕಿ. ದೇವರ ಪದಗಳು, ಬೀಸುವ ಪದಗಳು, ಸೋಬಾನೆ ಪದಗಳು, ತತ್ವಪದಗಳು, ತಮಾಶೆ ಪದಗಳು, ಸತ್ತು ಕೆಟ್ಟವರನ್ನು ಹೊಗಳುವ ಪದಗಳು, ರಂಗಗೀತೆಗಳು– ಹೀಗೆ ಕೆಂಪಮ್ಮನವರ ಸಾಹಿತ್ಯಾಭಿವ್ಯಕ್ತಿ ಸಮೃದ್ಧ ಹಾಗೂ ವೈವಿಧ್ಯಮಯವಾದುದು. ಕೆಂಪಮ್ಮನವರ ವಿಶೇಷತೆ ಎಂದರೆ ವೃತ್ತಿಗಾಯಕರು ಹಾಡುವ ಸುದೀರ್ಘ ಕಥನ ಕಾವ್ಯಗಳನ್ನು ಅರಗಿಸಿಕೊಂಡು ಅವರಷ್ಟೇ ಸುಶ್ರಾವ್ಯವಾಗಿ ಹಾಡುತ್ತಾರೆ. ಕೈಯಲ್ಲಿ ದಮಡಿ ಹಿಡಿದು ತಾರಸ್ವರದಲ್ಲಿ

ಹಾಡಲಾರಂಭಿಸಿದರೆ ಎಂತಹವರೂ ತಲೆದೂಗುವ ವಿಶಿಷ್ಟ ಗಾಯನ ಇವರದು. ಕೆಂಪಮ್ಮನವರ ಎಲ್ಲಾ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೮೭ ರಲ್ಲಿಯೇ ಧ್ವನಿಮುದ್ರಿಸಿಕೊಂಡಿದ್ದಾರೆ. ಆದಿಚುಂಚನಗಿರಿಯಲ್ಲಿ ನಡೆಯುವ ಭೈರವೇಶ್ವರ ಜನಪದ ಗೀತಗಾಯನ ಮೇಳ ಮತ್ತು ಚಿಕ್ಕಲ್ಲೂರು ಜಾತ್ರೆಗೆ ತಪ್ಪದೆ ಹಾಜರಾಗಿ ತಮ್ಮ ಗಾಯನ ಸೇವೆ ನಡೆಸಿಕೊಡುತ್ತಾ ಬಂದಿರುವ ಕೆಂಪಮ್ಮನವರಂತಹ ಮುಗ್ಧ, ಪ್ರತಿಭಾವಂತ ಹಾಡುಗಾರ್ತಿಗೆ ಸುಶ್ರಾವ್ಯವಾದ ಹಾಡುಗಾರಿಕೆಗೆ ನೀಡುವ 'ಸೋಬಾನೆ ಚಿಕ್ಕಮ್ಮ ಪ್ರಶಸ್ತಿ'ಯನ್ನು ೧೩-೨-೨೦೦೫ ರಂದು ನೀಡಿ ಗೌರವಿಸಲಾಯಿತು.

## ೧೦೬. ಮಳವಳ್ಳಿ ಮಹದೇವಸ್ವಾಮಿ

ಕರ್ನಾಟಕ ಪ್ರಮುಖ ವೃತ್ತಿಗಾಯಕ ಪರಂಪರೆಗಳಲ್ಲಿ ಒಂದಾದ ನೀಲಗಾರರು ಮಂಟೇಸ್ವಾಮಿಯ ಗುಡ್ಡರು. ನಡಿ ತಂಬೂರಿಯನ್ನು ಮೀಟುತ್ತಾ ಢಕ್ಕೆ, ಗಗ್ಗರಗಳನ್ನು ನುಡಿಸುತ್ತಾ ನೀಲಗಾರರು ತಮ್ಮ ಇಷ್ಟ ದೈವವಾದ ಮಂಟೇಸ್ವಾಮಿಯನ್ನು ಕುರಿತು ಹಾಡಲಾರಂಭಿಸಿದರೆ ಎಂತಹ ಅರಸಿಕರೂ ತಲೆದೂಗುತ್ತಾರೆ. ಇಂತಹ ಪರಂಪರೆಯಲ್ಲಿ ಬೆಳೆದು ಬಂದ ನಾಡಿನ ಪ್ರತಿಭಾವಂತ ಗಾಯಕರುಗಳಲ್ಲಿ ಒಬ್ಬರು ಮಳವಳ್ಳಿಯ ಮಹದೇವಸ್ವಾಮಿ. ಪೂರಿಗಾಲಿಯ ಬೊಮ್ಮೇಗೌಡರ ಶಿಷ್ಯತ್ವ ಸ್ವೀಕರಿಸಿ, ಅವರಿಂದ ಸೊಗಸಾದ ಹಾಡುಗಾರಿಕೆಯನ್ನು ಸಿದ್ಧಿಸಿಕೊಂಡ ಕಲಾವಿದರಿವರು. ಧರೆಗೆ ದೊಡ್ಡವರು ಮತ್ತು ಮಹದೇಶ್ವರ ಮಹಾಕಾವ್ಯಗಳಲ್ಲದೆ ಹತ್ತಾರು ಕಥನ ಕಾವ್ಯಗಳನ್ನು ಹಾಡುವ ಮಹದೇವಸ್ವಾಮಿಯವರ ಹಾಡುಗಾರಿಕೆಯ ವೈಶಿಷ್ಟ್ಯವೆಂದರೆ, ಜನಪದ ಮೂಲ ಮಟ್ಟುಗಳ ಪ್ರಯೋಗ, ಗದ್ಯ ಪದ್ಯಗಳೆರಡರಲ್ಲೂ ನಿರರ್ಗಳ ನಿರೂಪಣೆ, ದಣಿವರಿಯದ ಕಥನ ಕೌಶಲ್ಯ, ಹಾಡುಗಾರಿಕೆಯಲ್ಲಿನ ಶ್ರದ್ಧೆ ಮತ್ತು ಏಕಾಗ್ರತೆಗಳು. ಮಹದೇವಸ್ವಾಮಿಯವರು ಇದುವರೆಗೂ ಹಾಡಿರುವ ೫೦ ಆಡಿಯೋ ಕ್ಯಾಸೆಟ್‌ಗಳು ಹೊರಬಂದಿವೆ. ಸುಮಾರು ಐದು ಲಕ್ಷಕ್ಕೂ ಹೆಚ್ಚು ಕ್ಯಾಸೆಟ್‌ಗಳು ಮಾರಾಟವಾದ ದಾಖಲೆ ಇವರ ಹಾಡುಗಾರಿಕೆಗಿದೆ. ಅಲ್ಲದೆ, ಪಿ. ಬಿ. ಶ್ರೀನಿವಾಸ್, ಎಸ್. ಪಿ. ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ ಮೊದಲಾದ ಪ್ರಸಿದ್ಧ ಚಲನಚಿತ್ರ ಹಿನ್ನೆಲೆ ಗಾಯಕರುಗಳೊಂದಿಗೆ ಹಾಡಿರುವ ಖ್ಯಾತಿ ಇವರದು. ಇಂತಹ ಪ್ರಸಿದ್ಧ ನೀಲಗಾರ ವೃತ್ತಿ ಗಾಯಕರಾದ ಮಹದೇವಸ್ವಾಮಿಯವರಿಗೆ ತಾ॥ ೧೩-೨-೨೦೦೫ ರಂದು 'ದೊಡ್ಡಮನೆ ಪ್ರಶಸ್ತಿ' ನೀಡಿ ಗೌರವಿಸಿದೆ.

## ೧೦೭. ಮುನಿಯೂರು ದಾಸಾಚಾರ್

ಕನ್ನಡ ಜನಪದ ರಂಗಭೂಮಿ ಪರಂಪರೆಯಲ್ಲಿ ಮೂಡಲಪಾಯ ಯಕ್ಷಗಾನವು ಅತ್ಯಂತ ವಿಶಿಷ್ಟವಾದ ದೃಶ್ಯಕಲಾ ಪ್ರಕಾರ. ಸಾಹಿತ್ಯ, ಸಂಗೀತ, ಹಾಡುಗಾರಿಕೆ, ಮಾತುಗಾರಿಕೆ, ಬಣ್ಣಗಾರಿಕೆ, ಅಭಿನಯ, ಕುಣಿತ, ವೇಷಭೂಷಣಗಳು-ಇವೇ ಮೊದಲಾದ ಅಂಶಗಳನ್ನು ಒಳಗೊಂಡ ಆಕರ್ಷಣೀಯ ಗ್ರಾಮೀಣ ಮನರಂಜನಾ ಮಾಧ್ಯಮವಿದು. ಕರ್ನಾಟಕದ ಕರಾವಳಿ ಭಾಗವು

ಪಡುವಲಪಾಯ ಯಕ್ಷಗಾನ ಸಂಪ್ರದಾಯಕ್ಕೆ ಹೆಸರುವಾಸಿಯಾದರೆ, ಉತ್ತರ ಮತ್ತು ದಕ್ಷಿಣ ಭಾಗಗಳು ಮೂಡಲಪಾಯ ಯಕ್ಷಗಾನ ಸಂಪ್ರದಾಯಕ್ಕೆ ಮನೆಮಾತಾಗಿವೆ. ಮೂಡಲಪಾಯ ಪ್ರಸಂಗದ ಯಶಸ್ಸು ವಾಸ್ತವವಾಗಿ ಭಾಗವತರ ಕೌಶಲ್ಯ ಮತ್ತು ಪರಿಣತಿಗಳನ್ನು ಅವಲಂಬಿಸಿರುತ್ತದೆ. ಭಾಗವತರು ಕ್ರಿಯೇಟಿವ್ ಅಲ್ಲದಿದ್ದಲ್ಲಿ ಪ್ರಸಂಗವು ಕಳಾಹೀನವಾಗುತ್ತದೆ. ಈ ಕಲೆಯನ್ನು ಉಳಿಸಿ ಬೆಳೆಸಲು ಹಲವಾರು ಭಾಗವತರು ಶ್ರಮಿಸುತ್ತಿದ್ದಾರೆ ಶ್ರೇಷ್ಠ ಮಟ್ಟದ ಕಲಾವಿದರು ಮತ್ತು ಭಾಗವತರು ಈ ಸಂಪ್ರದಾಯದಲ್ಲಿ ಉಳಿದಿದ್ದು ಈಗಲೂ ಈ ಕಲೆ ಅಲ್ಲಲ್ಲಿ ಉಸಿರಾಡಿಕೊಂಡಿರುವಂತೆ ನೋಡಿಕೊಂಡಿದ್ದಾರೆ. ಇಂತಹ ಭಾಗವತ ಶ್ರೇಷ್ಠರ ಸಾಲಿನಲ್ಲಿ ತುಮಕೂರು ಜಿಲ್ಲೆ ತುರುವೆಕೆರೆ ತಾಲ್ಲೂಕಿನ ಮುನಿಯೂರು ದಾಸಾಚಾರ್ ಒಬ್ಬರು. ಸುಮಾರು ೫೬ ರ ಹರೆಯದ ದಾಸಾಚಾರ್ ಅವರು ತಮ್ಮ ಎಳೆಯ ವಯಸ್ಸಿನಲ್ಲೇ ಬಣ್ಣ ಹಚ್ಚಿಕೊಂಡು ಅಟ್ಟವನ್ನೇರಿದವರು. ಮೂಡಲಪಾಯ ಯಕ್ಷಗಾನದ ವೈವಿಧ್ಯಮಯ ಪ್ರಸಂಗಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ಧರಿಸಿ ಅತ್ಯುತ್ತಮ ಕಲಾವಿದರಾಗಿ ಬೆಳೆದಿದ್ದಷ್ಟೇ ಅಲ್ಲದೆ, ಮೃದಂಗ ಹಿಡಿದು ಹಾಡುಗಾರಿಕೆಯ ಮೂಲಪಾಠಗಳನ್ನು ಕಲಿತವರು. ನೂರಕ್ಕೂ ಹೆಚ್ಚು ಪ್ರಸಂಗಗಳನ್ನು ಕಂಠಸ್ಥ ಮಾಡಿಕೊಂಡಿರುವ ದಾಸಾಚಾರ್ ಅವರದು ನಿಖರ ಉಚ್ಚಾರಣೆ, ಖಚಿತ ತಾಳ ಬದ್ಧತೆ ಮತ್ತು ಸುಭಗವಾದ ಸ್ವರಶುದ್ಧಿ. ಎಂತಹ ಕ್ಲಿಷ್ಟ ಪ್ರಸಂಗವನ್ನಾದರೂ ಸರಿಯೆ, ಅತ್ಯಂತ ಸರಾಗವಾಗಿ ಹಾಡುತ್ತಾ ಆಟವನ್ನು ಕಳೆಗಟ್ಟಿಸುವುದರಲ್ಲಿ ನಿಪುಣರು. ಹದವಾದ ದನಿ, ಎತ್ತಿ ಹಾಡುವ ಛಂದ, ಕಥೆಗಾರಿಕೆಯ ಸೊಗಸು ತುಂಬಿದ ದಾಸಾಚಾರ್ ಅವರ ಠೇಂಕರಿಸುವ ಕಂಠಕ್ಕೆ ಸರಿಗಟ್ಟಬಲ್ಲ ಕಂಠ ಮತ್ತೊಂದಿಲ್ಲ. ಈಗಾಗಲೇ ಶ್ರೀಕ್ಷೇತ್ರ ಧರ್ಮಸ್ಥಳದಿಂದ ಮೊದಲುಗೊಂಡು ಕಂಚಿ ಕಾಮಕೋಟಿ ಪೀಠದವರೆಗೂ ತಮ್ಮ ಪ್ರದರ್ಶನಗಳನ್ನು ವಿಸ್ತರಿಸಿರುವ ಮತ್ತು ಮೂಡಲಪಾಯ ಯಕ್ಷಗಾನದ ಉಳಿವು ಬೆಳವಣಿಗೆಗಾಗಿ ಶ್ರಮಿಸುತ್ತಿರುವ ಇಂತಹ ಅಸಾಧಾರಣ ಪ್ರತಿಭಾವಂತ ಮೂಡಲಪಾಯ ಯಕ್ಷಗಾನ ಭಾಗವತರಿಗೆ, ತಾ||೧೩-೨-೨೦೦೫ ರಂದು ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

## ೧೦೮. ದೊಡ್ಡ ಬಾಣಗೆರೆಯ ಮಾರಕ್ಕ

ನೊಳಂಬವಾಡಿ ಪ್ರಾಂತ್ಯಕ್ಕೆ ಸೇರಿದ ಸದಾ ಬರಗಾಲಕ್ಕೆ ತುತ್ತಾಗುತ್ತಿರುವ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ದೊಡ್ಡ ಬಾಣಗೆರೆಯ ಮಾರಕ್ಕನವರು ಜುಂಜಪ್ಪನ ಬಗ್ಗೆ ಸಾವಿರಾರು ಜನಪದ ಗೀತೆಗಳನ್ನು, ಚಿತ್ತಯ್ಯ, ಕಾಟಯ್ಯ ಕರಿಮಲೆಗೆ ದಂಡು ನಡೆಸಿದ ಪದಗಳನ್ನು, ಹೆಂಜೇರು ಸಿದ್ದೇಶನ ಮೇಲೆ ಮೂರು ಸಾವಿರ ಪದಗಳನ್ನು ಹಾಡುತ್ತಿದ್ದರೆ ಕೇಳುಗರ ಕಿವಿ ನಿಮಿರಿ ನಿಲ್ಲುತ್ತದೆ. ಬಾಲ್ಯದಲ್ಲಿ ದಲಿತರ ತಿಮ್ಮಜ್ಜಿ ಹೇಳುತ್ತಿದ್ದ ಸಾವಿರಾರು ಪದಗಳನ್ನು ಕೇಳಿಕೊಂಡು ಬೆಳೆದ ಮಾರಕ್ಕ, ಗದ್ದೆ ಪೈರು ನಾಟಿ ಮಾಡುತ್ತಾ, ಕಡಲೇಕಾಯಿ ಬಿಡಿಸುತ್ತಾ, ರಾಗಿ ಕಲ್ಲಿನ ಮುಂದೆ ಬೀಸುತ್ತಾ ಕುಳಿತಾಗ, ಕಂಚಿನ ಕಂಠದಂತಿರುವ ತಮ್ಮ ಧ್ವನಿಯಿಂದ ಕಿವಿಗೆ ಕಂಪನ್ನು ನೀಡಿ, ಇಂಪಾಗಿ ಹಾಡಿ ಮನ ತಂಪಾಗಿಸುವಂತೆ ಹಾಡಲು ಕಲಿತ ಅಸಾಧಾರಣ

ಗಾಯಕಿ. ಮಾರಕ್ಕನವರ ತಂಗಿ ಮುತ್ತಿನಕ್ಕನೂ ಸಹ ಅಕ್ಕನಷ್ಟೇ ಪ್ರತಿಭಾವಂತ ಹಾಡುಗಾರ್ತಿ. ಇದ್ದ ಒಬ್ಬನೇ ಮಗ ಮತ್ತು ಪತಿಯನ್ನು ಕಳೆದುಕೊಂಡು ಬದುಕನ್ನು ಕಣ್ಣೀರಿನಲ್ಲಿ ಕಳೆಯುತ್ತಿದ್ದರೂ ಈವತ್ತಿಗೂ ಎಲ್ಲರ ಮನೆಮದುವೆಗಳಿಗೆ ತಪ್ಪದೆ ಹಾಜರಾಗಿ ಇಡೀ ರಾತ್ರಿ ಹಾಡುತ್ತಾ ಕೂರುವ ಮಾರಕ್ಕನವರನ್ನು ಇದುವರೆಗೂ ಯಾವುದೇ ಸಂಘ ಸಂಸ್ಥೆಗಳಾಗಲೀ ಅಕಾಡೆಮಿಯಾಗಲೀ ಗುರುತಿಸಿಲ್ಲ. ಇದೀಗ ಕರ್ನಾಟಕ ಜಾನಪದ ಪರಿಷತ್ತು ಇಂತಹ ಸೊಗಸಾದ, ಸಮೃದ್ಧ ಹಾಡುಗಾರ್ತಿಗೆ ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ' ನೀಡಿ ಗೌರವಿಸಿದೆ.

## ೧೦೯. ಮಾರಗೌಡನ ಹಳ್ಳಿ ಭಾಗ್ಯಮ್ಮ

ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು ಮಾರಗೌಡನ ಹಳ್ಳಿಯ ಭಾಗ್ಯಮ್ಮನವರು ಜಾನಪದ ಸರಸ್ವತಿಯನ್ನು ಬದುಕಿನುದ್ದಕ್ಕೂ ಆರಾಧಿಸಿಕೊಂಡು ಬಂದವರು. ಮದುವೆ ಶಾಸ್ತ್ರಗಳಿಗೆ ಸಂಬಂಧಿಸಿದ ಎಲ್ಲಾ ಪದಗಳನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡುವ ಭಾಗ್ಯಮ್ಮ ಮಹದೇಶ್ವರ, ಮಾಸ್ತಮ್ಮ, ತಿರುಪತಿ ತಿಮ್ಮಪ್ಪ, ಹನುಮಂತ, ನಂಜುಂಡೇಶ್ವರ ಮುಂತಾದ ದೇವರುಗಳ ಮೇಲೆ ವೈವಿಧ್ಯಮಯವಾದ ಪಲ್ಲವಿಗಳಿಂದ ಒಡಗೂಡಿದ ಹಾಡುಗಳನ್ನು ಹಾಡುತ್ತಾರೆ. ಅಲ್ಲದೆ ದೂರೀಪದಗಳು, ಕುಂತಿಪದಗಳು, ಮಳೆರಾಯನ ಪದಗಳು, ರಂಗದಪದಗಳು ಮತ್ತು ಅನೇಕ ಕಥನ ಕಾವ್ಯಗಳನ್ನು ಹಾಡುವ ಇಂತಹ ಅಸಾಧಾರಣ ಹಾಡುಗಾರ್ತಿಯನ್ನು ಇದುವರೆಗೂ ಯಾರೂ ಗುರುತಿಸಿ ಕರೆದು ಗೌರವಿಸಿರುವುದಿಲ್ಲ. ಕರ್ನಾಟಕ ಜಾನಪದ ಪರಿಷತ್ತು ಅಜ್ಞಾತ ಹಾಡುಗಾರ್ತಿಯನ್ನು ಗುರುತಿಸಿ, ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೧೦. ಶ್ಯಾಮರಾಯ ಗೂಳಪ್ಪ ಬಡಿಗೇರ

ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಸಾಲೋಟಗಿ ಗ್ರಾಮವು ಜನಪದ ಕಲೆಗಳ ತವರೂರು. ಹಿರಿಯರು, ಕ್ರಿಯಾಶೀಲರು ಆದ ಶ್ರೀ ಯಳಸಂಗಿ ಕಲ್ಲಣ್ಣನವರ ಮಾರ್ಗದರ್ಶನದಲ್ಲಿ ಸುಮಾರು ೩೦ ಕ್ಕೂ ಹೆಚ್ಚು ಜನಪದ ಕಲಾ ಪ್ರಕಾರಗಳು ಈ ಊರಿನಲ್ಲಿ ಹಬ್ಬಿ ಹರಡಿವೆ. ಕೇವಲ ಜನಪದ ಕಲೆಗಳಿಗಷ್ಟೇ ಅಲ್ಲ ಕರಕುಶಲ ಕಲೆಗಳಿಗೂ ಸಾಲೋಟಗಿ ಹೆಸರಾಗಿದೆ. ಈ ಊರಿನ ಶ್ಯಾಮರಾಯ ಗೂಳಪ್ಪ ಬಡಿಗೇರ ಅವರು ಬೀರ್ ಬಾಟಲಿನೊಳಗೆ ಆಟದ ಮಂಚದ ಚೌಕ ಜೋಡಿಸಿ, ಚೌಕಕ್ಕೆ ದಾರವನ್ನು ಪೋಣಿಸಿ ಸುಂದರವಾಗಿ ನೇಯಬಲ್ಲರು ! ಅದೇ ರೀತಿ ನೊಗ ಸಹಿತ ಕೂರಿಗಿ ಆಟಿಕೆಯನ್ನು ಬಾಟಲಿನೊಳಗಡೆಯೇ ಸೃಷ್ಟಿಸಬಲ್ಲರು. ಇವರ ಕರಕುಶಲತೆಯನ್ನು ಕಂಡವರು ಬೆರಗಾಗುವುದು ಸಹಜ. ಬಡಿಗೇರರು ಇಂತಹ ಸೂಕ್ಷ್ಮಾತಿ ಸೂಕ್ಷ್ಮ ಕುಸುರಿತನದಿಂದ ಕೂಡಿದ ಕಲಾತ್ಮಕ ಹೆಣಿಗೆಯ ಜತೆಗೆ ಗೃಹ ಬಳಕೆಯ ಪೀಠೋಪಕರಣಗಳನ್ನು ಮತ್ತು ವ್ಯವಸಾಯಕ್ಕೆ ಬೇಕಾದ ರಂಟೆ ಕುಂಟೆ, ಕೂರಿಗಿ, ಚಕ್ಕಡಿಗಳನ್ನು ತಯಾರಿಸುವಲ್ಲಿಯೂ ಸಿದ್ಧಹಸ್ತರು. ಕಳೆದ ೩೫ ವರ್ಷಗಳಿಂದಲೂ ತಮ್ಮ ಈ ಅಪರೂಪದ

ಕಲೆಯನ್ನು ಕರೆದಲ್ಲಿಗೆ ಹೋಗಿ ಪ್ರದರ್ಶಿಸುತ್ತಾ ಬಂದಿರುವ ಬಡಿಗೇರರು ಆರ್ಥಿಕ ಅನಾನುಕೂಲತೆಯ ನಡುವೆಯೂ ತಮ್ಮ ಕುಸರಿ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಇಂತಹ ಅಪರೂಪದ ಜನಪದ ಕರಕುಶಲಕರ್ಮಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೧೧. ಬ್ಯಾಲದ ಹಟ್ಟಿ ಪ್ರಕಾಶ್

ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ದಲಿತರೇ ನುಡಿಸುವ ವಿಶಿಷ್ಟ ವಾದ್ಯಮೇಳವೊಂದಿದೆ. ನಾಲ್ಕಾರು ಮಂದಿ ಸೇರಿ ಓಲಗ–ಕರಡೆ, ಝಲ್ಲರಿ, ಸಮಾಳ ಮೊದಲಾದ ವಾದ್ಯಗಳನ್ನು ಬಾರಿಸುವ ಈ ಮೇಳವನ್ನು ಚಿಟ್ ಮೇಳ ಎಂದು ಕರೆಯುತ್ತಾರೆ. ಚಿಟ್ ಮೇಳ ಎಂದರೆ ಚಿಟ್ ಹಳ್ಳು ಇದ್ದ ಹಾಗೆ ಚಿಕ್ಕದು. ಇದರಲ್ಲಿ ಓಲಗವೇ ಪ್ರಮುಖವಾದ್ಯ. ಓಲಗ ನುಡಿಸುವವರು ಈ ಮೇಳದ ಕೇಂದ್ರ ವ್ಯಕ್ತಿ. ಮದುವೆ ಮುಂಜಿ, ದೇವರ ಉತ್ಸವ ಮೊದಲಾದ ಶುಭ ಸಮಾರಂಭಗಳಿಗೆ ಈ ಚಿಟ್ ಮೇಳವನ್ನು ಕರೆಸುತ್ತಾರೆ. ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ಬ್ಯಾಲದ ಹಟ್ಟಿಯ ದಲಿತ ಜನಾಂಗಕ್ಕೆ ಸೇರಿದ ಸುಮಾರು ೪೫ರ ಹರೆಯದ ಪ್ರಕಾಶ್ ಚಿಟ್ ಮೇಳದ ಪ್ರಧಾನ ಓಲಗ ವಾದಕರಾಗಿ ಹೆಸರಾಗಿದ್ದಾರೆ. ಈಗಾಗಲೇ ಚಿಟ್ ಮೇಳದಲ್ಲಿ ಓಲಗದ ಚೀಲವನ್ನು ಬಗಲಿಗೆ ಹಾಕಿಕೊಂಡು ಅಸಂಖ್ಯಾತ ಮದುವೆ–ಮುಂಜಿಗಳಲ್ಲಿ, ಶುಭಸಮಾರಂಭಗಳಲ್ಲಿ ಓಲಗ ನುಡಿಸಿರುವ ಪ್ರಕಾಶ್ ನಾಡಿನ ಹಲವು ಕಡೆಗಳಲ್ಲದೆ, ಮಧ್ಯಪ್ರದೇಶ, ದೆಹಲಿ, ತಮಿಳುನಾಡು, ಕೇರಳಗಳಲ್ಲಿಯೂ ಪ್ರದರ್ಶನ ನೀಡಿ ಜಯಭೇರಿ ಭಾರಿಸಿದ್ದಾರೆ. ತರಂಗ ತರಂಗವಾಗಿ ನಾದವನ್ನು ಹೊರಹೊಮ್ಮಿಸಿ ಕೇಳುಗರ ಮನಸೂರೆಗೊಳ್ಳುವ ಚಿಟ್ ಮೇಳದ ಓಲಗವಾದಕ ಪ್ರಕಾಶ್ ಅವರಿಗೆ ಇದೀಗ ಕರ್ನಾಟಕ ಜಾನಪದ ಪರಿಷತ್ತು, ತಾ॥೧೩–೨–೨೦೦೫ ರಂದು ಜಾನಪದ ಲೋಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

## ೧೧೨. ಹೂವಿನಹಳ್ಳಿ ಕಾವಲ್ ಗುಂಡೂರಾಜ್

ತೊಗಲು ಗೊಂಬೆಯಾಟವು ಕನ್ನಡ ನಾಡಿನ ಅತ್ಯಂತ ಪ್ರಾಚೀನ ಹಾಗೂ ವರ್ಣರಂಜಿತ ಕಲೆ. ರಂಗಭೂಮಿ ಮತ್ತು ಸಿನಿಮಾಗಳೆರಡಕ್ಕೂ ಮಾತೃಪ್ರಾಯವಾಗಿರುವ ತೊಗಲು ಗೊಂಬೆಯಾಟ ಪರದೆಯ ಹಿಂದೆ ಪ್ರದರ್ಶನಗೊಳ್ಳುವ ಮನಮೋಹಕ ಕಲೆ. ಇತ್ತೀಚಿಗೆ ನಶಿಸುತ್ತಿರುವ ಈ ಕಲೆಯನ್ನು ಕರ್ನಾಟಕದಲ್ಲಿ ಶತಮಾನಗಳಿಂದಲೂ ಎದೆಯ ಗೂಡಿನೊಳಗಿನ ಜೀವಪಕ್ಷಿಯಂತೆ ಕಾಪಾಡಿಕೊಂಡು ಬಂದವರು ಕಿಳ್ಳೇಕ್ಯಾತ ಜನಾಂಗಕ್ಕೆ ಸೇರಿದ ತಳ ಸಂಸ್ಕೃತಿಯ ಜನರು. ಹಾಸನ ಜಿಲ್ಲೆಯ ಹೂವಿನಹಳ್ಳಿ ಕಾವಲಿನ ಸುಮಾರು ೬೧ರ ಹರೆಯದ ಗುಂಡೂರಾಜ್ ಈ ಕಲೆಯನ್ನು ತಮ್ಮ ಬದುಕಿನ ಸರ್ವಸ್ವ ಎಂದು ನಂಬಿದವರು. ತಮಗೇ ನಿಲ್ಲಲು ಅಂಗೈಯಗಲ ನೆಲೆ ಇಲ್ಲದಿದ್ದಾಗಲೂ ಕೂಡಾ ಎರಡು ತಲೆಮಾರುಗಳಷ್ಟು ಹಳೆಯದಾದ ಗೊಂಬೆಗಳನ್ನು

ತಮ್ಮ ಜೀವಕ್ಕಿಂತ ಹೆಚ್ಚಾಗಿ ಕಾಯ್ದುಕೊಂಡು ಬಂದಿದ್ದಾರೆ. ಬೊಂಬೆಯಾಟ ಆಡಿಸುವುದರೊಂದಿಗೆ, ಗೊಂಬೆಗಳನ್ನು ತಯಾರಿಸುವುದರಲ್ಲೂ ವಿಷ್ಣಾತರಾಗಿರುವ ಗುಂಡೂರಾಜ್ ಸರ್ಕಾರದ ಜನಪರ ಕಾರ್ಯಕ್ರಮಗಳಲ್ಲಿ, ತೊಗಲುಗೊಂಬೆಯಾಟದ ಮುಖಾಂತರ ಸಮುದಾಯದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತು ಚಿತ್ರೀಕರಿಸಿ ಬೆಂಗಳೂರು ದೂರದರ್ಶನದಲ್ಲಿ ಪ್ರಸಾರ ಮಾಡಿದ 'ಸಿರಿಗಂಧ' ಧಾರಾವಾಹಿಯಲ್ಲಿ ಗುಂಡೂರಾಜ್ ಅವರ ತೊಗಲುಬೊಂಬೆಯಾಟದ ಸಂಪೂರ್ಣ ಚಿತ್ರಣವಿದೆ. ಇಂತಹ ಅಪರೂಪದ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು, ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ

## ೧೧೩. ಬೀಡನಹಳ್ಳಿ ಗೌರಮ್ಮ

ಹಾಡಿನ ಸಂಪತ್ತನ್ನು ನೆನಪಿನಲ್ಲಿರಿಸಿಕೊಂಡು ಸಮಯ ಸಂದರ್ಭ ಒದಗಿದಾಗ ಹಾಡಿನ ಸುಧೆಯನ್ನೇ ಹರಿಸುವ ಗರತಿಯರು ಗ್ರಾಮಾಂತರ ಪ್ರದೇಶಗಳಲ್ಲಿ ಬಹಳಷ್ಟು ಮಂದಿ ಇದ್ದಾರೆ. ಶುಭ ಕಾರ್ಯಗಳ ಎಲ್ಲಾ ಸಂದರ್ಭಗಳಿಗೂ ಅನ್ವಯವಾಗುವ ರೀತಿಯಲ್ಲಿ ಹಾಡುವುದು ಇವರ ಸೊಗಸುಗಾರಿಕೆ. ಕಿತ್ತುತಿನ್ನುವ ಬಡತನದ ನಡುವೆಯೂ ತಮ್ಮೆಲ್ಲ ದುಃಖ ದುಮ್ಮಾನಗಳನ್ನು ಮರೆತು ಭಾವಪೂರ್ಣವಾಗಿ, ಸುಶ್ರಾವ್ಯವಾಗಿ ಹಾಡುವ ಕೋಗಿಲೆಗಳಿವರು. ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ೮೬ರ ಹರೆಯದ ಬೀಡನಹಳ್ಳಿ ಗೌರಮ್ಮನವರು ಈ ಗುಂಪಿಗೆ ಸೇರಿದ ಅಪರೂಪದ ಹಾಡುಗಾರ್ತಿ. ಲಯಬದ್ಧವಾದ ಮತ್ತು ಮಧುರವಾದ ಹಾಡುಗಾರಿಕೆ. ಸಾವಿರಾರು ತ್ರಿಪದಿಗಳನ್ನು ತಮ್ಮ ನೆನಪಿನಲ್ಲಿರಿಸಿಕೊಂಡು 'ಆದಾವ ನಿಮ ಜೋಳ ಉಳದಾವ ನಮ್ಮ ಹಾಡು' ಎಂದು ಬಾಳಿನುದ್ದಕ್ಕೂ ಹಾಡುತ್ತಲೇ ಬಂದರು. ತಮ್ಮ ತಾಯಿಯಿಂದ ಹಾಡು ಕಲಿತು ಹಲವರಿಗೆ ಕಲಿಸಿ ಹಾಡುಗಾರ್ತಿಯಾಗಿಯಷ್ಟೇ ಅಲ್ಲದೆ, ಸಾವಿರಾರು ಗಾದೆಗಳು, ಒಗಟುಗಳು ಮತ್ತು ಕಥೆಗಳನ್ನು ಹೇಳುತ್ತಾರೆ. ಇವರ ಬಹುತೇಕ ಸಾಹಿತ್ಯವನ್ನು ಚೌಡೇಗೌಡ ಬೀಡನಹಳ್ಳಿಯವರು ಸಂಗ್ರಹಿಸಿದ್ದು, 'ಗೌರಕ್ಕನ ಮುಕ್ತಕಗಳು' ಎಂಬ ಹೆಸರಿನ ಸಂಕಲನವನ್ನು ಬೆಂಗಳೂರು ವಿಶ್ವವಿದ್ಯಾಲಯ ಮತ್ತು 'ಪ್ರಾದೇಶಿಕ ಗಾದೆಗಳು', 'ಶಿಶುಪ್ರಾಸಗಳು' ಸಂಕಲನಗಳನ್ನು ಮೈಸೂರಿನ ಜನಪದ ಬಳಗವು ಪ್ರಕಟಿಸಿರುತ್ತದೆ. ಸಮೃದ್ಧ ಜನಪದ ಸಾಹಿತ್ಯವನ್ನು ತನ್ನ ಎದೆಯಾಳದಲ್ಲಿ ಹುದುಗಿಸಿಕೊಂಡಿರುವ ಶ್ರೀಮತಿ ಬೀಡನಹಳ್ಳಿ ಗೌರಮ್ಮನವರು ಜಾನಪದ ವಿಶ್ವಕೋಶವೇ ಸರಿ.

ಈಗಾಗಲೇ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ, ರಾಷ್ಟ್ರೀಯ ವಿದ್ಯಾರತ್ನ ಪ್ರಶಸ್ತಿ, ರಾಣಿ ಕಿತ್ತೂರು ಚನ್ನಮ್ಮ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳಿಗೆ ಪಾತ್ರರಾಗಿರುವ ಶ್ರೀಮತಿ ಗೌರಮ್ಮನವರಿಗೆ ಜಾನಪದ ಪರಿಷತ್ತು ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೧೪. ಪಾಲ್‌ದಿನ್ನೆ ಚನ್ನಪ್ಪ

ಕುಂಬಳಗೋಡಿನ ನಂಜಾಚಾರ್ಯ, ಕೆರೆತೆತ್ತಗನೂರಿನ ರಾಘವಯ್ಯ, ಲಕ್ಕೇನಹಳ್ಳಿ ವೆಂಕಟಶಾಮಯ್ಯ, ಸುರಧೇನುಪುರದ ದೊಡ್ಡ ಮುನಿಯಪ್ಪ ಮುಂತಾದವರನ್ನು ನೆನಪಿಸಿಕೊಳ್ಳುವಾಗ ಬೆಂಗಳೂರು ಸುತ್ತಮುತ್ತಲಿನ ಪ್ರದೇಶ ಒಂದು ಕಾಲಕ್ಕೆ ಮೂಡಲಪಾಯ ಯಕ್ಷಗಾನದ ತವರೂರಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ದೊಡ್ಡಬಳ್ಳಾಪುರದ ಯದ್ಲಳ್ಳಿ ಪಾಪಣ್ಣನವರ ಯಕ್ಷಗಾನ ಮಂಡಳಿ ಎಂದರೆ ನಾಡಿಗೇ ಹೆಸರಾದದ್ದು. ಈ ಮಂಡಳಿಯು ಸಾಕಷ್ಟು ಕಲಾವಿದರನ್ನು ಬೆಳೆಸಿದೆ; ಪೋಷಿಸಿದೆ. ಅನೇಕ ಕಲಾವಿದರು ಯದ್ಲಳ್ಳಿ ಪಾಪಣ್ಣನವರ ಗರಡಿಯಲ್ಲಿ ಪಳಗಿದವರು. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ಪಾಲ್‌ದಿನ್ನೆ ಗ್ರಾಮದ ಸುಮಾರು ೭೦ರ ಹರೆಯದ ಚನ್ನಪ್ಪನವರು ಕಳೆದ ೪೮ ವರ್ಷಗಳಿಂದಲೂ ಬಯಲು ರಂಗದಲ್ಲಿ ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುತ್ತಾ, ಹಾಡುತ್ತಾ, ಹಗಲು ದಣಿದ ಜನತೆಗೆ ರಾತ್ರಿ ಮನರಂಜನೆಯನ್ನು ಒದಗಿಸುತ್ತಾ ಬಂದ ಯಕ್ಷಗಾನ ಕಲಾವಿದರು. ಇವರ 'ಭೀಮ'ನ ಪಾತ್ರವು ದೊಡ್ಡಬಳ್ಳಾಪುರ ತಾಲ್ಲೂಕಿನಾದ್ಯಂತ ಹೆಸರುಮಾಡಿದೆ. ವಿಷಾದದ ಸಂಗತಿ ಎಂದರೆ ಇಂತಹ ಅಪರೂಪದ ಕಲಾವಿದರಿಗೆ ಇದುವರೆಗೆ ಯಾವುದೇ ಮಾನಸನ್ಮಾನಗಳು ಲಭಿಸಿರುವುದಿಲ್ಲ. ಜಾನಪದ ಪರಿಷತ್ತು ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೧೫. ಹೆಳವರದೊಡ್ಡಿ ಈರಯ್ಯ

ಲೌಕಿಕ ವೃತ್ತಿಗಾಯಕ ಪರಂಪರೆಗೆ ಸೇರಿದ ಹೆಳವರು ಗ್ರಾಮೀಣ ಮನೆತನಗಳ ವಂಶಾವಳಿ ದಾಖಲಾತಿ ಭಂಡಾರವಿದ್ದಂತೆ. ತಮ್ಮ ಒಕ್ಕಲು ಮನೆತನಗಳ ಕುಲಗಳನ್ನು ಕೊಂಡಾಡುವುದು, ಸತ್ತು ಕೆಟ್ಟೋರನ್ನು ಹೊಗಳುವುದು ಇವರ ಕಾಯಕ. ಹೆಳವರು ಭೂತ ಮತ್ತು ವರ್ತಮಾನಗಳ ನಡುವಣ ಕೊಂಡಿಗಳು. ಇವರ ಜ್ಞಾಪಕಶಕ್ತಿ ಅಸಾಧಾರಣವಾದುದು. ತಮ್ಮ ಒಕ್ಕಲು ಮನೆತನಗಳ ಹಲವು ಹಿಂದಿನ ತಲೆಮಾರುಗಳ ವಿವರಗಳನ್ನು ತಮ್ಮ ನೆನಪಿನ ಕೋಶದಲ್ಲಿ ಉಳಿಸಿಕೊಂಡು ಬಂದವರು. ಅನೇಕ ವ್ಯಾಜ್ಯಗಳ ಸಂದರ್ಭಗಳಲ್ಲಿ ನ್ಯಾಯಾಲಯಗಳು ಹೆಳವರ ಹೇಳಿಕೆಗಳನ್ನು ನಿಜ ಸಾಕ್ಷಿಗಳನ್ನಾಗಿ ಅಂಗೀಕರಿಸಿದೆ ಎಂದರೆ ಇವರ ಮಹತ್ವ ಎಂತಹುದೆಂಬುದು ಅರಿವಾಗುತ್ತದೆ. ಇಂತಹ ಅಸಾಧಾರಣ, ಪ್ರತಿಭಾವಂತ ಹೆಳವರುಗಳಲ್ಲಿ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಹೆಳವರದೊಡ್ಡಿಯ ಸುಮಾರು ೮೫ರ ಹರೆಯದ ಈರಯ್ಯನವರೂ ಒಬ್ಬರು. ಗಂಟೆ ಹೆಳವರ ಗುಂಪಿಗೆ ಸೇರಿದ ಈರಯ್ಯನವರು., ಎರಡೇಟಿನವರು. ಕ್ಯಾತಮ್ಮನ ಮೇಲೆ, ಸತ್ತು ಕೆಟ್ಟೋರ ಮೇಲೆ ಮತ್ತು ಕುಲ ಕೊಂಡಾಡುವ ಪದಗಳನ್ನು ಅತ್ಯಂತ ಸುಶ್ರಾವ್ಯವಾಗಿ ಗಂಟೆ ದನಿಯ ಹಿನ್ನೆಲೆಯಲ್ಲಿ ಹಾಡುವ ಈರಯ್ಯನವರ ಎಲ್ಲಾಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ಸುಮಾರು ೩೦ ವರ್ಷಗಳ ಹಿಂದೆಯೇ ಧ್ವನಿಮುದ್ರಿಸಿಕೊಂಡಿರುತ್ತಾರೆ. ಕರ್ನಾಟಕ ಜಾನಪದ ಪರಿಷತ್ತು ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೧೬. ಕುಂಚನೂರು ವೆಂಕಪ್ಪ

ಜನಪದ ಸಾಹಿತ್ಯದಲ್ಲಿ ಡೊಳ್ಳಿನ ಹಾಡುಗಳಿಗೆ ವಿಶಿಷ್ಟ ಸ್ಥಾನವಿದೆ. ಸ್ವಾಮಿ ನಮ್ಮ ದೇವರು ಬಂದಾವೆ ಬನ್ನೀರೆ ಎಂದು ಆರಂಭವಾಗುವ ಡೊಳ್ಳಿನ ಹಾಡುಗಳು ಉತ್ತರ ಕರ್ನಾಟಕದ ಉದ್ದಗಲಕ್ಕೂ ಪ್ರಸಿದ್ಧವಾಗಿವೆ. ಗ್ರಾಮದೇವತೆ, ಬೀರೇದೇವರು, ಮೈಲಾರಲಿಂಗ ಮೊದಲಾದ ದೇವರ ಉತ್ಸವಗಳಲ್ಲಿ ಡೊಳ್ಳಿನ ಮೇಳನಡೆಯುತ್ತದೆ. ಡೊಳ್ಳು ಬಾರಿಸುತ್ತಾ ಹಾಡುವ ಹಾಡುಗಳಿಗೆ ಡೊಳ್ಳಿನ ಪದಗಳೆಂದು ಕರೆಯುತ್ತಾರೆ. ಡೊಳ್ಳು ಬಾರಿಸುವುದು ಕಲೆಯಾದರೆ, ಡೊಳ್ಳಿನ ಪದಗಳು ಸಾಹಿತ್ಯಾಭಿವ್ಯಕ್ತಿ. ಈ ಮೇಳದಲ್ಲಿ ಪ್ರಧಾನ ಹಾಡುಗಾರನು ಡೊಳ್ಳು ಬಾರಿಸುತ್ತಾ ಒಂದು ಸಾಲು ಪದ ಹೇಳಿದರೆ ಹಿಮ್ಮೇಳದವರು ಅದನ್ನು ಪುನರುಚ್ಚರಿಸುತ್ತಾರೆ. ಇಂತಹ ಹಾಡುಗಾರಿಕೆ ಮತ್ತು ವೈವಿಧ್ಯಮಯ ರೀತಿಯಲ್ಲಿ ಡೊಳ್ಳು ನುಡಿಸುವುದರಲ್ಲಿ ಬಾಗಲಕೋಟೆ ಜಿಲ್ಲೆಯ ಕುಂಚನೂರಿನ ಶ್ರೀ ವೆಂಕಪ್ಪ ಬಣ್ಣದ ಪರಿಣಿತ ಕಲಾವಿದರು. ೪೫ರ ಹರೆಯದ ವೆಂಕಪ್ಪನವರು ತಮ್ಮ ೧೦ನೇ ವಯಸ್ಸಿನಲ್ಲೇ ಡೊಳ್ಳಿನ ಕುಣಿತಕ್ಕೆ ಮತ್ತು ಹಾಡುಗಾರಿಕೆಗೆ ಪಾದಾರ್ಪಣೆ ಮಾಡಿದವರು. ಬೀರೇದೇವರು, ಮಾಳಿಂಗರಾಯ, ಕರಿಸಿದ್ದೇಶ್ವರ ಮುಂತಾದ ದೈವಗಳ ಮೇಲೆ ಪುಂಖಾನುಪುಂಖವಾಗಿ ಹಾಡುಗಳನ್ನು ಹೇಳುವ ವೆಂಕಪ್ಪನವರನ್ನು ಈಗಾಗಲೇ ಉತ್ತರ ಕರ್ನಾಟಕದ ಮಂದಿ ಸಾವಿರ ಹಾಡಿನ ಸರದಾರನೆಂದು ಗೌರವಿಸಿ ಸನ್ಮಾನಿಸಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತು ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೧೭. ಮೈಲನಾಯಕನಹಳ್ಳಿ ಆಲಮ್ಮ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಮೈಲನಾಯಕನಹಳ್ಳಿ ಗ್ರಾಮದ ಆಲಮ್ಮನವರು ಸುಶ್ರಾವ್ಯವಾದ ಹಾಡುಗಾರಿಕೆಗೆ ಹೆಸರಾದವರು. ಆರ್ಥಿಕ ಅನುಕೂಲತೆ ಇಲ್ಲದಿದ್ದಾಗ್ಯೂ ಹೊಲಗೆಲಸ–ಮನೆಗೆಲಸಗಳ ನಡುವೆಯೇ ಪದ ಕಲಿತ ಹೆಣ್ಣು ಮಗಳು. ಅನಕ್ಷರಸ್ಥೆಯಾದ ಈಕೆಯ ನೆನಪಿನ ಕೋಶದಲ್ಲಿ ನೂರಾರು ಪದಗಳು ನೆಲೆನಿಂತಿವೆ. ಸುತ್ತೇಳು ಹಳ್ಳಿಯ ದೇವರ ಜಾತ್ರೆಗಳಲ್ಲಿ, ಒಸಗೆ, ಮದುವೆ–ಮುಂಜಿ ಮೊದಲಾದ ಶುಭಕಾರ್ಯಗಳಲ್ಲಿ ಆಲಮ್ಮನ ಹಾಡುಗಾರಿಕೆ ಇರಲೇಬೇಕು. ಆಲಮ್ಮ ಲಯಬದ್ಧವಾಗಿ ಹಾಡುವ ಸಾಮರ್ಥ್ಯವುಳ್ಳವರು. ಇವರ ಹಾಡುಗಾರಿಕೆ ವೈವಿಧ್ಯಮಯವಾದುದು. ಬೀಸು ಪದಗಳು, ಸೋಬಾನೆ ಪದಗಳು, ದೂರೀ ಪದಗಳು, ಬಾಂಧವ್ಯದ ಪದಗಳು, ತತ್ವಪದಗಳು, ದೇವರ ಪದಗಳಲ್ಲದೆ, ಕಥನ ಕಾವ್ಯಗಳನ್ನು ಹಾಡುತ್ತಾರೆ. ಆಲಮ್ಮನವರ ಎಲ್ಲಾ ಹಾಡುಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ೧೯೮೧ ರಷ್ಟು ಹಿಂದೆಯೇ ಕುಂತಿಬೆಟ್ಟದಲ್ಲಿ ಧ್ವನಿಮುದ್ರಣ ಮಾಡಿಕೊಂಡಿರುತ್ತಾರೆ. ಎಲೆಮರೆಯ ಕಾಯಿಯಗಿ ಉಳಿದಿರುವ ಆಲಮ್ಮನವರಿಗೆ ಇದುವರೆಗೆ ಯಾವುದೇ ಸಭೆ ಸಮಾರಂಭಗಳಲ್ಲಿ ಹಾಡಿರುವ ಅರಿವಿಲ್ಲ. ಯಾವ ಮಾನಸನ್ಮಾನಗಳೂ ಲಭಿಸಿಲ್ಲ. ಕರ್ನಾಟಕ ಜಾನಪದ ಪರಿಷತ್ತು ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೧೮. ತೂಬಿನಕೆರೆ ಖಾದಿರಯ್ಯ

ಬಣ್ಣ ಬಣ್ಣದ ಬಟ್ಟೆಯ ಪಟ್ಟಿಗಳನ್ನು ಸುತ್ತಿದ ಸುಮಾರು ಹತ್ತು ಹದಿನೈದು ಅಡಿ ಉದ್ದದ ಬಿದಿರಿನ ಜವಳಿಗಳೇ ಪಟಗಳು. ಈ ಪಟಗಳ ತುದಿಯಲಿ ಹಿತ್ತಾಳೆ ಅಥವಾ ಬೆಳ್ಳಿಯ ಛತ್ರಿ ತೊಡಿಸಿದ್ದು ನೋಡಲು ಆಕರ್ಷಕವಾಗಿರುತ್ತವೆ. ಪಟಗಳನ್ನು ಕೈಗಳಲ್ಲಿ ಇಲ್ಲವೆ ಹೆಗಲಿಗೆ ನೇತುಹಾಕಿದ ಬಟ್ಟೆಯ ಚೀಲಗಳ್ಲಿ ಇರಿಸಿಕೊಂಡು ಕಲಾವಿದರು ತಮಟೆ ನಗಾರಿಗಳ ಗತ್ತಿಗನುಗುಣವಾಗಿ ವಿವಿಧ ಭಾವಭಂಗಿಗಳಲ್ಲಿ ಕುಣಿಯುತ್ತಾರೆ. ಕುಣಿಯುವವರು ಎರಡು ಸಾಲುಗಳಲ್ಲಿ ಅಭಿಮುಖವಾಗಿ ನಿಂತು ಕುಣಿಯುವಾಗ, ಪಟ ಜವಳಿಗಳು ಅತ್ತಿತ್ತ ಬಾಗುವುದು, ಬಳುಕುವುದು, ವೃತ್ತಾಕಾರವಾಗಿ ಚಲಿಸುತ್ತ ಪಟಗಳನ್ನು ಹಿಂದಕ್ಕೆ ಮುಂದಕ್ಕೆ ಬಾಗಿಸಿ ಕುಣಿಯುವಾಗ ಅವುಗಳಿಗೆ ಸುತ್ತಿದ ಬಟ್ಟೆಯ ಜಾಲರಿಗಳ ಚಲ್ಲಾಟವಂತೂ ನೋಡಲು ಬಲು ಚಂದ. ಪಟಾ ಕುಣಿತದಲ್ಲಿ ಇಂತಹ ಸೊಬಗನ್ನು ಸೃಷ್ಟಿಸುವ ಕುಶಲ ಕಲಾವಿದರುಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕು ತೂಬಿನಕೆರೆಯ ಖಾದಿರಯ್ಯ ಒಬ್ಬರು. ತಮ್ಮ ಕಲೆ ಹಾಗೂ ವಿನಯಶೀಲ ನಡವಳಿಕೆಗೆ ಹೆಸರಾದ ಖಾದಿರಯ್ಯ. ಯುವಜನ ಸೇವಾ ಇಲಾಖೆಯ ತರಬೇತಿ ಶಿಬಿರದಲ್ಲಿ ಯುವಕರಿಗೆ ಮತ್ತು ಹಲವು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪಟಾಕುಣಿತ ಕಲಿಸಿದ್ದಾರೆ. ಶ್ರೀಯುತರ ಅನುಪಮ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೧೯. ಮುನಿಯೂರು ಬಸವಾಚಾರ್

ಮೂಡಲಪಾಯ ಯಕ್ಷಗಾನ ಪ್ರಪಂಚಕ್ಕೆ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು ನೀಡಿರುವ ಕೊಡುಗೆ ಮೇರು ಸದೃಶವಾದದ್ದು. ಒಂದು ಕಾಲಕ್ಕೆ ಕೊಂಡಜ್ಜಿ, ಅರೆಮಲ್ಲೇನಹಳ್ಳಿ, ದಂಡಿನಶಿವರ, ದಬ್ಬೇಘಟ್ಟ, ತುರುವೇಕೆರೆ ಎಲ್ಲವೂ ಮೂಡಲಪಾಯ ಯಕ್ಷಗಾನದ ಉಗಮ ಕೇಂದ್ರಗಳಾಗಿದ್ದವು. ಅದರಲ್ಲೂ ತುರುವೇಕೆರೆ ತಾಲ್ಲೂಕಿನ ಮುನಿಯೂರಂತೂ ಯಕ್ಷಗಾನವನ್ನು ಒಂದು ಕಾಲಕ್ಕೆ ಉತ್ತುಂಗ ಸ್ಥಿತಿಗೆ ಕೊಂಡೊಯ್ದಿತು. ಶ್ರುತಿ, ತಾಳ, ಮದ್ದಳೆ, ಮುಖವೀಣೆ, ಭಾಗವಂತಿಕೆ, ನೃತ್ಯ, ಭುಜಕೀರ್ತಿ, ಪ್ರಭೆ, ಫಣಿಕಿರೀಟ, ಎದೆಹಾರ, ವೀರಗಾಸೆ, ಭಾಪುರಿ ಇವುಗಳ ಸಮರಸ ಮೇಳ ನೋಡಲು ಯಕ್ಷಗಾನಪ್ರಿಯರು ಮುನಿಯೂರಿಗೇ ಹೋಗಬೇಕಾಗಿತ್ತು. ಇಂತಹ ಮುನಿಯೂರಿನ ಸುಮಾರು ೫೬ರ ಹರೆಯದ ಬಸವಾಚಾರ್ ಅವರು ಮೂಡಲಪಾಯ ಯಕ್ಷಗಾನದ ವೇಷಭೂಷಣಗಳನ್ನು ತಯಾರಿಸುವುದರಲ್ಲಿ ಮತ್ತು ಪಾತ್ರಗಳ ಬಣ್ಣಗಾರಿಕೆಯಲ್ಲಿ ಸಿದ್ಧಹಸ್ತರು. ಮುಗಳೂರು ಶ್ರೀಕಂಠಾಚಾರ್ಯ, ಮಾಯಸಂದ್ರದ ಬುಡೇನ್ ಸಾಬ್, ಮಾದಾಪಟ್ಟಣದ ಹುಚ್ಚಾಚಾರ್ ಅವರುಗಳಂತಹ ಮೂಡಲಪಾಯ ವೇಷಭೂಷಣ ತಯಾರಕರ ಗರಡಿಯಲ್ಲಿ ಪಳಗಿದ ಬಸವಾಚಾರ್ ವೇಷಭೂಷಣ ಮತ್ತು ಪ್ರಸಾಧನ ಕಲೆಗಳಲ್ಲಿ ಮೆರೆಯುತ್ತಿರುವ ಸೃಜನಶೀಲ ಪ್ರತಿಭೆ ಅಸಾಧಾರಣವಾದುದು. ಪ್ರಸಾಧನ ಕಲೆಯಲ್ಲಿ ಪ್ರಥಮ ದರ್ಜೆಯ ಪರಿಣತಿಯನ್ನು ಪಡೆದಿರುವ ಬಸವಾಚಾರ್ ಬಣ್ಣಗಳನ್ನು ಬಳಸುವ ರೀತಿ,

ಮುಖವರ್ಣಿಕೆಯನ್ನು ರೂಪಿಸುವ ಶೈಲಿ ಮತ್ತು ವಿನ್ಯಾಸಗಳು ಅನುಕರಣೀಯವಾದವುಗಳಾಗಿವೆ. ಇಂತಹ ಪ್ರತಿಭಾವಂತ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೩-೨-೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೨೦. ಕರಿತಿಮ್ಮಯ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕಿನ ಆಲೆಮರದ ದೊಡ್ಡಿಯ, ಕಾಡುಗೊಲ್ಲರು ಬುಡಕಟ್ಟು ಜನಾಂಗಕ್ಕೆ ಸೇರಿದ ಸುಮಾರು ೭೫ರ ಹರೆಯದ ಕರಿತಿಮ್ಮಯ್ಯನವರು ಗಣೆಗೆ ತುಟಿ ಹಚ್ಚಿದರೆ ಸುಶ್ರಾವ್ಯವಾದ ಕೊಳಲಿನನಾದ ಹೊರಹೊಮ್ಮುತ್ತದೆ. ಗಣೆಯೊಂದಿಗೆ ದನಿ ತೆಗೆದರಂತೂ ಪುಂಖಾನುಪುಂಖವಾಗಿ ಕಾವ್ಯಧಾರೆ ಹರಿಯುತ್ತದೆ. ಹತ್ತಾರು ಜನಪದ ಕಥನ ಕಾವ್ಯಗಳ ಭಂಡಾರವಾಗಿರುವ ತಿಮಯ್ಯನವರು ಕೋಲು ಪದಗಳ ಕಣಜವೂ ಹೌದು. ಜುಂಜಪ್ಪ, ಕಾಟಮದೇವ, ಚಿತ್ರಲಿಂಗ, ಕರಡಿಬುಳ್ಳಪ್ಪ, ಈರಣ್ಣ-ಕರಿಯಣ್ಣ, ಮುತ್ತರಾಯ, ಹಾಲಪ್ಪ, ಗೊಲ್ಲಳ್ಳಿ ಮಾರಮ್ಮ, ಕಾಳಮ್ಮ, ಕಬ್ಬಾಳಮ್ಮ ಹೀಗೆ ಹತ್ತು ಹಲವು ದೇವರುಗಳ ಮೇಲಿನ ಪವಾಡಗಳಿಂದೊಡಗೂಡಿದ ಕಥನವನ್ನು ಹಗಲು-ರಾತ್ರಿಗಳೆನ್ನದೆ ಅಭಿವ್ಯಕ್ತಿಸಬಲ್ಲ ಸಾಮರ್ಥ್ಯ ತಿಮ್ಮಯ್ಯನವರದಾಗಿದೆ. ಶ್ರೀಯುತರು ಕೇವಲ ಗಣೆ ಕಲಾವಿದರಾಗಲಿ, ಮೌಖಿಕ ಕಾವ್ಯ ಪರಂಪರೆಗಳ ವಕ್ತಾರರಾಗಲಿ ಅಷ್ಟೇ ಅಲ್ಲ. ಮನುಷ್ಯರು ಮತ್ತು ಜಾನುವಾರುಗಳಿಗೆ ತಗಲುವ ವಿವಿಧ ರೀತಿಯ ರೋಗಗಳನ್ನು ನಿವಾರಿಸಬಲ್ಲ ಸಮರ್ಥ ನಾಟಿ ವೈದ್ಯರು ಕೂಡಾ ಹೌದು. ಇಂತಹ ಬಹುಮುಖ ಪ್ರತಿಭೆಯುಳ್ಳ ೭೫ರ ವಯೋವೃದ್ಧ ಶ್ರೀ ತಿಮ್ಮಯ್ಯನವರಿಗೆ ಇದುವರೆಗೂ ಯಾವುದೇ ಮಾನ ಸನ್ಮಾನಗಳು ಲಭಿಸಿಲ್ಲ. ಕರ್ನಾಟಕ ಜಾನಪದ ಪರಿಷತ್ತು ತಾ॥ ೧೩-೨-೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೨೧. ಚಿಕ್ಕೋಳಮ್ಮ

ಜನಪದ ಸಾಹಿತ್ಯದ ಅತ್ಯಂತ ಜನಪ್ರಿಯ ಪ್ರಕಾರವಾದ ಗೀತ ಸಾಹಿತ್ಯದ ಪ್ರಧಾನ ಆಕರ್ಷಣೆಯೇ ಹಾಡುಗಾರಿಕೆ. ನಮ್ಮ ಹಳ್ಳಿಯ ಹೆಣ್ಣು ಮಕ್ಕಳು ಈ ಹಾಡುಗಾರಿಕೆಯನ್ನು ಕಲಿತದ್ದು, ಹಾಡುತ್ತಾ ಬಂದದ್ದು ಯಾರನ್ನೂ ಮೆಚ್ಚಿಸುವುದಕ್ಕಾಗಲಿ, ಓಲೈಸುವುದಕ್ಕಾಗಲಿ ಅಲ್ಲ. ತಮ್ಮ ಅಂದಂದಿನ ದಂದುಗಕ್ಕೆ ಮೈ ಸೋತು ಮನ ಸೋತು, ಎದೆಯೊಳಗೆ ಹೆಪ್ಪುಗಟ್ಟಿದ ದುಃಖ ದುಮ್ಮಾನಗಳನ್ನು ಹೊರಹಾಕುವುದಕ್ಕಾಗಿ ಕಂಡುಕೊಂಡ ಕಾವ್ಯ ಕಾವೇರಿಯೇ ಹಾಡುಗಾರಿಕೆ. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಹೆರಗನಹಳ್ಳಿಯ ಸುಮಾರು ೭೦ರ ಹರೆಯದ ಚಿಕ್ಕೋಳಮ್ಮನವರು ತಮ್ಮ ತೃಪ್ತಿಗಾಗಿ, ಹಾಡುತ್ತಾ ಬಂದ ಕಲಾವಿದೆ. ಭಾವಪೂರ್ಣವಾಗಿ ಸವಿಯಾದ ಕಂಠದಲ್ಲಿ ಹಾಡುವ ಚಿಕ್ಕೋಳಮ್ಮನವರ ಪದಗಳು ವೈವಿಧ್ಯಮಯವಾದುವು. ಬೀಸುವ ಪದಗಳು, ನಾಟಕ ಪದಗಳು, ಸೋಬಾನೆ ಪದಗಳೂ ಚೌಡಮ್ಮ ಪಟಲದಮ್ಮ ಮೊದಲಾದ ದೇವರ ಸೇವೆ ಪದಗಳನ್ನಷ್ಟೇ ಅಲ್ಲದೆ ರಂಗಗೀತೆಗಳನ್ನು

ಸಹ ಹಾಡುತ್ತಾರೆ. ಚಿಕ್ಕೋಳಮ್ಮ ಎಲೆಮರೆಕಾಯಿ. ಇದುವರೆಗೂ ಯಾವ ಸಭೆ ಸಮಾರಂಭಗಳಲ್ಲಿ ಹಾಡಿದವರಲ್ಲ. ಯಾವ ಮಾನ ಸನ್ಮಾನಗಳೂ ಇವರನ್ನು ತಲುಪಿಲ್ಲ. ಕರ್ನಾಟಕ ಜಾನಪದ ಪರಿಷತ್ತು ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೨೨. ಮಂಗಾಡಹಳ್ಳಿ ಶಾರದಮ್ಮ

ಗ್ರಾಮೀಣ ಪ್ರದೇಶಗಳಲ್ಲಿ ಜನಪದರ ಮಾನಸಿಕ ಆರೋಗ್ಯವನ್ನು ಜನಪದ ಸಾಹಿತ್ಯ ಮತ್ತು ಕಲೆಗಳು ಕಾಯ್ದುಕೊಂಡು ಬಂದರೆ, ಜನಪದರ ದೈಹಿಕ ಆರೋಗ್ಯವನ್ನು ತಲೆಮಾರುಗಳಿಂದಲೂ ನಾಟಿವೈದ್ಯರುಗಳು ಕಾಪಾಡಿಕೊಂಡು ಬರುತ್ತಿದ್ದಾರೆ. ನಾಟಿ ಚಿಕಿತ್ಸೆಗೆ ಹಿತ್ತಲಗಿಡವೇ ಮದ್ದು. ಇಂತಹ ಹಿತ್ತಲ ಗಿಡಮೂಲಿಕೆಗಳು ವೈದ್ಯ ಸಂಪತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಮಂಗಾಡಹಳ್ಳಿಯ ಸುಮಾರು ೬೩ರ ಹರೆಯದ ಶಾರದಮ್ಮನವರು. ಮೂಲತಃ ನಾಟಿ ವೈದ್ಯ ಕುಟುಂಬದಲ್ಲಿ ಜನಿಸಿದವರು. ನಾಟಿ ವೈದ್ಯದಲ್ಲಿ ಹೆಸರಾದ ತಂದೆ ಲಕ್ಷ್ಮಣಸಿಂಗ್ ಇವರ ಗುರು. ಕಳೆದ ಆರೇಳು ದಶಕಗಳಿಂದಲೂ ಹಿತ್ತಲ ಗಿಡಮೂಲಿಕೆಗಳಿಂದಲೇ ಹತ್ತು ಹಲವು ಖಾಯಿಲೆಗಳಿಗೆ ಔಷಧಿ ನೀಡುತ್ತಾ ಜಿಲ್ಲೆಯಾದ್ಯಂತ ಹೆಸರಾದವರು. ಜಾಂಡೀಸ್, ಒಣಕಾಮಾಲೆ, ಲಿವರ್, ಮಾತುಕಟ್ಟು, ಪಳಂದ್ರಿ, ಬಾಣಂತಿಸನ್ನಿ, ಅಸ್ತಮಾ, ಪೈಲ್ಸ್ ಮತ್ತು ಸ್ತ್ರೀ ಸಂಬಂಧಿ ರೋಗಗಳಿಗೆ ಶಾರದಮ್ಮನವರ ನಾಟಿ ವೈದ್ಯ ಸಿದ್ಧೌಷಧ. ನಾಡಿ ಮಿಡಿತ ನೋಡಿಯೇ ರೋಗವನ್ನು ನಿರ್ಧರಿಸಿ ಮದ್ದು ಆಗುತ್ತದೆ ಅಥವಾ ಇಲ್ಲ ಎಂಬುದನ್ನು ತಿಳಿಸುವ ಶಕ್ತಿಯನ್ನುಳ್ಳ ಶಾರದಮ್ಮನವರ ವೈದ್ಯಕೀಯ ಚಿಕಿತ್ಸೆಯು ಕೇವಲ ಬೆಂಗಳೂರು ಗ್ರಾಮಾಂತರ ಪ್ರದೇಶಗಳಿಗಷ್ಟೇ ಮೀಸಲಾಗಿರದೆ, ಮಂಡ್ಯ, ಮೈಸೂರು, ತುಮಕೂರು ಜಿಲ್ಲೆಗಳ ಜನರು ಇವರ ಚಿಕಿತ್ಸೆಯ ಸದುಪಯೋಗ ಪಡೆದಿದ್ದಾರೆ. ಇಂಗ್ಲೀಷ್ ಔಷಧ ಪದ್ಧತಿಯಿಂದ ಗಿಡಮೂಲಿಕೆಗಳ ನಾಟಿ ವೈದ್ಯ ಪದ್ಧತಿಯು ಕಣ್ಮರೆಯಾಗುತ್ತಿರುವ ಈ ಹೊತ್ತಿನ ನಾಟಿವೈದ್ಯದ ಸಂಪತ್ತಾಗಿರುವ ಶಾರದಮ್ಮನವರಂತಹ ಜನಪದ ವೈದ್ಯೆಗೆ, ಕರ್ನಾಟಕ ಜಾನಪದ ಪರಿಷತ್ತು ತಾ॥ ೧೩–೨–೨೦೦೫ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೨೩. ವಿಶೇಷ ಪುರಸ್ಕಾರ – ದೊಡ್ಡ ಗದ್ದವಳ್ಳಿಯ ಸತೀಶ್

ಹಾಸನ ಜಿಲ್ಲೆಯ ದೊಡ್ಡ ಗದ್ದವಳ್ಳಿಯ ೪೭ರ ಹರೆಯದ ಸತೀಶ್ ಅವರು ಕನ್ನಡ ನಾಡು ಕಂಡ ಉತ್ತಮ ವಾಸ್ತುಶಿಲ್ಪಿಗಳು ಮತ್ತು ಕಟ್ಟಡ ವಿನ್ಯಾಸ ಯೋಜಕರಲ್ಲಿ ಒಬ್ಬರು. ನವದೆಹಲಿಯ ಸ್ಕೂಲ್ ಆಫ್ ಪ್ಲಾನಿಂಗ್ ಮತ್ತು ಆರ್ಕಿಟೆಕ್ಚರ್‌ನಲ್ಲಿ ತಮ್ಮ ಸ್ನಾತಕೋತ್ತರ ಶಿಕ್ಷಣವನ್ನು ಪಡೆದಿರುವ ಸತೀಶ್, ಹೆಗ್ಗೋಡಿನಲ್ಲಿ ತಾವು ರೂಪಿಸಿದ ಪ್ರದರ್ಶನ ಅಂಗಳದ ವಿನ್ಯಾಸಕ್ಕಾಗಿ ಅಮೆರಿಕಾದ ಫೋರ್ಡ್ ಫೌಂಡೇಶನ್ ನಿಂದ ಸ್ಕಾಲರ್‌ಷಿಪ್ ಪಡೆದಿರುತ್ತಾರೆ.

ನಗರ ವಿನ್ಯಾಸದಲ್ಲಿ ಪರಿಣತಿ ಪಡೆದಿರುವ ಸತೀಶ್ ಅವರ ಅಂತರಂಗದ ಒಳಗೆ ಮಿಡಿಯುತ್ತಿರುವುದು ಗ್ರಾಮೀಣ ಅಂತಃಕರಣ. ಗತಿಸಿ ಹೋಗುತ್ತಿರುವ ಗ್ರಾಮೀಣ ವಾಸ್ತು ವಿನ್ಯಾಸಗಳನ್ನು ಪ್ರವರ್ಧಮಾನಕ್ಕೆ ತರುವ ಸಲುವಾಗಿ ಹಲವು ಪ್ರಯೋಗಗಳಲ್ಲಿ ನಿರತರಾಗಿರುವ ಸತೀಶ್ ಈಗಾಗಲೇ ಜಾನಪದ ಲೋಕ ಮತ್ತು ಜಾನಪದ ಸಿರಿಭುವನದ ಕಟ್ಟಡ ವಿನ್ಯಾಸಗಳ ನ್ಷೆಯನ್ನು ರೂಪಿಸಿಕೊಟ್ಟಿರುತ್ತಾರೆ. ಜಾನಪದ ಲೋಕದಲ್ಲಿ ನಿರ್ಮಾಣ ಮಾಡಿರುವ ಪ್ರತಿಯೊಂದು ಕಟ್ಟಡದ ವಿನ್ಯಾಸವು ಸತೀಶ್ ಅವರ ಸೃಜನಶೀಲತೆ ಮತ್ತು ನಿರ್ಮಾಣ ಪ್ರತಿಭೆಗೆ ಅತ್ಯುತ್ತಮ ನಿದರ್ಶನವಾಗಿದೆ. ಬೆಂಗಳೂರಿನ ದೊಡ್ಡ ಆಲದ ಮರದ ಹತ್ತಿರ ಇರುವ ಬ್ಯಾನಿಯನ್ ರಿಸಾರ್ಟ್ ಮತ್ತು ಡೀ–ಮಂಡಲ್ ರಿಸಾರ್ಟ್‌ಗಳ ವಿನ್ಯಾಸಗಳು ನೋಡುಗರನ್ನು ತಮ್ಮೆಡೆಗೆ ಸೆಳೆಯುತ್ತಿವೆ. ತಮ್ಮ ವೃತ್ತಿಜೀವನದಲ್ಲಿ ಯಶಸ್ಸಿನ ಏಣಿ ಮೆಟ್ಟಿಲುಗಳನ್ನು ಏರುತ್ತಿರುವ ಸತೀಶ್ ಸದ್ಯಕ್ಕೆ ರಾಜ್ಯಾದ್ಯಂತ ವಿಶ್ವಬ್ಯಾಂಕ್ ನೆರವಿನ ಆಸ್ಪತ್ರೆ ಕಟ್ಟಡಗಳ ವಿನ್ಯಾಸ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಕಾಸ್ಮೊಪಾಲಿಟನ್ ಮತ್ತು ಮೆಟ್ರೊಪಾಲಿಟನ್ ನಗರಗಳಲ್ಲಿನ ಸಾರ್ವಜನಿಕ ಉದ್ದಿಮೆಗಳು, ಸಾಫ್ಟ್‌ವೇರ್ ಉದ್ಯಮಿಗಳು ಶ್ರೀಯುತರ ಪ್ರತಿಭೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಶ್ರೀ ಸತೀಶ್ ಅವರ ಜಾನಪದ ಪ್ರೀತಿ ಮತ್ತು ಬದ್ಧತೆಗಳನ್ನು ಮೆಚ್ಚಿ ಕರ್ನಾಟಕ ಜಾನಪದ ಪರಿಷತ್ತು ತಾ|| ೧೩–೨–೨೦೦೫ ರಂದು ವಿಶೇಷ ಪುರಸ್ಕಾರ ನೀಡಿ ಗೌರವಿಸಿದೆ.

## ೧೨೪. ಸು. ತ. ರಾಮೇಗೌಡ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಸುಳ್ಳೇರಿಯ ಕೃಷಿಕ ಕುಟುಂಬದಲ್ಲಿ ಜನಿಸಿದ ಸು. ತ. ರಾಮೇಗೌಡರು ಪ್ರಗತಿಪರ ವಿಚಾರಧಾರೆಯುಳ್ಳವರು. ಓದುವಾಗಲೆ ಹಲವಾರು ಜನಪರ ಚಳುವಳಿಗಳಲ್ಲಿ ಭಾಗವಹಿಸಿದವರು. ಕೃಷಿಕ ಕುಟುಂಬದಿಂದ ಬಂದ ರಾಮೇಗೌಡರು ರೈತಾಪಿ ಜನಸಮುದಾಯದ ಕಷ್ಟ ಸುಖಗಳನ್ನು ಕಣ್ಣಾರೆ ಕಂಡವರು ಮತ್ತು ಅನುಭವಿಸಿದವರಾದ್ದರಿಂದ ರೈತರ ಹಿತರಕ್ಷಣೆಗಾಗಿ ಹೋರಾಟ ನಡೆಸಿದವರು. ಒಂದು ಕಾಲಕ್ಕೆ ರೈತ ಸಂಘದ ಮುಂಚೂಣಿಯಲ್ಲಿದ್ದವರು. ತಾಲ್ಲೂಕು ಮಟ್ಟದಲ್ಲಿ ಪ್ರಥಮ ಬಾರಿಗೆ 'ಬಯಲು ಸೀಮೆ' ಹೆಸರಿನ ದಿನಪತ್ರಿಕೆಯನ್ನು ಪ್ರಾರಂಭಿಸಿ ಕಳೆದ ೨೫ ವರ್ಷಗಳಿಂದಲೂ ನಿರಂತರವಾಗಿ ಹರಿಗಡಿಯದಂತೆ ನಡೆಸಿಕೊಂಡು ಬರುತ್ತಿದ್ದಾರೆ. ಇವರ ಪತ್ರಿಕಾ ಮನೋಧರ್ಮ ನೈತಿಕ ನೆಲೆಗಟ್ಟಿನಿಂದ ಕೂಡಿದ್ದು. ನಿಷ್ಪಕ್ಷಪಾತ ಮತ್ತು ಬದ್ಧತೆಯಿಂದ ಕೂಡಿದ ಪತ್ರಿಕೋದ್ಯಮ ನಿಲುವುಗಳಿಗಾಗಿ ಮಾಧ್ಯಮ ಅಕಾಡೆಮಿಯು ರಾಮೇಗೌಡರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಸಾಹಿತ್ಯ, ಕಲೆ ಸಂಸ್ಕೃತಿಯ ಉಳಿವು ಮತ್ತು ಬೆಳವಣಿಗೆಗಾಗಿ ತಾಲ್ಲೂಕಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ರಚನಾತ್ಮಕವಾಗಿ ಬೆಳೆಸುವುದರೊಂದಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನೆನಪಿನಲ್ಲುಳಿಯುವಂತಹ ಕಾರ್ಯಕ್ರಮಗಳನ್ನು ಸಾಧಿಸಿ ತೋರಿಸಿದ್ದಾರೆ ಜಾನಪದ ಲೋಕವು ನಿರ್ಮಾಣವಾಗುವ ಸಂದರ್ಭದಲ್ಲಿ ತಮ್ಮನ್ನು

ತೊಡಗಿಸಿಕೊಂಡು ಜಾನಪದ ಲೋಕಕ್ಕೆ ಆಸರೆಯಾಗಿ ನಿಂತಿರುವ ಸು.ತ. ರಾಮೇಗೌಡರ ಜಾನಪದ ನಿಷ್ಠೆಯನ್ನು ಮೆಚ್ಚಿ ಕರ್ನಾಟಕ ಜಾನಪದ ಪರಿಷತ್ತು ತಾ|| ೧೩-೨-೨೦೦೫ ರಂದು ವಿಶೇಷ ಪುರಸ್ಕಾರ ನೀಡಿ ಗೌರವಿಸಿದೆ.

## ೧೨೫ ಟಿ. ಕೆ. ರಾಮಚಂದ್ರ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನಕಪುರ ತಾಲ್ಲೂಕಿನ ತಾಮಸಂದ್ರದ ಕೃಷಿಕ ಕುಟುಂಬದಲ್ಲಿ ಜನಿಸಿದ ೫೦ರ ಹರೆಯದ ಟಿ. ಕೆ. ರಾಮಚಂದ್ರ ಅವರು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯದಲ್ಲಿ ಪೀಠಾಧಿಕಾರಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ಕರ್ಮಯೋಗಿ ಹಾಗೂ ಗಾಂಧೀವಾದಿ ದಿ|| ಎಸ್. ಕರಿಯಪ್ಪನವರ ವಿದ್ಯಾಲಯದ ವಿದ್ಯಾರ್ಥಿಯಾಗಿ ಬೆಳೆದು ಬಂದ ರಾಮಚಂದ್ರ ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ಕನಕಪುರದ ಗಾಂಧೀ ಎಂದೇ ಹೆಸರಾದ ಕರಿಯಪ್ಪನವರ ಶಿಸ್ತು, ನೈತಿಕ ಪ್ರಜ್ಞೆ ಮತ್ತು ಗ್ರಾಮೀಣ ಸಮುದಾಯದ ಬಗ್ಗೆ ಪ್ರೀತಿಯನ್ನು ಬೆಳೆಸಿಕೊಂಡವರು; ವಿಚಾರಧಾರೆಗಳನ್ನು ಮೈಗೂಡಿಸಿಕೊಂಡವರು. ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಐಬಿಎಂನಲ್ಲಿ ಸಂಶೋಧನಾ ಸಹಾಯಕರಾಗಿದ್ದ ರಾಮಚಂದ್ರ ಅವರು ಜನಸಾಮಾನ್ಯರಿಗೆ ನೆರವಾಗುವಂತಹ, ಜನರ ಆಶೋತ್ತರಗಳನ್ನು ಈಡೇರಿಸಲು ಅನುಕೂಲವಾಗುವಂತಹ ಸಚಿವಾಲಯದ ಸೇವೆಗೆ ಬಂದವರು. ತಮ್ಮ ಸೇವಾವಧಿಯಲ್ಲಿ ಪ್ರಾಮಾಣಿಕತೆ, ದಕ್ಷತೆ, ವಿನಯಶೀಲ ನಡವಳಿಕೆಗಳಿಂದಾಗಿ ಇಲಾಖೆಯ ಸಮಸ್ತರ ಮತ್ತು ಜನರ ಪ್ರೀತಿ, ಮೆಚ್ಚುಗೆಗಳಿಗೆ ಕಾರಣರಾಗಿದ್ದಾರೆ. ನೂರಾರು ಮಂದಿ ಜನಪದ ಕಲಾವಿದರುಗಳಿಗೆ ಮತ್ತು ವಿದ್ವಾಂಸರುಗಳಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸಾಂಸ್ಕೃತಿಕ ಯೋಜನೆಗಳ ಬಗ್ಗೆ ತಿಳುವಳಿಕೆ ನೀಡಿ, ಶಿಫಾರಸ್ಸು ಮಾಡಿ ಯೋಜನೆಗಳ ನೆರವನ್ನು ಪಡೆದುಕೊಳ್ಳಲು ಕಾರಣಕರ್ತರಾಗಿದ್ದಾರೆ. ಗ್ರಾಮೀಣ ಕಲೆ, ಸಾಹಿತ್ಯ-ಸಂಸ್ಕೃತಿಗಳ ಬಗೆಗೆ ಅಪಾರವಾದ ಪ್ರೀತಿಯನ್ನಿರಿಸಿಕೊಂಡಿರುವ ರಾಮಚಂದ್ರ ಜಾನಪದ ಲೋಕಕ್ಕೆ ಅಧಿಕಾರಷಾಹಿ ಹಂತದಲ್ಲಿ ನೆರವಾಗುತ್ತಾ ಬಂದವರು. ತಮ್ಮ ಅತ್ಯಮೂಲ್ಯವಾದ ಸಲಹೆ, ರಚನಾತ್ಮಕ ಸಹಕಾರಗಳ ಮುಖಾಂತರ ಜಾನಪದ ಲೋಕಕ್ಕೆ ನೆರವಾಗುತ್ತ ಬಂದವರು. ರಾಮಚಂದ್ರ ಅವರ ಜಾನಪದ ಸೇವೆ ಅಧಿಕಾರಿಗಳ ಮಟ್ಟದ್ದು. ಕಾರ್ಯಕರ್ತರಷ್ಟೇ ಅಲ್ಲ; ಅಧಿಕಾರಿಗಳ ನೆರವೂ ದೊಡ್ಡದು. ಅವರ ಈ ಜಾನಪದ ಸೇವೆಯನ್ನು ಗೌರವಿಸುವುದರ ಕುರುಹಾಗಿ ಕರ್ನಾಟಕ ಜಾನಪದ ಪರಿಷತ್ತು ತಾ|| ೧೩-೨-೨೦೦೫ ರಂದು ವಿಶೇಷ ಪುರಸ್ಕಾರ ನೀಡಿ ಗೌರವಿಸಿದೆ.

ಪರಿಚಯ : **ಡಾ. ಚಕ್ಕೆರೆ ಶಿವಶಂಕರ್**

## ಪ್ರಶಸ್ತಿ ಪುರಸ್ಕೃತರು – ೨೦೦೬

### ೧೨೬. ಬಾನಂದೂರು ಬೋರಮ್ಮ

ಕೀರಲು ಕಾಯ, ಸಣ್ಣ ಎತ್ತರದ ಬಾನಂದೂರಿನ ಶ್ರೀಮತಿ ಬೋರಮ್ಮ ಹಾಡಲು ಅಡಿಯಿಟ್ಟರೆ ಇಂಪು ಸಂಚರಿಸಿದಂತೆ, ಕಂಪಿನ ಮಧುರನಾದವೆ ಹರಿದಾಡಿದಂತೆ. ಎಂತಹ ನಿರಾಸಕ್ತರನ್ನೂ ಒಂದು ಗಳಿಗೆ ನಿಲ್ಲಿಸಬಲ್ಲಂಥ ಸೊಗಸಿನ ಹಾಡುಗಾರಿಕೆ ಇವರದು. ಎಳವೆಯಲ್ಲಿ ಬೋರಮ್ಮ ಅಕ್ಷರ ಕಲಿಯಲಿಲ್ಲ, ಆದರೆ ತಾಯಿ ಹಾಡಿದ ಹಾಡೊಂದನ್ನೂ ಬಿಡಲಿಲ್ಲ. ಇವರು ಬೀಸುವ ಪದಗಳು, ಕುಟ್ಟುವ ಪದಗಳು, ದೇವರ ಪದಗಳು, ಸೋಬಾನೆ ಪದಗಳಂತಹ ಹಾಡುಗಳಲ್ಲದೆ ತತ್ವಪದಗಳನ್ನೂ ಅನುಭವದ ಭಾವ ಹೊಮ್ಮಿಸಿ ಹಾಡುತ್ತಾರೆ. ನಾಟಕದಲ್ಲಿ ಪಾರ್ಟು ಮಾಡಲು ಸೇರಿದ ತಮ್ಮ ಯಜಮಾನರು ಆಡಿದ ನಾಟಕದ ಹಾಡುಗಳನ್ನು ಸಹ ಬಹು ಚೆನ್ನಾಗಿ ಹಾಡಬಲ್ಲಷ್ಟು ಶ್ರದ್ಧೆ, ಧ್ವನಿಸಾಮರ್ಥ್ಯ ಎಲ್ಲವೂ ಮೇಳೈಸಿದ ಪ್ರತಿಭೆ ಇವರದು. ಉತ್ತರದೇವಿ, ಅರ್ಜುನ ಜೋಗಿಯಂತಹ ಕಥನಗೀತೆಗಳನ್ನು ಒಳಗೊಂಡು ಹೆಂಗಸರು ಹಾಡುವ ಜನಪದ ಗೀತೆಗಳ ಪ್ರಕಾರಗಳೆಲ್ಲ ಇವರಿಗೆ ಕರತಲಾಮಲಕ. ಶ್ರೀಮತಿ ಬೋರಮ್ಮ ಅವರಿಗೆ ತಾ॥ ೧೨–೨–೨೦೦೬ ರಂದು "ಸೋಬಾನೆ ಚಿಕ್ಕಮ್ಮ ಪ್ರಶಸ್ತಿ" ನೀಡಿ ಗೌರವಿಸಿತು.

### ೧೨೭. ಸಿದ್ಧರಾಮಯ್ಯ

ಚೌಡಿಕೆಯ ಚಿಣಿಕಿಣಿ, ಗುಣಿ ಚೌಡಿಕೆಯ ದೊಳಬುಳಕ, ತಾಳ ಗಿಲ್ಲಣದ ಮೇಳದೊಂದಿಗೆ "ಎಲ್ಲಿ ಕಾಣೆಲ್ಲಿ ಕಾಣೆ ಎಲ್ಲಮ್ಮನಂತೊಳೆಲ್ಲಿ ಕಾಣೆ" ಎಂದೆಲ್ಲಾ ಹಾಡುವ ಚೌಡಿಕೆ ಕಲಾವಿದರಲ್ಲಿ ಎದ್ದು ಕಾಣುವವರು ಶ್ರೀ ಸಿದ್ಧರಾಮಯ್ಯ ಅವರು. ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಮೆಣಸಿನಕಾಯಿ ಹೊಸಹಳ್ಳಿಯವರಾದ ಇವರು 'ಸಿದ್ರಾಮಣ್ಣ' ಎಂದೇ ಜನಪ್ರಿಯರು. ಅನೇಕ ರಾತ್ರಿಗಳ ಕಾಲ ಹಾಡಬಲ್ಲ ಹಾಡಿಕೆಯ ಸಂಪತ್ತು ಹೊಂದಿರುವ ಇವರು ಹಾಡುವಾಗ ಸಂದರ್ಭಾನುಸಾರ ಅಲ್ಲಲ್ಲಿ ಅಭಿನಯಿಸಿ ಪಾತ್ರಗಳಿಗೆ ಜೀವ ತುಂಬುವ ಕಲಾವಿದರು. ರಾಜ್ಯದ ಬಹುಮುಖ್ಯ ಸ್ಥಳಗಳಲ್ಲದೇ ದೆಹಲಿಯಲ್ಲೂ ಹಾಡಿದ್ದಾರೆ. ಚೌಡಿಕೆಯ ಹಾಡುಗಾರಿಕೆಯಲ್ಲಿನ ಇವರ ಸಾಧನೆಯನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗುರುತಿಸಿ ೧೯೯೮ ರಲ್ಲಿ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಇಂತಹ ಜಾನಪದ ಪರಿಷತ್ತು ತಾ॥೧೨–೨–೨೦೦೬ ರಂದು 'ದೊಡ್ಡಮನೆ ಪ್ರಶಸ್ತಿ' ನೀಡಿ ಗೌರವಿಸಿತು.

### ೧೨೮. ಕೆ. ಬಿ. ಜಯಚಂದ್ರರಾಜ ಅರಸು

ದಕ್ಷಿಣ ಕರ್ನಾಟಕದ ರಂಗಭೂಮಿಯ ವಿಶಿಷ್ಟ ರೂಪ ಮೂಡಲಪಾಯ ಯಕ್ಷಗಾನ. ಕರಾವಳಿ ಯಕ್ಷಗಾನದ ಶೈಲಿಯ ಅನೇಕ ಅಂಶಗಳನ್ನು ದುಡಿಸಿಕೊಂಡೆ ರೂಪ ಪಡೆದಿರುವ ಯಕ್ಷಗಾನ ಒಂದು ಭಿನ್ನರೂಪ ಘಟ್ಟದ ಕೋರೆ. ಹೆಗ್ಗಡದೇವನಕೋಟೆ ತಾಲ್ಲೂಕು, ಕೊಳ್ಳೇಗಾಲಭಾಗದ ಈ ಯಕ್ಷಗಾನದ ವಿಶೇಷ ಕಲಾವಿದರು ಶ್ರೀ ಕೆ. ಬಿ. ಜಯಚಂದ್ರರಾಜ

ಅರಸು ಅವರು. ಆಂಜನೇಯ, ರಾವಣ ಸನ್ಯಾಸಿ, ಅರ್ಜುನ ಜೋಗಿ ಮೊದಲಾದ ಪಾತ್ರಗಳಲ್ಲಿ ಪಾತ್ರಕ್ಕೆ ಜೀವ ತುಂಬಬಲ್ಲ ಕಲಾವಿದರು. ನಾಡಿನ ನಾನಾ ಭಾಗಗಳಲ್ಲಿ ಪ್ರದರ್ಶನ ನೀಡಿರುವ ಅರಸು ಅವರ 'ಘಟ್ಟದ ಕೋರೆ ಯಕ್ಷಗಾನ ಮತ್ತು ಕೋಳಗಾಲ' ಎಂಬ ಸಂಶೋಧನಾ ಕೃತಿಯನ್ನು ರಚಿಸಿ ಪ್ರಕಟಿಸಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨-೨-೨೦೦೬ ರಂದು 'ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ' ನೀಡಿ ಗೌರವಿಸಿತು.

## ೧೨೯. ಬ್ಯಾಲದಕೆರೆ ಕೆಂಪಮ್ಮ

ವಯಸ್ಸು ಹೆಚ್ಚಾದಂತೆ ಉತ್ಸಾಹ ಕುಗ್ಗುವುದು ಸಹಜ. ಆದರೆ ಶ್ರೀಮತಿ ಕೆಂಪಮ್ಮ ಅವರಿಗೆ ಮಾತ್ರ ಇದು ಅನ್ವಯಿಸದು. ಜನಪದ ಗೀತೆಗಳನ್ನು ಹಾಡುವವರಲ್ಲಿ ನಾಡಿನ ಮೊದಲ ಸಾಲಿನ ಹಾಡುಗಾರರಲ್ಲಿ ಬರುವ ಹೆಸರು ಶ್ರೀಮತಿ ಬ್ಯಾಲದಕೆರೆ ಕೆಂಪಮ್ಮ. ಹೆರಗನಹಳ್ಳಿ ಸೋಬಾನೆ ಚಿಕ್ಕಮ್ಮ, ಚಿತ್ರದುರ್ಗದ ಬೋವಿ ದಾನಜ್ಜಿ, ಉಚ್ಚಂಗಿದುರ್ಗದ ಎಲಿಸವ್ವರಂತೆ ಹಾಡಿನ ಸಮೃದ್ಧ ಗಣಿ, ಬತ್ತದ ಸೆಲೆ. ಶ್ರೀ ಎಚ್. ಎಲ್. ನಾಗೇಗೌಡರು ಹಲವಾರು ಬಾರಿ ಇವರ ಬಹುತೇಕ ಹಾಡುಗಳನ್ನು ಧ್ವನಿಮುದ್ರಿಸಿಕೊಂಡಿದ್ದಾರೆ. ಮದುವೆ ಶಾಸ್ತ್ರದ ಎಲ್ಲಾ ಪದಗಳು, ಕುಟ್ಟುವ, ಬೀಸುವ ಪದಗಳು, ದೇವರ ಪದಗಳಂತೂ ಲೆಕ್ಕವೇ ಇಲ್ಲ. ಇಂತಹ ಜನಪದ ಹಾಡಿನ ಭಂಡಾರವಾಗಿರುವ ಶ್ರೀಮತಿ ಬ್ಯಾಲದಕೆರೆ ಕೆಂಪಮ್ಮ ಅವರಿಗೆ ಶ್ರೀಮತಿ ಶೀಲಾಗೌಡ ಮತ್ತು ಕ್ರಿಸ್ಟಾಫ್ ಸ್ಟಾರ್ಟ್ಸ್ ಅವರು ನೀಡಿದ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨-೨-೨೦೦೬ ರಂದು "ನಾಡೋಜ ಶ್ರೀ ಎಚ್. ಎಲ್. ನಾಗೇಗೌಡ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿತು.

## ೧೩೦. ಆರ್. ಶಿವಣ್ಣಗೌಡ

ಮಂಡ್ಯ, ಮೈಸೂರು, ಹಾಸನ ಭಾಗದ ವಿಶಿಷ್ಟ ಜನಪದ ಕಲೆ ರಂಗದ ಕುಣಿತ. ಸುಗ್ಗಿ ಕಾಲದಲ್ಲಿ ಊರ ಮುಂದಿನ ರಂಗದಲ್ಲಿ ತಮಟೆಯ ಗತ್ತಿಗೆ ತಕ್ಕಂತೆ ಮುಂದಕ್ಕೆ, ಮತ್ತೂ ಮುಂದಕ್ಕೆ, ಹಿಂದಕ್ಕೆ, ಅಕ್ಕಪಕ್ಕಕ್ಕೆ ಸಾಲುಸಾಲಾಗಿ ಒಮ್ಮೆಗೆ ಹಕ್ಕಿಸಾಲು ಹರಿದಾಡಿದಂತೆ ಹೆಜ್ಜೆ ಹಾಕಿ ಕುಣಿಯುವುದನ್ನು ನೋಡುವುದೇ ಚಂದ. ಇಂತಹ ಆಕರ್ಷಕ ಕಲೆಯ ಸೊಗಸಿನ ಕಲಾವಿದ ಶ್ರೀ ಆರ್. ಶಿವಣ್ಣಗೌಡ. ಇವರಿಗೆ ಈ ಕಲೆಯ ಹೆಜ್ಜೆಗತ್ತುಗಳೆಲ್ಲವೂ ಕರಗತ. ಕಳೆದ ಇಪ್ಪತ್ತೈದು ವರ್ಷಗಳಿಂದ ಕಲಾಪ್ರದರ್ಶನ ಮಾಡುತ್ತಿರುವ ಇವರಿಗೆ ಶ್ರೀ ಪಿ. ರಾಜೇಗೌಡ ಹಾಗೂ ಶ್ರೀ ಕೆ. ಹೆಚ್. ಮರಿಗೌಡರೇ ಗುರುಗಳು. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಕದಲಗೆರೆ ಗ್ರಾಮದ ಶ್ರೀ ಶಿವಣ್ಣಗೌಡರು ರಂಗದ ಕುಣಿತವಲ್ಲದೆ, ಪಟದ ಕುಣಿತದ ಕಲೆಯಲ್ಲೂ ಹೆಸರಾದವರು. ಅಲ್ಲದೆ ನಾರಾಯಣ, ಚಲುವರಾಯಸ್ವಾಮಿ, ಗಣಪತಿ, ಕೃಷ್ಣರ ಮೇಲೆ ಹಾಡುಗಳನ್ನು ಹಾಡುತ್ತಾರೆ. ಇಂತಹ ಹಿರಿಯ ಅನುಭವಿ ಕಲಾವಿದ ಶ್ರೀ ಆರ್. ಶಿವಣ್ಣನವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨-೨-೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೩೧. ಮೈಸೂರು ಸಿದ್ಧರಾಮಯ್ಯ

ಹೆಜ್ಜೆಯ ಗತ್ತು, ಚಮತ್ಕಾರದ ಕಸರತ್ತು ಎರಡೂ ಬೆರೆತಿರುವ ಜನಪದ ಕಲೆ ಪೂಜಾ ಕುಣಿತ. ತಲೆ ಮೇಲೆ ಪೂಜೆ ಹೊತ್ತು ಒಂದೆಜ್ಜೆ, ಎರಡೆಜ್ಜೆ, ಮೂರೆಜ್ಜೆಯ ಗತ್ತುಗಳ ಬೆಡಗಿನ ಕುಣಿತ ಕುಣಿಯುತ್ತ ಅನೇಕ ಚಮತ್ಕಾರಗಳನ್ನು ತೋರುವ ವಿಶಿಷ್ಟ ಕಲಾವಿದರು ಸಿದ್ಧರಾಮಯ್ಯ. ಮೈಸೂರಿನ ಸಿದ್ಧರಾಮಯ್ಯ ಅವರು ಪೂಜಾ ಕುಣಿತವಲ್ಲದೆ ಒನಕೆ ಕುಣಿತ, ಕಾಸೆ ಕುಣಿತ, ಜೋಡಿ ಪೂಜಾ ಕುಣಿತ ಕುಣಿಯುವುದರಲ್ಲೂ ಹೆಸರಾದವರು. ರಾಜ್ಯದ ಬಹುತೇಕ ಮುಖ್ಯ ನಗರಗಳೇ ಅಲ್ಲದೆ ಒರಿಸ್ಸಾ, ತಂಜಾವೂರುಗಳಲ್ಲೂ ೧೯೯೪ರ ಗಣರಾಜ್ಯೋತ್ಸವ ಪೆರೇಡ್‌ನಲ್ಲೂ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ೬೦ ವರ್ಷದ ಹಿರಿಯರಾದ ಸಿದ್ಧರಾಮಯ್ಯ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೩೨. ಬಿ. ಎಲ್. ತಳವಾರ

ಬಿಜಾಪುರ ಜಿಲ್ಲೆ, ಸಿಂಧಗಿ ತಾಲ್ಲೂಕು ಮದರಿಯ ಗೀಗೀ ಕಲಾವಿದ ಶ್ರೀ ಬಿ. ಎಲ್. ತಳವಾರ. ಗೀಗೀ ಹಾಡುಗಾರಿಕೆಯ ವಿಶಿಷ್ಟ ಕಲಾವಿದರು. ಕಳೆದ ೩೫ ವರ್ಷಗಳಿಂದ ಉತ್ತರ ಕರ್ನಾಟಕವಲ್ಲದೆ ಆಂಧ್ರ ಮಹಾರಾಷ್ಟ್ರಗಳಲ್ಲೂ ಹಾಡಿ ಹೆಸರಾಗಿದ್ದಾರೆ. ಗೀಗೀ ಅಲ್ಲದೆ ಲಾವಣಿ ಹಾಡುವುದರಲ್ಲೂ ಪಳಗಿರುವ ಶ್ರೀ ತಳವಾರ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೩೩. ಪಡವ್ವ ಕಾಂಬಲೆ

ಉತ್ತರ ಕರ್ನಾಟಕ ಗಾಯನ ಪರಂಪರೆಯಲ್ಲಿ ಗೀಗೀ ತನ್ನದೇ ಆದ ವರ್ಚಸ್ಸು ಉಳ್ಳದ್ದು. ಕಂಠಮಾಧುರ್ಯ ಆಶುಕವಿತ್ವಗಳು ಇಲ್ಲಿ ಒಡನಾಡುತ್ತವೆ. ಈ ಗುಣ ತುಂಬಿದ ಹಾಡುಗಾರ್ತಿ ಶ್ರೀಮತಿ ಪಡವ್ವ ಕಾಂಬಲೆ ಅವರು. ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕಿನ ಕಂಬನೂರಿನ ಶ್ರೀಮತಿ ಪಡವ್ವಗೆ ಈಗ ವಯಸ್ಸು ಅರವತ್ತು. ಕಳೆದ ನಲವತ್ತು ವರ್ಷಗಳಿಂದ ಹಾಡುತ್ತಲೇ ಸಾಗಿದ್ದಾರೆ. ರೇಣುಕ ಎಲ್ಲಮ್ಮ, ಪರುಶುರಾಮ, ಕಡ್ಲಿಮಟ್ಟಿ ಕಾಶೀಬಾಯಿ ಮೊದಲಾದ ಸಾವಿರಾರು ಹಾಡುಗಳು ತುಂಬಿದ ಭಂಡಾರ ಇವರು. ಕರ್ನಾಟಕದ ನಾನಾ ಭಾಗಗಳಲ್ಲಿ ಹಾಡಿ ಹೆಸರಾದ ಶ್ರೀಮತಿ ಪಡವ್ವ ಕಾಂಬಳೆ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೩೪. ಎಸ್. ಹನುಮಂತರಾವ್

ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ದೊಡ್ಡಅಂಕನಹಳ್ಳಿ ತೊಗಲುಗೊಂಬೆ ಆಟದ ಹಿರಿಯ ಕಲಾವಿದರು ಶ್ರೀ ಎಸ್. ಹನುಮಂತರಾವ್ ಅವರು. ಎಳೆಯ ಹನ್ನೆರಡರ ವಯಸ್ಸಿಗೆ ಗೊಂಬೆ ಆಟಕ್ಕೆ ತೊಡಗಿದ ಶ್ರೀ ಹನುಮಂತರಾವ್ ಅವರು ಭೀಷ್ಮ ಪ್ರತಿಜ್ಞೆ, ವಿರಾಟಪರ್ವ,

ವೀರ ಅಭಿಮನ್ಯು, ಬಬ್ರುವಾಹನ ಕಾಳಗ, ಸುಧನ್ವ ಕಾಳಗ, ಐರಾವತ, ದೇವಿ ಮಹಾತ್ಮೆ- ಹೀಗೆ ಮಹಾಭಾರತ, ರಾಮಾಯಣಗಳ ಸಾಕಷ್ಟು ಪ್ರಸಂಗಗಳನ್ನು ಗೊಂಬೆಯಾಟದ ಮೂಲಕ ಪ್ರದರ್ಶಿಸುವವರು. ಈಗೀಗ ಗೊಂಬೆಯಾಟ ಕಲೆಗೆ ಪ್ರೋತ್ಸಾಹ ಕುಂದಿದಂತೆ ನಾಟಕ ಕಲಿಸಲು ತೊಡಗಿ ನಾಟಕದ ಮಾಸ್ಟರ್ ಆಗಿದ್ದಾರೆ. ತೊಗಲುಗೊಂಬೆಯಾಟದ ಹಿರಿಯ ಜೀವ ಶ್ರೀ ಹನುಮಂತರಾವ್ ಅವರಿಗೆ ಬೆಂಗಳೂರಿನ ಎಂ. ಕೃಷ್ಣಪ್ಪನವರು ತಮ್ಮ ತಂದೆ ಮುನಿಸ್ವಾಮಪ್ಪ ಮತ್ತು ತಾಯಿ ರಂಗಮ್ಮನವರ ನೆನಪಿಗಾಗಿ ನೀಡಿದ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨-೨-೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೩೫. ಮರಸುಹೊಸಹಳ್ಳಿ ಚಿಕ್ಕಯ್ಯ

ಮಾತಿನಲ್ಲಿ ಹಾಸ್ಯದ ಹೊನಲು ಉಕ್ಕಿಸುವ ಚತುರ ಮಾತಿನ ಮೋಡಿಗಾರ ಶ್ರೀ ಚಿಕ್ಕಯ್ಯ. ಊರಲೆಲ್ಲ ಇವರನ್ನು ಕರೆಯುವ ಅಡ್ಡ ಹೆಸರು 'ಸುಳ್ಳಕ್ಕಿ'. ಹಾಸನ ಜಿಲ್ಲೆ, ಆಲೂರು ತಾಲ್ಲೂಕು, ಮರಸುಹೊಸಹಳ್ಳಿಯ ಶ್ರೀ ಚಿಕ್ಕಯ್ಯ ಕಹಳೆ ಊದುವುದರಲ್ಲಿ ನಿಸ್ಸೀಮರಾದವರು. ತಮಟೆ ನುಡಿಸುವುದರಲ್ಲು ಪಳಗಿದವರು. ಕೋಲಾಟ ಮಾಸ್ಟರ್ ಕೂಡ ಹೌದು. ಅಷ್ಟಲ್ಲದೇ ಕಾಡಸಿದ್ಧನಂತಹ ಕಥೆಗಳನ್ನು ಹೇಳುವುದರಲ್ಲೂ ಸೈ. ಶ್ರೀ ಚಿಕ್ಕಯ್ಯ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨-೨-೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೩೬. ಮೈಲನಾಯಕನಹಳ್ಳಿ ಚನ್ನಮ್ಮ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಮೈಲನಾಯಕನಹಳ್ಳಿ ಶ್ರೀಮತಿ ಚನ್ನಮ್ಮನವರ ಹಾಡುವ ದನಿ ತುಸು ಗೊಗ್ಗರದಂತೆ ಕಂಡರೂ ಹಾಡುವ ಹಾಡುಗಳ ಭಂಡಾರ ದೊಡ್ಡದು. ಭೈರವೇಶ್ವರ, ಚೆಲುವರಾಯಸ್ವಾಮಿ, ಸಿದ್ಧಪ್ಪಾಜಿ ಮೊದಲಾದ ಕಾವ್ಯಗಳು, ಕುಟ್ಟುವ, ಬೀಸುವ ಪದಗಳು, ಲಾಲಿ, ದೂರಿ, ಜೋಗುಳ ಪದಗಳು, ದೇವರ ಪದಗಳು, ಎಲ್ಲಕ್ಕಿಂತ ಹೆಚ್ಚು ಬೇಡಿಕೆ ಇರುವುದು, ಸೋಬಾನೆ ಹಾಡುವುದರಲ್ಲಿ. ಮದುವೆ ಶಾಸ್ತ್ರದ ಎಲ್ಲಾ ಪದಗಳನ್ನು ಇವರು ಹಾಡುತ್ತಾರೆ. ಬೆಂಗಳೂರು ಮತ್ತಿತರ ಕಡೆ ಮದುವೆಗಳಲ್ಲಿ ಹಾಡಲೆಂದೇ ಆಹ್ವಾನಿಸುವುದಿದೆ. ಇವರಲ್ಲಿಯ ಹಾಡುವ ಉತ್ಸಾಹ ಮಾತ್ರ ಯಾರೂ ಮೆಚ್ಚುವಂತಹದ್ದು. ಇಂತಹ ಹಾಡುಗಾರ್ತಿ ಶ್ರೀಮತಿ ಚನ್ನಮ್ಮ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨-೨-೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೩೭. ಸೈಲಪ್ಪ ಮುರಿಗೆಪ್ಪ ಸೋರಗಾಂವಿ

ಉತ್ತರ ಕರ್ನಾಟಕದ ಸಂಗೀತ ಪ್ರಧಾನವಾದ ಜನಪದ ರಂಗಭೂಮಿಯ ಅತ್ಯಂತ ವಿಶಿಷ್ಟ ಪ್ರಕಾರ 'ಶ್ರೀ ಕೃಷ್ಣ ಪಾರಿಜಾತ'. ತಾರಸ್ವರದ ಮಧುರ ಗಾಯನದ ಮೂಲಕ ಪ್ರೇಕ್ಷಕರನ್ನು ಮೈಮರೆಸುವ ಈ ರಂಗಭೂಮಿಯ ವಿಶಿಷ್ಟ ಕಲಾವಿದರು ಶ್ರೀ ಸೈಲಪ್ಪ ಮುರಿಗೆಪ್ಪ ಸೋರಗಾಂವಿ

ಅವರು. ಕೌಜಲಗಿ ನಿಂಗಮ್ಮರ ಕಂಪನಿ ನಟರಾಗಿದ್ದ ತಂದೆ ಮುರಿಗೆಪ್ಪ ಅವರೆ ಇವರ ಗುರುಗಳು. ತಂದೆಯಂತೆ ಸಹಜವಾಗಿಯೆ ಮಗನು ಪಾರಿಜಾತಕ್ಕೆ ಒಲಿದರು. ಬಾಲಗೋಪಾಲ, ಬಾಲನಾರದ ಪಾತ್ರಗಳಿಂದ ಆರಂಭಗೊಂಡು ಪಾರಿಜಾತದ ಕೇಂದ್ರ ಪಾತ್ರಗಳಾದ ಸತ್ಯಭಾಮೆ, ಗೌಳಿಗಿತ್ತಿಯರಂತಹ ಸ್ತ್ರೀ ಪಾತ್ರಗಳನ್ನು ಐವತ್ತರ ವಯಸ್ಸಿನಲ್ಲು ಮಾಡುತ್ತಾ ಹೆಸರಾಗಿದ್ದಾರೆ. ತಮ್ಮ ಕಂಪನಿಯೊಂದಿಗೆ ಮುಂಬೈಯಲ್ಲಿ ತಿಂಗಳುಗಟ್ಟಲೆ ಪ್ರದರ್ಶನ ನೀಡಿದವರಾಗಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿತು

## ೧೩೮. ಸುಣ್ಣಘಟ್ಟದ ಕೆಂಚಮ್ಮ

ಹಲವರಿಗೆ ಹಾಡಿನ ಸಂಪತ್ತು ಒಲಿದು ಬರುತ್ತದೆ. ಜೊತೆ ಜೊತೆಗೆ ಕಷ್ಟದ ಬದುಕಿನ ಬಡತನ ತುಂಬಿಯೇ ಬರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಸುಣ್ಣಘಟ್ಟದ ಕೆಂಚಮ್ಮ ಅವರಿಗೆ ೬೦ ವರ್ಷವಾದರೂ ದನಿ ಕುಗ್ಗಿಲ್ಲ, ಹಾಡಿನ ದನಿ ಸೊರಗಿಲ್ಲ. 'ರಾಣಿ ಚಿಕ್ಕೋಳಂತ ರಾಯ ದಂಡಿಗೋದ ಸುವ್ವಲಾಲೆ' ಎಂದು ಹಾಡಲಡಿಯಿಟ್ಟರೆ ಕಥನ ಪಾತ್ರಗಳೊಂದಿಗೆ ಕೇಳುಗರನ್ನು ಲೀನವಾಗಿಸುವ ಕಥನ ಕೌಶಲ ಇವರದು. ಏರು ದನಿಯಲ್ಲಿ 'ತಾಯಿ ಮಾತಾಡೆ' ಎಂದು ಹಾಡತೊಡಗಿದರೆ ಹಾದೀಲಿ ಹೋಗುವವರನ್ನು ಒಂದರಗಳಿಗೆ ನಿಲ್ಲಿಸಿಬಿಡುವ ಗಾಯನ ಪ್ರತಿಭೆ ಇವರದು. ಧರ್ಮರ ಪದಗಳು, ದೇವರ ಪದಗಳು, ಸೋಬಾನೆ ಪದಗಳು, ಕಥನ ಗೀತೆಗಳು ಹೀಗೆ ನೂರಾರು ಪದಗಳು, ಕಥೆಗಳನ್ನು ಹೇಳುತ್ತಾರೆ. ಇಂತಹ ಅಪರೂಪದ ಹಾಡುಗಾರರಾದ ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿತು.

## ೧೩೯. ಅಜ್ಜನಹಳ್ಳಿ ಲಕ್ಷ್ಮಣ

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಅಜ್ಜನಹಳ್ಳಿ ಗ್ರಾಮದ ಲಕ್ಷ್ಮಣರವರು ತುಮಕೂರು ಹಾಸನ ಜಿಲ್ಲೆಗಳಲ್ಲಿ ಕಾಣಬರುವ ವಾದ್ಯಮೇಳ ಚಿಟ್‌ಮೇಳದ ಕಲಾವಿದರು. ಕರಡೆ ದಿಮ್ಮುಗಳಂತಹ ಚರ್ಮವಾದ್ಯಗಳು, ಮೌರಿ, ಶೃತಿಗಳಂತಹ ಊದುವ ವಾದ್ಯಗಳು ಜೊತೆಗೆ ತಾಳ ಸೇರಿದ ಹಿತಮಿತದ, ಚಂದದ ನಾದಸೊಬಗನ್ನು ಉಂಟುಮಾಡುವ ದಕ್ಷಿಣ ಕರ್ನಾಟಕದ ವಿಶಿಷ್ಟ ವಾದ್ಯಮೇಳ, ಚಿಟ್‌ಮೇಳದಲ್ಲಿ ಪಳಗಿದ ಕಲಾವಿದ ಶ್ರೀ ಲಕ್ಷ್ಮಣ ನಾಡಿನಲ್ಲಲ್ಲದೆ ತಮಿಳುನಾಡು, ಕೇರಳಗಳಲ್ಲೂ ತಮ್ಮ ಕಲೆಯನ್ನು ಪ್ರದರ್ಶನ ನೀಡಿದ್ದಾರೆ. ಇಂತಹ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೪೦. ಮೃತ್ಯುಂಜಯ ಸೋಮಯ್ಯ ಚಿಕ್ಕಪುಟ್ಟ

ಒಬ್ಬ ವ್ಯಕ್ತಿ ಹಳ್ಳಿಯಲ್ಲಿ ಅದೆಷ್ಟು ಬಗೆಯಿಂದ ತೊಡಗಿರುತ್ತಾನೆಂಬುದಕ್ಕೆ ಶ್ರೀ ಮೃತ್ಯುಂಜಯ ಸೋಮಯ್ಯ ಚಿಕ್ಕಪುಟ್ಟ ಅವರು ಸಾಕ್ಷಿ. ಕರಡಿ, ಡೋಲು, ಜಾಗಟೆ, ಗಂಟೆ, ತಾಳಗಳಂತಹ ವಾದ್ಯಗಳನ್ನು ನುಡಿಸುವ ಮೃತ್ಯುಂಜಯ ಸೋಮಯ್ಯ ಚಿಕ್ಕಪುಟ್ಟ ಅವರು ಪುರಾಣಗಳನ್ನು ಓದಿ, ಬಿಡಿಸಿ ಹೇಳುವುದರಲ್ಲೂ ಸಿದ್ಧಹಸ್ತರು. ಅಲ್ಲದೆ ಡಂಗುರ ಪದಗಳನ್ನು ಹಾಡುತ್ತಾರೆ. ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಸಾಲೋಟಗಿಯವರಾದ ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೪೧. ಗಿರಿಯಪ್ಪ ಲಿಂಗಪ್ಪ ಮೈತ್ರಿ

ರಮ್ಯ ವನಸಿರಿಯ ಸೀಮೆ ಉತ್ತರ ಕನ್ನಡ, ಅಲ್ಲಿನ ಹಬ್ಬಗಳು ಅಂತಹದೇ ರಂಗಿನವು. 'ಸುಗ್ಗಿ ಹಬ್ಬ ಉತ್ತರ ಕನ್ನಡ ಭಾಗದ ವಿಶಿಷ್ಟ ಹಬ್ಬ'. ಈ ಹಬ್ಬದಲ್ಲಿ ತೊಡುವ ವೇಷಗಳ ಸೊಬಗು ವಿಶೇಷವಾದುದು. ಕೊಮಾರ ಪಂತದ ಶ್ರೀ ಗಿರಿಯಪ್ಪ ಲಿಂಗಪ್ಪ ಮೈತ್ರಿ ಅವರು ತಮ್ಮ ತಲೆಯ ಮೇಲೆ ಆಳೆತ್ತರದ ಬೃಹತ್ ತುರಾಯಿ ಹೊತ್ತು ಕುಣಿಯುವುದನ್ನು ನೋಡುವುದೇ ಚಂದ. ಒಮ್ಮೆ ಕುಲುಕಿದರೆ ತಲೆಯ ಮೇಲೊಂದು ಹಕ್ಕಿ ಹಿಂಡು ಕುಣಿದಂತೆ, ಹೂವಿನ ದೊಡ್ಡ ಗುಚ್ಛವೇ ಓಲಾಡಿದಂತೆ, ರಥವೇ ಕುಲಿಕಿದಂತೆ. ಎಪ್ಪತ್ತೆರಡು ವರ್ಷದ ಅಂಕೋಲಾ ತಾಲ್ಲೂಕು ಅವರ್ಸಾ ಗ್ರಾಮದ ಗಿರಿಯಪ್ಪನವರು ಬಾಸಿಂಗ, ಪೇಟ, ಗಣಪತಿ ಮೂರ್ತಿಗಳನ್ನು ತಯಾರಿಸುವುದರಲ್ಲೂ ಹೆಸರಾದವರು. ಒಳ್ಳೆಯ ಯಕ್ಷಗಾನ ಪಾತ್ರಧಾರಿಯೂ ಆಗಿರುವ ಶ್ರೀ ಗಿರಿಯಪ್ಪ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೪೨. ನಾಗುಲಿಂಗುಗೌಡ

ಉತ್ತರ ಕರ್ನಾಟಕದಲ್ಲೆಲ್ಲಾ ಜನಪ್ರಿಯವಾಗಿರುವ ಅತ್ಯಂತ ಆಪ್ಯಾಯಮಾನವಾದ ಹಾಡುಗಳು ಚಂದದ ಕುಣಿತದ ಸಣ್ಣಾಟ, 'ಸಂಗ್ಯಾಬಾಳ್ಯ' ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಬಹುಭಾಗಗಳೆಲ್ಲಾ ಜನಪ್ರಿಯ. ಹಾಗೆಯೇ ಉತ್ತರ ಕನ್ನಡ ಹಾಲಕ್ಕಿ, ಸಿದ್ಧಿಗಳಂತಹ ಬುಡಕಟ್ಟು ಜನರಿಗೂ ಬಹು ಇಷ್ಟವಾದ ರಂಗಭೂಮಿ 'ಸಿಂಗಿಬಾಳ್ಯ' ಎಂದೇ ಕರೆಯುವ ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕು, ಕಲ್ಲಬೆ ಬಳಿಯ ಹೊಸಹಳ್ಳಿಯ ಶ್ರೀ ನಾಗುಲಿಂಗುಗೌಡ ಅವರು ಸಂಗ್ಯಾಬಾಳ್ಯದ ಸಂಗ್ಯಾನ ಪಾತ್ರ ಮಾಡುವುದರಲ್ಲಿ ಆ ಭಾಗದಲ್ಲೆ ಹೆಸರಾದ ಕಲಾವಿದರು. ಅಷ್ಟೇ ಅಲ್ಲದೆ ಗುಮಟೆ ಪಾಂಗ್ ನುಡಿಸುವುದರಲ್ಲೂ ಪಳಗಿದವರು. ಹಾಲಕ್ಕಿ ಸುಗ್ಗಿ ಕುಣಿತದ ಕಲೆಗಳ ಪರಿಣಿತರೂ ಹೌದು. ಇಂತಹ ಎಪ್ಪತ್ತರ ಹಿರಿಯರು ಶ್ರೀ ನಾಗುಲಿಂಗು ಗೌಡರವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಬಯಸುತ್ತದೆ.

## ೧೪೩. ಮರಿಸಿದ್ದಮ್ಮ

ಬದುಕು ಎಷ್ಟು ನಿಷ್ಕಾರುಣ್ಯದಿಂದ ತುಂಬಿರಲು ಸಾಧ್ಯ ಎಂಬುದರ ಪ್ರತೀಕದಂತೆ ಶ್ರೀಮತಿ ಮರಿಸಿದ್ದಮ್ಮನವರ ಬದುಕು. ಕಷ್ಟಗಳೊಂದಿಗೆ ಏಗಿ ಏಗಿ ಎದೆಗೊಟ್ಟು ಹದಗೊಂಡು, ನಂತರ ಮತ್ತೆ ಬರುವ ಎಂತಹ ಕಷ್ಟವನ್ನೂ ಎದುರಿಸುವ ಛಲ ಮೂಡುತ್ತದೆ ಕೆಲವರಲ್ಲಿ. ಅಂತಹವರಲ್ಲಿ ಶ್ರೀಮತಿ ಮರಿಸಿದ್ದಮ್ಮ ಒಬ್ಬರು. ಅರಿವು ತಿಳಿವಿಗೆ ದಕ್ಕುವ ಮೊದಲಿನ ಕಷ್ಟಗಳಿಗೆ ನಲುಗಿ ನಲುಗಿ ಸೊರಗುವುದರಿಂದ ಪಾರಾದದ್ದೇ ಬಹುಶಃ ತಾನು ಕಲಿತ ತತ್ವಪದಗಳ ಆಸರೆಯಿಂದ. ನಶ್ವರ ಜೀವನದ ಕುರಿತು ಚರ್ಚಿಸುವ ಹಾಡುಗಳು ತನಗೆ ತಾನೆ ಪಾಠವಾಗಿಸಿಕೊಂಡಂತೆ ಇತರರಿಗೂ ಪಾಠವಾಗಿಸಿದ ಇವರು, ನೋವೆಲ್ಲವನ್ನು ತತ್ವಪದಗಳು, ಗೀಲಿ ಪದಗಳು, ಸೋಬಾನೆ ಪದಗಳಾಗಿ ಹಾಡುವ ಮೂಲಕ ಸುಖ ಕಂಡವರು. ಇವರು ಮೈಸೂರಿನಲ್ಲಿ ಮಠಗಳಲ್ಲೆಲ್ಲ ಸಂದರ್ಭಾನುಸಾರ ಹಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯ ಕುವೆಂಪು ಅಧ್ಯಯನ ಕೇಂದ್ರದ ೨೦೦೪–೨೦೦೫ರ ಎಂ.ಎ. ವಿದ್ಯಾರ್ಥಿಗಳಿಗೆ ಜನಪದ ಗೀತೆಗಳ ಕಲೆಯನ್ನು ಬೋಧಿಸಿದ್ದಾರೆ. ಇಂತಹ ಹಿರಿಯ ಕಲಾವಿದೆಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು.

## ೧೪೪. ಡಾ॥ ವೈ. ಸಿ. ಭಾನುಮತಿ

ವೃತ್ತಿ ಮತ್ತು ಪ್ರವೃತ್ತಿ ಎರಡೂ ಒಂದೇ ಆಗಿ ಹಳೆಗನ್ನಡ ಗ್ರಂಥ ಸಂಪಾದನೆ ಮತ್ತು ಸಂಶೋಧನೆಯಲ್ಲಿ ತೊಡಗಿರುವವರು ಸಜ್ಜನಿಕೆಯ ವ್ಯಕ್ತಿತ್ವದವರೂ ಆದ ಡಾ॥ ವೈ. ಸಿ. ಭಾನುಮತಿ ಅವರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಹಿರಿಯ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿರುವರು. ಇವರ ಅತ್ಯಂತ ಆಸಕ್ತಿಯ ಕ್ಷೇತ್ರ ಜನಪದ ಸಂಗ್ರಹ ಮತ್ತು ಸಂಶೋಧನೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಉತ್ತಮಕೃತಿ ಪ್ರಶಸ್ತಿಗೆ ಪಾತ್ರವಾದ ಇತ್ತೀಚಿನ 'ಜನಪದ ಕಥೆಗಳು'ಸಂಕಲನವನ್ನು ಒಳಗೊಂಡು ಜಾನಪದ ಭಿತ್ತಿ, ಜಾನಪದ ಅಂತರ್ಯ, ಜಾನಪದ ದೇವರ ಹಾಡುಗಳು, 'ಮಲೆನಾಡಿನ ಶೈವ ಒಕ್ಕಲಿಗರು–ಒಂದು ಅಧ್ಯಯನ' ಮೊದಲಾದ ಮಹತ್ವದ ಕೃತಿಗಳನ್ನು ಪ್ರಕಟಿಸಿದಾರೆ. ಇವರ ಪಿಎಚ್.ಡಿ ಮಹಾಪ್ರಬಂಧ 'ಕನ್ನಡದಲ್ಲಿ ವರ್ಧಮಾನ ಸಾಹಿತ್ಯ' ಕುರಿತದ್ದು. ಹಳಗನ್ನಡ ಕೃತಿಗಳ ಸಂಪಾದನಾ ಕಾರ್ಯದಲ್ಲಿ ಸಾಕಷ್ಟು ದುಡಿದಿದ್ದಾರೆ. ಇವರ ಕೃತಿಗಳಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿಗಳು ಸಂದಿವೆ. ಜಾನಪದ ಸಂಗ್ರಹ, ಸಂಪಾದನೆ, ಸಂಶೋಧನಾ ಕ್ಷೇತ್ರದಲ್ಲಿ ಅನನ್ಯ ಸಾಧನೆಗಾಗಿ ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೪೫. ಪುಟ್ಟ ತಾಯಮ್ಮ

ಪರೋಪಕಾರವನ್ನು ಪರಮ ಧ್ಯೇಯವಾಗಿಸಿಕೊಂಡ ವೃತ್ತಿ ದೇಸಿ ವೈದ್ಯವೃತ್ತಿ. ಅನಾರೋಗ್ಯದಿಂದ ಯಾರೇ ಬರಲಿ, ಅದೆಷ್ಟು ಹೊತ್ತಿನಲ್ಲೇ ಬರಲಿ ಯಾರನ್ನೂ ಕಿಂಚಿತ್ತು ಅಸಡ್ಡೆಯಾಗಿ ಕಾಣದೆ ಅವರಿಗೆ ಶುಶ್ರೂಷೆ ನೀಡಿ ಅವರು ಕಾಯಿಲೆಯಿಂದ ಗುಣಮುಖರಾಗಿ ಮುಖ ಅರಳುವುದನ್ನು ಕಾಣುವುದರಲ್ಲೇ ತಮ್ಮೆಲ್ಲ ಸುಖ ಕಾಣುವವರು ಇವರು. ಇಂತಹವರ ಮನೆಯಲ್ಲಿ ಕೈ ಇಟ್ಟಲೆಲ್ಲ ಗಿಡಮೂಲಿಕೆಗಳೆ. ಇಂತಹ ಸೇವೆಯೊಂದಿಗೆ ತಮ್ಮ ಜೀವನವನ್ನು ಕಳೆದ ಎಪ್ಪತ್ತು ವರ್ಷದ ಹಿರಿಯ ಜೀವ ಶ್ರೀಮತಿ ಪುಟ್ಟ ತಾಯಮ್ಮ ಕಾಮಾಲೆ ರೋಗಕ್ಕೆ ಔಷಧಿ ನೀಡುವುದರಲ್ಲಿ ಸುತ್ತಿನ ಸೀಮೆಯಲ್ಲೇ ಹೆಸರಾಗಿರುವರು. ಸ್ವತಃ ವೈದ್ಯರಾದ ಡಾ॥ ಹೆಚ್. ಎಂ. ವೆಂಕಟಪ್ಪನವರು. ಇವರಿಗೆ ಮತ್ತಷ್ಟು ಪ್ರೇರಣೆ ತುಂಬಿದವರು. ೧೬೦೦ ಜನಕ್ಕೂ ಹೆಚ್ಚು ಜನರಿಗೆ ಔಷಧೋಪಚಾರ ಮಾಡಿರುವ ಜನಪದ ವೈದ್ಯೆ ಶ್ರೀಮತಿ ಪುಟ್ಟ ತಾಯಮ್ಮ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

## ೧೪೬. ಅರ್ಚಕ ಗಂಗಾಧರ

ಕಾಲಿಗೆ ಝುಣಝುಣಿಸುವ ಗೆಜ್ಜೆ, ಘಣಘಣಿಸುವ ಗಗ್ಗರ ಮೊಣಕಾಲಿಗೆ, ಕೆಂಪುಕಾಸೆ, ಜುಬ್ಬ, ಸೊಂಟಕ್ಕೆ ಬಿಗಿದ ನಡುವಸ್ತ್ರ, ಹಿಂದಲೆಗೆ ಬಿಳಿಯ ಚೌಲಿ, ಎದೆಯಲ್ಲಿ ವೀರಭದ್ರನ ಹಲಗೆ, ಹಣೆಗೆ ವಿಭೂತಿ, ಕೆಕ್ಕರಿಸಿದರೆ ರವರವಗುಡುವ ಕಣ್ಣು, ಝಳಪಿಸುವ ಕತ್ತಿ. "ಆಹಹಾ... ರುದ್ರ" ಎದು ರೌದ್ರ, ವೀರ ಭಾವಗಳ ಬಿಂಬಿಸುವ ಒಡಬುಗಳ ಮೂಲಕ ವಾದ್ಯಗಳ ನಾದಕ್ಕೆ ತಕ್ಕಂತೆ ವೀರಾವೇಶದಿಂದ ಕುಣಿವ ಕಲೆ ವೀರಭದ್ರನ ಕುಣಿತ. ಈ ಕಲೆಯ ಕೌಶಲ್ಯಗಳೆಲ್ಲವನ್ನು ವಶಮಾಡಿಕೊಂಡಿರುವ ಪ್ರತಿಭಾನ್ವಿತರು ಗಂಗಾಧರ ಅವರು. ೪೫ರ ಹರೆಯಕ್ಕೆ ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿರುವುದೇ ಅಲ್ಲದೆ ಹೊಸ ತಲೆಮಾರಿನ ಯುವಕರು, ಮಕ್ಕಳಿಗೆ ಈ ಕಲೆಯ ತರಬೇತಿ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಮಂಡ್ಯ ತಾಲ್ಲೂಕು, ದುದ್ದ ಹೋಬಳಿ, ಜಿ. ಮಲ್ಲಿಗೆರ ಅಂಚೆ, ಹೊನ್ನೆ ಮಡುವಿನ ಶ್ರೀ ಅರ್ಚಕ ಗಂಗಾಧರ ಅವರಿಗೆ ಎನ್. ಎಸ್. ರಾಮೇಗೌಡ ಅವರು ನೀಡಿದ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೪೭. ರಾಮು ಮಲೆಕುಡಿಯ

ದಕ್ಷಿಣ ಕನ್ನಡದ ಆದಿವಾಸಿ ಮಲೆಕುಡಿಯರ ಕಲಾವಿದರು ಶ್ರೀ ರಾಮ ಮಲೆಕುಡಿಯ. ಇವರು ನುಡಿಸುವ ವಾದ್ಯ ಮಾಪ್ರೋರಿ. ಇದು ಈಗಾಗಲೇ ಇಲ್ಲವಾಗುತ್ತಿರುವ ಊದುವ ವಾದ್ಯ. ಆಕಾರದಲ್ಲಿ ಕೊಳಲಿನಂತಿದ್ದು, ಜೋಡಿ ಬಿದಿರಿನ ಕೊಳವೆಗಳಿಗೆ ಎರಡು ತುಂಬು ಕರಟಗಳನ್ನು ಅಳವಡಿಸಿ ಮಾಡಿದ ವಾದ್ಯ. ಇಂತಹ ವಾದ್ಯ ನುಡಿಸುವವರಲ್ಲಿ ಉಳಿದಿರುವ

ಏಕಮಾತ್ರ ಕಲಾವಿದರು ಶ್ರೀ ರಾಮ ಮಲೆಕುಡಿಯ. ಇಂತಹ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೪೮. ಪಿ. ನಾರಾಯಣಸ್ವಾಮಿ

ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು, ಎಲ್ದುರು ಹೋಬಳಿ, ಸೀಗೆಹಳ್ಳಿ ಗ್ರಾಮದ ಪೂಜಪ್ಪ ಮತ್ತು ವೆಂಕಟಮ್ಮ ಅವರ ಮಗನಾದ ಬಿ.ಎಸ್ಸಿ., ಎಲ್‌ಎಲ್.ಬಿ. ಪದವೀಧರ ಶ್ರೀ ಪಿ. ನಾರಾಯಣಸ್ವಾಮಿಯವರು ಕೃಷಿಕ ಮನೆತನದಿಂದ ಬಂದವರು. ಹಳ್ಳಿಗಾಡಿನ ಜಾನಪದ ಕಲಾವಿದರ ಕಷ್ಟ ಸುಖ ಅರಿತವರು. ಗ್ರಾಮೀಣಾಭೀವೃದ್ಧಿ ಮತ್ತು ಸಂಸ್ಕೃತಿ ಇಲಾಖೆಯ ಸೇವೆಯಲ್ಲಿ ಜನಪದ ಕಲಾವಿರಿಗೆ ಸಂಬಂಧಿಸಿದಂತೆ ವಿಷೇಷ ಆಸ್ಥೆ ವಹಿಸಿದವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ವಿಶೇಷ ಪುರಸ್ಕಾರ'ವನ್ನು ನೀಡಿ ಗೌರವಿಸಿತು.

## ೧೪೯. ಮಂಗಾಪಟ್ಟಣದ ರಂಗಸ್ವಾಮಿ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಂಗಾಪಟ್ಟಣದ ಶ್ರೀ ರಂಗಸ್ವಾಮಿ ಅವರು ಜಾನಪದ ಲೋಕದ ಮೇಲೆ ತುಂಬು ಪ್ರೀತಿಯುಳ್ಳವರು. ಲೋಕದ ಕಾರ್ಯ ಚಟುವಟಿಕೆ ಮತ್ತು ಅದರ ಏಳಿಗೆಗೆ ಸದಾ ಹಂಬಲಿಸುವ ಶ್ರೀ ರಂಗಸ್ವಾಮಿ ಅವರನ್ನು ಕರ್ನಾಟಕ ಜಾನಪದ ಪರಿಷತ್ತು ತಾ॥ ೧೨–೨–೨೦೦೬ ರಂದು 'ವಿಶೇಷ ಪುರಸ್ಕಾರವನ್ನು' ನೀಡಿ ಗೌರವಿಸಿತು.

ಪರಿಚಯ : ಡಾ. ಕುರುವ ಬಸವರಾಜ್

## ಪ್ರಶಸ್ತಿ ಪುರಸ್ಕೃತರು – ೨೦೦೭

### ೧೫೦. ಕೆರೆಮನೆ ಶಂಭು ಹೆಗಡೆ

ಯಕ್ಷಗಾನದ ಸೊಗಸು, ಸೊಬಗುಗಳನ್ನೆಲ್ಲಾ ಮೈಮನಗಳಲ್ಲಿ ಲೀನವಾಗಿಸಿ ಪಾತ್ರಗಳ ಮನೋಭಾವಗಳನ್ನು ಕುಣಿತ, ಮಾತು–ಆಂಗೀಕ ಚಲನೆಗಳ ಮೂಲಕ ರಂಗದ ಮೇಲೆ ಪ್ರತಿ ಪ್ರದರ್ಶನದಲ್ಲಿ ಹೊಸ ನಿರ್ಮಿತಿ ಉಂಟುಮಾಡುವ ಅದ್ಭುತ ಕಲಾವಿದರು. ಶ್ರೀ ಕೆರೆಮನೆ ಶಂಭು ಹೆಗಡೆ ಅವರು. ರಾಷ್ಟ್ರ ಅಂತರಾಷ್ಟ್ರೀಯವಾಗಿ ಯಕ್ಷಗಾನಕ್ಕೆ ಘನತೆ ತಂದುಕೊಟ್ಟ ಮಹನೀಯರು. ಇವರಿಗೆ ಶ್ರೀಮತಿ ಶೀಲಾಗೌಡ ಮತ್ತು ಕ್ರಿಸ್ಟಾಫ್ ಸ್ಟಾರ್ಟ್ಸ್ ಅವರು ನೀಡಿರುವ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ನಾಡೋಜ ಎಚ್. ಎಲ್. ನಾಗೇಗೌಡ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿಲಾಗಿದೆ.

### ೧೫೧. ಮಾರಗೌಡನಹಳ್ಳಿ ಭಾಗ್ಯಮ್ಮ

ತೋಡು ತೋಡಿದಷ್ಟು ಒತ್ತರಿಸಿ ಒಸರುವ ಒರತೆ ನೀರಂತೆ, ಹಾಡಿನ ಸಮೃದ್ಧ ಗಣಿ ಮೈಸೂರು ಜಿಲ್ಲೆ ಮಾರಗೌಡನಹಳ್ಳಿಯ ಶ್ರೀಮತಿ ಭಾಗ್ಯಮ್ಮ. ದೇವರಪದ, ಸೋಬಾನೆಪದ, ಒಳಗೊಂಡು ಜೋಗಿಹಾಡು, ಮೈದಾಳರಾಮು, ಲಿಂಗರಾಜಮ್ಮ, ಮಾದೇಶ್ವರನ ಕುರಿತಾದ ಕಥನಗಳನ್ನು ಹಾಡಬಲ್ಲ ಸಾಮರ್ಥ್ಯ ಭಾಗ್ಯಮ್ಮರದು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ನಾಡೋಜ ಶ್ರೀ ಎಚ್. ಎಲ್. ನಾಗೇಗೌಡ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿಲಾಗಿದೆ.

### ೧೫೨.ವೀರಾಪುರದ ಚನ್ನಮ್ಮ

ಸದಾ ಹಾಡನ್ನೇ ತಬ್ಬಿದಂತಿರುವ ಹಾಡುಗಾರ್ತಿ ಹಾಸನ ಜಿಲ್ಲೆ ಸಾಲಿಗ್ರಾಮ ಹೋಬಳಿ ವೀರಾಪುರದ ಶ್ರೀಮತಿ ಚನ್ನಮ್ಮ ಅವರದು. ಶಿವರಾಯ, ಚೆಲುವರಾಯಸ್ವಾಮಿ ಕುರಿತ ಹಾಡುಗಳು, ಕುಟ್ಟುವ, ಬೀಸುವ, ಸೋಬಾನೆ ಹಾಡುಗಳೆಲ್ಲವು ಇವರ ಒಡಲಲ್ಲಿವೆ. ಅವು ಗಂಟಲಿಗೆ ಬಂದು ಕೇಳುಗರ ಕಿವಿಯಲ್ಲಿ ಹರಿದಾಡುತ್ತವೆ. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಸೋಬಾನೆ ಚಿಕ್ಕಮ್ಮ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

### ೧೫೩. ತಂಬೂರಿ ನಂಜೇಗೌಡ

ವೃತ್ತಿಮೇಳ ಗಾಯಕರಾಗುವುದು ಸುಲಭವಲ್ಲ, ಸರಳವಲ್ಲ. ಗುರುಗಳೊಟ್ಟಿಗೆ ಹೋದಲ್ಲಿ ಬಂದಲ್ಲಿ ಕುಂತಲ್ಲಿ ನಿಂತಲ್ಲಿ ಭಿಕ್ಷಾಟನೆಯಲ್ಲಿ ಎಲ್ಲಂದರಲ್ಲಿ ಹಾಡು ಆಲಿಸಿ, ದನಿಗೂಡಿಸಿ ಹಾಡಿನ ಗುಣ ಸಂಪತ್ತುಗಳ ಮನಕ್ಕೆ ತಂದುಕೊಂಡು ಹಾಡು ಇಡಿದು ಹಲವಾರು ವರ್ಷಗಳ

ತಮ್ಮ ಪರಿಶ್ರಮದೊಂದಿಗೆ ಹಾಡು ನಿರೂಪಿಸುವ ನಿರ್ಮಿಸುವ ಸಾಮರ್ಥ್ಯ ಹೊಂದಿದವರು ಮೈಸೂರು ಕೊಂಬಾರಕೊಪ್ಪಲಿನ ಶ್ರೀ ನಂಜೇಗೌಡ ಅವರು. ನಂಜುಂಡ-ಚಾಮುಂಡಿ, ಬಾಲನಾಗಮ್ಮ ಬಿಳಿಗಿರಿ ರಂಗಸ್ವಾಮಿ, ದೊಡ್ಡ ಬಸವಣ್ಣ, ಸಾರಂಗಧರ, ಮಾದೇಶ್ವರ ಮೊದಲಾದ ಕಾವ್ಯಗಳನ್ನು ಹಾಡಬಲ್ಲವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧-೨-೨೦೦೭ ರಂದು 'ದೊಡ್ಡಮನೆ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೫೪. ಸಿ. ಎನ್. ವೀರಭದ್ರಾಚಾರ್

ಮೂಡಲಪಾಯ ಯಕ್ಷಗಾನ ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿಯ ಒಂದು ರೂಪ. ಇಲ್ಲಿಯ ಭಾಗವತ ಪ್ರಸಂಗದ ನಡೆಗೆ ಅಗತ್ಯವಾದ ಗಾಯನ ಮಾಡುವುದಲ್ಲದೆ ತಾನೇ ಮದ್ದಲೆವಾದಕನೂ ಆಗಿರುತ್ತಾನೆ. ಇಂತಹ ಭಾಗವತ-ಮದ್ದಲೆ ವಾದಕ ಕಲಾವಿದರು ಶ್ರೀ ಸಿ. ಎನ್. ವೀರಭದ್ರಾಚಾರ್. ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಸಾದರಹಳ್ಳಿಯ ಈ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧-೨-೨೦೦೭ ರಂದು 'ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೫೫. ಸಂಗಯ್ಯ ಚನ್ನಯ್ಯ ಮಠಪತಿ

ತಾಳದ ಎಲ್ಲ ವೈವಿಧ್ಯತೆಗಳನ್ನು ಕಟ್ಟಿ ಕುಸುರಿಸುವ ಕರ್ನಾಟಕದ ವಿಶಿಷ್ಟ ವಾದ್ಯಮೇಳ ಕರಡಿಮಜಲು. ಇದೊಂದ ಬಗೆಯಿಂದ ಅಭಿಜಾತ ಸಂಗೀತ ಗುಣ ನಡೆ-ಜನಪದ ಸಂಗೀತದ ಚಲುವು ಎರಡೂ ಒಳಗೊಂಡುದು. ಈ ಕಲೆಯ ಅತ್ಯಂತ ನುರಿತ ಅನುಭವಿ ಕಲಾವಿದರು ಬಾಗಲಕೋಟೆ ಜಿಲ್ಲೆ ಚನ್ನಯ್ಯ ಮಠಪತಿ ಅವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧-೨-೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೫೬. ಸ್ವಾಮಿಗೌಡ

ಕುಟ್ಟುವ-ಬೀಸುವ ಸೋಬಾನೆ ಮೊದಲಾದ ಪದಗಳನ್ನು ಹಾಡುವ ಹೆಂಗಸರಿಗೆ ತಮ್ಮದೆಯಾದ ಶೈಲಿಯಿದೆ. ಅವರ ದನಿ ಧಾಟಿಗಳು ಹೆಂಗಸರಿಗೆ ಹೆಚ್ಚು ಸಹಜವಾಗುವಂತಹವು. ಇಂತಹ ಹೆಂಗಸರು ಹಾಡುವ ದನಿ ಬನಿಗಳನ್ನು ಗಂಡಸರಾದ ಶ್ರೀ ಸ್ವಾಮಿಗೌಡ ಅವರು ತಮ್ಮದಾಗಿಸಿಕೊಂಡು ಅಷ್ಟೆ ಚಂದವಾಗಿ ಹಾಡಬಲ್ಲ ಸಾಮರ್ಥ್ಯ ಹೊಂದಿದವರು. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು, ಕೆರೆತೊಣ್ಣೂರಿನ ಸೋಬಾನೆ ಶ್ರೀ ಸ್ವಾಮಿಗೌಡ ಅವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧-೨-೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೫೭. ನೀಲಾಬಾಯಿ ಕಲ್ಲಣ್ಣ ಯಳಸಂಗಿ

ಕೌದಿ, ದುಬಟೆ, ಕುಂಚಿಗೆ, ಕುಲಾವಿಗಳಂತಹ ಹೆಣಿಕೆಗಳಲ್ಲಿ ತಮ್ಮ ಸೃಜನಶೀಲತೆ ತೋರುವವರು ಗ್ರಾಮೀಣ ಮಹಿಳೆಯರು. ಇಂತಹ ಹೆಣಿಕೆಯ ಕುಸುರಿಗಳಲ್ಲದೇ ಒಗಟು, ಒಡಪು, ಹಾಡು, ಕಥೆಗಳನ್ನು ಹೇಳುವುದರಲ್ಲು ಪ್ರತಿಭೆ ತೋರಿದವರು ಶ್ರೀಮತಿ ನೀಲಾಬಾಯಿ ಕಲ್ಲಣ್ಣ ಯಳಸಂಗಿ ಅವರು. ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕು ಯಳಸಂಗಿಯವರಾದ ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೫೮. ಪಟೇಲ್ ಸಿದ್ಧರಾಮೇಗೌಡ

ಸಾಮಗಾನ–ಬಯಲಾಟ ನಾರದ, ಶಕುನಿ ಪಾತ್ರಗಳಲ್ಲಿ ಸೈ ಎನಿಸುವ ಅಭಿನಯಕ್ಕೆ ಹೆಸರಾದವರು ಪಟೇಲ್ ಸಿದ್ಧರಾಮೇಗೌಡ ಅವರು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಸುಣ್ಣಘಟ್ಟದ ಈ ಹಿರಿಯರು ಕಲಾವಿದರ ಮನೆತನದಿಂದಲೇ ಬಂದವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೫೯. ಅಂಕನಹಳ್ಳಿ ನಂಜಯ್ಯ

ಇಟ್ಟ ಹೆಸರು ನಂಜಯ್ಯ ಅದು ಅಡಿಗೆ ಬಿದ್ದು ಮುಚ್ಚಿಯೇ ಹೋದಷ್ಟು ಪ್ರಸಿದ್ಧಿ ಇವರ ಅಡ್ಡಹೆಸರು 'ಸಾಂಬ್ರಾಣಿ' ಎಂಬುದು. ವಯಸ್ಸು ಎಂಬತ್ತು, ತಾಕತ್ತು ಇಳಿಹೊತ್ತು, ಹುರುಪು ಇಪ್ಪತ್ತು ಅಂಥವರು ಇವರು. ಕೈಯಲ್ಲಿ ತಮಟೆ ಇದ್ದರೆ ಕಲ್ಲು ಕುಣಿಸೇನು, ಮರ ಕುಣಿಸೇನು, ಯಾರನ್ನ ಬೇಕಾದರೂ ಕುಣಿಸೇನು ಎಂಬಂತಹ ಚುರುಕಿನ ಕಲೆಗಾರ. ಪಟ, ಪೂಜೆ, ನಂದಿಕಂಬ, ಹುಲಿಕುಣಿತ, ಲಿಂಗಬೀರರ ಕುಣಿತ ಕಲೆಗಳ ಎಲ್ಲಕ್ಕೂ ತಮಟೆ ನುಡಿಸಬಲ್ಲ ಕೌಶಲ್ಯ ಇವರದು. ಪಟ–ಪೂಜಾಕುಣಿತಗಳಿಗೆ ತರಬೇತು ನೀಡಿದವರೂ ಆಗಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕು ಅಂಕನಹಳ್ಳಿಯವರಾದ ಈ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೦. ದೊಡ್ಡಗೋರಾಘಟ್ಟ ರಾಜಣ್ಣ

ಮುಖವೀಣೆ ದಕ್ಷಿಣ ಮೈಸೂರಿನ ಭಾಗದ ಒಂದು ಸುಂದರ ಊದುವಾದ್ಯ. ನೋಡಲಷ್ಟೇ ಅಲ್ಲ. ಇದರಿಂದ ಹೊಮ್ಮುವ ನಾದವೂ ಅಷ್ಟೇ ಚಲುವಿನದು. ಈ ವಾದ್ಯದ ನಿಷ್ಣಾತ ಕಲಾವಿದರು ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ದೊಡ್ಡಗೋರಾಘಟ್ಟದ ರಾಜಣ್ಣ ಅವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೧. ಜಟ್ಟೆಪ್ಪ ರಾವುತಪ್ಪ ಹೆರಗಲ್ಲ

ತೊಗಲುಗೊಂಬೆ ಆಟದ ವಿಶಿಷ್ಟ ಕಲಾವಿದರು ಜಟ್ಟೆಪ್ಪ ರಾವುತಪ್ಪ ಹೆರಗಲ್ಲ ಅವರು. ತೊಗಲುಗೊಂಬೆ ಆಟ ಅಲ್ಲದೆ ಕೀರ್ತನೆ, ಭಜನೆ ಕಲೆಗಳ ಕಲಾವಿದರೂ ಕೂಡ ಹೌದು. ಇಂತಹ ಈ ಹಿರಿಯರಿಗೆ ಇವರಿಗೆ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೨. ಗೊರವಾಲೆ ರುದ್ರಪ್ಪ

ತತ್ವಪದ, ಭಜನೆಪದ, ದಾಸರ ಪದಗಳನ್ನು ಸಾಕಷ್ಟು ಹಾಡಬಲ್ಲ ಈ ಹಿರಿಯರು ಮಂಡ್ಯ ಜಿಲ್ಲೆ ಮಂಡ್ಯ ತಾಲ್ಲೂಕು ಗೊರವಾಲೆ ಊರಿನ ರುದ್ರಪ್ಪ ಅವರು. ಅನೇಕಾನೇಕ ಮುಖ್ಯ ಕಾರ್ಯಕ್ರಮಗಳಲ್ಲಿ ಹಾಡಿದವರಾದ ಇವರಿಗೆ ಶ್ರೀ ಪ್ರೊ. ಸಿ. ಜಿ. ಪುರುಷೋತ್ತಮರವರು ತಮ್ಮ ತಾತ ಶ್ರೀ ಶಂಭೂಗೌಡ ಪುರುಷೋತ್ತಮರವರ ನೆನಪಿಗಾಗಿ ನೀಡಿರುವ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೩. ಪೂಜಾರಿ ನಿಂಗಪ್ಪ

ಕರಪಾಲ ಮೇಳದ ಅತಿ ಉತ್ಕೃಷ್ಟ ಕಲಾವಿದರಾಗಿದ್ದ ಕರಪಾಲ ಸಿದ್ಧಯ್ಯನವರ ಶಿಷ್ಯರಾಗಿ ಅನುಭವಿಗಳಾದವರು ಶ್ರೀ ಪೂಜಾರಿ ನಿಂಗಪ್ಪ ಅವರು. ಕಾಡಸಿದ್ಧಮ್ಮನ ಕಥೆ, ಸತ್ಯಭೋಜರಾಜ, ನೀಲಕಂಠ, ರೂಪವತಿ ಕಲ್ಯಾಣ ಮೊದಲಾದ ಕಥೆಗಳನ್ನು ಜನರೆದುರು ನಿರೂಪಿಸಿ ನಿರ್ಮಿಸಬಲ್ಲ ಕಲಾವಿದರು ಇವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೪. ನಾಗೇಶ ದೇವು ಆಗೇರ

ದೇವರು ಕುಣಿಯುವಾಗ ನುಡಿಸುವ ಪಂಚವಾದ್ಯ ಮೇಳದ ಹಿರಿಯ ಶ್ರೇಷ್ಠ ಅನುಭವಿ ಕಲಾವಿದರು. ಉತ್ತರ ಕನ್ನಡ ಜಿಲ್ಲೆ ಅಂಕೋಲ ತಾಲ್ಲೂಕು ಬಾಸ್ಗೋಡುವಿನ ಶ್ರೀ ನಾಗೇಶ ದೇವು ಆಗೇರ ಅವರು, ಮನೆತನದ ಈ ಕಲೆಯನ್ನೇ ನೆಚ್ಚಿ ನುಡಿಸುವವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೫. ಎಂ. ಮಲ್ಲಯ್ಯ

ನೋವು ಸಂಕಟಗಳ ಹೇಳಲಾಗದ, ಮಾತಿಲ್ಲದ ಮೂಕಪ್ರಾಣಿಗಳ ಸಂಕಟ ಪರಿಹರಿಸುವ ಪಳಗಿದ ನಾಟಿವೈದ್ಯರು ಶ್ರೀ ಎಂ. ಮಲ್ಲಯ್ಯ ಅವರು. ಇವರಿಗೆ ಕರ್ನಾಟಕ ಜಾನಪದ

ಪರಿಷತ್ತು ತಾ|| ೧೧-೨-೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೭. ವಿಠಲ ಶೇರಿಗಾರ

ಆಚರಣಾತ್ಮಕ ಆರಾಧನೆಯಲ್ಲಿ ದಕ್ಷಿಣ ಕನ್ನಡ ಭಾಗದ ಭೂತಾರಾಧನೆ ವಿಶೇಷವಾದುದು. ಈ ಆರಾಧನೆಯ ದೈವದ ವೇಷಧಾರಿಗಳ ಎಲ್ಲ ಚಂದದ ಹೆಜ್ಜೆಯ ಕುಸುರಿಯ ಹಿಂದೆ ನಾಗಸ್ವರವಾದನ ಲಾಲಿತ್ಯವು ಸಂಚಾರದಲ್ಲಿರುತ್ತದೆ. ಇಂತಹ ನಾಗಸ್ವರದ ಸೊಗಸಿನ ವಾದ್ಯಗಾರರು ಶ್ರೀ ವಿಠಲ ಶೇರಿಗಾರ ಅವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ|| ೧೧-೨-೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೭. ಕಾರಸವಾಡಿ ಪುಟ್ಟೇಗೌಡ

ದಕ್ಷಿಣ ಕರ್ನಾಟಕದ ಜನಪದ ಕಲೆಗಳಲ್ಲಿ ತಂಡಕ್ಕೆ ತಂಡವೇ ಭಾಗವಹಿಸಿ ಕುಣಿವ ಜನಪದ ಕಲೆಗಳಲ್ಲಿ ಅತ್ಯಂತ ಚೆಲುವಿನದು ಪಟದ ಕುಣಿತ. ಬಣ್ಣ ಬಣ್ಣದ ಬಟ್ಟೆಯಜಲ್ಲರಿ ಸುತ್ತಿದ ಬಿದಿರ ಜವಳಿಗಳ ತಮಟೆ ನಗಾರೆಗಳ ಗತ್ತಿಗೆ ಹೆಜ್ಜೆಗಳ ಬೆಡಗಲಿ ಜವಳಿಗಳ ಬಳುಕಿಸಿ ಕಾಕು ಹಾಕಿ ಕುಣಿಯುವುದು ನೋಡುವುದೇ ಚಂದ. ಈ ಕಲೆಯ ಅನುಭವಿ ಕಲೆಗಾರ ಮಂಡ್ಯ ತಾಲ್ಲೂಕು ಕಾರಸವಾಡಿಯ ಶ್ರಿ ಪುಟ್ಟೇಗೌಡರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ|| ೧೧-೨-೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೮. ಡಾ|| ಕೆ. ಆರ್. ಸಂಧ್ಯಾರೆಡ್ಡಿ

ಜಾನಪದ ವಿದ್ವಾಂಸರು, ಕಥೆ, ಕಾವ್ಯಗಳಂತಹ ಸೃಜನಶೀಲ ಬರಹಗಾರರು, ಆದ ಡಾ|| ಸಂಧ್ಯಾರಡ್ಡಿ ಅವರು ಅನುವಾದಕರೂ ಹೌದು. ಫಿನ್ಲೆಂಡಿನ ಜನಪದ ಮಹಾಕಾವ್ಯ 'ಕಲೇವಾಲ'ವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 'ಕನ್ನಡ ಜನಪದ ಕಥಗಳು' ಕುರಿತು ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಜನಪದ ಕಥಗಳ-ವರ್ಗ-ಆಶಯಗಳ ಕುರಿತು ಸಾಕಷ್ಟು ಪರಿಶ್ರಮಿಸಿರುವ ಶ್ರೀಮತಿ ಸಂಧ್ಯಾರೆಡ್ಡಿ ಅವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ|| ೧೧-೨-೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೬೯. ಸಕ್ರೆವ್ವ ಪಾತ್ರೋಟ

ಶ್ರೀಕೃಷ್ಣಪಾರಿಜಾತ ಜನಪದ ರಂಗಭೂಮಿಯ ಒಂದು ಸುಂದರರೂಪ. ಸರಳ ಅಭಿನಯ, ಸರಳ ವೇಷ, ಮಧುರ ಗಾಯನ, ಪಾರಮಾರ್ಥ ಚರ್ಚೆ ಎಲ್ಲವುಗಳ ಹದಗೊಂಡ ರಂಗಶೈಲಿ

ಪಾರಿಜಾತದ್ದು. ಈ ಕಲೆಯ ಅತ್ಯುತ್ತಮ ಕಲಾವಿದೆ ಶ್ರೀಮತಿ ಸಕ್ರೆವ್ವ ಪಾತ್ರೋಟ ಅವರು. ರಾಧಾನಾಟ, ಸಂಗ್ಯಾಬಾಳ್ಯಗಳು, ನಾಟಕಗಳ ಅಭಿನಯದಲ್ಲೂ ಹೆಸರಾದವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೭೦. ಸರಸ್ವತಿ ಶ್ರೀಪತಿ ಹೆಗಡೆ

ಅತ್ಯುತ್ತಮ ಪಾಕ ಪ್ರವೀಣರು ಶ್ರೀಮತಿ ಸರಸ್ವತಿ ಹೆಗಡೆ ಅವರು. 'ತೋಡೆದೇವು' ಖಾದ್ಯ ಇವರು ತಯಾರಿಸುವ ಖಾದ್ಯಗಳಲ್ಲಿ ಅತ್ಯಂತ ವಿಶೇಷವಾದುದು. ಉತ್ತರ ಕನ್ನಡ ಭಾಗದ ವಿವಿಧ ಅಡುಗೆಗಳನ್ನು ತಯಾರಿಸುವ ಪಾಕಪ್ರತಿಭೆ. ಇವರಿಗೆ ಶ್ರೀ ಎಸ್. ರಾಮೇಗೌಡ ಅವರು ನೀಡಿರುವ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೭೧. ಲಕ್ಷ್ಮಮ್ಮ

ಈರೋಬಿ, ಚಲುವರಾಯಸ್ವಾಮಿ, ನಂಜುಂಡೇಶ್ವರ ಮೊದಲಾದ ಕಾವ್ಯಗಳು ಹಾಗೂ ಕುಟ್ಟುವ ಬೀಸುವ ಪದಗಳನ್ನು ಹಾಡಬಲ್ಲ ಹಿರಿಯ ಹಾಡುಗಾರ್ತಿ ತುಮಕೂರು ಜಿಲ್ಲೆ ಯಡಿಯೂರು ಹೋಬಳಿ ಮಾಗಡಿಪಾಳ್ಯದ ಶ್ರೀಮತಿ ಲಕ್ಷ್ಮಮ್ಮ ಅವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾ.ಗಿದೆ.

## ೧೭೨. ಪುಟ್ಟನಂಜಮ್ಮ

ತಾಯಿ–ತವರು, ಅಣ್ಣ–ತಂಗಿಯರ ಬಾಂಧವ್ಯದ ಭಾವಗಳನ್ನು ಬಿಂಬಿಸಿ ಹಾಡಬಲ್ಲ ಹಾಡುಗಾರರು ದೊಂಬಿದಾಸರ ಹೆಂಗಸರು. ಮಧುರ ದನಿಬನಿಯ ಮೂಲಕ ಹಾಡುವ ಹಾಡುಗಾರರು ಶ್ರೀಮತಿ ಪುಟ್ಟನಂಜಮ್ಮ ಅವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೭೩. ವಿಶೇಷ ಪುರಸ್ಕಾರ : ಬಸವರಾಜ ಹೊಸಮನಿ

ಕೃಷ್ಣಪಾರಿಜಾತದಲ್ಲಿ 'ದೂತಿಪಾತ್ರ' ವಿಭಿನ್ನವಾದುದು. ಈ ಪಾತ್ರದ ವಿಶಿಷ್ಟ ನಟರೂ, ರಂಗಸಂಗಟಿಕರೂ ಆದ ಬಾಗಲಕೋಟೆ ಜಿಲ್ಲೆ ಮುಧೋಳದ ಶ್ರೀ ಬಸವರಾಜ ಹೊಸಮನಿ ಅವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೧–೨–೨೦೦೭ ರಂದು 'ವಿಶೇಷ ಪುರಸ್ಕಾರ'ವನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೭೪. ವಿಶೇಷ ಪುರಸ್ಕಾರ : ಜಿ. ಪಿ. ಜಗದೀಶಪ್ಪ

ವಯಸ್ಸು ಇಳಿದರೆ ಹುರುಪು, ಉತ್ಸಾಯಗಳು ಕುಗ್ಗುತ್ತವೆ ಸಹಜವಾಗಿ, ಇದು ದೊಡ್ಡಬಳ್ಳಾಪುರದಶ್ರೀ ಜಿ. ಪಿ. ಜಗದೀಶಪ್ಪ ಅವರಿಗೆ ಅನ್ವಯಿಸದು. ೭೫ ದಾಟಿದರೂ ಅದೇ ಪುಟಿವ ಉತ್ಸಾಹ. ಇವ್ರುರ ಗಾಳಿಪಟ ತಯಾರಿಕೆಯ ಅದ್ವೀತಿಯ ಕುಶಲಿ. ಮೂಡಲಪಾಯ ಯಕ್ಷಗಾನದ ನಟರೂ ಹೌದು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ|| ೧೧–೨–೨೦೦೭ ರಂದು 'ವಿಶೇಷ ಪುರಸ್ಕಾರ'ವನ್ನು ತುಂಬು ಗೌರವದಿಂದ ನೀಡಲಾಗಿದೆ.

## ೧೭೫. ವಿಶೇಷ ಪುರಸ್ಕಾರ : ಶ್ರೀ ವೆಂಕಟಾಚಲಪತಿ

ಶ್ರೀ ವೆಂಕಟಾಚಲಪತಿ ಅವರು ನಾಡಿನ ಪ್ರಸಿದ್ಧ ಶಿಲ್ಪಿಗಳಲಿ ಒಬ್ಬರು. ಅವರಿಂದ ಆಕಾರ ಪಡೆದ ಶಿಲ್ಪಗಳು ಸಾಕಷ್ಟಿವೆ. ಕರ್ನಾಟಕದ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರೂ ಆದ ಇವರು ಜಾನಪದ ಲೋಕದ ಸಂಸ್ಥಾಪಕರಾದ ಶ್ರೀ ಎಚ್. ಎಲ್. ನಾಗೇಗೌಡ ಆಳೆತ್ತರದ ಲೋಹದ ಮೂರ್ತಿಯನ್ನು ನಿರ್ಮಿಸಿದವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ|| ೧೧–೨–೨೦೦೭ ರಂದು 'ವಿಶೇಷ ಪುರಸ್ಕಾರ'ವನ್ನು ತುಂಬು ಗೌರವದಿಂದ ನೀಡಲಾಗಿದೆ.

ಪರಿಚಯ : **ಡಾ. ಕುರುವ ಬಸವರಾಜ್**

## ಪ್ರಶಸ್ತಿ ಪುರಸ್ಕೃತರು – ೨೦೦೮

### ೧೭೬. ಬೆಳಗಲ್ಲು ವೀರಣ್ಣ

ಸಾಂಪ್ರದಾಯಿಕ ತೊಗಲುಗೊಂಬೆ ಆಟಕ್ಕೆ ಹೊಸ ತಿರುವು, ಭಿನ್ನದಿಕ್ಕು ತೆರೆದವರು ಶ್ರೀ ಬೆಳಗಲ್ಲು ವೀರಣ್ಣ ಅವರು. ಗೊಂಬೆರಾಮರ ಪಂಗಡಕ್ಕೆ ಸೇರಿದವರಾದರೂ ಅವರಿಂದ ದೂರವಿದ್ದು, ಮತ್ತೆ ಅದೇ ಕಲೆಯನ್ನು ತಬ್ಬಿ, ಹೊಸ ಪರಿಷ್ಕಾರಗಳಿಗೆ ಅದನ್ನು ಒಡ್ಡಿ, ಆ ಮೂಲಕವೇ ತೊಗಲು ಗೊಂಬೆಯಾಟದ ಕಲೆಯನ್ನು ಬೆಳೆಸಿ, ತಾವೂ ಬೆಳೆದು ಹೆಸರಾದವರು. ಕಂಪನಿ ನಾಟಕಗಳ ಕಲಾವಿದರಾಗಿ, ಗಾಯಕರಾಗಿ ದುಡಿದು ಸ್ವಂತ ಕಂಪನಿ ಕಟ್ಟಿದವರು. ಈ ಎಲ್ಲಾ ಅನುಭವಗಳ ಹಿನ್ನೆಲೆಯಲ್ಲಿ ಗೊಂಬೆಆಟದ ಕಲೆಗೆ ಅಡಿಯಿಟ್ಟರು. 'ಭಾರತ ಸ್ವಾತಂತ್ರ್ಯ ಸಂಗ್ರಾಮ', 'ಬಾಪು', 'ಪ್ರವಾದಿ ಬಸವೇಶ್ವರ', 'ಕಿತ್ತೂರು ಚೆನ್ನಮ್ಮ' ಮೊದಲಾದ ಐತಿಹಾಸಿಕ ಪ್ರಸಂಗಗಳನ್ನು ರೂಪಿಸಿ, ಗೊಂಬೆಗಳನ್ನು ಸಿದ್ಧಗೊಳಿಸಿ, ಪ್ರದರ್ಶಿಸಿ ಜನಮನ ಸೆಳೆದವರು. ಇವರಿಗೆ ೧೯೯೧ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ೧೯೯೨ ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಸಂದಿವೆ. ಈ  ಹಿರಿಯರಿಗೆ ಶ್ರೀಮತಿ ಶೀಲಾಗೌಡ ಮತ್ತು ಕ್ರಿಸ್ಟಾಫ್ ಸ್ಟಾರ್ಟ್ಸ್‌ರವರು ನೀಡಿದ ದತ್ತಿನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ನಾಡೋಜ ಶ್ರೀ ಎಚ್. ಎಲ್. ನಾಗೇಗೌಡ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

### ೧೭೭. ಪೀಹಳ್ಳಿ ಪುಟ್ಟಸಿದ್ಧಮ್ಮ

ಜನಪದ ಹಾಡುಗಳನ್ನು ಹಾಡುವ ಹೆಂಗಸರಿಗೆ ಹಾಡೆಂಬುದು ಮನಸ್ಸು ತೆರೆದಿಡುವ ದನಿ, ಶಾಸ್ತ್ರ ನಡೆಸುವ ದಾರಿ, ದೈವ ನೆನಕೆಯ ಭಾವ, ದುಡಿಮೆಯ ಆಯಾಸ ಮರೆಸುವ ಪರಿ. ಇಂತಹ ಹಾಡಿನ ಸಂಪತ್ತಿನ ಒಡತಿ ಶ್ರೀಮತಿ ಪುಟ್ಟಸಿದ್ಧಮ್ಮ.

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಪೀಹಳ್ಳಿ ಗ್ರಾಮದ ಶ್ರೀಮತಿ ಪುಟ್ಟಸಿದ್ಧಮ್ಮ ಅವರು ಹಾಡುವ ನಾಟಿಪದ, ಸೋಬಾನೆ ಹಾಡುಗಳು ಒಂದೇ ಎರಡೇ. ಶಾಸ್ತ್ರದ ನೀರು ತರುವಾಗ, ಶಾಸ್ತ್ರದ ಭತ್ತ ಕುಟ್ಟುವಾಗ, ಕಳಸ ಪೂಜೆ, ಗಂಗೆ ಪೂಜೆ, ವೀಳ್ಯೆಯ ಶಾಸ್ತ್ರ, ಅರಿಸಿಣ ಎಣ್ಣೆಯ ಶಾಸ್ತ್ರ, ಹಸೆ, ಮಜ್ಜಣ, ಸೇಸೆ ಹಾಕುವಾಗ, ಮಡಿಲು ತುಂಬುವಾಗ, ಧಾರೆ ಎರೆಯುವಾಗ–ಹೀಗೆ ಹಾಡಿನ ಧಾರೆ ಹರಿಯುತ್ತದೆ. ಜೋಗಿ ಹಾಡು, ಪಿರಿಯಾಪಟ್ಟಣದ ಜಗಳ ಮೊದಲಾದ ಕಥನ ಗೀತೆಗಳನ್ನು ಹಾಡುತ್ತಾರೆ. ಪುಟ್ಟಸಿದ್ಧಮ್ಮ ಹಾಡಿರುವ 'ಪಿರಿಯಾಪಟ್ಟಣದ ಜಗಳ' ದೀರ್ಘ ಕಾವ್ಯವನ್ನು ಪ್ರೊ. ಡಿ. ಲಿಂಗಯ್ಯನವರು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ್ದಾರೆ. ಹೀಗೆ ಒಡಲ ತುಂಬೆಲ್ಲಾ ಹಾಡುಗಳನ್ನೇ ತುಂಬಿಕೊಂಡಿರುವ ಶ್ರೀಮತಿ ಪುಟ್ಟಸಿದ್ಧಮ್ಮ ಅವರಿಗೆ ಬೆಂಗಳೂರಿನ ಶ್ರೀಮತಿ ಶಾಂತಮ್ಮ ಚೆನ್ನಸ್ವಾಮಿ ಅವರು ನೀಡಿರುವ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ನಾಡೋಜ ಶ್ರೀ ಎಚ್. ಎಲ್. ನಾಗೇಗೌಡ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ. (ಪುಟ್ಟಸಿದ್ಧಮ್ಮ ೨೦೦೯ ರಲ್ಲಿ ನಿಧನರಾದರು).

## ೧೭೮. ಚಿಕ್ಕಾಡೆ ಹೊನ್ನಮ್ಮ

ಎಷ್ಟೇ ಸಂಪ್ರದಾಯನಿಷ್ಠವಾದರೂ ಜನಪದ ಹಾಡುಗಳು ಹಾಡುಗಾರರೊಂದಿಗೆ ತನ್ನೊಳಗೆ ತಾನು ಕೊಂಚ ಕೊಂಚಾವಾದರೂ ಕಾಲದೊಂದಿಗೆ ಬೆರಯುತ್ತಲೇ ಸಾಗುತ್ತವೆ. ಜಪಾನ್ ನಾಟಿ ಪದ್ಧತಿ ಮೊದಲು ನಮ್ಮ ನಾಡಿಗೆ ಬಾಂದಾಗ ನಾಟಿ ನೆಡುವ ಹೆಂಗಸರು ಆ ನಾಟಿಯನ್ನು ತಮ್ಮ ಹಾಡಿಗೆ ತಂದುಕೊಂಡರು. 'ಹಾರುಗಲ್ಲಲಿ ಜಾರುಗಲ್ಲಲಿ ಬಂದನು ಮಾದೇವ, ಜಪಾನ್ ನಾಟಿ ಓಪನ್ ಆಯ್ತು ಮಲೆಯ ಮಾದೇವ' ಎಂದು ಪಲ್ಲವಿಯಾಗಿಸಿಕೊಂಡರು. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು, ಚಿಕ್ಕಾಡೆಯ ಹೊನ್ನಮ್ಮ ಇಂತೆಲ್ಲ ಹಾಡುಗಳನ್ನು ಹಾಡಿದ ಕಣಜ, ತುಂಬಿದ ಕನ್ನಂಬಾಡಿ. ಕುಟ್ಟುವ, ಬೀಸುವ, ಶಾಸ್ತ್ರದ ಪದ, ನಾಟಿಪದ, ದೇವರ ಪದ ಹೀಗೆ ಅವರು ಹಾಡುವ ಹಾಡಿನ ಪಟ್ಟಿ ಉದ್ದವಾದುದು. ತುಂಬು ಜೀವನ ಕಂಡಿರುವ ಚಿಕ್ಕಾಡೆ ಹೊನ್ನಮ್ಮನವರಿಗೆ ಶ್ರೀ ಎಚ್. ಎಲ್. ನಾಗೇಗೌಡ ಅವರು ತಮ್ಮ ಅಜ್ಜಿಯಂದಿರು, ತಂದೆ-ತಾಯಿ ಮತ್ತು ದೊಡ್ಡಮನೆ ಕುಟುಂಬದವರ ಹೆಸರಿನಲ್ಲಿ ನೀಡಿರುವ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೨-೨೦೦೮ ರಂದು 'ಸೋಬಾನೆ ಚಿಕ್ಕಮ್ಮ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೭೯. ಮೋಳೆ ರಾಚಯ್ಯ

ಜೀಂಗುಡುವ ತಂಬೂರಿಯ ಝೇಂಕಾರ, ದಮ್ಮಡಿ, ತಾಳಗಳ ಮೇಳದೊಂದಿಗೆ 'ಸಿದ್ದಯ್ಯ ಸ್ವಾಮಿ ಬನ್ನಿ' ಎಂದು ಹಾಡತೊಡಗಿದರೆ, ಕೇಳುಗರಲ್ಲಿ ಇರುವಿನ ಭಾವ ಕರಗಿ, ಕಥನದಲ್ಲಿ ಲೀನವಾಗಿಸುವ, ಕಥನ ಕೌಶಲ್ಯದ ಕಲಾವಿರು, ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲದ ಶ್ರೀ ಮೋಳೆ ರಾಚಯ್ಯ ಅವರು. ನೀಲಗಾರರ ಪರಂಪರೆಯ ಶ್ರೇಷ್ಠ ಗಾಯಕರಾದ ಕಾರಾಪುರದ ಪುಟ್ಟಮಾದಯ್ಯನವರ ಶಿಷ್ಯರಾಗಿ, ಸುದೀರ್ಘ ಕಥನಗಳನ್ನು ಹಾಡುವ ಗಾಯಕರಾಗಿ ಹೆಸರಾದವರು. ಇವರು ಹಾಡಿದ ಮಂಟೆಸಾಮಿ ಕಾವ್ಯ ಕನ್ನಡ ವಿಶ್ವವಿದ್ಯಾಲಯ ಹಂಪೆ ಇಲ್ಲಿಂದ ಪ್ರಕಟವಾಗಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯು ಸಂದಿರುವ ಇವರಿಗೆ, ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೨-೨೦೦೮ ರಂದು 'ದೊಡ್ಡ ಮನೆ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೦. ಚನ್ನರಾಯಪ್ಪ

ರಾಮನಗರ ಜಿಲ್ಲೆ ಮಾಗಡಿಯ ಮಠದಪಾಳ್ಯದ ಶ್ರೀ ಚನ್ನರಾಯಪ್ಪ ಅವರು ಚಂದ್ರಯ್ಯ ಮೇಷ್ಟ್ರು ಎಂದೇ ಪ್ರಸಿದ್ಧಿ. ಮೂಡಲಪಾಯ ಯಕ್ಷಗಾನದ ಆಂಜನೇಯ, ಜಾಂಬವ ಮತ್ತಿತರ ಪಾತ್ರಗಳನ್ನು ಅಭಿನಯಿಸುವುದರಲ್ಲಿ ಸುತ್ತಿನ ಸೀಮೆಯಲ್ಲಿ ಹೆಸರಾದವರು. ಗಮಕಿಯಾಗಿಯೂ ಸಾಕಷ್ಟು ಸೇವೆ ಸಲ್ಲಿಸಿದವರು. ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೨-೨೦೦೮ ರಂದು 'ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೧. ಭೀಮಪ್ಪ ಧರೆಪ್ಪ ದಾನಗೌಡ

ಸಾವಿರ ಹಾಡಿನ ಸರದಾರರು ಶ್ರೀ ಭೀಮಪ್ಪ ಧರೆಪ್ಪ ದಾನಗೌಡ ಅವರು. ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ಚಿಕ್ಕಪಡಸಲಗಿಯವರು. ಕಳೆದ ೫೫ ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತಿದ್ದಾರೆ. ತಮ್ಮ ೧೦ನೇ ವಯಸ್ಸಿಗೆ ಹಾಡಲು ಆರಂಭಿಸಿದವರು ಇವರು. ಬೀರೇದೇವರ ಹಾಡು, ಮಾಳಿಂಗರಾಯನ ಹಾಡುಗಳನ್ನು ಹಾಡುತ್ತಾರೆ. ನಾಡಿನ ಬೇರೆ ಬೇರೆ ಭಾಗಗಳಷ್ಟೇ ಅಲ್ಲದೆ ಮಹಾರಾಷ್ಟ್ರದ ಹಲವಾರು ಕಡೆಗಳಲ್ಲೂ ಹಾಡಿದ್ದಾರೆ. ಇಂತಹ ಹಾಡಿನ ಸರದಾರರಿಗೆ ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೨. ಮಲಕವ್ವ ಗುರುಮೂರ್ತಿ

ಸೀಮಂತದ ಹಾಡು, ತೊಟ್ಟಿಲು ತೂಗುವ ಹಾಡು, ಮದುವೆಯ ಹಾಡು, ಕುಟ್ಟುವ-ಬೀಸುವ ಹಾಡು, ಗುಳ್ಳವ್ವನ ಹಾಡು, ಭಜನೆ ಹಾಡುಗಳು, ಅನುಭಾವದ ಹಾಡುಗಳು– ಹೀಗೆ ಜನಪದ ಹಾಡುಗಳ ಭಂಡಾರ ಶ್ರೀಮತಿ ಮಲಕವ್ವ ಗುರುಮೂರ್ತಿ ಮಠಪತಿ ಅವರು. ವಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಸಾಲೋಟಗಿಯ ೬೨ ವರ್ಷದ ಈ ಹಿರಿಯರು ಒಡಲಲ್ಲಿ ಒಗಟುಗಳನ್ನು ತುಂಬಿಕೊಂಡಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೩. ಡಾ॥ ವೇಮಗಲ್ ಡಿ. ನಾರಾಯಣಸ್ವಾಮಿ

ಜನಪದ ಹಾಡಗಳ ದನಿಬನಿಯ ಸೊಗಡನ್ನು, ಸೊಗಸನ್ನು ಹಿಡಿದು ಹಾಡುವ ಹೊಸ ಪರಂಪರೆಯ ಹಾಡುಗಾರರಲ್ಲಿ ಅತ್ಯಂತ ಪ್ರಮುಖರು ಡಾ॥ ವೇಮಗಲ್ ಡಿ. ನಾರಾಯಣಸ್ವಾಮಿಯವರು. ಕರ್ನಾಟಕ ಸರ್ಕಾರದ ಪೊಲೀಸ್ ಇಲಾಖೆಯಲ್ಲಿ ಸಹಾಯಕ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಸರಳ ಸಜ್ಜನಿಕೆಯವರೂ ಆಗಿದ್ದಾರೆ. ಇವರು ಹಾಡುವ ಹಾಡುಗಳು ಮತ್ತೆ ಮತ್ತೆ ಕೇಳಬೇಕೆನಿಸುವಂಥವು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿದ್ದರು. ಅಕಾಡೆಮಿಯ ಪ್ರಶಸ್ತಿಗೂ ಪಾತ್ರರಾದವರು. ಪೋಲೀಸ್ ಇಲಾಖೆಯಲ್ಲಿನ ಉತ್ತಮ ಸೇವೆಗಾಗಿ ೧೯೮೮ರ ಬೆಳ್ಳಿ ಪದಕ; ೧೯೯೬ ರಲ್ಲಿ ಚಿನ್ನದ ಪದಕ, ೨೦೦೮ ಭಾರತ ಸರ್ಕಾರದ 'ರಾಷ್ಟ್ರಪತಿಗಳ ಪದಕ' ಇವರಿಗೆ ದೊರೆತಿವೆ. ಅಮೇರಿಕಾದ 'ಅಕ್ಕ' ಸಂಸ್ಥೆಯ ಆಹ್ವಾನದ ಮೇರೆಗೆ ತಮ್ಮ ದನಿಯ ಚೆಲುವನ್ನು ಅಲ್ಲೆಲ್ಲಾ ಪಸರಿಸಿ ಬಂದವರು. ಇವರಿಗೆ 'ಕೇಳಿಕೆ' ಕುರಿತು ನಡೆಸಿದ ಸಂಶೋಧನ ಪ್ರಬಂಧಕ್ಕೆ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಇಂತಹ ಮಹನೀಯರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೪. ಹಾರನಹಳ್ಳಿ ಚಲುವಯ್ಯ

ಜನಪದ ವಾದ್ಯಮೇಳಗಳಲ್ಲಿ ಕರಡೆ ಮಜಲು ಮತ್ತು ಚಿಟ್‌ಮೇಳ ಅತ್ಯಂತ ವಿಶಿಷ್ಟವಾದವು. ಕರಡೆ ಮಜಲು ಉತ್ತರ ಕರ್ನಾಟಕದ ಮುಖ್ಯ ಮೇಳವಾದರೆ, ಚಿಟ್‌ಮೇಳ ದಕ್ಷಿಣ ಕರ್ನಾಟಕದ ಮುಖ್ಯ ಮೇಳ. ಮೌರಿ, ಕರಡೆ, ದಿಮ್ಮಿಗಳ ಚಿಟ್‌ಮೇಳದ ನಾದ ಕಿವಿಗೆ ಹಿತಾನಂದ ತುಂಬುವಂತಹುದು. ಇಂತಹ ಚಿಟ್‌ಮೇಳಗಳಲ್ಲಿಯೇ ನಾಡಿನಲ್ಲೇ ಹೆಸರಾದ ಕಲಾವಿದರು. ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು, ಹಾರನಹಳ್ಳಿಯ ಶ್ರೀ ಚಲುವಯ್ಯ ಅವರು ನಾದ ಸೊಗಸನ್ನು ಹೊಮ್ಮಿಸುತ್ತಲೇ ಕುಣಿವ ಅವರ ಕುಣಿತವೂ ಚೆಂದ. ಅತ್ಯಂತ ಶ್ರೇಷ್ಠ ತಂಡವಾಗಿ ಬಹಳ ಕಾಲದಿಂದಲೂ ಕಾಯ್ದುಕೊಂಡಿರುವ ಅನುಭವ ಕಲೆಗಾರರಾದ ಶ್ರೀ ಚೆಲುವಯ್ಯ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ|| ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೫. ಕೆ. ಇ. ಇಂಗಳಪ್ಪ

ಕೊಡವರ ಜನಪದ ಕುಣಿತಗಳ ನಾಡಿನ ಇತರ ಸೀಮೆಯ ಕುಣಿತಗಳಿಗಿಂತ ವಿಭಿನ್ನ. ಕೋಲಾಟ, ಪೀಲಿಯಾಟ್, ಕೊಂಬಾಟ್, ಬೋಳುಕಾಟ್, ಉಮ್ಮತ್ತಾಟ್ ಹೀಗೆ ಒಂದೊಂದು ಕಲೆಯೂ ಒಂದೊಂದು ಬಗೆ. ಕೊಡವ ಭಾಷೆಯಲ್ಲಿ 'ಬೊಳಕ್' ಎಂದರೆ ದೀಪ ಎಂದರ್ಥ. ಮಧ್ಯೆ ಇರಿಸಿದ ದೀಪದ ಸುತ್ತ, ತಮ್ಮ ಸಾಂಪ್ರದಾಯಿಕ ವೇಷದೊಂದಿಗೆ, ಕೊಡವರು ಕೈಗಳಲ್ಲಿ ಹೊಡೆಗತ್ತಿ, ಚವರಿಗಳನ್ನು ಹಿಡಿದು ಕುಣಿಯುವ ಕುಣಿತ ಬೊಳಕಾಟ್. ಇಂತಹ ಕುಣಿತದ ವಿಶಿಷ್ಟ ಕಲಾವಿದರು ಕೊಡಗಿನ ಶ್ರೀ ಕೆ. ಇ. ಪಳಂಗಪ್ಪ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ|| ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೬. ಐರೋಡಿ ಗೋವಿಂದಪ್ಪ

ಅಚ್ಚುಕಟ್ಟಾದ ಆಕರ್ಷಕ ವೇಷ, ಭಾವ ಚಿಮ್ಮಿಸುವ ಗಾಂಭೀರ್ಯ ತುಂಬಿದ ಅಭಿನಯ, ಕಣ್ ಸೆಳೆವ ಲಯಬದ್ಧ ಕುಣಿತ, ಪ್ರತಿಭೆ–ಪಾಂಡಿತ್ಯ ತುಂಬಿದ ಚತುರ ಮಾತುಗಾರಿಕೆಯಿಂದ ನಾಲ್ಕು ದಶಕಗಳ ಕಾಲ ರಂಗದ ಮೇಲೆ ವಿಜೃಂಭಿಸಿ ಜನಮನ ಸೂರೆಗೊಂಡವರು ಶ್ರೀ ಐರೋಡಿ ಗೋವಿಂದಪ್ಪ ಅವರು. ಉಡುಪಿ ಜಿಲ್ಲೆ ಐರೋಡಿಯವರಾದ ಇವರು ಬಡಗುತಿಟ್ಟು ಯಕ್ಷಗಾನದ ಬಾಲಗೋಪಾಲ ಕೋಡಂಗಿಯಿಂದ ಹಿಡಿದು ಅರ್ಜುನ, ಕರ್ಣ, ಯಯಾತಿ, ಭೀಮ, ಭೀಷ್ಮ, ಹಿರಣ್ಯಕಶ್ಯಪು – ಹೀಗೆ ವೈವಿಧ್ಯಮಯ ಪಾತ್ರಗಳನ್ನು ಪ್ರವೇಶಿಸಿ ಪರಿಪೂರ್ಣ ಕಲಾವಿದರಾಗಿ ಜನರ ಮನಸ್ಸಿನಲ್ಲಿ ನಿಂತಿದ್ದಾರೆ. ಇವರಿಗೆ ೨೦೦೩–೦೪ರ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಇಂತಹ ಮಹನೀಯರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ|| ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೭. ನಾಗರಾಜು ಫಕೀರಪ್ಪ ಕುಂಬಾರ

ಜನಪದ ವಾದ್ಯ ಮೇಳಗಳಲ್ಲಿ ಕರಡೆ ಮಜಲು, ಜಗ್ಗಲಗೆ ಮೇಳಗಳು ವಿಶಿಷ್ಟವಾದವು. ಅಭಿಜಾತ ಸಂಗೀತದ ಗುಣ, ಜನಪದ ಸಂಗೀತದ ಚೆಲುವು ತುಂಬಿದ ಮೇಳಗಳಿವು. ಇಂತಹ ಕಲೆಯ ಅನುಭವಿ ಕಲಾವಿದರು ಶ್ರೀ ನಾಗರಾಜು ಫಕೀರಪ್ಪ ಕುಂಬಾರ ಅವರು. ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕು, ಸುಳ್ಳ ಗ್ರಾಮದ ೫೯ ವರ್ಷದ ಇವರು ಜಗ್ಗಲಿಗೆ ಕರಡೆ ಮಜಲು ಮೇಳಗಳ ಮುಖ್ಯ ವಾದ್ಯಗಳಾದ ಕಣಿ ವಾದ್ಯ ಮತ್ತು ತಾಳ ವಾದ್ಯಗಳ ನುಡಿಸುವಿಕೆಯ ಕೌಶಲ್ಯಪೂರ್ಣ ಕಲೆಗಾರರು. ತಬಲ ನುಡಿಸುವುದರಲ್ಲು ಪಳಗಿದವರು. ಇವರಿಗೆ ಬೆಂಗಳೂರಿನ ಶ್ರೀ ಎಂ. ಕೃಷ್ಣಪ್ಪ ಅವರು ತಮ್ಮ ತಂದೆ ಮುನಿಸ್ವಾಮಪ್ಪ ಹಾಗೂ ತಾಯಿ ರಂಗಮ್ಮನವರ ನೆನಪಿಗಾಗಿ ನೀಡಿದ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೮. ನೀಲಪ್ಪ ಫಕ್ಕೀರಪ್ಪ ನೇಸರಗಿ

ಆಡಂಬರವಿಲ್ಲದ ವೇಷಭೂಷಣ, ಅದ್ಭುತವಾದ ಸಂಗೀತದ ಚೆಲುವು, ಎಲ್ಲಾ ವರ್ಗದ ಜನಸಮುದಾಯವನ್ನು ಸೆಳೆಯಬಲ್ಲ ಛಾತಿ ತುಂಬಿದ ಜನಪದ ರಂಗಭೂಮಿ ವಿಶಿಷ್ಟ ರೂಪ ಸಣ್ಣಾಟಗಳದ್ದು. ಇದರಲ್ಲಿ ಶ್ರೀ ಕೃಷ್ಣಪಾರಿಜಾತದ ರೂಪವಂತು ವಿಶೇಷವಾದುದು. ಇಂತಹ ಪಾರಿಜಾತದ ಉತ್ಕೃಷ್ಟ ನಟರು, ಹಾಡುಗಾರರು, ಶ್ರೀ ನೀಲಪ್ಪ ಫಕೀರಪ್ಪ ನೇಸರಗಿ ಅವರು. ಪಾರಿಜಾತದ ನಟರಾಗಿ, ತಂಡ ಕಟ್ಟಿ ವೃತ್ತಿ ಮೇಳವಾಗಿ ದುಡಿದಿರುವುದಲ್ಲದೆ ಪಾರಿಜಾತದ ಮಾಸ್ತರರಾಗಿ ಸಾಕಷ್ಟು ಜನರಿಗೆ ತರಬೇತಿ ನೀಡಿದವರಾಗಿರುತ್ತಾರೆ. ಒಳ್ಳೆಯ ಭಜನೆಯ ಹಾಡುಗಾರರು ಹೌದು. ಇಂತಹ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೮೯. ಪುಟ್ಟಿರಿ ಬಡಿಯಾಗೊಂಡ

ಜಡ್ಜಣಿ ಜಡ್ಜಣಿ ಜಡ್ಜಣಿ ಜಡ್ಜಣಿ ಚಕಚಕನೆ ಚಲಿಸುವ ಗತ್ತುಗಳ ನಡೆ, ಗುಮಟೆ, ಜಾಗಟೆ ವಾದ್ಯಗಳ ಗತ್ತಿಗೆ ಸುಂದರ ವೇಷದ ಸುಗ್ಗಿ ಕುಣಿತದ ಕಲಾವಿದರು ಕುಣಿಯುವುದನ್ನು ನೋಡುವುದೇ ಚಂದ. ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕು ಯಮಗಂಡಿಯ ಶ್ರೀ ಪುಟ್ಟಿರಿ ಬಡಿಯಾಗೊಂಡ ಅವರು ಸುಗ್ಗಿ ಕುಣಿತ, ಢಕ್ಕೆ ಕುಣಿತಗಳ ಅನುಭವಿ ಕಲಾವಿದರು. ಮದುವೆಯ ಹಾಡು, ರಾಜಮಹಾರಾಜರ ಹಾಡುಗಳನ್ನು ಹಾಡುವುದರಲ್ಲೂ ನಿಷ್ಣಾತರು. ಇಂತಹ ನುರಿತ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೦. ಕ್ವಾಣೆ ಚಿಕ್ಕಮ್ಮ

ಜನಪದ ಗೀತೆಗಳನ್ನು ಹಾಡುವ ಹೆಂಗಸರಿಗೆ ಹಾಡೆಂಬುದೆ ಸುಖ, ಸಂತೋಷ, ಹಾಡು ಕೇಳುವವರಂತೆ ಹಾಡಿದವರಿಗೂ ಆನಂದ ನೀಡುತ್ತದೆ. ತುಮಕೂರು ಜಿಲ್ಲೆ ಮಾಗಡಿ

ಪಾಳ್ಯದ ಶ್ರೀಮತಿ ಚಿಕ್ಕಮ್ಮ ಸೊಗಸಿನ ಹಾಡುಗಾರರು. ದೇವರ ಪದಗಳು, ಸೋಬಾನೆ ಪದಗಳು, ನಾಟಿಪದಗಳು ಹೀಗೆ ತುಂಬಿದ ಹಾಡಿನ ವಾಡೆ ಶ್ರೀಮತಿ ಕ್ವಾಣೆ ಚಿಕ್ಕಮ್ಮ. ಇವರು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಮೂಡಿಪಾಳ್ಯದವರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೨-೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೧. ಗಜಾನನ ಮಂಜುನಾಥ ಭಟ್ಟ

ತಮ್ಮ ಇಪ್ಪತ್ತನೇ ವರ್ಷದಿಂದಲೇ ತಾಳಮದ್ದಲೆ ಮತ್ತು ಅರ್ಥಗಾರಿಕೆಗೆ ತೊಡಗಿದವರು ಈ ಗಜಾನನ ಮಂಜುನಾಥ ಭಟ್ಟ ಅವರು. ವರ್ಷ ೬೯ ಕಳೆದರೂ ತಾಳ ಮದ್ದಲೆಯ ಅರ್ಥಗಾರಿಕೆಯನ್ನು ನಡೆಸಿಕೊಡುವುದರಲ್ಲಿ ಅದೇ ಹುರುಪು. ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕು, ಹೆಗ್ಗರಣೆಯ ಶ್ರೀ ಭಟ್ಟರು ಚಿಟ್ಟಾಣಿ, ಗೋಡೆ ನಾರಾಯಣ ಹೆಗ್ಗಡೆ ಮುಂತಾದವರಿರುವ ವೃತ್ತಿ ಮೇಳಗಳಲ್ಲಿ ವೇಷಕಟ್ಟಿ ಕುಣಿದಿದ್ದಾರೆ. ಭಾಗವಂತಿಕೆಯನ್ನು ನಡೆಸಿಕೊಡಬಲ್ಲರು. ಚಂಡೆ ಮದ್ದಲೆ ವಾದಕರೂ ಹೌದು. ಯಕ್ಷಗಾನದ ಉಳಿವು ಮತ್ತು ಪ್ರಚಾರಕ್ಕಾಗಿ ಸದಾ ದುಡಿಯುವವರು ಶ್ರೀ ಗಜಾನನ ಮಂಜುನಾಥ ಭಟ್ಟರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೨-೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೨. ಶಿವಪುತ್ರಪ್ಪ ಚ. ಶೆಟ್ಟರ

ಕಾಲದ ತೆಕ್ಕೆಗೆ ಹೆಕ್ಕಿ ಒಕ್ಕುವುದಕ್ಕೆ ಕಷ್ಟಕರವಾದುವು ಪುರಾಣಗಳು. ಆದರೇನು ಪುರಾಣದ ಪಾತ್ರಗಳು ಮಾತ್ರ ದಕ್ಕಲೂ ತೊಡಕಿಲ್ಲ. ಮೂಲದ ಆಕ್ರೋಶ ಆರ್ಭಟಗಳನ್ನು ಇನ್ನು ತಮ್ಮ ಕಣ್ಣಮುಂದೆ ತೆರೆದುಕೊಳ್ಳುತ್ತವೆ, ಕಲೆಗಳ ಮೂಲಕ. ಪುರವಂತಿಕೆ ಅಂತಹ ಒಂದು ಕಲೆ. ಈ ಕಲೆಯಲ್ಲಿ ಪುರಾಣದ ವೀರಭದ್ರನ ದಕ್ಷಯಜ್ಞದ ಘಟನೆಯು ಪುನರ್ ಚಿತ್ರಣಗೊಳ್ಳುತ್ತದೆ. ನಮ್ಮ ಕಣ್ಮುಂದೆ ಶ್ರೀ ಶಿವಪುತ್ರಪ್ಪ ಚ. ಶೆಟ್ಟರ ಈ ಕಲೆಯ ಅತ್ಯುತ್ತಮ ಕಲಾವಿದರು. ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕು ಅರಳೇಶ್ವರ ಗ್ರಾಮದ ೬೦ ವರ್ಷದ ಈ ಹಿರಿಯರು ಖಡ್ಗ ಹಿಡಿದು, ಸಮ್ಮಾಳ, ದಿಮ್ಮು, ಕರಡೆ ವಾದ್ಯಗಳ ಗುತ್ತಿಗೆ ಹೆಜ್ಜೆಯಿಟ್ಟು ಕುಣಿದರೆ ವೀರಭದ್ರನ ಕಥನ ಕಣ್ಣಿಗೆ ಕಟ್ಟುತ್ತದೆ. ಇಂತಹ ಅನುಭವದ ಗಣಿಯಾದ ಶ್ರೀ ಶಿವಪುತ್ರಪ್ಪ ಚ. ಶೆಟ್ಟರ ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೨-೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೩. ಎಂ. ಮರಿಮಾದಯ್ಯ

ಬೇವಿನಹಟ್ಟಿ ಕಾಳಮ್ಮ, ಇಕ್ಕೇರಿ ದೇವಮ್ಮ, ಸಂಕಮ್ಮ, ಸರಗೂರು ಮೂಗಪ್ಪ ಹಾಲಂಬಾಡಿ ಜುಂಜೇಗೌಡ ಮೊದಲಾದ ಮಲೆಮಹದೇಶ್ವರ ಮಹಾಕಥನದ ಕಥೆಗಳು, ಮೈದಾಳು ರಾಮ,

ಚೆನ್ನಿಗರಾಮ, ಲಿಂಗರಾಜಮ್ಮ, ಹೇಮರೆಡ್ಡಿ ಮಲ್ಲಮ್ಮ, ಬಂಜೆ ಹೊನ್ನಮ್ಮ ಹೀಗೆ ಹಾಡುವ ಕಥನಗಳ ದೊಡ್ಡಪಟ್ಟಿಯನ್ನೇ ಹೊಂದಿದ ಹಾಡಿನ ಸರದಾರರು ಶ್ರೀ ಮರಿಮಾದಯ್ಯ ಅವರು. ಮೈಸೂರಿನಲ್ಲಿ ವಾಸವಿರುವ ಇವರು ಬೀಸುಕಂಸಾಳೆ ಕಲೆಯ ಪ್ರದರ್ಶನದಲ್ಲೂ ಸೈ ಎನಿಸಿಕೊಂಡವರು. ಇಂತಹ ಈ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೪. ಮಂಜವ್ವ ಜೋಗತಿ

'ಎಲ್ಲಿ ಕಾಣೆಲ್ಲಿ ಕಾಣೆ, ಎಲ್ಲಮ್ಮನಂತೋಳೆಲ್ಲಿ ಕಾಣೆಲ್ಲಿ ಕಾಣೆ' ಎಂದು ಚೌಡಿಕೆ ಗುಣಿಚೌಡಿಕೆಗಳ ಗತ್ತಿಗೆ ಹಾಡುತ್ತಾ, ಎಲ್ಲಮ್ಮ ಮುಖ ಹೊಂದಿಸಿದ ತಳಮಳ ಹೊಳೆವ ಹಿತ್ತಾಳೆಯ ತುಂಬಿದ ಕೊಡ ಹೊತ್ತು, ಸೇರೆಯುಟ್ಟು ಕುಣಿವ ಕಲಾವಿದರು ಜೋಗತಿಯರು. ಜಾತ್ರೆ, ಪರಸೆಗಳಲ್ಲಿ ಕುಣಿವ ಈ ಕುಣಿತವೇ ಜೋಗತಿ ಕುಣಿತ. ಜನಪದ ಕುಣಿತಗಳಲ್ಲಿ ಈ ಕಲೆ ತನ್ನದೇ ರೂಪದ್ದು. ಇಂತಹ ಕಲೆಯ ಸೊಗಸಿನ ಕುಣಿತಗಾರರು ಶ್ರೀಮತಿ ಮಂಜವ್ವ ಜೋಗತಿ. ಬಳ್ಳಾರಿ ಜಿಲ್ಲೆ ಮರಿಯಮ್ಮನಹಳ್ಳಿಗೆ ಸಮೀಪದ ಗೊಲ್ಲರಹಟ್ಟಿಯ ಮಂಜವ್ವ ಜೋಗತಿ ಜೀವನವೆಲ್ಲಾ ಈ ಕಲೆಯೊಂದಿಗೆ ಕಳೆದರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೫. ದೊಡ್ಡ ಅಂಕನಹಳ್ಳಿ ಜಯಮ್ಮ

ಸೋಬಾನೆ ಪದಗಳಿಗೆ ತನ್ನದೇ ಮಧುರತೆ, ತನ್ನದೇ ಲಾಲಿತ್ಯ ಇದೆ. ಹಿಂದೆ ಸೋಬಾನೆ ಪದಗಳಿಲ್ಲದೆ ಮದುವೆಗಳು ನಡೆಯುತ್ತಿದ್ದುದು ಕಡಿಮೆ. ಈಗಲೂ ಅಲ್ಲಲ್ಲಿ ಆ ಸಂಪ್ರದಾಯ ಚಲಾವಣೆಯಲ್ಲಿದೆ. ಇಂತಹ ಸೋಬಾನೆ ಪದಗಳನ್ನು ಹಾಡುವ ಅನುಭವಿ ಹಾಡುಗಾರರು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ದೊಡ್ಡಅಂಕನಹಳ್ಳಿಯ ಶ್ರೀಮತಿ ಜಯಮ್ಮ. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೬. ಬ್ರಹ್ಮರ ಕೊಟ್ಲು ಭೋಜ

ನಮ್ಮ ಜಾನಪದ ಬದುಕು ನಾದಮಯ. ಮದುವೆ–ಮುಂಜಿ, ಹುಟ್ಟು–ಸಾವು ಹೀಗೆ ಸಂಭ್ರಮಕ್ಕೂ ನಾದವೇ, ಸಂಕಟಕ್ಕೂ ನಾದವೆ. ಇಂತಹ ನಾದವನ್ನು ಹೊಮ್ಮಿಸುವ ನಾದ ಮೇಳಗಳಲ್ಲಿ ನಾಗಸ್ವರ ಮೇಳವೂ ಒಂದು. ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕು, ಕಳ್ಳಿಗೆ ಗ್ರಾಮದ ಶ್ರೀ ಬ್ರಹ್ಮರ ಕೊಟ್ಲು ಭೋಜ ಅವರದು ತಲೆ–ತಲಾಂತರದಿಂದಲೂ ನಾಗಸ್ವರ ನುಡಿಸುವ ಕಸುಬಿನ ಮನೆತನ. ದೇವರ ಆರಾಧನೆ, ಮದುವೆಗಳೇ ಮೊದಲಾದ ಸಂದರ್ಭಗಳಲ್ಲಿ ನಾಗಸ್ವರ ಮತ್ತು ಬೇಂಡು ವಾದ್ಯಗಳನ್ನು ಯಾರೂ ತಲೆ ತೂಗುವಂತೆ ನುಡಿಸುವುದರಲ್ಲಿ ಶ್ರೀ ಬ್ರಹ್ಮರ ಕೊಟ್ಲು ಭೋಜ ಅವರು ಪ್ರಸಿದ್ಧರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೭. ಅರೆಗಟ್ಟೆ ಹನುಮಂತಪ್ಪ

ಅರೆಗಟ್ಟೆ ಹನುಮಂತಪ್ಪ ಬೆಡಗಿನ ಕಣ್ಣಾಕರ್ಷಣೆಯ ವೇಷಗಳು, ಲಾಲಿತ್ಯಪೂರ್ಣವಾದ ದನಿಧಾಟಿಗಳು, ವೈವಿಧ್ಯಮಯ ಕಥನಗಳು, ಪ್ರದರ್ಶನದ ಶೈಲಿ ಎಲ್ಲವೂ ಚಂದ ಈ ಕಿನ್ನರಿ ಜೋಗಿಗಳದ್ದು . ದಾವಣಗೆರೆ ಜಿಲ್ಲೆಯ ನೇರ್ಲಿಗಿಯ ಶ್ರೀ ಅರಗಟ್ಟೆ ಹನುಮಂತಪ್ಪ ಈ ಕಲೆಯ ಅತ್ಯುತ್ತಮ ಕಲಾವಿದರು. ಹೆಗಲಿಗೆ ಜೋಳಿಗೆ ಹಾಕಿ ಕಿನ್ನರಿ ಮೀಟಿ ಊರೂರು ಮನೆ-ಮನೆಗಳ ಮುಂದೆ ಹಾಡುತ್ತಲೇ ಬಂದಿದ್ದಾರೆ. ಪಾಂಡವರ ಕಥೆ, ಲಕ್ಷಾಪತಿ ರಾಜನ ಕಥೆ, ರಾಜಹಂಸ-ಪರಮಹಂಸ, ಬಾಳ ಭಿಕ್ಷರಾಜ ಹೀಗೆ ಇವರು ಕಥೆ ನಡೆಸಿಕೊಡುವ ಕಥನ ಕಾವ್ಯಗಳದ್ದೆ ಒಂದು ದೊಡ್ಡ ಪಟ್ಟಿ. ಇಂತಹ ಹಾಡಿನ ಭಂಡಾರವಾದ ಶ್ರೀ ಅರಗಟ್ಟೆ ಹನುಮಂತಪ್ಪ ಅವರಿಗೆ ಬೆಂಗಳೂರಿನ ಡಾ॥ ಎನ್. ಎಸ್. ರಾಮೇಗೌಡ ಅವರು ನೀಡಿದ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೨-೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೮. ಕದಲಗೆರೆ ನರಸಿಂಹಶೆಟ್ಟಿ

ಸಾಲು ಪಟಗಳು ಓಲಾಡಿ ಕುಣಿವ ಕುಣಿತ ಪಟದ ಕುಣಿತ. ಹತ್ತು ಹನ್ನೆರಡು ಅಡಿ ಉದ್ದದ ಬಿದಿರಿನ ಗಳಗಳಿಗೆ ಬಣ್ಣ ಬಣ್ಣದ ಜಲ್ಲರಿ ಸುತ್ತಿ ಮಾಡಿದುದೆ ಪಟ. ಇಂತಹ ಪಟಗಳನ್ನು ಹಿಡಿದು ತಮಟೆ ತಾರ್ಸೆಗಳ ಗತ್ತಿಗೆ ಬಾಗಿಸಿ, ಬಳುಕಿಸಿ ಕುಣಿವ ಸುಂದರ ಕಲೆ. ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಕದಲಗೆರೆಯ ಶ್ರೀ ನರಸಿಂಹಶೆಟ್ಟಿ ಈ ಕಲೆಯ ನಿಪುಣ ಕಲಾವಿದರು. ಇವರು ಪಟದ ಕುಣಿತವಲ್ಲದೆ ರಂಗದ ಕುಣಿತಕ್ಕೂ ಸೈ. ಪೌರಾಣಿಕ ನಾಟಕದ ಪಾತ್ರಗಳನ್ನು ನಿರ್ವಹಿಸಲೂ ಸೈ. ಇಂತಹ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೨-೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೧೯೯. ಅಪ್ಪಗೆರೆ ನಿಂಗಮ್ಮ

ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಅಪ್ಪಗೆರೆಯ ಶ್ರೀಮತಿ ನಿಂಗಮ್ಮ ಅವರು ಕಳೆ ಪದ, ನಾಟಿ ಪದ, ಜೋಗುಳ ಪದ, ಸೋಬಾನೆ ಪದ, ಬಾಂಧವ್ಯ ಪದ ಹೀಗೆ ಪದಗಳ ಭಂಡಾರ ತುಂಬಿಕೊಂಡ ಒಡಲು. ಉತ್ತರದೇವಿ, ಹೊನ್ನಮ್ಮ, ನಾಗಮ್ಮ ಮೊದಲಾದ ಕಥನ ಗೀತೆಗಳನ್ನು ಹಾಡುತ್ತಾರೆ. ವರ್ಷ ಎಪ್ಪತ್ತಾದರೂ ದನಿ ಕುಗ್ಗಿಲ್ಲ. ಹಾಡುವ ಛಲ ತಗ್ಗಿಲ್ಲ. ಇಂತಹ ಕಲಾವಿದೆಗೆ ಬೆಂಗಳೂರಿನ ಡಾ॥ ಎನ್. ಎಸ್. ರಾಮೇಗೌಡ ಅವರು ನೀಡಿದ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦-೨-೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೨೦೦. ಅಂಕನಹಳ್ಳಿ ಚಲ್ಲಯ್ಯ

ಪಟದ ಕುಣಿತ, ಪೂಜಾಣ ಕುಣಿತ, ವೀರಗಾಸೆ, ಹುಲಿಕುಣಿತ, ಪಾಳೇಗಾರನ ವೇಷ, ಸೋಮನ ಕುಣಿತ ಹೀಗೆ ಕುಣಿತ ಯಾವುದಕ್ಕೂ ತಮಟೆ ನುಡಿಸಬಲ್ಲ ಕಲಾವಿದರು. ರಾಮನಗರ

ತಾಲ್ಲೂಕು, ಕೂಟಗಲ್ಲು ಹೋಬಳಿ, ಅಂಕನಹಳ್ಳಿಯ ಶ್ರೀ ಚಲ್ಲಯ್ಯ ಅವರು ತಮಟೆ ನುಡಿಸುವುದೇ ಅಲ್ಲದೆ ಸುತ್ತಿನ ಹತ್ತಾರು ಹಳ್ಳಿಯವರಿಗೆ ಪೂಜಾ ಕುಣಿತ, ಪಟದ ಕುಣಿತಗಳನ್ನು ತರಬೇತಿಗೊಳಿಸಿ ತಂಡಗಳನ್ನು ರೂಪಿಸಿದವರು. ಹೆಸರಾದ ಪೂಜಾ ಕುಣಿತ ಕಲಾವಿದ ಶ್ರೀ ಪೂಜಾ ಶಿವಣ್ಣ ಇವರ ಶಿಷ್ಯರು. ಇಂತಹ ಅನುಭವದ ಗಣಿಯಾದ ೬೨ ವರ್ಷದ ಶ್ರೀ ಚಲ್ಲಯ್ಯನವರಿಗೆ ರಾಮನಗರದ ವಕೀಲರಾದ ಶ್ರೀ ಎಲ್. ಚಿಕ್ಕಪ್ಪಾಜಿ ಅವರು ತಮ್ಮ ತಂದೆ ಶ್ರೀ ಲಿಂಗೇಗೌಡ ಮತ್ತು ತಾಯಿ ಶ್ರೀಮತಿ ಶಿವಮ್ಮ ಅವರ ನೆನಪಿಗಾಗಿ ನೀಡಿದ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ|| ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೨೦೧. ಕೂನಮುದ್ದನಹಳ್ಳಿ ಶಿವರುದ್ರಯ್ಯ

ಕೆಕ್ಕರಿಸಿದ ಕಣ್ಣು, ಉರಿಹಾಯ್ದ ಖಡ್ಗ, ರವರವ ಕೆಂಪಿನ ಮೈ ಬಟ್ಟೆ, ಕಣಗಡುವ ಮಂಡಿಯ ಜಂಗು ಧರಿಸಿ, ಖಣಖಣಿಸೊ ತಮಟೆ ತಾರ್ಸೆಗಳ ಗತ್ತಿಗೆ ವೀರಭದ್ರನ ಆರ್ಭಟವನ್ನು ಕಣ್ಣುಮುಂದೆ ಕಟ್ಟುವ ವೀರಭದ್ರನ ಕುಣಿತದ ನುರಿತ ಹಿರಿಯ ಕಲಾವಿದರು ಶ್ರೀ ವೀರರುದ್ರಯ್ಯ. ರಾಮನಗರ ಜಿಲ್ಲೆ ಕೂನಮುದ್ದನಹಳ್ಳಿ ಶಿವರುದ್ರಯ್ಯ ಅವರಿಗೆ ರಾಮನಗರದ ವಕೀಲರಾದ ಶ್ರೀ ಎಲ್. ಚಿಕ್ಕಪ್ಪಾಜಿ ಅವರು ತಮ್ಮ ತಂದೆ ಶ್ರೀ ಲಿಂಗೇಗೌಡ ಮತ್ತು ತಾಯಿ ಶ್ರೀಮತಿ ಶಿವಮ್ಮ ಅವರ ನೆನಪಿಗಾಗಿ ನೀಡಿದ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ|| ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೨೦೨. ನಾಯಡವಾಸು ನಂಜಪ್ಪ

ವೃತ್ತಿಯಲ್ಲಿ ಪ್ರಾಮಾಣಿಕ ಶಿಕ್ಷಕರಾಗಿ ದುಡಿದು ನಿವೃತ್ತರಾದ ಶ್ರೀ ನಾಯಡವಾಸು ನಂಜಪ್ಪ ಅವರು 'ವಾಸು ಮಾಸ್ಟರ್' ಎಂದೇ ಪ್ರಖ್ಯಾತಿ. ನಿಸ್ವಾರ್ಥ ಮನೋಭಾವದ ಸಜ್ಜನಿಕೆಯ ಇವರು ಜಾನಪದ ಲೋಕಕ್ಕಾಗಿ ವಸ್ತುಸಂಗ್ರಹಕ್ಕೆಂದು ಕೊಡಗಿಗೆ ಹೋದಾಗ ತುಂಬು ಪ್ರೀತಿಯಿಂದ ಕೊಡವರ ಸಾಕಷ್ಟು ವಸ್ತುಗಳು ಸಂಗ್ರಹವಾಗಲು ನೆರವಾದರು. ಪರೋಪಕಾರದ ಮನಸ್ಸಿನ ಈ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ|| ೧೦–೨–೨೦೦೮ ರಂದು 'ವಿಶೇಷ ಪುರಸ್ಕಾರ'ವನ್ನು ತುಂಬು ಗೌರವದಿಂದ ನೀಡಿದೆ.

## ೨೦೩. ಡಾ|| ಜಯಲಕ್ಷ್ಮಿ ಸೀತಾಪುರ

ಜನಪದ ಸಾಹಿತ್ಯ, ಸಂಸ್ಕೃತಿಯ ಅರ್ಥೈಸುವಿಕೆಯಲ್ಲಿ ಜನಪದ ವಿದ್ವಾಂಸರ ಪಾತ್ರ ಮುಖ್ಯವಾದುದು. ಡಾ|| ಜಯಲಕ್ಷ್ಮಿ ಸೀತಾಪುರ ಅವರು ಅಂತಹ ಜಾನಪದ ವಿದ್ವಾಂಸರಲ್ಲಿ ಒಬ್ಬರು. ಮೈಸೂರು ವಿಶ್ವವಿದ್ಯಾಲಯದ ಸಂಶೋಧನಾ ಸಹಾಯಕಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಇವರು ಜಾನಪದ ಕೃತಿಗಳನ್ನೂ ಒಳಗೊಂಡು ೧೮ ಕೃತಿಗಳನ್ನು ಪ್ರಕಟಿಸಿದ್ದಾರೆ. ಅನೇಕ ವಿಚಾರ ಸಂಕಿರ್ಣಗಳಲ್ಲೂ ಪಾಲ್ಗೊಂಡಿದ್ದಾರೆ. ಇವರ ಪ್ರೌಢಪ್ರಬಂಧ

'ಐತಿಹಾಸಿಕ ಜಾನಪದ ಕಾವ್ಯಗಳು' ಮೈಸೂರು ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿದೆ. ಇವರಿಗೆ ಮಂಡ್ಯ ಜಿಲ್ಲೆ ಹನುಮನಹಳ್ಳಿಯ ಶ್ರೀ ಹ. ಕ. ರಾಜೇಗೌಡ ಅವರು ತಮ್ಮ ತಂದೆ ಕಪನೀಗೌಡ ಮತ್ತು ತಾಯಿ ಶ್ರೀಮತಿ ನಿಂಗಮ್ಮ ಅವರುಗಳ ನೆನಪಿಗಾಗಿ ನೀಡಿದ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ಜಾನಪದ ಲೋಕ ಪ್ರಶಸ್ತಿ'ಯನ್ನು ತುಂಬು ಗೌರವದಿಂದ ನೀಡಿದೆ.

## ೨೦೮. ಬಸವರಾಜ ಆಕಳವಾಡಿ

ಸರಳತೆಯನ್ನು ತುಂಬಿಕೊಂಡ ಸಜ್ಜನಿಕೆಯ ವ್ಯಕ್ತಿ ಶ್ರೀ ಬಸವರಾಜ ಆಕಳವಾಡಿ ಅವರು. ವಿಜಾಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕಿನ ಬೇನಾಳ ಗ್ರಾಮದವರಾದ ಇವರು ಪ್ರಸ್ತುತ ಕೊಪ್ಪಳ ಜಿಲ್ಲೆಯ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ಜಿಲ್ಲಾ ವಾರ್ತಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಸದಾ ಜನಪದ ಸಂಗ್ರಹ, ಪ್ರಕಟಣೆಗಳೊಂದಿಗೆ ತೊಡಗಿಸಿಕೊಂಡವರು. ಲಾವಣಿ, ರಿವಾಯತ್, ಹಂತಿ ಮೊದಲಾದ ಹಾಡುಗಳನ್ನು ಸಂಗ್ರಹಿಸಿದವರು. ಉತ್ತರ ಕರ್ನಾಟಕದ ಜನಪದ ಹಬ್ಬಗಳು, ಜನಪದರಲ್ಲಿ ಮಳೆರಾಯನ ಮುನಿಸು ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತಿನ ಜಾನಪದ ಕೋಶದ ಸಂಪಾದನೆ ಸಮಿತಿಯಲ್ಲಿ ಕೆಲಸ ಮಾಡಿದ್ದಾರೆ. ಜಾನಪದ ಜಗತ್ತು ಪತ್ರಿಕೆಯ ಸಹ ಸಂಪಾದಕರಾಗಿ ಶ್ರಮಿಸಿದ್ದಾರೆ. ಇಂತಹ ಮಹನೀಯರಿಗೆ ಕರ್ನಾಟಕ ಜಾನಪದ ಪರಿಷತ್ತು ತಾ॥ ೧೦–೨–೨೦೦೮ ರಂದು 'ವಿಶೇಷ ಪುರಸ್ಕಾರ'ವನ್ನು ತುಂಬು ಗೌರವದಿಂದ ನೀಡಿದೆ.

ಪರಿಚಯ : **ಡಾ. ಕುರುವ ಬಸವರಾಜ್**

## ಪ್ರಶಸ್ತಿ ಪುರಸ್ಕೃತರು – ೨೦೦೯

### ೨೦೫. ಹೆಬ್ಬಣಿ ಮಾದಯ್ಯ

ಹಾಡುವ ಶ್ರದ್ಧೆ, ಕಥನ ನಿರ್ಮಿತಿಯ ಕೌಶಲ್ಯ, ಕಲಾಪ್ರದರ್ಶನದ ಅಚ್ಚುಕಟ್ಟುತನ ಎಲ್ಲದರಲ್ಲೂ ಉನ್ನತರು ಹೆಬ್ಬಣಿ ಮಾದಯ್ಯ. ಅವರ ಮನಸ್ಸು ೮೦ ದಾಟಿದ್ದರೂ ಅದೇ ಹುರುಪು, ಅದೇ ಚುರುಕು, ಅದೇ ಕೆಚ್ಚು. ಮೂಲತಃ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹೆಬ್ಬಣಿಯವರಾದ ಮಾದಯ್ಯ ಬಡತನದ ಇಕ್ಕಟ್ಟು ದಾಟಲು ಬೆಂಗಳೂರು ಸೇರಿ ४०–೫೦ ವರ್ಷ ಇಲ್ಲೇ ಕಳೆದರೂ ಮೂಲದ ಊರು ಸೀಮೆಯ ಮಾತು–ಕತೆ, ಗುಣ, ರೀತಿ–ನೀತಿ ಎಲ್ಲವ್ರೂ ದೇಸಿಯನ್ನು ಕಳೆದುಕೊಂಡಿಲ್ಲ. ಇವರು ಹಾಡಿದ 'ಮಲೆಯ ಮಹದೇಶ್ವರ' ಮೌಖಿಕ ಮಹಾಕಾವ್ಯವನ್ನು ಕನ್ನಡ ವಿಶ್ವವಿದ್ಯಾನಿಲಯ ಪ್ರಕಟಿಸಿದೆ. ಇದು ಇಂಗ್ಲಿಷ್ ಭಾಷೆಗೂ ಅನುವಾದಗೊಂಡಿದೆ. ಈ ಮಹಾಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜಾನಪದ ಪರಿಷತ್ತು ಈ ಹಿಂದೆ ದೊಡ್ಡಮನೆ ಪ್ರಶಸ್ತಿ ನೀಡಿದೆ. ಅಲ್ಲದೆ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ', 'ರಾಜ್ಯೋತ್ಸವ ಪ್ರಶಸ್ತಿ'ಗಳು ಸಂದಿವೆ. ಈ ಹಿರಿಯರಿಗೆ ಶ್ರೀಮತಿ ಶೀಲಾಗೌಡ ಮತ್ತು ಶ್ರೀ ಕ್ರಿಸ್ಟಾಫ್ ಸ್ಟಾಟ್‌ರವರು ನೀಡಿದ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ನಾಡೋಜ ಶ್ರೀ ಎಚ್. ಎಲ್. ನಾಗೇಗೌಡ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ. ಇವರಿಗೆ ೨೦೦೦ ರಲ್ಲಿ 'ದೊಡ್ಡಮನೆ ಪ್ರಶಸ್ತಿ' ಕೊಟ್ಟು ಸನ್ಮಾನಿಸಿದೆ.

### ೨೦೬. ಮೈಲನಾಯಕನಹಳ್ಳಿ ಆಲಮ್ಮ

ಒಂದು ಹೇಳೆಂದರೆ ಒಂಬತ್ತು ಹೇಳೇನು ಎಂಬಂತೆ ಹಾಡಿನ ಹೆಡಿಗೆ ತುಂಬಿಕೊಂಡ ಹಾಡುಗಾರ್ತಿ ಶ್ರೀಮತಿ ಆಲಮ್ಮ. ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮೈಲನಾಯಕನಹಳ್ಳಿಯ ೧೦೦ ವರ್ಷದ ಆಲಮ್ಮ ಆಲದ ಮರದಂತೆ ತಾಯಿಯಿಂದ ಹಾಡುಗಳನ್ನು ಕಲಿತು, ಹಾಡುಗಾರ್ತಿಯಾದ ಈ ಹಾಡಿನ ಭಂಡಾರಕ್ಕೆ ಬೆಂಗಳೂರಿನ ಶ್ರೀಮತಿ ಶಾಂತಮ್ಮ ಚೆನ್ನಸ್ವಾಮಿ ಅವರು ನೀಡಿದ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ನಾಡೋಜ ಶ್ರೀ ಎಚ್. ಎಲ್. ನಾಗೇಗೌಡ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ. ಈ ಕಲಾವಿದೆಗೆ ೨೦೦೫ ರಲ್ಲಿ 'ಜಾನಪದ ಲೋಕ ಪ್ರಶಸ್ತಿ'ಲಭ್ಯವಾಗಿದೆ.

### ೨೦೭. ಸಿದ್ದಮ್ಮ ಉರುಫ್ ಕುಂಡಮ್ಮ

ಕುಂಡಮ್ಮ ಎಂದೇ ಕರೆಯುವ ಕುಂಡಮ್ಮನ ನಿಜ ಹೆಸರು ಸಿದ್ದಮ್ಮ. ಜಗವ ಕಾಣಲು ಕಣ್ಣಿಲ್ಲ. ಆದರೇನು ಹಾಡುವ ದನಿ ಐಬಿಲ್ಲ. ಹಾಡುವ ದನಿ ಈಚೆ ಹರಿದರೆ ಸಾಕು ಎಂಥವರನ್ನೂ ಕಟ್ಟಿ ನಿಲ್ಲಿಸುವ ಸೊಗಸು ಇವರದು. ಲಾಲಿ, ದೂರಿ, ಸೋಬಾನೆ, ಕಥನಗೀತೆ,

ತತ್ವಪದ ಯಾವುದೇ ಕೇಳಿದರೂ ತಟಕ್ಕನೆ ದನಿ ತೇಲಾಡುತ್ತೆ. ಗಾಳಿಯಲ್ಲಿ ಹಿತವಾಗುತ್ತದೆ ಕಿವಿಯಲ್ಲಿ. ತಮ್ಮ ಸೊಸೆಯರನ್ನೇ ಒಂದಿಗೆ ಹಾಕಿಕೊಂಡು ಹಾಡು ಹೊಮ್ಮಿಸುವ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿಯ, ಈ ಛಲಗಾತಿ ಹಾಡುವ ಪ್ರತಿಭೆಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಸೋಬಾನೆ ಚಿಕ್ಕಮ್ಮ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೦೮. ಶ್ರೀ ವೆಂಕಪ್ಪ ಅಂಬಾಜಿ ಸುಗತೇಕರ

ಸಮ್ಮಾಳ ತಾಳ ಚೌಡಿಕೆಗಳ ಗತ್ತಿಗೆ ಅಂಬಾ ಭವಾನಿ, ಎಲ್ಲಮ್ಮರ ಕೊಂಡಾಡುವ, ಕಥನ ನಿರೂಪಿಸುವ ವಿಶಿಷ್ಟ ಗಾಯನ ಕಲಾವಿದರು ಗೊಂದಲಿಗರು. ನೆರೆದ ಸಭಿಕರನ್ನು ಕ್ಷಣ ಮಾತ್ರದಲ್ಲಿ ಸೆಳೆದು ತಮ್ಮ ಕಥನದ ಆವರಣದಲ್ಲಿ ನಿಲ್ಲಿಸುವ ಛಾತಿಯ ಕಲೆಗಾರ ಶ್ರೀ ವೆಂಕಪ್ಪ ಅಂಬಾಜಿ ಸುಗತೇಕರ ಅವರು. ಬಾಗಲಕೋಟೆಯ ೬೫ರ ಹಿರಿಯರಾದ ವೆಂಕಪ್ಪ ಅವರು ತಮ್ಮ ಬದುಕಿನ ಬಹು ಮುಖ್ಯ ಅವಧಿಯನ್ನು ಈ ಕಲೆಯೊಂದಿಗೆ ಕಳೆದವರು. ಇಂಥ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ದೊಡ್ಡ ಮನೆ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೦೯. ನಾರಾಯಣಪ್ಪ

ಚಿಕ್ಕಬಳ್ಳಾಪುರ ಜಿಲ್ಲೆಯ ಪಿಚ್ಚಗುಂಟ್ಲು ಗ್ರಾಮದ ಶ್ರೀ ನಾರಾಯಣಪ್ಪ ಜನಪದ ರಂಗಭೂಮಿಯ ಮೂಡಲಪಾಯ ಯಕ್ಷಗಾನದ ವಿಶಿಷ್ಟ ಕೇಳಿಕೆಯ ಪ್ರಕಾರದ ಕಲಾವಿದರು. ಇಂತಹ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ದೊಡ್ಡ ಮನೆ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೦. ತಂಬೂರಿ ಉಮಾನಾಯ್ಕ

ತಂಬೂರಿ ಉಮಾನಾಯ್ಕ ಸಾರಂಗಿ ಕಲಾವಿದರು. ಜನಪದರು ಈ ತಂತಿ ವಾದ್ಯವನ್ನು ತಂಬೂರಿಯೆಂದೇ ಕರೆದಿದ್ದಾರೆ. ಬಂಜಾರ ಮೂಲದ ಇವರು ಈ ವಾದ್ಯ ನುಡಿಸುವ ಕರ್ನಾಟಕದಲ್ಲಿರುವ ಕೆಲವೇ ಕೆಲವರಲ್ಲಿ ಒಬ್ಬರು. ಈ ಹಿರಿಯ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೧. ನಾಗಮ್ಮ

ಕೋಲಾಟ ಕುಣಿತದ ವಿವಿಧ ಗತ್ತುಗಳಲ್ಲಿ ಕುಣಿಯುವ, ಹಾಡುವ, ಹಾಡುಗಾರ್ತಿ ಶ್ರೀಮತಿ ನಾಗಮ್ಮ, ಹಾಸನ ಜಿಲ್ಲೆ, ಆಲೂರು ತಾಲ್ಲೂಕು, ಕೊಡಿಗೇಹಳ್ಳಿಯ ಇವರ ಕೋಲಾಟ ಕಲೆಯ ಪರಿಶ್ರಮಕ್ಕೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೨. ದೇವೇಂದ್ರಪ್ಪ

ಶ್ರೀ ದೇವೇಂದ್ರಪ್ಪ ಅವರಿಗೆ ಜಗದ ಬಣ್ಣ ಕಾಣುವ ಕಣ್ಣಿಲ್ಲ. ಆದರೆ ಹಾಡುವ ದನಿಗೆ ತೊಂದರೆಯಿಲ್ಲ. ಬೆಂಗಳೂರಿನ ಕಮಲಾನಗರದಲ್ಲಿ ವಾಸವಿರುವ ಇವರು ಮೂಲತಃ ರಾಮನಗರ ತಾಲ್ಲೂಕಿನ ಬಿಡದಿಯವರು. ಇವರು ಸಾಕಷ್ಟು ಜನಪದ ಗೀತೆಗಳನ್ನು ಹಾಡುತ್ತಾರೆ. ಅಲ್ಲದೇ ಶಿಶುನಾಳ ಷರೀಫರು, ಶಾಂತ ಸ್ವಾಮಿಗಳು, ಮಹಾಂತಸ್ವಾಮಿಗಳು ಮುಂತಾದವರ ತತ್ವಪದಗಳನ್ನು ಹಾಡುತ್ತಾರೆ. ಕವಿ ಗುಣದ ಶ್ರೀ ದೇವೇಂದ್ರಪ್ಪ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೩. ಶ್ರೀ ಭೂತಾಳೆಪ್ಪ ಅಮ್ಮಣ್ಣಪ್ಪ ಹಂಚಿನಾಳ

ಕರಡೆ ಮಜಲು ಮೇಳದ ಅನುಭವಿ ತಾಳವಾದ್ಯಗಾರರಾದ ಬಾಗಲಕೋಟೆ ಜಿಲ್ಲೆ ಚಿಕ್ಕಪಡಸಲಗಿಯ ಹಂಚಿನಾಳರು, ಕರಡಿ ಮಜಲು ಅಲ್ಲದೆ ಕಣಿಮಜಲು, ಜಗ್ಗಲಗಿ, ಹೆಜ್ಜೆಮೇಳಗಳಲ್ಲಿಯೂ ತಾಳದ ಮಜುಕೂರ ನೀಡುವ ವಿಶಿಷ್ಟ ಕಲಾವಿದರು. ಇಂತಹ ಈ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೪. ಸತ್ಯಮ್ಮ

ತೊಗಲುಗೊಂಬೆಯಾಟದ ಕಲೆಯ ಗೊಂಬೆ ಕುಣಿಸುವ ಕಲಾವಿದೆಯಾಗಿ, ರಂಗಪಾತ್ರಗಳ ಮಾತಿನ ದನಿಯಾಗಿ, ಹಾಡುವ ಬನಿಯಾಗಿ ಜೀವಮಾನ ಕಳೆದವರು ಶ್ರೀಮತಿ ಸತ್ಯಮ್ಮ. ೬೮ ವರ್ಷದ ಈ ಹಿರಿಯ ಕಲಾವಿದೆ ಆಲೂರು ತಾಲ್ಲೂಕು ಅಗಸಕಟ್ಟೆಯವರು. ಇವರಿಗೆ ಬೆಂಗಳೂರಿನ ಶ್ರೀ ಎಂ. ಕೃಷ್ಣಪ್ಪ ಅವರು ತಮ್ಮ ತಂದೆ ಶ್ರೀ ಮುನಿಸ್ವಾಮಪ್ಪ ಹಾಗೂ ತಾಯಿ ರಂಗಮ್ಮ ಅವರುಗಳ ನೆನಪಿಗಾಗಿ ನೀಡಿರುವ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೫. ಹೆಗ್ಗಡೆಹಳ್ಳಿ ಕೃಷ್ಣೇಗೌಡ

ದನಿ ತೆಗೆದು ಹಾಡಲು ಅಡಿಯಿಟ್ಟರೆ ಸೋಬಾನೆ ಹಾಡುವ ಹಾಡುಗಾರ್ತಿಯರು ಬೆರಗಾಗಬೇಕು. ಹೆಂಗಸರು ಹಾಡುವ ಸೋಬಾನೆ, ಬೀಸುವ, ಕುಟ್ಟುವ ಎಲ್ಲಾ ಬಗೆಯ ಹಾಡುಗಳನ್ನು, ಕೋಲಾಟದ ಹಾಡುಗಳನ್ನು ಹಾಡುವ ಹಾಡಿನಕಣಜ ಶ್ರೀ ಕೃಷ್ಣೇಗೌಡರು. ಹಾಡಷ್ಟೆ ಅಲ್ಲದೇ ಕೊರವಂಜಿ ಕೋಲಾಟ, ಗಾರುಡಿಗೊಂಬೆ ಕುಣಿತ ಮೊದಲಾದ ಹಲವು ಕಲೆಗಳ ಉತ್ತಮ ಕಲಾವಿದರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೬. ಮಲ್ಲಪ್ಪ ಕಣಬೂರು

ಬಾಗಲಕೋಟೆ ಜಿಲ್ಲೆ ರನ್ನಬೆಳಗಲಿಯವರಾದ ಶ್ರೀ ಮಲ್ಲಪ್ಪ ಕಣಬೂರು ಅವರು ಶ್ರೀಕೃಷ್ಣಪಾರಿಜಾತದ ತಾಳವಾದ್ಯಗಾರರಾಗಿ ಪರಿಶ್ರಮಿಸಿದವರು. ಹೆಸರಾದ ತಂಡಗಳಲ್ಲಿ ತಮ್ಮ ಕಲಾಕೌಶಲ್ಯ ತೋರಿದವರು. ತಾಳವಲ್ಲದೆ, ತಬಲ, ಹಾರ್ಮೋನಿಯಂ, ಡೋಲಕ್, ದಮ್ಮಡಿ, ಯಾವುದೇ ವಾದ್ಯ ನುಡಿಸಲು ನುರಿತವರು. ಇಂತಹ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೭. ಹನಮಿ ಕ್ಷೇತ್ರಗೌಡ

ಮಹಾಕಾವ್ಯಗಳ ಗಾಯಕಿ ಶ್ರೀಮತಿ ಹನಮಿ ಕ್ಷೇತ್ರಗೌಡ ಅವರು. ದಿನವೆಲ್ಲ ಹಾಡಬಲ್ಲ ಭಂಡಾರ ಇವರಲ್ಲಿ ತುಂಬಿದೆ. ಹಾಡಲ್ಲದೆ ರಂಗೋಲಿಯಂತಹ ಚಿತ್ತಾರ 'ಶೇಡಿಕಲೆ'ಯ ವಿಶಿಷ್ಟ ಕಲಾವಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಪ್ರಶಸ್ತಿಯನ್ನು ಈಗಾಗಲೇ ಪಡೆದುಕೊಂಡಿರುವ ಹಾಡಿನ ಖನಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೮. ಗಂಗಾಧರಪ್ಪ ಬಿ. ಜವಳಿ

ಖಣ ಖಣಿಸುವ ಸಮ್ಮಾಳ ದಿಮ್ಮು ಕರಡೆ ತಾಳಗಳ ರೌದ್ರನಾದದ ಹಿನ್ನೆಲೆಯಲ್ಲಿ, ಖಡ್ಗ ಹಿಡಿದು ಆವೇಶ ಚಿಮ್ಮಿಸಿ ಪ್ರದರ್ಶಿಸುವ ಕಲೆ ಪುರುವಂತಿಕೆಯ ಅನುಭವಿ ಕಲಾವಿದರು ಶ್ರೀ ಗಂಗಾಧರಪ್ಪ ಅವರು, ಹಾವೇರಿ ಜಿಲ್ಲೆಯ ಹಾನಗಲ್ಲ ತಾಲ್ಲೂಕು ಹವಣಗಿಯವರು. ಇವರು ಸುತ್ತಿನ ಸೀಮೆಯಲ್ಲೆಲ್ಲಾ ಪ್ರದರ್ಶನ ನೀಡಿದ್ದಾರೆ. ನುರಿತವರು. ಇಂಥ ನುರಿತ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೧೯. ಸಣ್ಣು ಲಿಂಗಗೌಡ

ಕೊರಳ ತುಂಬ ಕರಿಮಣಿ ಸರಗಳ ಹೊತ್ತ ಹಾಲಕ್ಕಿ ಒಕ್ಕಲಿಗರ ಬುಡಕಟ್ಟು ಮಹಿಳೆ ಶ್ರೀಮತಿ ಸಣ್ಣು ಲಿಂಗಗೌಡ. ಮಳೆಕರೆವ 'ತಾರ್ಲೆ ಬಾರ್ಲೆ' ಕುಣಿತ, ಪಗಡೆ ಕುಣಿತದ ಈ ಕಲಾವಿದೆ, ಹಾಡಿನ ಭಂಡಾರವೂ ಹೌದು. 'ಜಾನಪದ ಶ್ರೀ' ಗೌರವಾನ್ವಿತ ಶ್ರೀಮತಿ ಸುಕ್ರಿ ಬೊಮ್ಮಗೌಡ ಅವರ ಜೊತೆಯ ಕಲಾವಿದೆಯಾಗಿ ಪರಿಶ್ರಮಿಸಿದಾಕೆ. ಪ್ರಗತಿಪರ ಆಂದೋಲನಗಳಲ್ಲಿ ದುಡಿದಾಕೆ. ಇಂತಹ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೦. ರಾಮಚಂದ್ರ ಗಣಪತಿ ಪೋದ್ದಾರ

ದೇವರು ಎಲ್ಲರನ್ನು ರೂಪಿಸುತ್ತಾನೆ ಎಂಬ ನಂಬಿಕೆ ಇದೆ. ಆದರೆ ಇವರು ದೇವರನ್ನೇ ರೂಪಿಸುತ್ತಾರೆ. ವಿಜಾಪುರ ಜಿಲ್ಲೆ ಇಂಡಿಯಾ ಪತ್ತಾರಿಕೆ ಅಂದರೆ ಲೋಹಶಿಲ್ಪಗಳಾಗಿ ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳೆಗಳಿಂದ ಕೌಶಲ್ಯ ತೋರಿದವರು ಇವರು. ಒಳ್ಳೆಯ ರಂಗನಟರೂ

ಹೌದು. ಇಂತಹ ಲೋಹಶಿಲ್ಪಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೧. ಕಾಡಯ್ಯ

ಕರ್ನಾಟಕದ ಜನಪದ ವಾದ್ಯಗಳಲ್ಲಿ ರಾಜವಾದ್ಯ ತಮಟೆ. ನಾಡಿನ ಹೆಚ್ಚಿನ ಕಲೆಗಳ ನಾದದ ಜೀವನಾಡಿ ವಾದ್ಯವಿದು. ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ನಾಗವಾರದ ಶ್ರೀ ಕಾಡಯ್ಯ ಈ ಕಲೆಯ ನಿಷ್ಣಾತ ಕಲಾವಿದ. ದೇಶದ ನಾನಾ ಭಾಗಗಳಲ್ಲಿ ನಡೆದ ಬಹುಮುಖ್ಯ ಉತ್ಸವಗಳಲ್ಲಿ ಪಟ ಕುಣಿತ, ಪೂಜಾ ಕುಣಿತಗಳ ಭಾಗವಾಗಿ ಪರಿಶ್ರಮಿಸಿದ್ದಾರೆ. ಅನೇಕ ಯುವಕರಿಗೆ ತಮಟೆಯಲ್ಲದೇ ಪಟದ ಕುಣಿತ, ಪೂಜಾ ಕುಣಿತದ ತರಬೇತಿ ನೀಡಿದ್ದಾರೆ. ೬೩ ವರ್ಷದ ಈ ಹಿರಿಯ ಕಲಾವಿದನಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೨. ಶಂಕರಪ್ಪ

ಮಹಾಮುಖವಾಡಗಳ ಕುಣಿತ ಸೋಮನಕುಣಿತ, ಅತ್ಯಂತ ಲಾಲಿತ್ಯಪೂರ್ಣವಾದ ಜನಪದ ಕಲೆ. ಈ ಕಲೆಯ ಜೀವನಾಡಿ ಇವರ ಸಂಗೀತ. ಕರಡೆ, ದೋಣು, ಹರೆಗಳೊಂದಿಗೆ ನಾದ ವೈವಿಧ್ಯತೆಯನ್ನು ಕಟ್ಟುವ ಊದುವ ಮೌರಿ. ಈ ವಾದ್ಯದ ಅತ್ಯುತ್ತಮ ಕಲೆಗಾರರಲ್ಲಿ ಶ್ರೀ ಶಂಕರಪ್ಪ ಅವರು ಒಬ್ಬರು. ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು ದಂಡಿನಶಿವರದ ಈ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೩. ಕೋಟಿ ಪರವ

ತುಳು ಕನ್ನಡದ ಸೋದರಭಾಷೆ. ಉಡುಪಿ ಮಂಗಳೂರು ಕಾಸರಗೋಡಿನಂತಹ ಮೂರು ಜಿಲ್ಲೆಯ ಚಿಕ್ಕ ವ್ಯಾಪ್ತಿ ಇವರದ್ದಾದರೂ ತುಳುನಾಡಿನ ಸಾಂಸ್ಕೃತಿಕ ಸಂಪತ್ತು ಅಪಾರವಾದದ್ದು. ತುಳುನಾಡಿನ ವಿಶಿಷ್ಟತೆಯಲ್ಲಿ 'ಭೂತಾರಾಧನೆ'ಯದ್ದು ವಿಶೇಷ. ಈ ಆರಾಧನೆಯ ಅಭೌತಿಕ ಪಾತ್ರಗಳ ಭೌತಿಕ ಆವಾಹನೆಯ ಕ್ರಿಯೆಯ ಸಂವಾಹಕರು ಶ್ರೀ ಕೋಟಿ ಪರವ ಅವರು. ಅಂದರೆ ಉಳ್ಳಾಕುಲು, ಮಲರಾಯ, ಧೂಮಾವತಿ, ಕೊಡಮನತ್ತಾಯಿ ರಕ್ತೇಶ್ವರಿ, ಪಂಜುರ್ಲಿ, ಅಣ್ಣಪ್ಪ ಪಂಜುರ್ಲಿ ಮೊದಲಾದ ಈ ಎಲ್ಲಾ ದೈವಗಳ ದೈವಾಚರಣೆ ನಡೆಸಿಕೊಡುವವರು. ಪಾಡ್ದನಗಳನ್ನು ಹಾಡುತ್ತಾರೆ. ಇಂತಹ ಈ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೪. ಹಾಜಿ ಹಕೀಂ ಪೀರ್ ಶರೀಫ್

ಶ್ರೀ ಹಾಜಿ ಹಕೀಂ ಪೀರ್ ಶರೀಫ್ ಅನುಭವಿ ನಾಟಿವೈದ್ಯರು. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕೊಪ್ಪದ ಈ ವೈದ್ಯರು ತಮ್ಮ ತಂದೆ ಶ್ರೀ ಇಬ್ರಾಹಿಂ ಶರೀಫ್‌ರಿಂದ

ಕಲಿತು ಅನಾರೋಗ್ಯದ ಸಾವಿರಾರು ಜನರಿಗೆ ಔಷಧಿ ನೀಡಿ ಗುಣ ಪಡಿಸಿದ್ದಾರೆ. ಲಕ್ವ, ಮೊಳೆರೋಗ, ಕಾಮಾಲೆ ಕಾಯಿಲೆಗಳು ಮೊದಲಾದವುಗಳಿಗೆ ಚಿಕಿತ್ಸೆ ನೀಡಬಲ್ಲ ನಿಷ್ಣಾತರು. ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೫. ಕೆ. ಹೆಚ್. ಕೃಷ್ಣೇಗೌಡ

ಹತ್ತಾರು ಜನ ಒಮ್ಮೆಲೇ ತಾಳ ಹಾಕುತ್ತಾ ಹಾಡುವ ಕಲೆ ಭಾಗವಂತಿಕೆ ಮೇಳ. ತಿರುಪತಿ ವೆಂಕಟರಮಣ, ಮೇಲುಕೋಟೆಯ ಚೆಲುವರಾಯಸ್ವಾಮಿಯ ಆರಾಧನೆಯ ಈ ಕಲೆಯ ಹಿರಿಯ ಕಲಾವಿದರು ಶ್ರೀ ಕೆ.ಹೆಚ್. ಕೃಷ್ಣೇಗೌಡರು. ಮಂಡ್ಯ ಜಿಲ್ಲೆಯಲ್ಲಿ ಪಾಂಡವಪುರ ತಾಲ್ಲೂಕು, ಕದಲಗೆರೆಯ ಇವರು ಶ್ರೀಕೃಷ್ಣ ಚರಿತ್ರೆ, ರಾಮಾಯಣ ಕುರಿತು ಹಾಡುತ್ತಾರೆ. ರಂಗದ ಕುಣಿತ, ಪಟದ ಕುಣಿತದ ಕಲಾವಿದರೂ ಹೌದು. ಇಂತಹ ನುರಿತ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೬. ಪರಪ್ಪ

ನಾಡಿನ ಮುಖ್ಯ ಕಂಪನಿಯ ಕಲಾವಿದರಾಗಿ, ರಂಗನಟರಾಗಿ ಕಲಾಸೇವೆ ಸಲ್ಲಿಸಿದವರು ಶ್ರೀ ಪರಪ್ಪ ಅವರು. ಹೆಸರಾಂತ ಕಲಾವಿದರ ಶಿಷ್ಯರಾಗಿ, ರಂಗಭೂಮಿಯಲ್ಲಿ ತೊಡಗಿಕೊಂಡವರು. ಬಣ್ಣದೊಂದಿಗೆ ಬದುಕು ಎಳೆದವರು. ಸ್ತ್ರೀ ಪಾತ್ರವನ್ನು ಒಳಗೊಂಡಂತೆ ಅನೇಕ ಪಾತ್ರಗಳಲ್ಲಿ ರಂಗದ ಮೇಲೆ ಸೈ ಎನಿಸಿಕೊಂಡವರು. ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕಿನ ಕಟ್ಟೆಮನೆ ಕೋಟೆನಾಯಕನಹಳ್ಳಿಯ ೭೭ರ ಈ ಹಿರಿಯರಿಗೆ ಬೆಂಗಳೂರಿನ ಡಾ. ಎನ್. ಎಸ್. ರಾಮೇಗೌಡ ಅವರು ನೀಡಿರುವ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೭. ಬೀಯಪ್ಪ

ತೊಗಲುಗೊಂಬೆಯಾಟದ ಅತ್ಯಂತ ಅನುಭವಿ ಕಲಾವಿದರು ಶ್ರೀ ಬೀಯಪ್ಪ ಅವರು. ಚರ್ಮ ಹದಮಾಡಿ, ಗೆರೆಮೂಡಿಸಿ, ಬಣ್ಣ ಹಚ್ಚಿ, ರಂಗಕ್ಕೆ ತಂದು, ಹಾಡು-ಮಾತಿನ ಕೌಶಲ್ಯ ಕಟ್ಟಿ ಪೌರಾಣಿಕ ಕಥನ ನಿರೂಪಿಸುವ ಅತ್ಯುತ್ತಮ ಕಲಾವಿದರು ಶ್ರೀ ಬೀಯಪ್ಪ ಅವರು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ೭೦ ವರ್ಷದ ಈ ಹಿರಿಯರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫-೦೨-೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೮. ಬಿ. ಕೆ. ಶಿವನಂಜಪ್ಪ

ಪೌರಾಣಿಕ ಕಥನದ ವೀರರಸದ ಆವೇಶ, ಆರ್ಭಟಗಳನ್ನು ಕಣ್ಣೆದುರು ನಿರ್ಮಿಸುವ ವಿಶಿಷ್ಟ ಕಲೆ ವೀರಗಾಸೆ. ಈ ಕಲೆಯ ಅನುಭವಿ ಕಲಾವಿದರು ಶಿವನಂಜಪ್ಪ ಅವರು.

ವೀರಗಾಸೆ ಅಲ್ಲದೆ ಪ್ರವಚನ ಸಹ ಮಾಡಬಲ್ಲರು. ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಬಿಸಲೆರೆ ಗ್ರಾಮದ ಈ ಹಿರಿಯರನ್ನು ಅವರ ಕಲಾಸೇವೆಯ ಪರಿಶ್ರಮಕ್ಕಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವಿಸಿದೆ. ಇಂತಹ ಹಿರಿಯ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೨೯. ಕೆಂಚಯ್ಯ

ಬಹುಮುಖ ಪ್ರತಿಭೆಯ ದಾಸತ್ತು ಕೆಲವರದು. ಅಂತಹವರಲ್ಲಿ ರಾಮನಗರ ಜಿಲ್ಲೆ ಕರಿಯಪ್ಪನದೊಡ್ಡಿ ಕೆಂಚಯ್ಯ ಕೂಡ ಒಬ್ಬರು. ಸೋಗಸಿನ ಪೂಜಾ ಕುಣಿತದ ಕಲಾವಿದರಾಗಿ, ತರಬೇತುದಾರರಾಗಿ, ಚಂದದ ಚನ್ನಪಟ್ಟಣ ಆಟಿಕೆ–ಗೊಂಬೆಗಳ ತಯಾರಿಕೆಯ ಅನುಭವಿ ಕಲಾವಿದರಾಗಿರುವುದಲ್ಲದೇ ದೊಣ್ಣೆ, ಕತ್ತಿ, ಭರ್ಚಿ, ಛಡಿವರಸೆಗಳಂತಹ ಸಮರ ಕಲೆಗಳ ನುರಿತ ಕಲಾವಿದರಾಗಿದ್ದಾರೆ. ಗೊಂಬೆ ತಯಾರಿಕೆಯ ಇವರ ಕೌಶಲ್ಯ ಗಮನಿಸಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಪ್ರಶಸ್ತಿ ನೀಡಿ ಗೌರವಿಸಿದೆ. ಇಂತಹ ಹಿರಿಯ ಕಲಾವಿದರಿಗೆ ರಾಮನಗರದ ವಕೀಲರಾದ ಶ್ರೀ ಚಿಕ್ಕಪ್ಪಾಜಿ ಅವರು ನೀಡಿರುವ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೩೦. ದಮ್ಮಡಿ ಕೆಂಪಯ್ಯ

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಡಿ. ಪಾಳ್ಯದ ಕೆಂಪಯ್ಯ ಅವರು ತುಮಕೂರು ಜಿಲ್ಲೆಯ ವಿಶಿಷ್ಟ ಕಲೆಯಾದ ಕರಪಾಲದ ಕಲಾವಿದರು. ಮೇಳದಲ್ಲಿ ದಮ್ಮಡಿ ನುಡಿಸುವ ಕಲಾವಿದರಾಗಿ ದುಡಿದವರು. ತತ್ವಪದಗಳನ್ನು ಹಾಡಬಲ್ಲ ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೩೧. ತಿಮ್ಮಮ್ಮ

ಸೋಬಾನೆ, ಜರಿಯುವ, ಕುಟ್ಟುವ, ಬೀಸುವ ಪದಗಳು–ಹೀಗೆ ಹಾಡಬಲ್ಲ ಹಾಡಿನ ಕಣಜ ಶ್ರೀಮತಿ ತಿಮ್ಮಮ್ಮ. ಹಾಡಿನ ಸರದಾರನೆಸಿಕೊಂಡ ಶ್ರೀ ಸೋಬಾನೆ ರಾಮಯ್ಯನೊಟ್ಟಿಗೆ ಅಷ್ಟೇ ದನಿ ತೆಗೆದು ಹಾಡಬಲ್ಲ ಛಾತಿ ಇವರದು. ವಯಸ್ಸು ೭೮ ಆದರೂ ಯುವಕರ ಉತ್ಸಾಹ, ಹರೆಯದವರ ಉಮೇದಿಗೇನೂ ಕೊರತೆಯಿಲ್ಲ. ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಮಾಗಡಿಪಾಳ್ಯದ ಶ್ರೀಮತಿ ತಿಮ್ಮಮ್ಮನವರಿಗೆ ಮೈಸೂರಿನ ಶ್ರೀಮತಿ ಸಾವಿತ್ರಮ್ಮ ಅವರು ತಮ್ಮ ಪತಿ ದಿವಂಗತ ಚಂದ್ರಶೇಖರ್ ಅವರ ನೆನಪಿಗಾಗಿ ನೀಡಿರುವ ದತ್ತಿ ನಿಧಿಯಿಂದ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೫–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೩೨. ಸುಶೀಲ ಹೊನ್ನೇಗೌಡ

ಮಂಡ್ಯದವರಾದ ಶ್ರೀಮತಿ ಸುಶೀಲ ಹೊನ್ನೇಗೌಡ ಅವರು ಜಾನಪದ ಕ್ಷೇತ್ರದಲ್ಲಿ ತುಂಬಾ ಕಡಿಮೆ ಕೆಲಸ ನಡೆದಿರುವ ಕ್ಷೇತ್ರ ಅಡಿಗೆ ಸಂಪ್ರದಾಯ ಮತ್ತು ಜನಪದ ಆಟಗಳ ಬಗೆಗೆ ಪರಿಶ್ರಮಿಸಿದವರು. ಆ ಕುರಿತು ಎಂಟು ಪುಸ್ತಕಗಳನ್ನು ಹೊರತಂದಿದ್ದಾರೆ. ಸದ್ದಿಲ್ಲದೆ ಜಾನಪದ ಸಂಗ್ರಹ ಸಂಪಾದನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಮತಿ ಸುಶೀಲ ಹೊನ್ನೇಗೌಡ ಅವರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೩–೦೨–೨೦೦೯ರಂದು "ಜಾನಪದ ಲೋಕ ಪ್ರಶಸ್ತಿ"ಯನ್ನು ತುಂಬು ಗೌರವದಿಂದ ನೀಡಿದೆ.

## ೨೩೩. ಡಾ. ಟಿ. ಗೋವಿಂದರಾಜು

ನೆಲಮಂಗಲ ತಾಲ್ಲೂಕಿನ ಚನ್ನಾದೇವಿ ಅಗ್ರಹಾರದವರಾದ ಡಾ. ಟಿ. ಗೋವಿಂದರಾಜು ಅವರು ತಮ್ಮ ಊರು ಕುರಿತು ಮಹಾಪ್ರಬಂಧ ಮಂಡಿಸಿ ಪಿಎಚ್.ಡಿ., ಪದವಿ ಪಡೆದರು. ಅನೇಕ ಅಕಾಡೆಮಿ, ವಿಶ್ವವಿದ್ಯಾನಿಲಯಗಳ ಗೋಷ್ಠಿಗಳಲ್ಲಿ ಮಹತ್ವದ ಪ್ರಬಂಧ ಮಂಡಿಸಿದ್ದಾರೆ. ಇವರು ಕರ್ನಾಟಕ ಜಾನಪದ ಪರಿಷತ್ತಿನ ಮೊದಲ ಉದ್ಯೋಗಿಯಾಗಿ, ಜಾನಪದ ಜಗತ್ತು ಸಂಪಾದಕರಾಗಿ ಕಾರ್ಯನಿರ್ವಹಿಸಿದವರು. ಪರಿಷತ್ತಿನ ಏಳಿಗೆಗೆ ದುಡಿದವರಾದ ಇವರಿಗೆ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೩–೦೨–೨೦೦೯ರಂದು 'ವಿಶೇಷ ಪುರಸ್ಕಾರ'ವನ್ನು ತುಂಬು ಗೌರವದಿಂದ ನೀಡಿದೆ.

## ೨೩೪. ವ. ನಂ. ಶಿವರಾಮು

ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ಎಂ.ಎ. ಪರೀಕ್ಷೆಯಲ್ಲಿ ರ್‍ಯಾಂಕ್ ವಿಜೇತರಾದ ಶ್ರೀ ವ. ನಂ. ಶಿವರಾಮು ಅವರು ಜಾನಪದದೊಂದಿಗೆ ತಮ್ಮನ್ನು ತೊಡಗಿಸಿಕೊಂಡವರು. ಕರ್ನಾಟಕ ಜಾನಪದ ಪರಿಷತ್ತಿನ ಸಹ ಕಾರ್ಯದರ್ಶಿಯಾಗಿ, ಜಾನಪದ ಜಗತ್ತು ಸಂಪಾದಕರಾಗಿ, ಸಂಸ್ಥೆಯ ಏಳಿಗೆಗಾಗಿ ದುಡಿದವರು. ಅನೇಕ ಅಕಾಡೆಮಿ ಮಟ್ಟದ ಗೋಷ್ಠಿಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. 'ದಕ್ಷಿಣ ಕರ್ನಾಟಕದ ಒಡಪುಗಳು' ಒಳಗೊಂಡಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇಂತಹ ಜಾನಪದ ವಿದ್ವಾಂಸರಿಗೆ ಸಂಸ್ಥೆಗಾಗಿ ದುಡಿದ ಪರಿಶ್ರಮವನ್ನು ಸ್ಮರಿಸಿ ಕರ್ನಾಟಕ ಜಾನಪದ ಪರಿಷತ್ತು ದಿನಾಂಕ : ೧೩–೦೨–೨೦೦೯ರಂದು 'ವಿಶೇಷ ಪುರಸ್ಕಾರ'ವನ್ನು ತುಂಬು ಗೌರವದಿಂದ ನೀಡಿದೆ.


ಪರಿಚಯ : **ಡಾ. ಕುರುವ ಬಸವರಾಜ್**



ಕೆರೆಮನೆ ಶಂಭು ಹೆಗಡೆ



ಯಾಚೇನಹಳ್ಳಿ ನಿಂಗಮ್ಮ



ಹೆಬ್ಬಣಿ ಮಾದಯ್ಯ





ಮಾರೇಗೌಡನಹಳ್ಳಿ ಭಾಗ್ಯಮ್ಮ



ಉಚ್ಚಂಗಿದುರ್ಗದ ಎಲಿಸವ್ವ



ವಿರೂಪಾಪುರ ಚನ್ನಮ್ಮ



ತಂಬೂರಿ ನಂಜೇಗೌಡ



ಉಜ್ಜನಿ ಆಲಮ್ಮ



ಲಕ್ಷ್ಮೀಬಾಯಿ ಮಾದರ



ಸಂಗಯ್ಯ ಚನ್ನಯ್ಯ ಮಠಪತಿ



ಸ್ವಾಮಿಗೌಡ



ತಲಕಾಡು ಮಾದಮ್ಮ



ಪಟೇಲ್ ಸಿದ್ಧರಾಮೇಗೌಡ



ಯಲಚಕೆರೆ ಕಟ್ಟಮ್ಮ




ಅಂಕನಹಳ್ಳಿ ನಂಜಯ್ಯ



ಸಾವಿತ್ರಿ ಸೋಮಣ್ಣ ಖೈರಾಟ



ಗೊರಘಟ್ಟ ರಾಜಣ್ಣ



ಎಲೆಕೊಪ್ಪದ ಬಸವೇಗೌಡ




ಜತ್ತಪ್ಪ ರಾಹುತಪ್ಪ ಹೆರಗಾಳ



ನೆಲ್ಲೀಗೆರೆ ತಿಮ್ಮಪ್ಪಾಚಾರ್




ಗೊರವಾಲೆ ರುದ್ರಪ್ಪ




ಎನ್. ಚಿಕ್ಕ ವೆಂಕಟಪ್ಪ





ಪೂಜಾರಿ ನಿಂಗಪ್ಪ




ಢಕ್ಕೆ ಸಿದ್ಧಯ್ಯ




ನಾಗೇಶದೇವು ಅಗೇರ



ಪಿಂಡಪಾಪನಹಳ್ಳಿ ಮುನಿವೆಂಕಟಪ್ಪ



ಕೆ. ಆರ್. ಲಿಂಗಪ್ಪ


ಎಂ. ಮಲ್ಲಯ್ಯ



ಕನಗವಾಡಿ ಪುಟ್ಟೇಗೌಡ



ವೈ. ಎಸ್. ನಾಗರಾಜ್



ಡಾ. ಕೆ. ಆರ್. ಸಂಧ್ಯಾರೆಡ್ಡಿ


ಸಕ್ರೆವ್ವ ಪಾತ್ರೋಟ


ಸರಸ್ವತಿ ಶ್ರೀಪತಿ ಹೆಗಡೆ


ಲಕ್ಷಮ್ಮ


ಪುಟ್ಟನಂಜಮ್ಮ


ಬಸವರಾಜ ಹೊಸಮನಿ



ಜೆ. ಪಿ. ಜಗದೀಶಪ್ಪ



ವೆಂಕಟಾಚಲಪತಿ



ಆದ್ರಿಪುರ ಬ್ಯಾಲಮ್ಮ




ಅಂಸಮ್ಮ




ಅಂಕನಳ್ಳಿ ಮರಿ ಅರಸಮ್ಮ



ಮುಟ್ಟವೆಂಕಟಮ್ಮ



ನಂಜಪ್ಪ



ತೊಂಡಳ್ಳಿ ತೋಪಯ್ಯ



ಬನ್ನೂರು ಕೆಂಪಮ್ಮ




ಚಿಕ್ಕತಾಯಮ್ಮ




ಬರಗೂರು ನಿಂಗಮ್ಮ



ಬೆಳ್ಗಂದದ ಲಕ್ಷಮ್ಮ




ಬೆಳ್ಗಂದದ ಮಂಗಮ್ಮ



ಬೆಳ್ಳೂರು ಪುಟ್ಟಶಾಮಾಚಾರ್



ಬಿ. ಕೆ. ರಾಮಣ್ಣ




ಬ್ಯಾಲದಕೆರೆ ಪುಟ್ಟಮ್ಮ



ಬ್ಯಾತ ಹನುಮಕ್ಕ



ಬ್ಯಾತ ನರಸಮ್ಮ



ಚನ್ನಬಸವಯ್ಯ



ಚಿಕ್ಕಾಡೆ ಹೊನ್ನಮ್ಮ



ದಬ್ಬೆಗಟ್ಟ ಶಂಕರಮ್ಮ




ದೊಡ್ಡಬೀರನಕೆರೆ ಲಕ್ಕಮ್ಮ



ಪುಟ್ಟಮಲ್ಲೇಗೌಡ




ಗಿರಿಯಮ್ಮ




ಹನುಮಂತರಾವ್




ಹಟ್ನ ಜಯಮ್ಮ



ಹೆರಗನಹಳ್ಳಿ ತಿಮ್ಮಮ್ಮ


ಹೊರೆಯಾಲದ ಮಾದೇವಮ್ಮ



ಹೊಸಳ್ಳಯ್ಯ



ಜಲಧಿಗೆರೆ ಗಂಗಹುಚ್ಚಮ್ಮ


ತಿಮ್ಮಮ್ಮ


ಕೆ. ಎನ್. ದಾಸಾಚಾರ್


ಕರಗಿರಹಳ್ಳಿ ಸಾಕಮ್ಮ


ಕೆಬ್ಬೇಪುರ ರಾಚಯ್ಯ


ಕೌಳೂರು ಅಕ್ಕಯ್ಯಮ್ಮ



ಕೋಲೂರು ನರಸಮ್ಮ




ಸೋಬಾನೆ ಕೃಷ್ಣೇಗೌಡ



ಲಕ್ಷಮ್ಮ



ಬ್ಯಾಲದಕೆರೆ ನಂಜುಂಡಗೌಡ



ಪಾಂಡವಪುರ ತಿಮ್ಮಮ್ಮ




ಪಾಂಡವಪುರ ಮಾರಿಯಮ್ಮ




ಪಾಂಡವಪುರ ಶಿವಮ್ಮ



ಬುರ್ರಕಥ ಜಯಮ್ಮ





ಸುಕ್ರಿ ಬೊಮ್ಮಗೌಡ



ಯಾಚೇನಹಳ್ಳಿ ಕಟ್ಟೆಸಿದ್ದಮ್ಮ


ಸೋಬಾನೆ ರಾಮಯ್ಯ


ತಲಕಾಡು ಮಾದೇವಮ್ಮ


ತಲಕಾಡು ಮಾದಮ್ಮ


ತಂಬೂರಿ ರಾಜಮ್ಮ

# ಜನಪದ ಕಲಾವಿದರು

ಇದು ಕರ್ನಾಟಕ ಜಾನಪದ ಪರಿಷತ್ತು ಪ್ರಕಟಿಸುತ್ತಿರುವ ವಿಭಿನ್ನ ಕೃತಿ; ಜನಪದ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಆಕರಕೋಶ. ಕರ್ನಾಟಕ ಜಾನಪದದ ವಿವಿಧ ಕ್ಷೇತ್ರಗಳ ಅಪೂರ್ವ ಸಾಧಕ ಕಲಾವಿದರ ಕಿರುಪರಿಚಯ ಇಲ್ಲಿದೆ. ಇಂಥವರು ನಾಡಿನಲ್ಲಿ ಲೆಕ್ಕವಿಲ್ಲದಷ್ಟು ಮಂದಿ ಇದ್ದಾರೆ. ಕೆಲವರು ಮಾತ್ರ ದಾಖಲಾಗಿದ್ದಾರೆ. ಈ ಅನನ್ಯ ಕಲಾವಿದರು ತಮ್ಮ ನೆನಪಿನೋವರಿಯಲ್ಲಿ ಮೌಖಿಕ ಜಾನಪದವನ್ನು ರಕ್ಷಿಸಿಕೊಂಡು ಬೆಳೆಸಿಕೊಂಡು ನಮಗೆ ನಿರೂಪಿಸದೆ ಇದ್ದರೆ, ಪ್ರದರ್ಶಿಸಿದೆ ಇದ್ದರೆ ಇಂದು ಕನ್ನಡ ಜಾನಪದದಲ್ಲಿ ಏನೇನೂ ಕೆಲಸವಾಗುತ್ತಿರಲಿಲ್ಲ. ಇವರೆಲ್ಲ ನಮ್ಮ ಅಧ್ಯಯನ ಸಂಪನ್ಮೂಲ ವ್ಯಕ್ತಿಗಳು.

ಜಾನಪದ ಕನಸುಗಾರ ನಾಡೋಜ ಎಚ್. ಎಲ್. ನಾಗೇಗೌಡರ ದೂರದೃಷ್ಟಿಯ ಫಲವಾಗಿ ರೂಪುಗೊಂಡ ಜಾನಪದ ಲೋಕದ ಉತ್ಸವದ ಸಂದರ್ಭದಲ್ಲಿ ಸನ್ಮಾನಕ್ಕೆ ಪಾತ್ರರಾದ ಈ ಕಲಾವಿದರ ಸಂಕ್ಷಿಪ್ತ ಪರಿಚಯವನ್ನು ಡಾ. ಚಕ್ಕೆರೆ ಶಿವಶಂಕರ್ ಮತ್ತು ಡಾ. ಕುರುವ ಬಸವರಾಜ್ ನಿರೂಪಿಸಿದ್ದಾರೆ.

–ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪
E-mail : janapadaparishath@hotmail.com